ಗುರುವಾರ, ಡಿಸೆಂಬರ್ 26, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬಾಲಕನ ಸಂಭ್ರಮ

ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಬೀದರ್‌ನ ಸೇಂಟ್ ಪಾಲ್ ಮೆಥೊಡಿಸ್ಟ್ ಚರ್ಚ್‌ನಲ್ಲಿ ಬುಧವಾರ ನಡೆದ ವಿಶೇಷ ಪ್ರಾರ್ಥನೆಯಲ್ಲಿ ಬಾಲಕನೊಬ್ಬ 'ಬೈಬಲ್' ಪುಸ್ತಕ ಹಿಡಿದು ಸಂಭ್ರಮಿಸಿದ ಕ್ಷಣ...

1924-2024
ಬೆಳಗಾವಿ, ಕರ್ನಾಟಕ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಗಾಂಧಿ ಭಾರತ



ನಾಳೆ ಬೆಳಗಾವಿಗೆ ಬನ್ನಿ

ಐತಿಹಾಸಿಕ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಮಾರಂಭ

ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಪುತ್ಥಳಿ ಅನಾವರಣ

ದಿನಾಂಕ : 27-12-2024 • ಸಮಯ : ಬೆಳಗ್ಗೆ 10:30 • ಸ್ಥಳ : ಸುವರ್ಣ ವಿಧಾನಸೌಧ, ಬೆಳಗಾವಿ

1924ರಲ್ಲಿ ನಡೆದ ಐತಿಹಾಸಿಕ ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಈಗ ಶತಮಾನೋತ್ಸವದ ಸಂಭ್ರಮ. ಮಹಾತ್ಮ ಗಾಂಧಿ ಅವರು ಅಧ್ಯಕ್ಷತೆ ವಹಿಸಿದ್ದ ಏಕೈಕ ಅಧಿವೇಶನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಮುಖ ವಹಿಸಿತ್ತು. ಇದರ ನೆನಪಿಗಾಗಿ ಕರ್ನಾಟಕ ಸರ್ಕಾರ ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಪುತ್ಥಳಿ ಸ್ಥಾಪಿಸಿ ಗೌರವ ಸಲ್ಲಿಸಿದೆ.

ಪುತ್ಥಳಿ ಅನಾವರಣ
ಶ್ರೀ ಮಲ್ಲಿಕಾರ್ಜುನ ಖರ್ಗೆ
ಮಾನ್ಯ ವಿರೋಧ ಪಕ್ಷದ ನಾಯಕರು, ರಾಜ್ಯಸಭೆ

ಘನ ಉಪಸ್ಥಿತಿ
ಶ್ರೀ ರಾಹುಲ್ ಗಾಂಧಿ
ಮಾನ್ಯ ವಿರೋಧ ಪಕ್ಷದ ನಾಯಕರು, ಲೋಕಸಭೆ

ಅಧ್ಯಕ್ಷತೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು

ಶ್ರೀ ಬಸವರಾಜ ಎಸ್ ಹೊರಟ್ಟಿ
ಮಾನ್ಯ ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತು

ಶ್ರೀ ಯು.ಟಿ. ಖಾದರ್
ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿ, ಕರ್ನಾಟಕ ಸರ್ಕಾರ

ಗೌರವಾನ್ವಿತ ಆಹ್ವಾನಿತರು

ಶ್ರೀ ಹೆಚ್. ಕೆ. ಪಾಟೀಲ್
ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

ಶ್ರೀ ಸತೀಶ್ ಜಾರಕಿಹೊಳಿ
ಮಾನ್ಯ ಲೋಕೋಪಯೋಗಿ ಹಾಗೂ ಬೆಳಗಾವಿ ಉಸ್ತುವಾರಿ ಸಚಿವರು

ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್
ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು

ಶ್ರೀ ಜಗದೀಶ್ ಎಸ್. ಶೆಟ್ಟರ
ಮಾನ್ಯ ಸಂಸದರು, ಬೆಳಗಾವಿ ಲೋಕಸಭಾ ಕ್ಷೇತ್ರ

ಕುಮಾರಿ ಪ್ರಿಯಾಂಕಾ ಜಾರಕಿಹೊಳಿ
ಮಾನ್ಯ ಸಂಸದರು ಚಿಕ್ಕೋಡಿ ಲೋಕಸಭಾ ಕ್ಷೇತ್ರ

ಶ್ರೀ ಚಲವಾದಿ ಟಿ. ನಾರಾಯಣಸ್ವಾಮಿ
ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನ ಪರಿಷತ್ತು

ಶ್ರೀ ಆರ್. ಅಶೋಕ
ಮಾನ್ಯ ವಿರೋಧ ಪಕ್ಷದ ನಾಯಕರು, ಕರ್ನಾಟಕ ವಿಧಾನಸಭೆ

ವಿಶೇಷ ಆಹ್ವಾನಿತರು : ಕರ್ನಾಟಕ ರಾಜ್ಯದ ಎಲ್ಲಾ ಮಾನ್ಯ ಸಂಸದರುಗಳು ಹಾಗೂ ಕರ್ನಾಟಕ ರಾಜ್ಯದ ಎಲ್ಲಾ ಮಾನ್ಯ ಶಾಸಕರುಗಳು

ಕರ್ನಾಟಕ ಮಾದರಿ ಆಡಳಿತವು ಗ್ಯಾರಂಟಿ ಯೋಜನೆಗಳನ್ನು ನೂರಕ್ಕೆ ನೂರರಷ್ಟು ಅನುಷ್ಠಾನಗೊಳಿಸುವ ಮೂಲಕ ಮಹಿಳೆಯರು, ಬಡವರು ಮತ್ತು ಶೋಷಿತ ವರ್ಗದವರನ್ನು ಸಬಲೀಕರಣಗೊಳಿಸುತ್ತಾ 'ಗಾಂಧಿ ಭಾರತ'ವನ್ನು ನಿರ್ಮಿಸುವ ಕನಸನ್ನು ನನಸಾಗಿಸುವತ್ತ ಮುನ್ನಡೆಯುತ್ತಿದೆ.

ನಮ್ಮ ಕರ್ನಾಟಕ;
ಗ್ಯಾರಂಟಿ ಕರ್ನಾಟಕ

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ — 10 kg
ಗೃಹಜ್ಯೋತಿ — ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಗೃಹಲಕ್ಷ್ಮಿ — ₹2000
ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಒಂದೆಡೆ ಅದ್ದೂರಿ ಕಾರ್ಯಕ್ರಮ, ಇನ್ನೊಂದೆಡೆ ಸಂಪೂರ್ಣ ನಿರ್ಲಕ್ಷ್ಯ • ಅವಸಾನದ ಅಂಚಿಗೆ ಗಾಂಧಿ ಚರಕಗಳು

ಕಾಯಕಲ್ಪದ ನಿರೀಕ್ಷೆಯಲ್ಲಿ 'ಹುದಲಿ ಆಶ್ರಮ'

• ಸಂತೋಷ ಈ. ಚಿನಗುಡಿ

ಬೆಳಗಾವಿ: 'ಗಾಂಧಿ ಭಾರತ' ಕಾರ್ಯಕ್ರಮದ ಸಿದ್ಧತೆಯಲ್ಲಿರುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ 'ಹುದಲಿ ಗ್ರಾಮ'ವನ್ನು ಸಂಪೂರ್ಣ ಮರೆತಿದೆ. 1937ರಲ್ಲಿ ಮಹಾತ್ಮಗಾಂಧಿ ಅವರು ಇದೇ ಊರಿನಲ್ಲಿ ಏಳು ದಿನ ತಂಗಿದ್ದು, ಸ್ವಾತಂತ್ರ್ಯ ಆಂದೋಲನದ ಶಿಬಿರ ನಡೆಸಿದ್ದರು.

ಗುಜರಾತಿನ ಸಾಬರಮತಿ ಆಶ್ರಮದಷ್ಟೇ ಮಹತ್ವಪೂರ್ಣವಾದ ಆಶ್ರಮವನ್ನು ಇಲ್ಲಿ ಸ್ಥಾಪಿಸಿದ್ದರು. ಅದರ ಪುನರುಜ್ಜೀವನ ಮಾಡಬೇಕಾದ ಸರ್ಕಾರ ಮಾತ್ರ ಗಮನ ಹರಿಸಿಲ್ಲ.

'ಜಿಲ್ಲೆಯಲ್ಲಿ ಈಗ ಒಂದೆಡೆ 'ಮಹತ್ವ' ಪಡೆದುಕೊಂಡಿರುವ ಗಾಂಧೀಜಿ, ಇನ್ನೊಂದೆಡೆ 'ಅನಾಥ ಪ್ರಜ್ಞೆ' ಎದುರಿಸುತ್ತಿದ್ದಾರೆ. ಸರ್ಕಾರದ ವರ್ಚಸ್ಸಿಗೆ, ಪಕ್ಷದ ಹಿತಕ್ಕೆ ಏನು ಬೇಕೋ ಅದನ್ನು ಮಾತ್ರ ಮಾಡುತ್ತಿದ್ದಾರೆ' ಎಂದು ಹುದಲಿ ಗ್ರಾಮಸ್ಥರು ದೂರುತ್ತಾರೆ.

1924ರಲ್ಲಿ ಗಾಂಧೀಜಿ ಅಧ್ಯಕ್ಷತೆಯಲ್ಲಿ ನಡೆದಿದ್ದ 'ಕಾಂಗ್ರೆಸ್ ಅಧಿವೇಶನ'ಕ್ಕೆ ಈಗ ನೂರು ವರ್ಷ. ಶತಮಾನೋತ್ಸವ ಆಚರಣೆಗೆ ಕಾಂಗ್ರೆಸ್ ಪಕ್ಷ ಹಾಗೂ ರಾಜ್ಯ ಸರ್ಕಾರ ಅದ್ದೂರಿ ಸಿದ್ಧತೆ ನಡೆಸಿದೆ. ಅಧಿವೇಶನ ನಡೆದ ವೀರಸೌಧಕ್ಕೆ ಮಾತ್ರ ಈಗ ಆದ್ಯತೆ ನೀಡಲಾಗಿದೆ.

ಕಾಂಗ್ರೆಸ್ ಬಾವಿ ಹಾಗೂ ವೀರಸೌಧ ಅಭಿವೃದ್ಧಿ ಮಾಡಲಾಗಿದೆ. ದಸರಾ ಮಾದರಿಯಲ್ಲಿ ಝಗಮಗಿಸುವ ವಿದ್ಯುದ್ದೀಪಾಲಂಕಾರ ಮಾಡಲಾಗಿದೆ. ನಗರದಲ್ಲಿ ಇಂಚಿಂಚಿಗೂ ಕಾಂಗ್ರೆಸ್ ನಾಯಕರ ಪಟಗಳೇ ರಾರಾಜಿಸುತ್ತಿವೆ. ಇಡೀ ಕುಂದಾನಗರಿ ಕಾಂಗ್ರೆಸ್ ಮಯವಾಗಿದೆ.

ಆದರೆ... ನಗರದಿಂದ 20 ಕಿ.ಮೀ ದೂರದಲ್ಲಿರುವ ಗಾಂಧೀಜಿ ತಂಗಿದ್ದ ಗ್ರಾಮವನ್ನು, ಅಲ್ಲಿನ ಆಶ್ರಮವನ್ನು ಪೂರ್ಣ ಕಡೆಗಣಿಸಲಾಗಿದೆ. ಇಡೀ ಆವರಣವನ್ನು ಸ್ವಚ್ಛ ಮಾಡಿಸಿದ್ದು ಬಿಟ್ಟರೆ ಕನಿಷ್ಠ ಸಂಭ್ರಮವೂ ಇಲ್ಲಿ ಕಂಡುಬಂದಿಲ್ಲ.

ಸೂತ್ರಧಾರ ಗಂಗಾಧರರಾವ್ ದೇಶಪಾಂಡೆ: 'ಕರ್ನಾಟಕ ಸಿಂಹ' ಎಂದೇ ಗಾಂಧೀಜಿ ಅವರಿಂದ ಕರೆಯಿಸಿಕೊಂಡ ಗಂಗಾಧರರಾವ್ ದೇಶಪಾಂಡೆ ಈ ಸಂಘವನ್ನು ಕಟ್ಟಿ, ಗ್ರಾಮೋದ್ಯೋಗ ಆರಂಭಿಸಿದ್ದರು. ಗಾಂಧೀಜಿ ನಿಕಟವರ್ತಿ ಆಗಿದ್ದ ಅವರಿಂದಲೇ ಹುದಲಿ ಗ್ರಾಮ ಹೆಸರಾಗಿದೆ. ಆಗರ್ಭ ಶ್ರೀಮಂತರಾಗಿದ್ದ ಅವರು ಆಸ್ತಿಯ ಪಾಲನ್ನೇ ಹುದಲಿ ಆಶ್ರಮ ಅಭಿವೃದ್ಧಿಗೂ, ಕಾಂಗ್ರೆಸ್ ಅಧಿವೇಶನಕ್ಕೂ ಬಳಸಿದ್ದರು ಎಂಬುದು ಇತಿಹಾಸ.

25 ವರ್ಷಗಳ ಹಿಂದೆ ಈ ಜಾಗದಲ್ಲಿ ಅವರ ಹೆಸರಿನ ಚಿಕ್ಕ ಸ್ಮಾರಕ ಕಟ್ಟಲಾಗಿದೆ. ಒಳಗಡೆ ಸ್ವಾತಂತ್ರ್ಯ ಸಂಗ್ರಾಮದ ಚಿತ್ರಪಟಗಳಿವೆ ಅಷ್ಟೇ.

ಮಹಾತ್ಮ ಗಾಂಧಿ ಅವರು ಭೇಟಿ ನೀಡಿದ್ದ ಬೆಳಗಾವಿ ತಾಲ್ಲೂಕಿನ ಹುದಲಿ ಗ್ರಾಮದ ಗಾಂಧಿ–ಗಂಗಾಧರರಾವ್ ಸ್ಮಾರಕ ಭವನದ ಹೊರನೋಟ

ಗಾಂಧಿ– ಗಂಗಾಧರರಾವ್ ಸ್ಮಾರಕ ಭವನದಲ್ಲಿ ಚರಕಗಳಲ್ಲಿ ಮಹಿಳೆಯರು ನೂಲುತ್ತಿದ್ದಾರೆ ಪ್ರಜಾವಾಣಿ ಚಿತ್ರಗಳು

ಬದುಕಿನ ಬಹುಪಾಲು ಭಾಗವನ್ನು ಈ ಚರಕದೊಂದಿಗೇ ಕಳೆದಿದ್ದೇನೆ. ಕೂಲಿ ದರ ಹೆಚ್ಚಳ ಮಾಡಬೇಕು. ಆರೋಗ್ಯ ವಿಮೆ, ಪಿಂಚಣಿ, ಸಂಘಕ್ಕೆ ಆರ್ಥಿಕ ನೆರವು ನೀಡಬೇಕು

ಜಾಣವ್ವ ಕಲ್ಲಪ್ಪ ಅಂಗಡಿ
ನೂಲುವ ಮಹಿಳೆ

ಗಾಂಧೀಜಿ ವಾಸ್ತವ್ಯ ಹೂಡಿದ್ದ 'ಕುಮರಿ ಆಶ್ರಮ' ಮರು ನಿರ್ಮಾಣ ಮಾಡಬೇಕು. ಸಂಘಕ್ಕೆ ಸರ್ಕಾರ ಆರ್ಥಿಕ ಬಲ ತರಬೇಕು

ಸಿ.ಬಿ.ಮೋದಗಿ
ನಿವೃತ್ತ ಕಾರ್ಯದರ್ಶಿ, ಖಾದಿ ಗ್ರಾಮೋದ್ಯೋಗ ಮತ್ತು ಸಹಕಾರಿ ಉತ್ಪಾದಕ ಸಂಘ

ದುಃಸ್ಥಿತಿಯಲ್ಲಿ ಗಾಂಧಿ ಚರಕಗಳು

1937ರಲ್ಲಿ ಹುದಲಿಯಲ್ಲಿ ಸೇವಾಶ್ರಮ ಸ್ಥಾಪಿಸಿದ್ದ ಗಾಂಧೀಜಿ, ಸ್ವದೇಶಿ ಉತ್ಪನ್ನಗಳ ಬಳಕೆಗೆ ಕರೆ ನೀಡಿದ್ದರು. ಅವರ ಕಾಲದ ಹಳೆಯ ಕಟ್ಟಡಗಳು ಈಗಲೂ ಇವೆ. ಗಾಂಧೀಜಿಯಿಂದ ಪ್ರೇರಣೆಗೊಂಡ 11 ಸ್ವಾತಂತ್ರ್ಯ ಹೋರಾಟಗಾರರು ₹ 500 ಬಂಡವಾಳ ಹಾಕಿ, 1954ರಲ್ಲಿ ಖಾದಿ ಗ್ರಾಮೋದ್ಯೋಗ ಮತ್ತು ಸಹಕಾರಿ ಉತ್ಪಾದಕ ಸಂಘ ಸ್ಥಾಪಿಸಿದ್ದರು.

ಹುದಲಿಯಲ್ಲಿ ಆರಂಭವಾಗಿದ್ದ ಈ 'ಚರಕ ಶಾಲೆ' ಬಳಿಕ ಸುತ್ತಲಿನ ಗ್ರಾಮಗಳಾದ ಮರಿಹಾಳ, ಕರಡಿಗುದ್ದಿ, ಪಂತ ಬಾಳೇಕುಂದರಿಗಿ, ಸುಳೆಬಾವಿ, ಮಲ್ಲಾಪುರ, ಉರುಬಿನಟ್ಟಿ, ಪಾಶ್ಚಾಪುರ, ಪಂಜಾನಟ್ಟಿ, ಸುರೇಬಾನ ಸೇರಿ 13 ಕಡೆಯೂ ಆರಂಭವಾದವು.

ಗ್ರಾಮೋದಯಕ್ಕೆ ನಾಂದಿಯಾದ ಚರಕಗಳು ಈಗ ದುಸ್ಥಿತಿಯಲ್ಲಿವೆ. ಸಂಘದ ಮೂಲಕ ಕಚ್ಚಾ ಹತ್ತಿ ಖರೀದಿಸಿ, ನೂಲು ಮಾತ್ರ ತಯಾರಿಸುತ್ತಿವೆ. ಕೋವಿಡ್ ನಂತರ ಉದ್ಯಮ ನೆಲಕಚ್ಚಿದೆ. ಉತ್ತೇಜನ ನೀಡುವ ಗೋಜಿಗೂ ಸರ್ಕಾರ ಹೋಗಿಲ್ಲ.

ಹುದಲಿಯಲ್ಲಿ ಈಗಲೂ 100 ಮಹಿಳೆಯರು ಚರಕವನ್ನೇ ಅವಲಂಬಿಸಿದ್ದಾರೆ. ಎಲ್ಲ ಗ್ರಾಮಗಳೂ ಸೇರಿ 1,000ಕ್ಕೂ ಹೆಚ್ಚು ಕುಟುಂಬಗಳೂ ಇದನ್ನೇ ನಂಬಿವೆ. ಇವರಿಗೆ ಸಂಬಳವಿಲ್ಲ. ನೂಲಿನ ಉಂಡಿಗಳ ಮೇಲೆ ಕೂಲಿ ಸಿಗುತ್ತದೆ. ಪ್ರತಿ ನೂಲಿನ ಉಂಡಿಗೆ ಕೇವಲ ₹10 ದರವಿದೆ. ಒಬ್ಬರಿಗೆ ಒಂದಿಡೀ ದಿನಕ್ಕೆ ಸಿಗುವುದು ₹100ರಿಂದ ₹150 ಮಾತ್ರ.

'ಕೋವಿಡ್‌ಗೂ ಮುನ್ನ ಸಂಘದಲ್ಲಿ ವರ್ಷಕ್ಕೆ ₹2.5 ಕೋಟಿ ಮೌಲ್ಯದ ಕರವಸ್ತ್ರ, ಜಮ್ಖಾನ್, ದೋತರ ಸೇರಿ ವಿವಿಧ ಖಾದಿ ಉತ್ಪನ್ನಗಳನ್ನು ತಯಾರಾಗುತ್ತಿದ್ದವು. ಈಗ ₹30 ಲಕ್ಷಕ್ಕೆ ಕುಸಿದಿದೆ. ಸರ್ಕಾರ ಉತ್ತೇಜನ ನೀಡದಿದ್ದರೆ ಇನ್ನಷ್ಟು ದಿನಗಳಲ್ಲಿ ಈ ಚರಕ ಸಂಸ್ಕೃತಿಯೇ ಕಣ್ಮರೆಯಾಗುತ್ತದೆ' ಎಂಬುದು ನೂಲುವ ಮಹಿಳೆಯರ ಆತಂಕ.

ಗಾಂಧೀಜಿ ಅವರ ಧೋತ್ರ ಹಾಗೂ ಇಂದಿರಾ ಗಾಂಧಿ ಅವರಿಗೆ ಸೀರೆಯನ್ನೂ ಇದೇ ಚರಕಗಳಿಂದ ನೇಯ್ದು ಕೊಟ್ಟಿದ್ದನ್ನು ಹಿರಿಯರು ನೆನೆಯುತ್ತಾರೆ.

ಸುದ್ದಿ 2 ನಿಮಿಷ

ಈಗಿನ ಕಾಂಗ್ರೆಸ್ ಜನವಿರೋಧಿ, ದೇಶ ವಿರೋಧಿ: ಬೊಮ್ಮಾಯಿ

ಬೆಂಗಳೂರು: ದೇಶದಲ್ಲಿ ಎರಡು ರೀತಿಯ ಕಾಂಗ್ರೆಸ್ ಇದ್ದು, ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರೀಯತೆಯ ಕಾಂಗ್ರೆಸ್ ಇತ್ತು. ಈಗ ಜನ ವಿರೋಧಿ, ದೇಶ ವಿರೋಧಿ ಕಾಂಗ್ರೆಸ್ ಇದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

1924 ರ ಕಾಂಗ್ರೆಸ್‌ಗೂ ಈಗಿನ ಕಾಂಗ್ರೆಸ್‌ಗೂ ಯಾವುದೇ ಸಂಬಂಧವಿಲ್ಲ ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪೊಲೀಸ್ ಇಲಾಖೆಯ ನೈತಿಕತೆ ಕುಸಿಯುವಂತೆ ಮಾಡಿದೆ. ಹಿರಿಯ ಅಧಿಕಾರಿಗಳನ್ನು ಕಾನ್‌ಸ್ಟೆಬಲ್ ರೀತಿ ನಡೆದುಕೊಳ್ಳುತ್ತಿದ್ದಾರೆ. ನ್ಯಾಯ ಸಮ್ಮತವಾಗಿ ಕೆಲಸ ಮಾಡುವ ಅಧಿಕಾರಿಗಳನ್ನು ಶಿಕ್ಷಿಸುತ್ತಿದ್ದಾರೆ. ಪೊಲೀಸರು ಕಾನೂನಿಗೆ ನಿಷ್ಠರಾಗಿರಬೇಕು. ಆದರೆ, ಪೊಲೀಸ್ ಇಲಾಖೆಯನ್ನು ಪಕ್ಷಗಳ ಆಧಾರದಲ್ಲಿ ವಿಭಜಿಸುವುದು, ಸಮವಸ್ತ್ರದಲ್ಲಿರುವ ಅಧಿಕಾರಿಗಳಿಗೆ ಶಿಕ್ಷೆ ನೀಡುವುದರಿಂದ ನೈತಿಕತೆ ಕುಸಿಯುತ್ತಿದೆ ಎಂದು ಹೇಳಿದರು.

ಅಂಬೇಡ್ಕರ್ ವಿಚಾರದಲ್ಲಿ ಸಂಸತ್ತಿನಲ್ಲಿ ಕಾಂಗ್ರೆಸ್ ಬಣ್ಣ ಬಯಲಾಗಿದೆ. ಹೀಗಾಗಿ ಅದನ್ನು ಮುಚ್ಚಿಕೊಳ್ಳಲು ಕಾಂಗ್ರೆಸ್ ಹಲವು ರೀತಿ ನಾಟಕಗಳನ್ನು ಮಾಡುತ್ತಿದ್ದಾರೆ ಎಂದರು.

25 ವರ್ಷದ ಬಳಿಕ ಕುಟುಂಬದ ಸದಸ್ಯರ ಜೊತೆಗೂಡಿದ ಸಾಕಮ್ಮ

ಬಳ್ಳಾರಿ: ಹಿಮಾಚಲ ಪ್ರದೇಶದಿಂದ ಕರೆತರಲಾಗಿರುವ ಹೊಸಪೇಟೆ ಮೂಲದ ಡಣಾನಾಯಕನಕೆರೆಯ ಸಾಕಮ್ಮ ಅವರನ್ನು ಕಂಪ್ಲಿಯಲ್ಲಿರುವ ಅಕ್ಕ ರಾಮಕ್ಕ ಅವರ ನಿವಾಸಕ್ಕೆ ಬುಧವಾರ ಕಳುಹಿಸಿಕೊಡಲಾಯಿತು.

ಸಾಕಮ್ಮ ಅವರು ಮೊದಲಿಗೆ ಬೆಂಗಳೂರಿಗೆ ಬಂದಿದ್ದರು. ಬಳಿಕ ಅವರನ್ನು ಬಳ್ಳಾರಿಯ ಸಮಾಜ ಕಲ್ಯಾಣ ಇಲಾಖೆಯ ಕಚೇರಿಗೆ ಬುಧವಾರ ಸಂಜೆ 7ರ ಸುಮಾರಿಗೆ ಕರೆತರಲಾಯಿತು. ಅಲ್ಲಿ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ ಅವರು ಕುಟುಂಬಸ್ಥರಿಗೆ ಒಪ್ಪಿಸಿದರು.

ಈ ಮೂಲಕ ಸಾಕಮ್ಮ 25 ವರ್ಷಗಳ ಬಳಿಕ ಕುಟುಂಬ ಸದಸ್ಯರ ಜೊತೆ ಒಟ್ಟುಗೂಡಿದರು. ಬಳ್ಳಾರಿಯ ಅವರ ಮೂವತ್ತಕ್ಕೂ ಹೆಚ್ಚು ಸಂಬಂಧಿಗಳು ಈ ಸಂದರ್ಭದಲ್ಲಿ ನೆರೆದಿದ್ದರು.

ತಮ್ಮನ್ನು ಡಣಾನಾಯಕನಕೆರೆಗೆ ಕರೆದೊಯ್ಯಬೇಕು ಎಂಬುದು ಸಾಕಮ್ಮ ಅವರ ಬೇಡಿಕೆ ಆಗಿದೆ. ಆದರೆ, ಅಲ್ಲಿ ಅವರ ಸಂಬಂಧಿಗಳು ಇಲ್ಲ. ಹೀಗಾಗಿ 'ಡಣಾನಾಯಕನಕೆರೆ' ಎಂದು ಹೇಳಿ ಕಂಪ್ಲಿಗೆ ಕಳುಹಿಸುತ್ತಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಗ್ರಾಮೀಣಾಭಿವೃದ್ಧಿ ವಿ.ವಿಗೆ ಗಾಂಧೀಜಿ ಹೆಸರಿಡಿ: ಶಾಸಕ

ಕಲಬುರಗಿ: 'ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆದು 100 ವರ್ಷಗಳಾದ ಸಂದರ್ಭದಲ್ಲಿ ಗದುಗಿನ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯಕ್ಕೆ ಮಹಾತ್ಮ ಗಾಂಧಿ ಹೆಸರಿಡಬೇಕು' ಎಂದು ಮುಖ್ಯಮಂತ್ರಿ ಸಲಹೆಗಾರ, ಶಾಸಕ ಬಿ.ಆರ್.ಪಾಟೀಲ ಸರ್ಕಾರಕ್ಕೆ ಆಗ್ರಹಪಡಿಸಿದರು.

ಬಿ.ಆರ್. ಪಾಟೀಲ

'ಈ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಸಿ.ಎಂ ಜೊತೆ ಚರ್ಚಿಸಿ ನಿರ್ಧರಿಸುವುದಾಗಿ ಹೇಳಿದ್ದಾರೆ' ಎಂದು ಬುಧವಾರ ಹೇಳಿದರು.

'ನಗರೀಕರಣದಿಂದ ಹಳ್ಳಿ ಮತ್ತು ನಗರಗಳ ನಡುವೆ ವಿಪರೀತ ಕಂದಕ ನಿರ್ಮಾಣವಾಗಿದೆ. ಬೆಳಗಾವಿಯಲ್ಲಿ ಈಗ ಅಧಿವೇಶನಕ್ಕೆ ಗಾಂಧಿ ಭಾರತ ಎಂದು ಹೆಸರಿಡಲಾಗಿದೆ. ಆ ಹೆಸರು ಸಾಕಾರಗೊಳಿಸಲು ವಿ.ವಿಗೆ ಗಾಂಧೀಜಿ ಅವರ ಹೆಸರಿಡಬೇಕು' ಎಂದರು.

ಶೆಟ್ಟರ್ ಅಪಸ್ವರ ದುರ್ದೈವ–ಸಚಿವ

ಬೆಳಗಾವಿ: 'ಗಾಂಧಿ ಭಾರತ' ಕಾರ್ಯಕ್ರಮಕ್ಕಾಗಿ ಸರ್ಕಾರಿ ಅನುದಾನ ವ್ಯಯಿಸುತ್ತಿದ್ದೇವೆ, ಇದು ವ್ಯರ್ಥ ಎನ್ನುವುದಾದರೆ, ಜಗದೀಶ ಶೆಟ್ಟರ್ ಅವರಿಗೆ ಗಾಂಧಿ ಕುರಿತು ತಾತ್ಸಾರ ನಿಲುವು ಇರುವುದು ಗೊತ್ತಾಗುತ್ತದೆ' ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ಹೇಳಿದರು.

'ದೇಶದಲ್ಲಿ ಎರಡೇ ವಿಚಾರಧಾರೆ ಇವೆ. ಗಾಂಧಿ ಭಾರತ ಮತ್ತು ಗೋಡ್ಸೆ ಭಾರತ. 'ಗಾಂಧಿ ಭಾರತ ಕಾರ್ಯಕ್ರಮಕ್ಕಾಗಿ ಶೆಟ್ಟರ್ ಅಪಸ್ವರ ತೆಗೆದಿದ್ದು ದುರ್ದೈವ. ಗಾಂಧಿ ಕೊಂದವರನ್ನು ಸಮರ್ಥಿಸಿಕೊಳ್ಳುತ್ತಾರೆಯೋ, ಹೀಗೆ ಹೇಳಿಕೆ ಕೊಟ್ಟರೆ ಏನು ಹೇಳುವುದು?' ಎಂದರು.

ಶಕ್ತಿಸೌಧ ಆವರಣದಲ್ಲಿ ಬಾಪು ಪ್ರತಿಮೆ

ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದ ನೆನಪಿಗೆ ಸ್ಥಾಪನೆ, 27ಕ್ಕೆ ಅನಾವರಣ

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಇಲ್ಲಿ, ಸುವರ್ಣ ವಿಧಾನಸೌಧದ ಆವರಣದಲ್ಲಿ ಪ್ರತಿಷ್ಠಾಪಿಸಿರುವ ಮಹಾತ್ಮ ಗಾಂಧಿ ಅವರ ಪ್ರತಿಮೆ ಅನಾವರಣಕ್ಕೆ ತಯಾರಿ ನಡೆದಿದೆ. ಅಯೋಧ್ಯೆ ರಾಮಮಂದಿರದಲ್ಲಿ ಪ್ರತಿಷ್ಠಾಪಿಸಲು ಬಾಲರಾಮ ಮೂರ್ತಿ ಸಿದ್ಧಪಡಿಸಿದ್ದ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ನೇತೃತ್ವದ ತಂಡ, ಇಲ್ಲಿನ ಗಾಂಧಿ ಪ್ರತಿಮೆಗೂ ರೂಪ ನೀಡಿದೆ.

ಸುವರ್ಣ ವಿಧಾನಸೌಧಕ್ಕೆ ಭೇಟಿ ನೀಡುವವರಿಗೆ ಗಾಂಧೀಜಿ ಬದುಕು ಪರಿಚಯಿಸುವುದು, ಅವರ ತತ್ವಗಳನ್ನು ಸಾರುವುದು ಪ್ರತಿಮೆ ಪ್ರತಿಷ್ಠಾಪನೆ ಉದ್ದೇಶವಾಗಿದೆ. ಡಿ.27ರಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಉಪಸ್ಥಿತಿಯಲ್ಲಿ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಪ್ರತಿಮೆ ಅನಾವರಣಗೊಳಿಸುವರು.

ಪ್ರತಿಮೆ, ಪೀಠದ ನಿರ್ಮಾಣ ಸೇರಿ ಇಡೀ ಕಾಮಗಾರಿಗೆ ₹8.5 ಕೋಟಿ ವ್ಯಯಿಸಲಾಗಿದೆ. ಈ ಪೈಕಿ ಪ್ರತಿಮೆ ಸಿದ್ಧಪಡಿಸಲು ₹4.83 ಕೋಟಿ ವೆಚ್ಚ ಮಾಡಲಾಗಿದೆ.

ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದಲ್ಲಿ ಪ್ರತಿಷ್ಠಾಪನೆಯಾಗಿರುವ ಗಾಂಧೀಜಿ ಪ್ರತಿಮೆ ಅನಾವರಣಕ್ಕೆ ಅಂತಿಮ ಹಂತದ ಸಿದ್ಧತೆ ನಡೆದಿರುವುದು

'8 ತಿಂಗಳು ಶ್ರಮಿಸಿದ್ದಾರೆ'

'ಗಾಂಧೀಜಿ ಪ್ರತಿಮೆ ಸಿದ್ಧಪಡಿಸಲು ಶಿಲ್ಪಿ ಅರುಣ್ ಯೋಗಿರಾಜ್ ನೇತೃತ್ವದಲ್ಲಿ 15ರಿಂದ 20 ಕಾರ್ಮಿಕರು ಎಂಟು ತಿಂಗಳು ಶ್ರಮಿಸಿದ್ದಾರೆ. ಸುವರ್ಣ ವಿಧಾನಸೌಧ ಆವರಣದಲ್ಲಿರುವ ಮೂರು ಪ್ರತಿಮೆಗಳನ್ನೂ ನಾವೇ ಸಿದ್ಧಪಡಿಸಿದ್ದೆವು. ಈಗ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ ಪ್ರಯುಕ್ತ ಗಾಂಧಿ ಪ್ರತಿಮೆಯನ್ನೂ ಪ್ರತಿಷ್ಠಾಪಿಸುತ್ತಿರುವುದಕ್ಕೆ ಖುಷಿಯಾಗಿದೆ ಎಂದು ಗುತ್ತಿಗೆದಾರ ಸಮೀರ್ ಶಿರಗುಪ್ಪಿ 'ಪ್ರಜಾವಾಣಿ'ಗೆ ತಿಳಿಸಿದರು.

ಸೌಧದ ಎದುರು ಸದ್ಯ ವೀರರಾಣಿ ಕಿತ್ತೂರು ಚನ್ನಮ್ಮ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮತ್ತು ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ಪ್ರತಿಮೆಗಳಿವೆ. 'ಬೆಂಗಳೂರಿನ ವಿಧಾನಸೌಧ ಆವರಣದಲ್ಲಿ ಗಾಂಧೀಜಿ ಪ್ರತಿಮೆ ಇದೆ. ಆದರೆ, ಬೆಳಗಾವಿಯ ಸೌಧದಲ್ಲಿ ರಾಷ್ಟ್ರಪಿತನ ಪ್ರತಿಮೆಯೇ ಇಲ್ಲ' ಎಂಬ ದೂರು ಜನರಿಂದ ಆಗಾಗ ಕೇಳಿಬರುತ್ತಲೇ ಇತ್ತು. ಶಕ್ತಿಸೌಧದಲ್ಲಿ ಬಾಪೂಜಿ ಪ್ರತಿಷ್ಠಾಪಿಸಬೇಕೆಂಬ ಬೇಡಿಕೆ ಈಗ ಸಾಕಾರಗೊಳ್ಳುತ್ತಿದೆ.

25 ಅಡಿ ಎತ್ತರದ ಪ್ರತಿಮೆ: 20 ಟನ್ ತೂಕದ ಈ ಕಂಚಿನ ಪ್ರತಿಮೆ ನೆಲಮಟ್ಟದಿಂದ 37 ಅಡಿ ಎತ್ತರದಲ್ಲಿದೆ. ಪೀಠವು 12 ಅಡಿ ಎತ್ತರ, ಪ್ರತಿಮೆಯು 17.40 ಅಡಿ ಅಗಲ ಮತ್ತು 14 ಅಡಿ ಉದ್ದ ಇದೆ.

ಪ್ರತಿಮೆಯ ಕೆಳಭಾಗದ ಪೀಠದಲ್ಲಿ ಗಾಂಧೀಜಿ ಅವರ ಸಂದೇಶಗಳು, ಅವರ ಪ್ರಸಿದ್ಧ ಸಪ್ತ ಮಹಾಪಾತಕಗಳನ್ನು ಬರೆಯಲಾಗಿದೆ. ಜತೆಗೆ, ಗಾಂಧೀಜಿ ಕೈಗೊಂಡಿರುವ ರಚನಾತ್ಮಕ ಕಾರ್ಯಗಳಾದ ಅಸ್ಪೃಶ್ಯತೆ ನಿವಾರಣೆ, ಗ್ರಾಮೋದ್ಯೋಗ, ಖಾದಿ, ಪಾನ ನಿರೋಧ, ಗ್ರಾಮ ಸ್ವಚ್ಛತೆ, ಸಮುದಾಯದ ಏಕತೆ ಮೇಲೂ ಬೆಳಕು ಚೆಲ್ಲಲಾಗಿದೆ.

ಕಾರುಗಳ ಡಿಕ್ಕಿ: ಕುಟುಂಬದ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಹಾವೇರಿ: ಶಿಗ್ಗಾವಿಯ ತಡಸ ಕ್ರಾಸ್‌ನ ತಿಮ್ಮಾಪುರ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಬುಧವಾರ ಕಾರುಗಳ ಅಪಘಾತದಲ್ಲಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿದ್ದಾರೆ.

ಬೆಂಗಳೂರು ಚಾಮರಾಜಪೇಟೆಯ ಚಂದ್ರಮ್ಮ (59), ಅವರ ಮಗಳು ಮೀನಾ (38), ಅಳಿಯ ಸಿ. ಮಹೇಶ್‌ಕುಮಾರ್ (41) ಹಾಗೂ ಇವರ ಮಗ ಧನ್ವೀರ್ (11) ಮೃತರು.

'ಇಬ್ಬರು ಸ್ಥಳದಲ್ಲೇ ಮೃತಪಟ್ಟರು. ಇನ್ನಿಬ್ಬರು, ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ತೀರಿಕೊಂಡಿದ್ದಾರೆ' ಎಂದು ಪೊಲೀಸರು ಮಾಹಿತಿ ನೀಡಿದರು.

'ದಾವಣಗೆರೆ ಜಿಲ್ಲೆಯ ಹರಿಹರದ ಮಹೇಶ್‌ಕುಮಾರ್, ಖಾಸಗಿ ಸಂಸ್ಥೆಯ ಉದ್ಯೋಗಿ. ಕುಟುಂಬದ ಜೊತೆ ಬೆಂಗಳೂರಿನಲ್ಲಿ ನೆಲೆಸಿದ್ದರು. ಚಂದ್ರಮ್ಮ ಸಹ ಒಟ್ಟಿಗಿದ್ದರು. ರಜೆಯಲ್ಲಿ ಉತ್ತರ ಕರ್ನಾಟಕಕ್ಕೆ ಪ್ರವಾಸಕ್ಕಾಗಿ ಬಂದಿದ್ದರು. ತಾವೇ ಕಾರು ಚಾಲನೆ ಮಾಡುತ್ತಿದ್ದು, ಬೆಂಗಳೂರಿನತ್ತ ಮರಳುವಾಗ ಅವಘಡ ಸಂಭವಿಸಿದೆ' ಎಂದು ತಿಳಿಸಿದರು.

ಮಹೀಂದ್ರ ಎಕ್ಸ್‌ಯುವಿ ಚಾಲಕನ ನಿರ್ಲಕ್ಷ್ಯ: 'ಮಹಾರಾಷ್ಟ್ರ ಕೊಲ್ಲಾಪುರದ ಸುಮಿತ್ರ ನವಲೆ ಹೆಸರಿನಲ್ಲಿ ನೋಂದಣಿಯಾಗಿದ್ದ ಮಹೀಂದ್ರ ಎಕ್ಸ್‌ಯುವಿ ಕಾರು ಬೆಂಗಳೂರು ಕಡೆಯಿಂದ ಹುಬ್ಬಳ್ಳಿಯತ್ತ ಹೊರಟಿತ್ತು. ಚಾಲಕ ಅತಿ ವೇಗವಾಗಿ ಕಾರು ಚಲಾಯಿಸಿದ್ದ. ತಡಸ ಕ್ರಾಸ್ ಬಳಿ ನಿಯಂತ್ರಣ ತಪ್ಪಿದ ಕಾರು, ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಎದುರಿಗೆ ಬರುತ್ತಿದ್ದ ಮಹೇಶ್‌ಕುಮಾರ್ ಕಾರಿಗೆ ಡಿಕ್ಕಿಯಾಗಿದೆ.

'ಮಹೀಂದ್ರಾ ಕಾರು ಚಾಲಕ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದು ಆತನ ವಿಳಾಸ ಪತ್ತೆ ಮಾಡಲಾಗಿದೆ, ಆತನ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಹೇಳಿದರು.

'ಗಾಂಧೀಜಿ ಭೇಟಿ ನೀಡಿದ್ದ ಎಲ್ಲ ಸ್ಥಳಗಳಲ್ಲಿ 'ಗಾಂಧಿ ವನ' ನಿರ್ಮಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದಿದ್ದ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಬೇಕು. ಅವರು ಭೇಟಿ ನೀಡಿದ ಎಲ್ಲ ಸ್ಥಳಗಳಲ್ಲೂ ಐದು ಎಕರೆ ವಿಸ್ತೀರ್ಣದ 'ಗಾಂಧಿ ವನ' ರೂಪಿಸಬೇಕು ಎಂದು ಸರ್ವೋದಯ ಕರ್ನಾಟಕ ಸಂಘಟನೆ ಸಲಹೆ ನೀಡಿದೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವ ಸಂಘಟನೆಯ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಪಾಂಡೋಮಟ್ಟಿ ವಿರಕ್ತಮಠದ ಗುರುಬಸವ ಸ್ವಾಮೀಜಿ, ಸಾಹಿತಿ ಎಸ್.ಜಿ. ಸಿದ್ದರಾಮಯ್ಯ, ಮಾಜಿ ಶಾಸಕ ಮಹಿಮ ಪಟೇಲ್, ಪತ್ರಕರ್ತ ನಾಗೇಶ ಹೆಗಡೆ, ಶಿಕ್ಷಣತಜ್ಞ ವಿ.ಪಿ. ನಿರಂಜನಾರಾಧ್ಯ ಅವರು ಹಲವು ಸಲಹೆ ನೀಡಿದ್ದಾರೆ.

1924ರ ಬೆಳಗಾವಿ ಅಧಿವೇಶನದ ಶತಮಾನೋತ್ಸವ ಅಂಗವಾಗಿ 'ಗಾಂಧಿ ಭಾರತ' ಕಾರ್ಯಕ್ರಮ ಆಯೋಜನೆ ಸ್ವಾಗತಾರ್ಹ. ಜಗತ್ತಿನ ಬಹುತೇಕ ದೇಶಗಳು ಗಾಂಧಿ ಅವರ ಅಹಿಂಸೆ, ಸಮಾನತೆ, ಸೌಹಾರ್ದ ಮತ್ತು ಸರ್ವೋದಯ ಸಂದೇಶವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿವೆ. ಆದರೆ, ಭಾರತದಲ್ಲೇ ಗಾಂಧೀಜಿ ಹಾಗೂ ಅವರ ತತ್ವ, ಸಿದ್ಧಾಂತಗಳನ್ನು ನಿರ್ಲಕ್ಷಿಸುವ, ಕಡೆಗಣಿಸುವ ಹಾಗೂ ಅಪಪ್ರಚಾರ ಮಾಡುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ ಎಂದು ಪತ್ರದಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

ಗಾಂಧಿ ತತ್ವದ ಸರ್ವಧರ್ಮ ಸಮನ್ವಯವನ್ನು ಕದಡಿ ಕೋಮು-ಶಕ್ತಿಗಳನ್ನು ಪೋಷಿಸುವ, ಜಾತಿ ಧರ್ಮಗಳ ನಡುವೆ ವಿಷಬೀಜ ಬಿತ್ತುವ ಕೆಲಸವನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಇಂತಹ ಸಮಯದಲ್ಲೇ ಕರ್ನಾಟಕ ಸರ್ಕಾರವು 'ಗಾಂಧಿ ಭಾರತ' ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಕಳೆದುಕೊಂಡಿರುವ ಗಾಂಧಿ ತತ್ವಗಳ ಪುನರ್‌ಸ್ಥಾಪನೆಗೆ ಕಾರ್ಯಕ್ರಮ ರೂಪಿಸಿರುವುದು ಆರೋಗ್ಯಕರ ಮನಸ್ಥಿತಿಯ ಸೂಚಕವಾಗಿದೆ ಎಂದು ಶ್ಲಾಘಿಸಿದ್ದಾರೆ.

ಎಲೆಕ್ಟ್ರಾನಿಕ್ ಸಾಧನ ಪರಿಶೀಲನೆಗೆ ನಿರ್ಬಂಧ

ನವದೆಹಲಿ (ಪಿಟಿಐ): 'ಲಾಟರಿ ರಾಜ' ಎಂಬ ಅಡ್ಡ ಹೆಸರು ಹೊತ್ತಿರುವ ಸ್ಯಾಂಟಿಯಾಗೊ ಮಾರ್ಟಿನ್, ಅವರ ಸಂಬಂಧಿಕರು ಮತ್ತು ನೌಕರರಿಂದ ವಶಪಡಿಸಿ-ಕೊಂಡಿರುವ ಎಲೆಕ್ಟ್ರಾನಿಕ್ ಸಾಧನಗಳಲ್ಲಿ ಇರುವ ವಸ್ತು–ವಿಷಯಗಳನ್ನು ಇನ್ನೊಂದು ಸಾಧನಕ್ಕೆ ನಕಲು ಮಾಡಿಕೊಳ್ಳುವಂತಿಲ್ಲ ಎಂದು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಸುಪ್ರೀಂ ಕೋರ್ಟ್ ಸೂಚಿಸಿದೆ.

ಸಾಂಟಾಕ್ಲಾಸ್ ಮಂಗಳೂರಿನ ಪಣಂಬೂರು ಕಡಲ ಕಿನಾರೆಯಲ್ಲಿ ಕಲಾವಿದರಾದ ಪ್ರಣಾಮ್ ದೇವಾಡಿಗ ಹಾಗೂ ಪ್ರಸಾದ್ ಮೂಲ್ಯ ಅವರು ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಮರಳಿನಲ್ಲಿ ಸಾಂಟಾಕ್ಲಾಸ್ ಕಲಾಕೃತಿಯನ್ನು ಬುಧವಾರ ರಚಿಸಿದರು ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಸ್ಫೋಟಕ ಪೂರೈಕೆ ಪ್ರಕರಣ ಮೂವರು ಉಗ್ರರಿಗೆ ಶಿಕ್ಷೆ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಯೋತ್ಪಾದಕ ಕೃತ್ಯಗಳಿಗೆ ಸ್ಫೋಟಕ ಸಾಮಗ್ರಿ ಪೂರೈಸಿದ್ದ ಭಟ್ಕಳದ ಉಗ್ರ, ಹೋಮಿಯೋಪಥಿ ವೈದ್ಯ ಸೈಯದ್ ಇಸ್ಮಾಯಿಲ್ ಅಫಕ್‌ಗೆ ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ಇದೇ ಪ್ರಕರಣದಲ್ಲಿ ಅಪರಾಧಿಗಳಾದ ಅಬ್ದುಲ್ ಸಬೂರ್ ಹಾಗೂ ಸದ್ದಾ ಹುಸೇನ್‌ಗೆ ತಲಾ 10 ವರ್ಷ ಶಿಕ್ಷೆ ನೀಡಿ ನ್ಯಾಯಾಲಯ ಆದೇಶಿಸಿದೆ.

ಇಂಡಿಯನ್ ಮುಜಾಹಿದೀನ್ (ಐ.ಎಂ) ಉಗ್ರ ಸಂಘಟನೆ ದೇಶದಲ್ಲಿ ಎಸಗಿದ್ದ ವಿಧ್ವಂಸಕ ಕೃತ್ಯಗಳಿಗೆ ಈ ಮೂವರು ಉಗ್ರರು ಸ್ಫೋಟಕ ಸಾಮಗ್ರಿ ಪೂರೈಸಿರುವುದು ಎನ್‌ಐಎ ತನಿಖೆಯಲ್ಲಿ ದೃಢಪಟ್ಟಿತ್ತು. ಇತ್ತೀಚೆಗೆ ಮೂವರನ್ನು ಅಪರಾಧಿಗಳು ಎಂದು ಘೋಷಣೆ ಮಾಡಿದ್ದ ನ್ಯಾಯಾಲಯ, ಮಂಗಳವಾರ ಶಿಕ್ಷೆ ಪ್ರಮಾಣ ನಿಗದಿ ಪಡಿಸಿ ಆದೇಶ ಹೊರಡಿಸಿದೆ.

ಇಸ್ಮಾಯಿಲ್ ಅಫಾಕ್‌ಗೆ ₹1.55 ಲಕ್ಷ ಹಾಗೂ ಸಬೂರ್ ಮತ್ತು ಹುಸೇನ್‌ಗೆ ತಲಾ ₹25 ಸಾವಿರ ದಂಡ ವಿಧಿಸಲಾಗಿದೆ. 2015ರಲ್ಲಿ ಬೆಂಗಳೂರಿನ ಪುಲಕೇಶಿನಗರ ಹಾಗೂ ಭಟ್ಕಳ ಪಟ್ಟಣದಲ್ಲಿ ಕಾರ್ಯಾಚರಣೆ ನಡೆಸಿ ಐಎಂನಲ್ಲಿ ಗುರುತಿಸಿಕೊಂಡಿದ್ದ ಶಂಕಿತ ಉಗ್ರರನ್ನು ಬಂಧಿಸಲಾಗಿತ್ತು. ಬಂಧಿತರಿಂದ ಅಪಾರ ಪ್ರಮಾಣದ ಸ್ಫೋಟಕ ವಸ್ತುಗಳನ್ನು ಜಪ್ತಿ ಮಾಡಲಾಗಿತ್ತು.

2015ರಲ್ಲಿ ಅಮೆರಿಕದ ಅಂದಿನ ಅಧ್ಯಕ್ಷ ಬರಾಕ್ ಒಬಾಮ ಅವರು ಭಾರತಕ್ಕೆ ಭೇಟಿ ನೀಡಿದ್ದ ವೇಳೆ ಸ್ಫೋಟ ನಡೆಸಲು ಸಂಚು ರೂಪಿಸಿದ್ದ ಆರೋಪ ಮೂವರ ಮೇಲಿತ್ತು. ಉಗ್ರರು ಪಾಕಿಸ್ತಾನದಿಂದ ಬಂದ ಸೂಚನೆಯಂತೆ ಸ್ಫೋಟಕ್ಕೆ ಸಂಚು ರೂಪಿಸಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿತ್ತು.

ಸ್ಫೋಟ ಸಂಚಿನ ಕುರಿತು ಪುಲಕೇಶಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಅಂದಿನ ಕೇಂದ್ರ ಅಪರಾಧ ವಿಭಾಗದ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ 2 ಸಾವಿರ ಪುಟಗಳ ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ್ದರು.

ಮಲದಗುಂಡಿ ಸ್ವಚ್ಛತೆಗೆ ಇಳಿದಿದ್ದ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಚಳ್ಳಕೆರೆ: ಇಲ್ಲಿನ ಪಾವಗಡ ರಸ್ತೆಯ ರೈಲ್ವೆ ನಿಲ್ದಾಣದ ಸಮೀಪದ ರಾಘವೇಂದ್ರ ಕಲ್ಯಾಣ ಮಂಟಪದ ಆವರಣದಲ್ಲಿನ ಮಲದ ಗುಂಡಿಯ ಸ್ವಚ್ಛತೆಗೆ ಇಳಿದಿದ್ದ ವ್ಯಕ್ತಿ ಮೃತಪಟ್ಟಿರುವ ಘಟನೆ ಈಚೆಗೆ ನಡೆದಿದೆ.

ಚಳ್ಳಕೆರೆಯ ಗಾಂಧಿನಗರದ ನಿವಾಸಿ, ಸ್ವಚ್ಛತೆಯ ಕೆಲಸ ಮಾಡುತ್ತಿದ್ದ ಸಿ.ರಂಗಸ್ವಾಮಿ (48) ಮೃತ ವ್ಯಕ್ತಿ. ಡಿ.18ರಂದು ಕಲ್ಯಾಣ ಮಂಟಪದ ಆವರಣದಲ್ಲಿ ಮಲದ ಗುಂಡಿ ಸ್ವಚ್ಛಗೊಳಿ-ಸುವಾಗ ಮೃತಪಟ್ಟಿದ್ದಾರೆ.

'ಸಫಾಯಿ ಕರ್ಮಚಾರಿಗಳ ಸೇವಾ ಸಮಿತಿಯವರು ಈ ಬಗ್ಗೆ ಜಿಲ್ಲಾಧಿಕಾರಿಗೆ ದೂರು ನೀಡಿದ್ದರು. ಘಟನೆ ಪರಿಶೀಲಿಸಿ, ಮಂಗಳವಾರ ಪ್ರಕರಣ ದಾಖಲು ಮಾಡಲಾಗಿದೆ' ಎಂದು ಪಿಎಸ್‌ಐ ಸತೀಶ್ ನಾಯ್ಕ ತಿಳಿಸಿದ್ದಾರೆ.

ಅರ್ಚಕ, ಆಗಮಿಕರ, ಉಪಾಧಿವಂತರ ಒಕ್ಕೂಟದಿಂದ ವಿರೋಧ

ಮುಜರಾಯಿ ದೇಗುಲಗಳತ್ತ ಖಾಸಗಿ ಕಣ್ಣು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ರಾಜ್ಯದ ಮುಜರಾಯಿ ಇಲಾಖೆಯ ಅಡಿಯಲ್ಲಿರುವ 'ಸಿ' ವರ್ಗದ ದೇವಸ್ಥಾನಗಳ ಮೇಲೆ ಖಾಸಗಿಯವರ ಕಣ್ಣು ಬಿದ್ದಿದೆ.

ಇದಕ್ಕೆ ಅರ್ಚಕರ ಒಕ್ಕೂಟ ವಿರೋಧ ವ್ಯಕ್ತಪಡಿಸಿದ್ದು, ಸರ್ಕಾರದ ನಿಯಂತ್ರಣದಲ್ಲಿಯೇ ಮುಜರಾಯಿ ದೇವಸ್ಥಾನಗಳು ಇರಬೇಕು ಎಂದು ಆಗ್ರಹಿಸಿದೆ.

'ಹಳೆ ಮೈಸೂರು ಭಾಗದ ಪ್ರಭಾವಿ ಮಠದ ಪೀಠಾಧಿಪತಿಯವರು ಮೂರು ವರ್ಷಗಳ ಹಿಂದೆ, ಬಿಜೆಪಿ ಸರ್ಕಾರದ ಮುಜರಾಯಿ ಸಚಿವರನ್ನು ತಮ್ಮ ಮಠಕ್ಕೆ ಕರೆಸಿಕೊಂಡಿದ್ದರು. ಆದಾಯ ಇಲ್ಲದ ದೇವಸ್ಥಾನಗಳನ್ನು ನಮಗೆ ಕೊಡಿ. ನಾವೇ ನಿರ್ವಹಣೆ ಮಾಡುತ್ತೇವೆ ಎಂದು ಸಚಿವರಲ್ಲಿ ಕೇಳಿಕೊಂಡಿದ್ದರು. ಆದರೆ, ಮುಜರಾಯಿ ದೇವಸ್ಥಾನಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಕರಣಗಳು ನ್ಯಾಯಾಲಯದಲ್ಲಿ ಇರುವುದರಿಂದ ಯಾವುದೇ ತೀರ್ಮಾನ ಕೈಗೊಳ್ಳಲು ಬರುವುದಿಲ್ಲ ಎಂದು ಅಂದಿನ ಸಚಿವರು ತಿಳಿಸಿದ್ದರು' ಎಂದು ಮೂಲಗಳು ಹೇಳಿವೆ.

'ಅರ್ಚಕರಿಗೆ ಸರ್ಕಾರವು ನಿವೃತ್ತಿ ವಯಸ್ಸು ನಿಗದಿ ಮಾಡಿದ್ದನ್ನು ನಾವು ಪ್ರಶ್ನಿಸಿದ್ದೆವು. ಹೈಕೋರ್ಟ್‌ನಲ್ಲಿ ಸರ್ಕಾರದ ಪರ ಆದೇಶ ಬಂದಿತ್ತು. ಅದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದೆವು. ಅಲ್ಲಿ ನಮ್ಮ ಪರ ತಡೆಯಾಜ್ಞೆ ಬಂದಿದೆ. ಈ ಪ್ರಕರಣವೇ 'ಸಿ' ವರ್ಗದ ದೇವಸ್ಥಾನಗಳನ್ನು ಖಾಸಗಿಯವರಿಗೆ ಒಪ್ಪಿಸುವುದಕ್ಕೂ ಅಡ್ಡಿಯಾಗಿತ್ತು' ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಆದರೆ, ಬಲಿಷ್ಠ ಸಮುದಾಯಕ್ಕೆ ಸೇರಿದ ಆ ಮಠದವರು ಆನಂತರವೂ ಸುಮ್ಮನೆ ಕುಳಿತಿಲ್ಲ. 'ಸಿ' ಗ್ರೇಡ್ ದೇವಸ್ಥಾನಗಳನ್ನು ವಶಕ್ಕೆ ಪಡೆಯಲು ತೆರೆಮರೆಯಲ್ಲಿ ಪ್ರಯತ್ನ ಮುಂದುವರಿಸಿದ್ದಾರೆ ಎಂದು ತಿಳಿಸಿದರು.

ಅರ್ಚಕರಾಗಬೇಕಿದ್ದರೆ ಆಗಮ ಪರೀಕ್ಷೆ ಉತ್ತೀರ್ಣರಾಗಿರಬೇಕು. ಅಂದರೆ ಪ್ರವರ ಮತ್ತು ಪ್ರವೀಣ ಪರೀಕ್ಷೆ ಬರೆದು ತೇರ್ಗಡೆಯಾಗಿರಬೇಕು. ಈ ಮಠದಲ್ಲಿ ಈಗಾಗಲೇ 25 ಸಾವಿರಕ್ಕೂ ಅಧಿಕ ಮಂದಿ ಉತ್ತೀರ್ಣರಾಗಿದ್ದಾರೆ. ಅವರನ್ನು ದೇವಸ್ಥಾನಗಳಿಗೆ ತಂದು ಕೂರಿಸುವ ಹುನ್ನಾರ ಇದು. ದೇವಸ್ಥಾನಗಳು ಅವರ ಸುಪರ್ದಿಗೆ ಹೋದ ಕೂಡಲೇ ಅರ್ಚಕರೆಲ್ಲ ಬದಲಾಗಿ ಬಿಡುತ್ತಾರೆ ಎಂದಲ್ಲ. ಅರ್ಚಕರು ಅವರು ಹೇಳಿದಂತೆ ಕೇಳಬೇಕು ಎಂದು ನಿಯಮ ರೂಪಿಸಿ, ಅದಕ್ಕೆ ಒಪ್ಪದವರನ್ನು ಬದಲಾಯಿ-ಸಬಹುದು' ಎಂದು ದೇವಸ್ಥಾನಗಳ ಅರ್ಚಕರು ಆತಂಕ ವ್ಯಕ್ತಪಡಿಸಿದರು.

'ಸರ್ಕಾರವು ನಿಯಮ ಪ್ರಕಾರವೇ ₹25 ಲಕ್ಷಕ್ಕಿಂತ ಅಧಿಕ ವರಮಾನ ಇರುವ 'ಎ' ಮತ್ತು ₹5 ಲಕ್ಷದಿಂದ ₹25 ಲಕ್ಷವರೆಗೆ ವರಮಾನ ಇರುವ 'ಬಿ' ದರ್ಜೆಯ ದೇವಸ್ಥಾನಗಳ ಆದಾಯದಲ್ಲಿ ಶೇ 10ರಷ್ಟನ್ನು 'ಸಿ' ದರ್ಜೆ ದೇವಸ್ಥಾನಗಳ ಅಭಿವೃದ್ಧಿಗೆ ಬಳಸಬೇಕು. ಆದರೆ, ಆ ಕೆಲಸ ಆಗುತ್ತಿಲ್ಲ' ಎಂದು ಒಕ್ಕೂಟದ ಪದಾಧಿಕಾರಿಗಳು ದೂರಿದರು.

ಅಂಕಿ ಅಂಶ

1.86 ಲಕ್ಷ
ರಾಜ್ಯದಲ್ಲಿರುವ ಒಟ್ಟು ದೇವಸ್ಥಾನಗಳು

34,564
ಅದರಲ್ಲಿ ಮುಜರಾಯಿಗೆ ಸೇರಿದ ದೇವಸ್ಥಾನಗಳು

205
'ಎ' ವರ್ಗದ ದೇವಸ್ಥಾನಗಳು

193
'ಬಿ' ವರ್ಗದ ದೇವಸ್ಥಾನಗಳು

34,166
'ಸಿ' ವರ್ಗದ ದೇವಸ್ಥಾನಗಳು

ಖಾಸಗೀಕರಣವಿಲ್ಲ, ಅಭಿವೃದ್ಧಿಗೆ ಅವಕಾಶ



ಹಿಂದೂ ಧಾರ್ಮಿಕ ಹಾಗೂ ಧರ್ಮಾದಾಯ ದತ್ತಿಗಳ ಇಲಾಖೆಗೆ (ಮುಜರಾಯಿ) ಒಳಪಟ್ಟಿರುವ ಯಾವುದೇ ದೇವಸ್ಥಾನವನ್ನು ಖಾಸಗೀಕರಣ ಮಾಡುವುದಿಲ್ಲ. ಖಾಸಗೀಕರಣಕ್ಕೆ ಯಾರೂ ಕೇಳಿಯೂ ಇಲ್ಲ. ದೇವಸ್ಥಾನ-ವನ್ನು ಅಭಿವೃದ್ಧಿ ಮಾಡಬೇಕು ಎಂದು ಯಾರಿಗಾದರೂ ಅನ್ನಿಸಿದರೆ ಅದಕ್ಕೆ ಸಂಬಂಧಿಸಿದಂತೆ ಸಮಿತಿ ಮಾಡುತ್ತೇವೆ. ಸಮಿತಿಯ ಮೂಲಕ ಅಭಿವೃದ್ಧಿಗೆ ಕೈಜೋಡಿಸಬಹುದು. ಆದರೆ, ದೇವಸ್ಥಾನದ ಆಡಳಿತ, ಇನ್ನಿತರ ವಿಚಾರಗಳಲ್ಲಿ ಅವಕಾಶ ಇರುವುದಿಲ್ಲ ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಸ್ಪಷ್ಟಪಡಿಸಿದ್ದಾರೆ.

ಎಲ್ಲರೂ ಕೇಳುವ ಅಪಾಯ



'ಈಗ ಒಂದು ಸಮಯದಾಯದ ಮಠದವರು ಮುಜರಾಯಿ ದೇವಸ್ಥಾನಗಳನ್ನು ಕೇಳುತ್ತಿದ್ದಾರೆ. ಮುಂದೆ ಬೇರೆ ಬೇರೆ ಸಮುದಾಯದವರು ಕೇಳಲು ಆರಂಭಿಸಬಹುದು. ಸರ್ಕಾರ ಇದಕ್ಕೆಲ್ಲ ಮಣಿಯದೇ ತನ್ನದೇ ಹಿಡಿತದಲ್ಲಿ ಇಟ್ಟುಕೊಳ್ಳಬೇಕು. 'ಸಿ' ದರ್ಜೆಯ ದೇವಸ್ಥಾನಗಳ ಅಭಿವೃದ್ಧಿಗೆ ಬಳಸಬೇಕಾದ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ಮುಖ್ಯಮಂತ್ರಿಯವರಿಗೆ, ಮುಜರಾಯಿ ಸಚಿವರಿಗೆ ಮನವಿ ನೀಡಿದ್ದೇವೆ' ಎಂದು ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್ ತಿಳಿಸಿದರು.

ಗುರುವಾರ, ಡಿಸೆಂಬರ್ 26, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 357 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಳಗಾವಿ ಅಧಿವೇಶನ-100
ಬೆಳಗಾವಿ ಕಾಂಗ್ರೆಸ್ ಅಧಿವೇಶನ ಶತಮಾನ ಸಂಭ್ರಮ
'ಎಎಪಿ ಬೆಂಬಲಿಸಿದ್ದೇ ದುಃಸ್ಥಿತಿಗೆ ಕಾರಣ' 7
ಕಜಕಸ್ತಾನ: ವಿಮಾನ ಅಪಘಾತ–38 ಮಂದಿ ಸಾವು 11

ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹79,770 (ಬೆಂಗಳೂರು)	₹93,100 (ಬೆಂಗಳೂರು)

1924ರಲ್ಲಿ ಗಾಂಧೀಜಿ ಅಧ್ಯಕ್ಷತೆಯ ಅಧಿವೇಶನದ ಶತಮಾನೋತ್ಸವಕ್ಕೆ ಬೆಳಗಾವಿ ಸಜ್ಜು

ನೂರರ ನೆನಪು, 'ಕೈ'ಗೆ ಹುರುಪು

● ರಾಜೇಶ್ ರೈ ಚಟ್ಲ

ಬೆಳಗಾವಿ: ಸ್ವಾತಂತ್ರ್ಯ ಚಳವಳಿಯ ಗತಿಯನ್ನೇ ಬದಲಿಸಿ ದೇಶ ವಿಮೋಚನೆಯ ಕಡೆಗೆ ಹೊರಳಲು ಬಿಂದು ಸ್ವರೂಪಿಯಾದ 1924ರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಪ್ರಭಾವಳಿಯನ್ನು 'ಶತಮಾನೋತ್ಸವ' ನೆನಪಿನಲ್ಲಿ ಮತ್ತೆ ಆವಾಹಿಸಿಕೊಂಡು, ಕಾಂಗ್ರೆಸ್ ಪಕ್ಷವನ್ನು ದೇಶವ್ಯಾಪಿ ಬಲಿಷ್ಠಗೊಳಿಸುವ ಸಂಕಲ್ಪಕ್ಕೆ ಇಲ್ಲಿ ಎರಡು ದಿನ ನಡೆಯಲಿರುವ ಕಾರ್ಯಕ್ರಮ ನಾಂದಿ ಹಾಡಲಿದೆ.

ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಕು; ಹೊಸಕಸುವು ಕೊಟ್ಟ ಮಹಾತ್ಮ ಗಾಂಧಿಯವರು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದು ನೂರು ವರ್ಷದ ಹಿಂದೆ ಇದೇ ಬೆಳಗಾವಿಯ ನೆಲದಲ್ಲಿ ನಡೆದ ಅಧಿವೇಶನ. ಅಲ್ಲಿಂದ ಚಾಲೂಗೊಂಡ ಸ್ವಾತಂತ್ರ್ಯ ಹೋರಾಟ, ಬ್ರಿಟಿಷರನ್ನು ಓಡಿಸುವವರೆಗೂ ನಿಲ್ಲಲಿಲ್ಲ. ಅಂತಹ ಐತಿಹಾಸಿಕ ಸಮ್ಮೇಳನ ನಡೆದ ನೆಲದಲ್ಲಿಯೇ, ಶತಮಾನದ ಸಂಭ್ರಮದ ಜತೆಗೆ ಪಕ್ಷದ ಭವಿತವ್ಯಕ್ಕೆ ಅಡಿಪಾಯ ಹಾಕಲು ಕಾಂಗ್ರೆಸ್ ನಾಯಕರು ಅಣಿಯಾಗಿದ್ದಾರೆ.

ಕನ್ನಡಿಗರೇ ಆಗಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಅಧ್ಯಕ್ಷತೆಯಲ್ಲಿ ಮೇಳೈಸಲಿರುವ ಎಐಸಿಸಿ ಅಧಿವೇಶನವು, ಪಕ್ಷದ ಭವಿಷ್ಯದ ನಡೆಗೆ ಹೊಸ ಮಾರ್ಗವನ್ನು ತೆರೆಯಲಿದೆ ಎಂಬ ನಿರೀಕ್ಷೆ ಕಾಂಗ್ರೆಸ್ ನಾಯಕರದ್ದಾಗಿದೆ. 'ಗಾಂಧಿ ಭಾರತ'ದ ಆಶಯದಡಿ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ್' ಉದ್ಘೋಷದೊಂದಿಗೆ ನಡೆಯಲಿರುವ ಎರಡು ದಿನಗಳ ಕಾರ್ಯಕ್ರಮ ಕಾಂಗ್ರೆಸ್‌ಗೆ ನವ ಚೈತನ್ಯ ತರುವ ಹೆಬ್ಬಯಕೆಯನ್ನೂ ಹೊಂದಿದೆ.

4ನೇ ಪುಟ ನೋಡಿ

'ಗಾಂಧಿ ಭಾರತ' ಕಾರ್ಯಕ್ರಮಕ್ಕಾಗಿ ಬೆಳಗಾವಿ ನಗರದಲ್ಲಿ ಕಾಂಗ್ರೆಸ್ ನಾಯಕರ ಕಟೌಟ್‌ಗಳು ರಾರಾಜಿಸುತ್ತಿವೆ

ಪ್ರಜಾವಾಣಿ ಚಿತ್ರ: ಇಮಾಮ್‌ಹುಸೇನ್ ಗೂಡುನವರ

ಪಕ್ಷದಲ್ಲಿ ಬದಲಾವಣೆ ನಿರಂತರವಾದ ಪ್ರಕ್ರಿಯೆ. ನೂರು ವರ್ಷಗಳ ಹಿಂದಿದ್ದ ಪರಿಸ್ಥಿತಿ ಈಗಿಲ್ಲ. ರಾಜಕೀಯ ಬದಲಾವಣೆ, ಬೆಳವಣಿಗೆಗಳು ಆಗುತ್ತಿರುತ್ತವೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಇಂದಿನ ಪರಿಸ್ಥಿತಿಯಲ್ಲಿ ದೇಶವನ್ನು ಯಾವ ದಿಕ್ಕಿನಲ್ಲಿ ಮುನ್ನಡೆಸಬೇಕು. ದೇಶಕ್ಕೆ ಯಾವ ರೀತಿ ಶಕ್ತಿ ತುಂಬಬೇಕು ಎಂದು ಸಿಡಬ್ಲ್ಯುಸಿ ಸಭೆಯಲ್ಲಿ ಚರ್ಚಿಸುತ್ತೇವೆ

ಡಿ.ಕೆ.ಶಿವಕುಮಾರ್, ಅಧ್ಯಕ್ಷ, ಕೆಪಿಸಿಸಿ

ಸಿಡಬ್ಲ್ಯುಸಿ ಮಹತ್ವದ ನಿರ್ಣಯ?

ಸಿಡಬ್ಲ್ಯುಸಿ ಸಭೆಯಲ್ಲಿ ಇಡೀ ದೇಶಕ್ಕೆ ಮಹತ್ವದ ಸಂದೇಶ ನೀಡುವ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲು ಕಾಂಗ್ರೆಸ್ ನಾಯಕರು ಚಿಂತನ ಮಂಥನ ನಡೆಸಿದ್ದಾರೆ.

'ಅಂಬೇಡ್ಕರ್ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವಮಾನ ಮಾಡಿದ್ದಾರೆಂದು ದೇಶವ್ಯಾಪಿ ಜನಾಂದೋಲನ ಹಮ್ಮಿಕೊಳ್ಳುವುದು, 'ಒಂದು ದೇಶ, ಒಂದು ಚುನಾವಣೆ' ಕುರಿತು ಪಕ್ಷದ ಸ್ಪಷ್ಟ ನಿಲುವು ವ್ಯಕ್ತಪಡಿಸುವ ಕುರಿತು ಚರ್ಚೆ, ಸಂವಿಧಾನದ ರಕ್ಷಣೆ, ದೇಶದಲ್ಲಿರುವ ಆರ್ಥಿಕ ಅಸಮಾನತೆ, ಪಕ್ಷ ಸಂಘಟನೆಯ ಪುನರಾಚನೆ ಬಗ್ಗೆಯೂ ಚರ್ಚಿಸಿ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳುವ ಸಾಧ್ಯತೆಯಿದೆ' ಎಂದು ಮೂಲಗಳು ತಿಳಿಸಿವೆ.

ಅಧಿವೇಶನ- ಏನೇನು ಕಾರ್ಯಕ್ರಮ?

ಗುರುವಾರ (ಡಿ. 26)

ಬೆಳಿಗ್ಗೆ 10: ವೀರಸೌಧದಲ್ಲಿ ಗಾಂಧಿ ಪುತ್ಥಳಿ ಅನಾವರಣ, ಛಾಯಾಚಿತ್ರ ಪ್ರದರ್ಶನ.

ಬೆಳಿಗ್ಗೆ 10.45: ಖಾದಿ ಮೇಳ ಉದ್ಘಾಟನೆ

ಬೆಳಿಗ್ಗೆ 11.15: ಗಂಗಾಧರ ದೇಶಪಾಂಡೆ ಸ್ಮಾರಕ ಅನಾವರಣ, ಛಾಯಾಚಿತ್ರ ಪ್ರದರ್ಶನ

ಮಧ್ಯಾಹ್ನ 3: ಸಿಡಬ್ಲ್ಯುಸಿ ಸಭೆ

ಶುಕ್ರವಾರ (ಡಿ. 27)

ಬೆಳಿಗ್ಗೆ 10.30: ಸುವರ್ಣಸೌಧದಲ್ಲಿ ಗಾಂಧಿ ಪ್ರತಿಮೆ ಅನಾವರಣ

ಮಧ್ಯಾಹ್ನ 1: 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಸಾರ್ವಜನಿಕ ಸಮಾವೇಶ

ಮೊಟ್ಟೆ ಎಸೆತ: ಶಾಸಕ ಮುನಿರತ್ನ ತಲೆಗೆ 'ಗಾಯ'

ಮೊಟ್ಟೆಯಲ್ಲಿ ಆ್ಯಸಿಡ್ ತುಂಬಿದ್ದ ಶಂಕೆ: ಮೂವರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಅಂಗವಾಗಿ ಲಕ್ಷ್ಮಿದೇವಿ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ, ವಾಪಸಾಗುತ್ತಿದ್ದ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರ ಮೇಲೆ ಮೊಟ್ಟೆ ಎಸೆಯಲಾಗಿದ್ದು, ಪ್ರಕರಣ ಸಂಬಂಧ ನಂದಿನಿ ಲೇಔಟ್ ಠಾಣೆ ಪೊಲೀಸರು ಮೂವರನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಮುನಿರತ್ನ ಅವರು ತಮ್ಮ ಬೆಂಬಲಿಗರ ಜತೆಗೆ ರಸ್ತೆಯಲ್ಲಿ ನಡೆದು ತೆರಳುತ್ತಿದ್ದರು. ರಸ್ತೆ ಪಕ್ಕದಲ್ಲಿ ನಿಂತಿದ್ದ ಗುಂಪಿನಲ್ಲಿದ್ದ ಕೆಲವರು ಶಾಸಕರತ್ತ ಮೊಟ್ಟೆ ಎಸೆದಿದ್ದು, ಅದು ಮುನಿರತ್ನ ಅವರ ತಲೆಗೆ ಬಿದ್ದಿತ್ತು. ಸ್ಥಳದಲ್ಲಿದ್ದವರು ಶಾಸಕರನ್ನು ರಕ್ಷಣೆ ಮಾಡಿದರು. ಘಟನೆಯಿಂದ ಆಕ್ರೋಶಗೊಂಡ ಮುನಿರತ್ನ ಹಾಗೂ ಅವರ ಬೆಂಬಲಿಗರು ಸ್ಥಳದಲ್ಲೇ ಪ್ರತಿಭಟನೆ ನಡೆಸಿದರು. ಇದಕ್ಕೆ ಪ್ರತಿಯಾಗಿ ಸ್ಥಳದಲ್ಲಿದ್ದವರೂ ಶಾಸಕರ ವಿರುದ್ಧ ಘೋಷಣೆ ಕೂಗಿದರು ಎಂದು ಗೊತ್ತಾಗಿದೆ.

4ನೇ ಪುಟ ನೋಡಿ

ಶಾಸಕ ಮುನಿರತ್ನ ಮೇಲೆ ಮೊಟ್ಟೆ ಎಸೆದ ದೃಶ್ಯ

ಶಾಸಕರೊಬ್ಬರನ್ನು ಹತ್ಯೆ ಮಾಡುವ ಸಂಚು ಆತಂಕಕಾರಿ. ಕಾನೂನು ಸುವ್ಯವಸ್ಥೆಯು ಅಧೋಗತಿಗೆ ಇಳಿದಿದೆ. ಮುನಿರತ್ನ ಅವರ ಮೇಲೆ ಹಲ್ಲೆ ನಡೆಸಿರುವ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು

ಬಿ.ವೈ. ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಮುನಿರತ್ನ ತಮ್ಮ ಬೆಂಬಲಿಗರಿಗೆ ಮೊಟ್ಟೆ ನೀಡಿ ಹೊಡೆಸಿಕೊಂಡಿದ್ದಾರೆ. ಕ್ಷೇತ್ರದ ಜನರ ಅನುಕಂಪ ಗಿಟ್ಟಿಸಿಕೊಳ್ಳಲು ಪ್ರಾಯೋಜಿತ ಕಾರ್ಯಕ್ರಮ ನಡೆಸಿಕೊಂಡಿದ್ದಾರೆ

ಹನುಮಂತರಾಯಪ್ಪ, ಆರ್.ಆರ್. ನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಕುಸುಮಾ ಅವರ ತಂದೆ

ಬಿಡುಗಡೆಯಾಗಿ ತಿಂಗಳಾದರೂ ಸಿಗದ ಅನುದಾನ: ತಂತ್ರಾಂಶವೇ ಕೊಕ್ಕೆ

ಗ್ರಾ.ಪಂ: ₹448 ಕೋಟಿ ಬಳಕೆಗೆ ಅಡ್ಡಿ

● ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಕೇಂದ್ರದ 15ನೇ ಹಣಕಾಸು ಆಯೋಗದ ಅನುದಾನದ ಮೊದಲ ಕಂತು ಬಿಡುಗಡೆಯಾಗಿ ತಿಂಗಳು ಕಳೆದರೂ ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಒಂದು ರೂಪಾಯಿಯನ್ನೂ ವಿನಿಯೋಗಿಸಲು ಸಾಧ್ಯವಾಗಿಲ್ಲ. ಗ್ರಾಮ ಪಂಚಾಯಿತಿಗಳು ಅನುದಾನ ಸೆಳೆಯದಂತೆ ತಂತ್ರಾಂಶದಲ್ಲೇ ಲಾಕ್ ಮಾಡಿರುವುದರಿಂದ ₹448.29 ಕೋಟಿ ಹಾಗೆಯೇ ಉಳಿದಿದೆ.

ಈ ವರ್ಷ ರಾಜ್ಯದ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ಆಯೋಗದಿಂದ ಅನುದಾನದ ರೂಪದಲ್ಲಿ ₹2,637 ಕೋಟಿ ಬರಬೇಕಿದೆ. ಆದರೆ, ಗ್ರಾಮೀಣಾಭಿ ವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ದಾಖಲೆ ಸಲ್ಲಿಸಲು ವಿಳಂಬ ಮಾಡಿದ್ದರಿಂದ ಮೊದಲ ಕಂತು ಮಾತ್ರ ಬಿಡುಗಡೆ ಆಗಿದೆ. ಆದರೆ, ಇ- ಗ್ರಾಮ ಸ್ವರಾಜ್ ತಂತ್ರಾಂಶದಲ್ಲಿ 'ಆಟೊ ರಿಸಿಪ್ಟ್' ಚಾಲನೆ ಮಾಡದೇ ಇರುವುದರಿಂದ ಮೊದಲ ಕಂತಿನ ಅನುದಾನವು ಇಲಾಖೆಯ ಬಳಿಯಲ್ಲೇ ಉಳಿಯುವಂತಾಗಿದೆ.

'ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದ್ದ ಮೊದಲ ಕಂತಿನ ಅನುದಾನವನ್ನು 5,950 ಗ್ರಾಮ ಪಂಚಾಯಿತಿಗಳಿಗೆ ಹಂಚಿಕೆ ಮಾಡಿ ಇಲಾಖೆಯು ನವೆಂಬರ್ 26ರಂದು ಆದೇಶ ಹೊರಡಿಸಿತ್ತು. ಆದರೆ, ಇ-ಗ್ರಾಮ ಸ್ವರಾಜ್ ತಂತ್ರಾಂಶದಲ್ಲಿ 'ಆಟೊ ರಿಸಿಪ್ಟ್' ಮೂಲಕ ವೋಚರ್ ಸೃಜಿಸಲು ಅನುಮತಿ ನೀಡಿಲ್ಲ. ಇದರಿಂದಾಗಿ ಅನುದಾನ ಬಳಕೆಗೆ ಅವಕಾಶ ಸಿಕ್ಕಿಲ್ಲ' ಎಂದು ಇಲಾಖೆಯ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

4ನೇ ಪುಟ ನೋಡಿ

'ದತ್ತಾಂಶ ತಾಳೆಯಾಗದೆ ವಿಳಂಬ'

'ಗ್ರಾಮ ಪಂಚಾಯಿತಿಗಳ ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದ ದತ್ತಾಂಶ ತಾಳೆಯಾಗದೇ ಇರುವುದರಿಂದ ಆಯೋಗದ ಅನುದಾನದ ಬಳಕೆಗೆ ತೊಡಕಾಗಿದೆ. 'ಪ್ರಜಾವಾಣಿ'ಯು ಈ ವಿಷಯವನ್ನು ಗಮನಕ್ಕೆ ತಂದ ಬಳಿಕ ಪರಿಶೀಲನೆ ನಡೆಸಿದ್ದು, ಸಮಸ್ಯೆ ಆಗಿರುವುದು ಕಂಡುಬಂದಿದೆ' ಎಂದು ಪಂಚಾಯತ್ ರಾಜ್ ಇಲಾಖೆಯ ಇ-ಆಡಳಿತ ವಿಭಾಗದ ನಿರ್ದೇಶಕಿ ನಂದಿನಿ ದೇವಿ ಅವರು ಪ್ರತಿಕ್ರಿಯಿಸಿದರು.

'ಖಜಾನೆ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚೆ ನಡೆಸಲಾಗಿದೆ. ಗುರುವಾರ ಬೆಳಿಗ್ಗೆಯಿಂದಲೇ ಸಮಸ್ಯೆ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು' ಎಂದರು.

ಲೋಪಕ್ಕೆ ಇಲಾಖೆಯ ಅಧಿಕಾರಿಗಳೇ ನೇರ ಹೊಣೆ. ಅನುದಾನದ ಬಳಕೆಗೆ ಅನುಮತಿ ನೀಡಬೇಕು.

ಕಾಡಶೆಟ್ಟಿಹಳ್ಳಿ ಸತೀಶ್

ಅಧ್ಯಕ್ಷರು, ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ

'ನಂದಿನಿ' ದೋಸೆ, ಇಡ್ಲಿ ಹಿಟ್ಟು ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್), ಇದೇ ಮೊದಲ ಬಾರಿಗೆ 'ನಂದಿನಿ ಬ್ರ್ಯಾಂಡ್'ನ ಪ್ರೊಟೀನ್‌ಯುಕ್ತ ದೋಸೆ ಹಿಟ್ಟು ಮತ್ತುಇಡ್ಲಿ ಹಿಟ್ಟನ್ನು ಮಾರುಕಟ್ಟೆಗೆ ಪ್ರಾಯೋಗಿಕವಾಗಿ ಬುಧವಾರ ಬಿಡುಗಡೆ ಮಾಡಿದೆ.

ವಿಧಾನಸೌಧದಲ್ಲಿ ಬುಧವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಂದಿನಿ ಬ್ರ್ಯಾಂಡ್‌ನ 'ರೆಡಿ ಟು ಕುಕ್' ನಂದಿನಿವೇ ಪ್ರೊಟೀನ್ ಆಧಾರಿತ ಇಡ್ಲಿ ಮತ್ತು ದೋಸೆ ಹಿಟ್ಟನ್ನು ಬಿಡುಗಡೆ ಮಾಡಿದರು.

ಎಲ್ಲ ಸುರಕ್ಷತಾ ಮಾನದಂಡಗಳನ್ನೂ ಪರಿಶೀಲಿಸಿ ಇಡ್ಲಿ ಮತ್ತು ದೋಸೆ ಹಿಟ್ಟನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದೇವೆ. ಗುಣಮಟ್ಟದಲ್ಲಿ ರಾಜಿ ಇಲ್ಲ

ಭೀಮಾನಾಯ್ಕ್, ಕೆಎಂಎಫ್ ಅಧ್ಯಕ್ಷ

ವಿಶೇಷವೇನು?: ಕೆಎಂಎಫ್ ಬಿಡುಗಡೆ ಮಾಡಿರುವ ದೋಸೆ ಹಾಗೂ ಇಡ್ಲಿ ಹಿಟ್ಟಿನಲ್ಲಿ ಶೇ 5ರಷ್ಟು ಪ್ರೊಟೀನ್ ಅಂಶವನ್ನು ಮಿಶ್ರಣ ಮಾಡಲಾಗಿದೆ.

ಬೆಂಗಳೂರು ನಗರದಲ್ಲಿ ಪ್ರಾಯೋಗಿಕವಾಗಿ ದೋಸೆ ಹಾಗೂ ಇಡ್ಲಿ ಹಿಟ್ಟನ್ನು ಎರಡು ವಿಧದ ಪ್ಯಾಕೆಟ್‌ಗಳಲ್ಲಿ ಮಾರಾಟ ಮಾಡಲಾಗುತ್ತಿದೆ. 450 ಗ್ರಾಂ. ತೂಕದ ಪ್ಯಾಕೆಟ್‌ಗೆ ₹40 ಹಾಗೂ 900 ಗ್ರಾಂ. ತೂಕದ ಪ್ಯಾಕೆಟ್‌ಗೆ ₹80 ಗರಿಷ್ಠ ಮಾರಾಟ ದರ ನಿಗದಿಪಡಿಸಲಾಗಿದೆ ಎಂದು ಕೆಎಂಎಫ್ ತಿಳಿಸಿದೆ.

ವಾಸುದೇವನ್ ನಾಯರ್ ನಿಧನ

ಕೋಯಿಕ್ಕೋಡ್(ಪಿಟಿಐ): ಮಲಯಾಳದ ಖ್ಯಾತ ಸಾಹಿತಿ ಹಾಗೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಎಂ.ಟಿ.ವಾಸುದೇವನ್ ನಾಯರ್ (91) ಹೃದಯಾಘಾತದಿಂದಾಗಿ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ನಾಯರ್ ಅವರನ್ನು ಕಳೆದ ವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಅವರ 'ನಾಲುಕೆಟ್ಟು' (ಪೂರ್ವಿಕರ ಮನೆ) ಕಾದಂಬರಿಯನ್ನು ಮಲಯಾಳ ಸಾಹಿತ್ಯದ ಮೇರು ಕೃತಿ ಎಂದೇ ಪರಿಗಣಿಸಲಾಗುತ್ತದೆ.

7

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಪೂಂಛ್‌ನಲ್ಲಿ ಸೇನಾ ವಾಹನ ಕಂದಕಕ್ಕೆ ಬಿದ್ದು ಅಪಘಾತ

ಮೃತರಲ್ಲಿ ರಾಜ್ಯದ ಮೂವರು

ಪ್ರಜಾವಾಣಿ ವಾರ್ತೆ

ಬೆಳಗಾವಿ/ಬಾಗಲಕೋಟೆ/ಉಡುಪಿ: ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಮಂಗಳವಾರ ಸೇನಾ ವಾಹನವು ಕಂದಕಕ್ಕೆ ಉರುಳಿ ಸಂಭವಿಸಿದ್ದ ಭೀಕರ ಅಪಘಾತದಲ್ಲಿ ಮೃತಪಟ್ಟಿದ್ದ ಐವರು ಯೋಧರಲ್ಲಿ ಕರ್ನಾಟಕದ ಮೂವರು ಸೇರಿದ್ದಾರೆ.

ಬೆಳಗಾವಿ ತಾಲ್ಲೂಕು ಸಾಂಬ್ರಾ ಗ್ರಾಮದ ಸುಬೇದಾರ್ ದಯಾನಂದ ತಿರಕಣ್ಣವರ (45), ಬಾಗಲಕೋಟೆ ಜಿಲ್ಲೆ ಮಹಾಲಿಂಗಪುರ ಪಟ್ಟಣದ ಕೆಂಗೇರಿಮಡ್ಡಿಯ ಮಹೇಶ ನಾಗಪ್ಪ ಮರಿಗೊಂಡ (25), ಉಡುಪಿ ಜಿಲ್ಲೆ ಬೀಜಾಡಿಯ ಅನೂಪ್ ಪೂಜಾರಿ (31) ಮೃತರು. ಇವರು ಸೇರಿದಂತೆ ಯೋಧರು ಪ್ರಯಾಣಿಸುತ್ತಿದ್ದ ಸೇನಾ ವಾಹನವು ಕಿರಿದಾಗಿದ್ದ ರಸ್ತೆಯಲ್ಲಿ ಸಾಗುವಾಗ 150 ಅಡಿ ಆಳಕ್ಕೆ ಉರುಳಿ ಅಪಘಾತ ಸಂಭವಿಸಿತ್ತು. ಮೃತ ಯೋಧರ ಪಾರ್ಥಿವ ಶರೀರಗಳು ಗುರುವಾರ ಮಧ್ಯಾಹ್ನದ ವೇಳೆಗೆ ಯೋಧರ ಗ್ರಾಮಗಳಿಗೆ ಬರಬಹುದು ಎಂದು ಅಂದಾಜಿಸಲಾಗಿದೆ.

ದಯಾನಂದ

ಮಹೇಶ



ಅನೂಪ್

ಅನೂಪ್ ಪೂಜಾರಿ ಅವರು 13 ವರ್ಷದ ಹಿಂದೆ ಸೇನೆಗೆ ಸೇರಿದ್ದು, ಮರಾಠಾ ರೆಜಿಮೆಂಟ್‌ನಲ್ಲಿ ಇದ್ದರು. ಅವರಿಗೆ ಪತ್ನಿ ಹಾಗೂ ಎರಡು ವರ್ಷದ ಹೆಣ್ಣು ಮಗುವಿದೆ. ರಜೆ ಮುಗಿಸಿ ಡಿ.21ರಂದು ಕೆಲಸಕ್ಕೆ ಮರಳಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

2025-26ನೇ ಸಾಲಿನ ಬಜೆಟ್‌ನಲ್ಲೇ ಘೋಷಣೆಗೆ ಸಿದ್ಧ

ಹೋಬಳಿಗೊಂದು 'ಗಾಂಧಿ ಶಾಲೆ'

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೆಸರಿಸಲಾಗಿದ್ದ 'ವಿವೇಕ' ಶಾಲೆಗಳಿಗೆ ಪರ್ಯಾಯವಾಗಿ ಪ್ರತಿ ಹೋಬಳಿ ಕೇಂದ್ರದಲ್ಲೂ 'ಗಾಂಧಿ ವಸತಿ ಶಾಲೆ' ತೆರೆಯಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಬೆಳಗಾವಿಯಲ್ಲಿ 1924ರಲ್ಲಿ ನಡೆದಿದ್ದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಶತಮಾನೋತ್ಸವದ ನೆನಪಿಗಾಗಿ ಈಗಾಗಲೇ 'ಗಾಂಧಿ ಭಾರತ' ಕಾರ್ಯಕ್ರಮಗಳನ್ನು ವರ್ಷವಿಡೀ ಆಯೋಜಿಸಿದ್ದು, ಅದರ ಮುಂದುವರಿದ ಭಾಗವಾಗಿ ಗಾಂಧಿ ವಸತಿ ಶಾಲೆಗಳನ್ನು ತೆರೆಯಲಾಗುತ್ತಿದೆ. ಈ ಯೋಜನೆಯನ್ನು ಬೆಳಗಾವಿ ಕಾರ್ಯಕ್ರಮದ ಬದಲು, 2025–26ನೇ ಸಾಲಿನ ಬಜೆಟ್‌ನಲ್ಲೇ ಘೋಷಣೆ ಮಾಡಲು ಈಚೆಗೆ ನಡೆದ ಸಂಪುಟ ಸಭೆಯೂ ಸಮ್ಮತಿಸಿದೆ.

'ಪ್ರತಿ ಹೋಬಳಿ ಅಥವಾ ತಾಲ್ಲೂಕಿಗೆ ಒಂದರಂತೆ ಗಾಂಧಿ ಶಾಲೆ ತೆರೆಯಲು ಚರ್ಚೆ ನಡೆದಿದೆ. ಸಚಿವರಲ್ಲಿ ಹೆಚ್ಚಿನವರು ಹೋಬಳಿಗೆ ಒಂದರಂತೆ ತೆರೆಯಲು ಒಲವು ತೋರಿದ್ದಾರೆ. ಬೆಳಗಾವಿಯಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಕಾರ್ಯಕ್ರಮದ ನಂತರ ಈ ಕುರಿತು ಅಂತಿಮ ನಿರ್ಧಾರ ಪ್ರಕಟಿಸಲಾಗುವುದು. ಬಜೆಟ್‌ನಲ್ಲೇ ಘೋಷಣೆ ಮಾಡಲಾಗುವುದು' ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ 'ವಿವೇಕ' ಹೆಸರಿನಲ್ಲಿ ಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಕೊಠಡಿ ನಿರ್ಮಿಸುವ ರಾಜ್ಯ ಸರ್ಕಾರದ ಕಾರ್ಯಕ್ರಮ ರಾಜಕೀಯ ವಿವಾದದ ಸ್ವರೂಪ ಪಡೆದುಕೊಂಡಿತ್ತು. ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್, ಸರ್ಕಾರದ ನಿರ್ಧಾರವನ್ನು ಕಟುವಾಗಿ ಟೀಕಿಸಿತ್ತು.

'ಗಾಂಧಿ ವಸತಿ ಶಾಲೆಗಳು ಬಿಜೆಪಿ ಸರ್ಕಾರದ ವಿವೇಕ ಹೆಸರಿಗೆ ಪರ್ಯಾಯವಲ್ಲ; ಗಾಂಧಿ ತತ್ವಗಳಾದ ಸತ್ಯ, ಅಹಿಂಸೆ, ಸಹಬಾಳ್ವೆ, ಸನ್ಮಾರ್ಗದ ಆಲೋಚನೆಗಳನ್ನು ಹಾಗೂ ಸಮಾಜಿಕ ಸಹಿಷ್ಣುತೆಯ ಮಹತ್ವವನ್ನು ಮಕ್ಕಳಲ್ಲಿ ರೂಢಿಸುವ ಕಾರ್ಯಕ್ರಮದ ಭಾಗವಾಗಿ ಇಂತಹ ಶಾಲೆಗಳನ್ನು ತೆರೆಯಲಾಗುತ್ತಿದೆ' ಎಂದು ಪಾಟೀಲ ಸ್ಪಷ್ಟಪಡಿಸಿದರು.

'ಗಾಂಧಿ ಶಾಲೆಗಳು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಅನುಗುಣವಾಗಿರುತ್ತವೆ. ಬಾಲಕ ಮತ್ತು ಬಾಲಕಿಯರನ್ನು ಒಳಗೊಂಡ ಸಹ ಶಿಕ್ಷಣಕ್ಕೆ ಅವಕಾಶ ನೀಡಲಾಗುತ್ತದೆ. ಬೋಧನಾ ಮಾಧ್ಯಮ ಕುರಿತು ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ. ಬೇಡಿಕೆ ಪರಿಗಣಿಸಿ, ಶಾಲಾ ಶಿಕ್ಷಣ ಇಲಾಖೆ ಜತೆ ಸಮಾಲೋಚಿಸಿದ ನಂತರ ಅಂತಿಮ ರೂಪ ನೀಡಲಾಗುತ್ತದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಗಾಂಧಿ ಶಾಲೆಗಳ ಪರಿಕಲ್ಪನೆಗಳನ್ನು ಸಾಕಾರಗೊಳಿಸಲು ಎಲ್ಲಾ ಶಾಲೆಗಳಲ್ಲೂ 'ನಾವು ಮನುಜರು' ಕಾರ್ಯಕ್ರಮ ಜಾರಿಗೊಳಿಸಿದೆ. ಶಾಲಾ ಪಠ್ಯಪುಸ್ತಕಗಳಲ್ಲಿ ಮಹಾತ್ಮ ಗಾಂಧಿಯವರು ಪಟ್ಟಿ ಮಾಡಿರುವ ಸಂವಿಧಾನದ ಮುನ್ನುಡಿ ಮತ್ತು ಸಪ್ತ ಸಾಮಾಜಿಕ ಪಾತಕಗಳನ್ನು ಮುದ್ರಿಸಿ, ಮಕ್ಕಳಿಗೆ ವಿತರಿಸಬೇಕು. ಬೆಳಗಿನ ಪ್ರಾರ್ಥನೆಯ ಸಮಯದಲ್ಲಿ ಸಪ್ತ ಸಾಮಾಜಿಕ ಪಾತಕಗಳನ್ನು ಸಾಮೂಹಿಕವಾಗಿ ವಾಚನ ಮಾಡಬೇಕು ಎಂದು ಸರ್ಕಾರ ಆದೇಶ ಹೊರಡಿಸಿದೆ.

ಧ್ಯಾನಸ್ಥ ಸ್ಥಿತಿಯ ಭಾವಚಿತ್ರ ಕಡ್ಡಾಯ

ಎಲ್ಲ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲಾ, ಕಾಲೇಜುಗಳಲ್ಲೂ ಗಾಂಧೀಜಿ ಅವರ ಧ್ಯಾನಸ್ಥ ಸ್ಥಿತಿಯಲ್ಲಿರುವ ಭಾವಚಿತ್ರ ಅಳವಡಿಕೆಯನ್ನು ಕಡ್ಡಾಯಗೊಳಿಸಲಾಗಿದೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಸೇರಿದಂತೆ ನಗರ ಸ್ಥಳೀಯ ಸಂಸ್ಥೆಗಳು, ಸಹಕಾರ ಸಂಘಗಳು ಹಾಗೂ ನಿಗಮ ಮಂಡಳಿಗಳ ಎಲ್ಲ ಕಚೇರಿಗಳಲ್ಲೂ ಧ್ಯಾನಸ್ಥ ಸ್ಥಿತಿಯ ಭಾವಚಿತ್ರ ಹಾಕಲು ಹಾಗೂ ಸಪ್ತ ಸಾಮಾಜಿಕ ಪಾತಕಗಳನ್ನು ಫಲಕದಲ್ಲಿ ಅಳವಡಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶ ಹೊರಡಿಸಿದೆ.

ಪ್ರಸ್ತುತ ಇರುವ ವಸತಿ ಶಾಲೆಗಳು

- ಆದರ್ಶ
- ಇಂದಿರಾಗಾಂಧಿ
- ವಾಜಪೇಯಿ
- ಅಬ್ದುಲ್ ಕಲಾಂ
- ಅಂಬೇಡ್ಕರ್
- ಏಕಲವ್ಯ
- ಮೊರಾರ್ಜಿ ದೇಸಾಯಿ
- ಮೌಲಾನ ಆಜಾದ್
- ಕಿತ್ತೂರು ರಾಣಿ ಚೆನ್ನಮ್ಮ
- ಆಶ್ರಮ

ವಿಶ್ವ ಹವ್ಯಕ ಸಮ್ಮೇಳನ: ಅಹಿಚ್ಛತ್ರದಲ್ಲಿ ಜ್ಯೋತಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ಡಿ.27ರಿಂದ 29ರವರೆಗೆ ನಡೆಯಲಿರುವ ತೃತೀಯ ವಿಶ್ವ ಹವ್ಯಕ ಸಮ್ಮೇಳನದ ಉದ್ಘಾಟನೆಗಾಗಿ ಉತ್ತರ ಪ್ರದೇಶದ ಬರೇಲಿ ಜಿಲ್ಲೆಯ ಅಹಿಚ್ಛತ್ರದಿಂದ ಬುಧವಾರ ಜ್ಯೋತಿ ಹೊರಟಿತು.

2,300 ಕಿ.ಮೀ. ದೂರದ ಅಹಿಚ್ಛತ್ರ ಗ್ರಾಮದಲ್ಲಿರುವ ರಾಮ ದೇವಾಲಯದಿಂದ 'ಅಹಿಚ್ಛತ್ರ ಜ್ಯೋತಿ'ಗೆ ಚಾಲನೆ ನೀಡಲಾಯಿತು. ಈ ದೇವಸ್ಥಾನದಲ್ಲಿ 50 ವರ್ಷಗಳಿಂದ ಅಖಂಡ ಜ್ಯೋತಿಯು ಬೆಳಗುತ್ತಿದ್ದು, ಆ ಜ್ಯೋತಿಯಿಂದ ಇನ್ನೊಂದು ಜ್ಯೋತಿಯನ್ನು ಬೆಳಗಿ, ಯಾತ್ರೆಗೆ ಶ್ರೀಕಾರ ಹಾಕಲಾಯಿತು. ಈ ಸಂದರ್ಭದಲ್ಲಿ ದೇವಾಲಯದ ಟ್ರಸ್ಟಿಗಳು, ಉತ್ತರ ಪ್ರದೇಶ ವ್ಯಾಪಾರ ಮಂಡಲಿಯ ಅಧ್ಯಕ್ಷರು ಹಾಗೂ ಗ್ರಾಮದ ಪ್ರಮುಖರು ಅಹಿಚ್ಛತ್ರ ಜ್ಯೋತಿಗೆ ಶುಭ ಹಾರೈಸಿದರು.

ಉತ್ತರಕನ್ನಡದ ಹೈಗುಂದದಲ್ಲಿರುವ ದುರ್ಗಾಂಬಾ ದೇವಸ್ಥಾನದಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಿದ ವಿ.ವಿ. ಭಟ್ ಮತ್ತು ತಂಡದವರು ಹೈಗುಂದದಿಂದ ಉತ್ತರ ಪ್ರದೇಶದ ಅಹಿಚ್ಛತ್ರಕ್ಕೆ ಯಾತ್ರೆ ನಡೆಸಿದ್ದರು. ಅಲ್ಲಿಂದ ಅಖಂಡ ಜ್ಯೋತಿಯನ್ನು ಬೆಂಗಳೂರಿಗೆ ಕರೆತರುತ್ತಿದ್ದಾರೆ.

ಕಾಂಗ್ರೆಸ್‌ಗೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್‌. ಸಂತೋಷ್ ಸವಾಲು

ಸಂವಿಧಾನ ತಿದ್ದುಪಡಿ: ಅಧಿವೇಶನದಲ್ಲಿ ಚರ್ಚಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಅವಧಿಯಲ್ಲಿ 75 ಬಾರಿ ಸಂವಿಧಾನ ತಿದ್ದುಪಡಿ ಮಾಡಲಾಗಿದೆ. ಯಾಕೆ ತಿದ್ದುಪಡಿ ಮಾಡಿದರು ಎಂಬುದನ್ನು ಬೆಳಗಾವಿಯಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಅಧಿವೇಶನದಲ್ಲಿ ಚರ್ಚೆ ಮಾಡಲಿ' ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಸವಾಲು ಹಾಕಿದರು.

ನಾಡಪ್ರಭು ಕೆಂಪೇಗೌಡ ಜನಪರ ವೇದಿಕೆ ಮಾಜಿ ಪ್ರಧಾನಿ ದಿವಂಗತ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಅಂಗವಾಗಿ ಬುಧವಾರ ಆಯೋಜಿಸಿದ್ದ 'ಸುಶಾಸನ ದಿವಸ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ವಾಜಪೇಯಿ ಅವರ ಕಾಲದಲ್ಲಿ 14 ಬಾರಿ ಮಾತ್ರ ಸಂವಿಧಾನ ತಿದ್ದುಪಡಿಯಾಗಿದೆ. ಅದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಾತಿ ನೀಡುವುದೂ ಸೇರಿದಂತೆ ಹಲವು ಜನಹಿತ ಕಾರ್ಯಕ್ರಮಗಳಿಗಾಗಿ ತಿದ್ದುಪಡಿ ಮಾಡಲಾಗಿದೆ' ಎಂದರು.

'ಕಾಂಗ್ರೆಸ್‌ನವರು ಗಾಂಧಿ ಹೆಸರು ಹೇಳಿ 75 ವರ್ಷ ಕಳೆದರು. ಹಾಗೆಯೇ, ಸಂವಿಧಾನ ಬದಲಾಯಿಸುತ್ತಾರೆ ಎಂದು ಹೇಳಿಕೊಂಡು ಒಂದು ಚುನಾವಣೆಯನ್ನೇ ಮುಗಿಸಿದರು. ಗಾಂಧೀಜಿಯವರು ಅಂದೇ ತನ್ನ ಶಿಷ್ಯರ ಯೋಗ್ಯತೆ ಅರಿತುಕೊಂಡು ಸ್ವಾತಂತ್ರ್ಯದ ನಂತರ ಕಾಂಗ್ರೆಸ್ ವಿಸರ್ಜನೆ ಮಾಡುವುದಕ್ಕೆ ಹೇಳಿದ್ದರು. ಅಂಬೇಡ್ಕರ್ ಅವರು ಅಂದಿನ ಕಾಂಗ್ರೆಸ್ ಸರ್ಕಾರ ಮತ್ತು ನೆಹರೂ ಅವರೊಂದಿಗಿನ ಭಿನ್ನಾಭಿಪ್ರಾಯಗಳಿಂದ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾಗ ಸಂಸತ್ತಿನಲ್ಲಿ ಹೇಳಿಕೆ ನೀಡಿದ್ದರು. ಅಂಬೇಡ್ಕರ್ ಅವರ ರಾಜೀನಾಮೆ ಪತ್ರ ಈಗಲೂ ರಾಷ್ಟ್ರಪತಿ ಭವನದಲ್ಲಿ ಇಲ್ಲ. ಬೆಳಗಾವಿ ಅಧಿವೇಶನದಲ್ಲಿ ಈ ವಿಷಯಗಳ ಬಗ್ಗೆ ಚರ್ಚಿಸಲಿ' ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ನಿವೃತ್ತ ಐಎಎಸ್ ಅಧಿಕಾರಿ ಮದನ್ ಗೋಪಾಲ್ ಹಾಗೂ ವಿಶ್ರಾಂತ ಕುಲಪತಿ ಪ್ರೊ. ಬಿ. ತಿಮ್ಮೇಗೌಡ ಅವರಿಗೆ 'ಅಟಲ್ ಪುರಸ್ಕಾರ' ನೀಡಿ ಗೌರವಿಸಲಾಯಿತು. ಪುರಸ್ಕಾರವು ₹1 ಲಕ್ಷ ನಗದು, ಫಲಕವನ್ನು ಒಳಗೊಂಡಿದೆ. ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಶಸ್ತಿ ಸ್ವೀಕರಿಸಿದ ಯಡಿಯೂರಪ್ಪ ಅವರು, ವಾಜಪೇಯಿ ಅವರ ಆಡಳಿತದ ವೈಖರಿಯನ್ನು ಸ್ಮರಿಸಿದರು. ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಪ್ರೊ. ಕೃಷ್ಣೇಗೌಡ ಮಾತನಾಡಿದರು.

'ಸುಶಾಸನ ದಿವಸ' ಸಮಾರಂಭದಲ್ಲಿ ವಿಶ್ರಾಂತ ಕುಲಪತಿ ಪ್ರೊ. ಬಿ. ತಿಮ್ಮೇಗೌಡ, ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಮತ್ತು ನಿವೃತ್ತ ಐಎಎಸ್ ಅಧಿಕಾರಿ ಮದನ್ ಗೋಪಾಲ್ ಅವರಿಗೆ 'ಅಟಲ್ ಪುರಸ್ಕಾರ' ನೀಡಿ ಗೌರವಿಸಲಾಯಿತು. ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ನಾಡಪ್ರಭು ಕೆಂಪೇಗೌಡ ಜನಪರ ವೇದಿಕೆ ಅಧ್ಯಕ್ಷ ಪ್ರೊ. ಕೃಷ್ಣೇಗೌಡ ಮತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

'ಹೇಳಿಕೆ ತಿರುಚಲಾಗಿದೆ'

'ನಾನು ಆಳುವ ಪಕ್ಷದಲ್ಲಿದ್ದಾಗ, ವಾಜಪೇಯಿ ವಿರೋಧ ಪಕ್ಷದಲ್ಲಿದ್ದರು. ವಿರೋಧ ಪಕ್ಷದ ನಾಯಕರಾಗಿ ಆ ಸ್ಥಾನದ ಗೌರವವನ್ನು ಎತ್ತಿ ಹಿಡಿದಿದ್ದರು. ಈಗ ಪ್ರಜಾಪ್ರಭುತ್ವದ ಹೆಸರಿನಲ್ಲಿ ಎದುರು(ವಿರೋಧ) ಪಕ್ಷಗಳು ಹೇಗೆ ನಡೆದುಕೊಳ್ಳುತ್ತಿದ್ದಾರೆ ನೋಡಿ. ದೇಶದ ಜನರು ತಲೆತಗ್ಗಿಸುವಂತೆ ನಡೆದುಕೊಳ್ಳುತ್ತಿದ್ದಾರೆ' ಎಂದು ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ ಬೇಸರ ವ್ಯಕ್ತಪಡಿಸಿದರು. 'ಅಮಿತ್ ಶಾ ಭಾಷಣ ಮಾಡುವಾಗ ನಾನೂ ರಾಜ್ಯ ಸಭೆಯಲ್ಲಿದ್ದೆ. ಅವರ ಹೇಳಿಕೆಯನ್ನು ತಿರುಚಲಾಗಿದೆ' ಎಂದು ಹೇಳಿದರು.

CONNECT

LAST 4 DAYS | ENTRY FREE

Time: 10am to 9pm

TAMIL BOOK FESTIVAL

KANNADA, ENGLISH BOOKS ALSO AVAILABLE

20th - 29th December-2024

The Institution of Engineers #3, Dr. B.R. Ambedkar Veedhi, Opp. Indian Express, Bengaluru

FREE PARKING 9916542367 6363118988

ಸುಬ್ಬಣ್ಣ ಸವಿನೆನಪಲ್ಲಿ ಸಂಗೀತ ಸಂಜೆ ನಾಳೆ

ಬೆಂಗಳೂರು: ಗಾಯಕ ಶಿವಮೊಗ್ಗ ಸುಬ್ಬಣ್ಣ ಅವರ ಸವಿನೆನಪಿನಲ್ಲಿ ಡಾ.ಶಿವಮೊಗ್ಗ ಸುಬ್ಬಣ್ಣ ಪ್ರತಿಷ್ಠಾನವು ಶುಕ್ರವಾರ ಸಂಜೆ 6.30ಕ್ಕೆ ಬನಶಂಕರಿ ಎರಡನೇ ಹಂತದಲ್ಲಿರುವ ಸುಚಿತ್ರಾ ಫಿಲ್ಮ್ ಸೊಸೈಟಿಯಲ್ಲಿ ಸಂಗೀತ ಸಂಜೆ ಕಾರ್ಯಕ್ರಮ ಹಮ್ಮಿಕೊಂಡಿದೆ. ಗಾಯಕ ಕೌಶಿಕ್ ಐತಾಳ್ ಅವರು ಈ ಸಂಗೀತ ಸಂಜೆ ನಡೆಸಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಶಿವಮೊಗ್ಗ ಸುಬ್ಬಣ್ಣ

'ಸುಶಾಸನ ದಿನಾಚರಣೆ, ನಿಪುಣ್ ಭಾರತ್' ಅಭಿಯಾನದಲ್ಲಿ ಕೃಷ್ಣೇಗೌಡ

ಮುಂದಿನದ್ದು ಜ್ಞಾನ, ಕೌಶಲದ ಕಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದೆ ಜ್ಞಾನ ಮತ್ತು ಕೌಶಲಕ್ಕೆ ಆದ್ಯತೆ ಇರಲಿದೆ. ಜ್ಞಾನದ ಕಾಲಕ್ಕೆ ಸರಿಯಾಗಿ ಚಿಂತನೆ ನಡೆಸುವುದನ್ನು ಮಕ್ಕಳಿಗೆ ಕಲಿಸಿಕೊಡಬೇಕು' ಎಂದು ನಿವೃತ್ತ ಪ್ರಾಂಶುಪಾಲ ಕೃಷ್ಣೇಗೌಡ ತಿಳಿಸಿದರು.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಪ್ರಯುಕ್ತ ಬುಧವಾರ ದಿವಾನರಪಾಳ್ಯದಲ್ಲಿ ಹಮ್ಮಿಕೊಂಡಿದ್ದ 'ಸುಶಾಸನ ದಿನಾಚರಣೆ ಮತ್ತು ನಿಪುಣ್ ಭಾರತ್' ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಒಂದು ಕಾಲದಲ್ಲಿ ದೈಹಿಕವಾಗಿ ಸದೃಢ ರಾಗಿದ್ದರೆ ಸಾಕಿತ್ತು. ದುಡಿಯುವ ಶಕ್ತಿಯನ್ನಷ್ಟೇ ಆಗ ನೋಡಲಾಗುತ್ತಿತ್ತು. ಆನಂತರ ಆಸ್ತಿಗೆ ಮಹತ್ವ ಬಂತು. ಕಾಲ ಕಳೆದ ಹಾಗೆ ಆಸ್ತಿಗಿಂತ ವಿದ್ಯೆಗೆ ಬಂತು. ವಿದ್ಯೆಗಿಂತ ಉದ್ಯೋಗ ಮುಖ್ಯವಾಯಿತು. ಇನ್ನುಮುಂದೆ ಜ್ಞಾನ, ಕೌಶಲವೇ ಮುಖ್ಯವಾಗಲಿದೆ ಎಂದರು.

'ನಾವು ಆಡುವ ಮಾತು ಮಕ್ಕಳ ಮನಸ್ಸಿಗೆ ಹೋಗಬೇಕು. ಎಲ್ಲವೂ ಕಾಣುತ್ತಿರುತ್ತದೆ, ಕೇಳುತ್ತಿರುತ್ತದೆ. ಅದರಲ್ಲಿ ಏನು ನೋಡಬೇಕು, ಏನು ಕೇಳಬೇಕು ಎಂಬುದನ್ನು ಮಕ್ಕಳಿಗೆ ಕಲಿಸಿಕೊಡಬೇಕು. ಶಿಕ್ಷಣ ಅಂದರೆ ತಲೆಗೆ ತುಂಬುವುದು ಅಷ್ಟೇ ಆಗಿದೆ. ಮನಕ್ಕೆ ತುಂಬುವ ಕೆಲಸವಾಗಬೇಕು' ಎಂದರು.

ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, 'ಅಟಲ್ ಬಿಹಾರಿ ವಾಜಪೇಯಿ ಅವರು ದೇಶ ಕಂಡ ದಕ್ಷ ಆಡಳಿತಗಾರ. ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣರಾದವರು. ಅವರ ಗೌರವಾರ್ಥವಾಗಿ 2014ರಲ್ಲಿ ಸುಶಾಸನ ದಿನವಾಗಿ ಘೋಷಣೆ ಮಾಡಲಾಯಿತು' ಎಂದು ತಿಳಿಸಿದರು.

'ತಿಳಿವಳಿಕೆ ಮತ್ತು ಸಂಖ್ಯಾಶಾಸ್ತ್ರದೊಂದಿಗೆ ಓದುವಲ್ಲಿ ಪ್ರಾವೀಣ್ಯಕ್ಕಾಗಿ ರಾಷ್ಟ್ರೀಯ ಉಪಕ್ರಮ'ವನ್ನು (ನಿಪುಣ್ ಭಾರತ್) 2021ರಲ್ಲಿ ಜಾರಿಗೆ ತರಲಾಯಿತು. ಜ್ಞಾನ ಹಾಗೂ ನೈಪುಣ್ಯಕ್ಕೆ ಒತ್ತು ನೀಡುವ ಮೂಲಕ ಸದೃಢರಾಗಿಸಬೇಕು ಎಂಬುದು ಇದರ ಉದ್ದೇಶ' ಎಂದು ವಿವರಿಸಿದರು.

'ಮಲ್ಲೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹತ್ತು ಅಂಗನವಾಡಿಗಳಲ್ಲಿ ನರ್ಸರಿ ಆರಂಭ ಮಾಡುತ್ತಿದ್ದೇವೆ, ಆ ಮೂಲಕ ಸರ್ಕಾರಿ ಶಾಲೆಯಲ್ಲಿಯೂ ಕೂಡ ನರ್ಸರಿ ಪೂರ್ವ, ಎಲ್‌ಕೆಜಿ ಹಾಗೂ ಯುಕೆಜಿ ಪ್ರಾರಂಭ ಮಾಡುತ್ತಿದ್ದೇವೆ. ಅದಕ್ಕಾಗಿ ಅಂಗನವಾಡಿ ಕಾರ್ಯಕರ್ತೆಯರಿಗೆ ತರಬೇತಿ ನೀಡಲು ಹಿಮಾಂಶು ಶಾಲೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಎಲ್ಲರಿಗೂ ಸಮಾನ ಶಿಕ್ಷಣ, ಸಮಾನ ಅವಕಾಶ ನೀಡಲು ಶಿಕ್ಷಣ ಫೌಂಡೇಶನ್ ಕೆಲಸ ಮಾಡುತ್ತಿದೆ' ಎಂದು ಮಾಹಿತಿ ನೀಡಿದರು.

ಅಂಕಿ ಅಂಶದ ಪ್ರಕಾರ 9 ವರ್ಷದೊಳಗೆ ಕಲಿಯಬೇಕಾಗಿರುವ ವಿಚಾರವನ್ನು 7ನೇ ತರಗತಿಯಾದರೂ ಶೇ 50ರಷ್ಟು ಮಕ್ಕಳು ಕಲಿಯುತ್ತಿಲ್ಲ. ಅದಕ್ಕಾಗಿ ಪರೀಕ್ಷೆ ನಡೆಸಿ ಮಕ್ಕಳಲ್ಲಿ ಕಲಿಯಲು ತೊಂದರೆ ಏನಿದೆ ಎಂಬುದನ್ನು ಪತ್ತೆಹಚ್ಚಿ, ಅವರ ಸಾಮರ್ಥ್ಯ ಹೆಚ್ಚಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಶಿಕ್ಷಣ ಫೌಂಡೇಶನ್ ಸಿಇಒ ಪ್ರಸನ್ನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಸಿದ್ದರಾಮಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ರಘುಚಂದ್ರ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಶಕುಂತಲಾದೇವಿ, ಅಶೋಕ್, ಹಿಮಾಂಶು ಶಿಕ್ಷಣ ಟ್ರಸ್ಟ್‌ನ ವಿಜಯಕುಮಾರ್ ಭಾಗವಹಿಸಿದ್ದರು.

ದಿವಾನರಪಾಳ್ಯ ಚಂದ್ರೋದಯ ಕನ್ನಡ ಮಾಧ್ಯಮ ಶಾಲೆ ಆವರಣದಲ್ಲಿ ಬುಧವಾರ ಆಯೋಜಿಸಿದ್ದ 'ಸುಶಾಸನ ದಿನಾಚರಣೆ ಮತ್ತು ನಿಪುಣ್ ಭಾರತ್' ಅಭಿಯಾನದಲ್ಲಿ ಶಾಲಾ ಮಕ್ಕಳು ಶಾಸಕ ಸಿ.ಎನ್. ಅಶ್ವತ್ಥನಾರಾಯಣ ಅವರೊಂದಿಗೆ ಶುಭಾಶಯ ಹಂಚಿಕೊಂಡರು — ಪ್ರಜಾವಾಣಿ ಚಿತ್ರ

₹8.41 ಕೋಟಿ ಸಾಲ ಪಡೆದು ವಂಚಿಸಿರುವ ಪ್ರಕರಣ

ನಟ ಧರ್ಮೇಂದ್ರ ನಾಪತ್ತೆ: ಇಬ್ಬರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಂಸದರೊಬ್ಬರ ಸಹೋದರಿಯೆಂದು ಚಿನ್ನಾಭರಣ ಮಳಿಗೆ ಮಾಲೀಕನಿಗೆ ₹8.41 ಕೋಟಿ ಸಾಲ ಪಡೆದು ವಂಚಿಸಿದ್ದ ಪ್ರಕರಣ ಸಂಬಂಧ ಇಬ್ಬರು ಆರೋಪಿಗಳಿಗೆ ವಿಚಾರಣೆಗೆ ಬರುವಂತೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದಾರೆ.

ಆರೋಪಿ ಶ್ವೇತಾಗೌಡ ಹಾಗೂ ಅವರ ಪತಿ ಹರೀಶ್ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಮತ್ತೊಂದೆಡೆ ಪ್ರಕರಣದಲ್ಲಿ ಮಾಜಿ ಸಂಸದರ ಧ್ವನಿಯಲ್ಲಿ ಮಾತನಾಡಿದ್ದ ನಟ ಧರ್ಮೇಂದ್ರ ನಾಪತ್ತೆಯಾಗಿದ್ದು, ಅವರಿಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಹೇಳಿದರು.

ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಚಿನ್ನದಂಗಡಿ ಮಾಲೀಕರಾದ ವನಿತಾ ಎಸ್. ಐತಾಳ್ ಎಂಬವರು ನೀಡಿದ ದೂರಿನ ಮೇರೆಗೆ ಶ್ವೇತಾಗೌಡ, ಈಕೆಯ ಪತಿ ಹರೀಶ್, ಚಿತ್ರನಟ ಧರ್ಮೇಂದ್ರ ವಿರುದ್ಧ ವಂಚನೆ, ನಂಬಿಕೆ ದ್ರೋಹ, ಬೆದರಿಕೆ ಆರೋಪದ ಅಡಿ ಚಂದ್ರಾಲೇಔಟ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು.

'ಆರ್.ಆರ್.ನಗರ ನಿವಾಸಿಗಳಾದ ಶ್ವೇತಾಗೌಡ ಹಾಗೂ ಹರೀಶ್ ಪರಿಚಿತರು. ಶ್ವೇತಾಗೌಡ ಅವರು ಮಾಜಿ ಸಂಸದರೊಬ್ಬರ ಸಹೋದರಿ ಎಂದು ನನಗೆ ನಂಬಿಸಿದ್ದರು. ಅನೇಕ ರಾಜಕೀಯ ವ್ಯಕ್ತಿಗಳ ಸಂಪರ್ಕವಿದೆ. ನಾನು ದೊಡ್ಡ ಉದ್ಯಮಿ ಎಂದು ನನ್ನ ಚಿನ್ನದಂಗಡಿಯಲ್ಲಿ ಹಲವು ಬಾರಿ ಚಿನ್ನಾಭರಣ ಸಾಲ ಪಡೆದುಕೊಂಡು ಹಣ ವಾಪಸ್ ನೀಡಿದ್ದರು. ಇದನ್ನು ನಂಬಿ ನಾನು ಆರೋಪಿ ಕೇಳಿದಾಗ ಚಿನ್ನಾಭರಣ ಸಾಲ ನೀಡಿದ್ದೆ. ಈವರೆಗೂ ಆ ಹಣವನ್ನು ವಾಪಸ್ ನೀಡಿಲ್ಲ' ಎಂದು ಆರೋಪಿಸಿ ವನಿತಾ ದೂರು ನೀಡಿದ್ದರು.

ಕೊಲೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣಕಾಸಿನ ವಿಚಾರಕ್ಕೆ ಸ್ನೇಹಿತನನ್ನು ಮಾರಕಾಸ್ತ್ರದಿಂದ ಕೊಚ್ಚಿ ಕೊಲೆ ಮಾಡಿದ್ದ ಆರೋಪಿಯನ್ನು ಬೇಗೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಿಲಕನಗರ ನಿವಾಸಿ ಅಕ್ಬರ್(42) ಬಂಧಿತ. ಆರೋಪಿಯಿಂದ ಮಾರಕಾಸ್ತ್ರ ಜಪ್ತಿ ಮಾಡಲಾಗಿದೆ. ಆರೋಪಿ ಸೋಮವಾರ ರಾತ್ರಿ ಅಲಿ ಅಫ್ಸರ್ ಎಂಬುವರನ್ನು ಕೊಲೆ ಮಾಡಿ ಪರಾರಿಯಾಗಿದ್ದ ಎಂದು ಪೊಲೀಸರು ತಿಳಿಸಿದರು.

'ಅಲಿ ಅಫ್ಸರ್ ನಡೆಸುತ್ತಿದ್ದ ಮಾಂಸದ ಅಂಗಡಿಯಲ್ಲಿ ಅಕ್ಬರ್ ಕೆಲಸ ಮಾಡುತ್ತಿದ್ದ. ಇಬ್ಬರೂ ಸ್ನೇಹಿತರು. ಅಕ್ಬರ್ ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದ. ಮಾಲೀಕರಿಂದ ₹3.5 ಲಕ್ಷ ಸಾಲ ಪಡೆದುಕೊಂಡಿದ್ದ. ಸಾಲ ಮರುಪಾವತಿ ಮಾಡಿರಲಿಲ್ಲ. ಈ ವಿಚಾರಕ್ಕೆ ಇಬ್ಬರ ನಡುವೆ ಸೋಮವಾರ ರಾತ್ರಿ 9 ಗಂಟೆ ಸುಮಾರಿಗೆ ಗಲಾಟೆ ನಡೆದಿತ್ತು. ಅದು ವಿಕೋಪಕ್ಕೆ ಹೋಗಿ ಕೋಪಗೊಂಡ ಆರೋಪಿ, ಅಂಗಡಿಯಲ್ಲಿದ್ದ ಮಾರಕಾಸ್ತ್ರದಿಂದ ಅಲಿ ಅಫ್ಸರ್‌ನ ತಲೆಗೆ ಹೊಡೆದು ಕೊಲೆ ಮಾಡಿ ಪರಾರಿಯಾಗಿದ್ದ' ಎಂದು ಪೊಲೀಸರು ಹೇಳಿದರು.

'ಪ್ರಕರಣ ದಾಖಲಿಸಿಕೊಂಡು, ಬಾತ್ಮೀದಾರರು ನೀಡಿದ ಮಾಹಿತಿ ಹಾಗೂ ಮೊಬೈಲ್ ಕರೆಗಳ ವಿವರ ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು. ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿನ್ನಿಮಿಲ್ ರೈಲ್ವೆ ಗೇಟ್ ಬಳಿ ರೈಲಿಗೆ ಸಿಲುಕಿ ಇಬ್ಬರ ಸಾವು

ಬೆಂಗಳೂರು: ಮೆಜೆಸ್ಟಿಕ್ ಬಳಿಯ ಬಿನ್ನಿಮಿಲ್ ಬಳಿ ಬುಧವಾರ ರಾತ್ರಿ ರೈಲಿಗೆ ಸಿಲುಕಿ ಇಬ್ಬರು ಯುವಕರು ಮೃತಪಟ್ಟಿದ್ದಾರೆ.

ಕೆ.ಪಿ.ಅಗ್ರಹಾರ ನಿವಾಸಿ ಶರತ್ ಮತ್ತು ಬಿನ್ನಿಮೀಲ್ ನಿವಾಸಿ ಸೂರ್ಯ ಮೃತರು. ಬುಧವಾರ ರಾತ್ರಿ 10 ಗಂಟೆ ಸುಮಾರಿಗೆ ಬಿನ್ನಿಮೀಲ್ ಗೇಟ್ ಎರಡರ ಬಳಿ ಯುವಕರು ಹೋಗಿದ್ದು, ಅದೇ ವೇಳೆಗೆ ರೈಲು ಬಂದಿದೆ. ಮೈಸೂರಿನಿಂದ ಬೆಂಗಳೂರಿಗೆ ಬರುತ್ತಿದ್ದ ರೈಲಿಗೆ ಇಬ್ಬರು ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಯಾವ ಕಾರಣಕ್ಕೆ ರಾತ್ರಿ ವೇಳೆ ರೈಲ್ವೆ ಗೇಟ್ ಬಳಿ ಯುವಕರು ಬಂದಿದ್ದರು ಎಂಬುದರ ಕುರಿತು ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ರೈಲ್ವೆ ಪೊಲೀಸರು ಮಾಹಿತಿ ನೀಡಿದರು.

ಅಪಘಾತ: ವ್ಯಕ್ತಿ ಸಾವು

ಬೆಂಗಳೂರು: ಕೆ.ಆರ್. ಮಾರುಕಟ್ಟೆಯ ಮೇಲ್ಸೇತುವೆಯಲ್ಲಿ ಬುಧವಾರ ಮುಂಜಾನೆ ಸಂಭವಿಸಿದ ಅಪಘಾತದಲ್ಲಿ ವ್ಯಕ್ತಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಂತರಪಾಳ್ಯ ಅಂಬೇಡ್ಕರ್ ನಗರದ ನಿವಾಸಿ ಚಂದ್ರರಾಜು (37) ಮೃತಪಟ್ಟವರು.

ಮೃತರ ಪತ್ನಿ ವಿಜಿ ಅವರು ನೀಡಿದ ದೂರು ಆಧರಿಸಿ ಸಿಟಿ ಮಾರುಕಟ್ಟೆ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರೆಸಿದ್ದಾರೆ. 'ಚಂದ್ರರಾಜು ಕೆಲಸದ ನಿಮಿತ್ತ ಬುಧವಾರ ನಸುಕಿನ ವೇಳೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಮೇಲ್ಸೇತುವೆಯಲ್ಲಿ ವೇಗವಾಗಿ ವಾಹನ ಚಾಲನೆ ಮಾಡಿಕೊಂಡು ಹೋಗಿ ಅಥವಾ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದು ಕೆಳಕ್ಕೆ ಬಿದ್ದ ಪರಿಣಾಮ ಅವರು ಮೃತಪಟ್ಟಿರುವ ಸಾಧ್ಯತೆಯಿದೆ. ಪ್ರಕರಣದ ಕುರಿತು ತನಿಖೆ ನಡೆಸುವಂತೆ ಕೋರಿ ದೂರು ನೀಡಲಾಗಿದೆ' ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ಭರತನಾಟ್ಯ ರಂಗಪ್ರವೇಶ: ಇಶಿತಾ ಭಾರಧ್ವಾಜ್, ಉಪಸ್ಥಿತಿ: ಕಾಮಾಕ್ಷಿ, ಸುನೀತಾ ಅರವಿಂದ್, ಅರವಿಂದ್ ಚಂದ್ರಶೇಖರನ್, ಚಂದ್ರಾಣಿ ಮುರಳಿ, ಆಯೋಜನೆ: ನಟರಾಜ ರಂಗಂ ಸ್ಕೂಲ್ ಆಫ್ ಡ್ಯಾನ್ಸ್, ಸ್ಥಳ: ಸೇವಾಸದನ, ಮಲ್ಲೇಶ್ವರ, ಬೆಳಿಗ್ಗೆ 9

ರಾಷ್ಟ್ರೀಯ ನೃತ್ಯ ಕಲಾಮೇಳ ದಶಮಾನೋತ್ಸವ, ಗುರುವಂದನೆ: ಸುಪರ್ಣ, ಸಾಯಿ ವೆಂಕಟೇಶ್, ಮಾರ್ಗದರ್ಶನ: ಶ್ವೇತಾ ವೆಂಕಟೇಶ್, ಸ್ಥಳ: ನಯನ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 4

ಉಸ್ತಾದ್ ಜಾಕಿರ್ ಹುಸೇನ್ ಸ್ಮರಣೆ: ಅತಿಥಿಗಳು: ಪ್ರವೀಣ್ ಗೋಡ್ಖಿಂಡಿ, ಗಿರಿಧರ್ ಉಡುಪ, ಸುಮಾ ಸುಧೀಂದ್ರ, ರವೀಂದ್ರ ಯಾವಗಲ್, ಕುಮಾರೇಶ್, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ, ಜೆ.ಪಿ.ನಗರ, ಸಂಜೆ 6.30

ಬುರುಕಿ ವೃತ್ತ, ಹಗ್ಗದ ಕೊನೆ ನಾಟಕಗಳ ಪ್ರದರ್ಶನ: ಅಧ್ಯಕ್ಷತೆ: ಸಿ.ಕೆ. ರಾಮೇಗೌಡ, ಅತಿಥಿಗಳು: ಮು. ಗೋವಿಂದರಾಜು, ಚಂದ್ರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4 ಮತ್ತು ಸಂಜೆ 6

ಹರಿನಾಮ ಸಂಕೀರ್ತನೆ: ಗುರುಪ್ರಸಾದ್, ಅಪ್ರಮೇಯ ಗುರುಪ್ರಸಾದ್ ಮತ್ತು ಸಂಗಡಿಗರಿಂದ ಸ್ಥಳ : ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 6.30

ವರ್ಲ್ಡ್ ಮಿಷನ್ ಸೊಸೈಟಿ ಚರ್ಚ್ ಆಫ್ ಗಾಡ್ ಇದರ 60ನೇ ವಾರ್ಷಿಕೋತ್ಸವ 'ಗಿವಿಂಗ್ ಹೋಪ್ ಕನ್‌ಸರ್ಟ್': ಅತಿಥಿಗಳು: ಶ್ರವಣ್ ಎಸ್. ರಜನಿ, ಅಗಸ್ಟಸ್ ಜಿ.ಎಸ್. ಅಝುರಿಯ, ಯುದಿಸ್ಟರ್ ನಾರಾಯಣ್, ರವಿ ಮಂಡ್ಯ, ಎನ್.ಸಿ. ಮುನಿಯಪ್ಪ, ಆಯೋಜನೆ: ವರ್ಲ್ಡ್ ಮಿಷನ್ ಸೊಸೈಟಿ ಚರ್ಚ್ ಆಫ್ ಗಾಡ್, ಸ್ಥಳ: ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಸಂಜೆ 6.30

ವೀಣಾ ವಾದನ: ಅಹಿಕಾ ನಾಗದೀಪ್ (ವೀಣಾ ವಾದನ), ವರದರಾಜ್ (ಮೃದಂಗ), ಸಮರ್ಥ್ ಚಂದ್ರ (ಕೊಳಲು), ಸ್ಥಳ : ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಒಂದನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರ ಪರವಾಗಿ ನಾವು, ಕೆಳಕಂಡ ಷೆಡ್ಯೂಲ್‌ನಲ್ಲಿ ಸ್ಪಷ್ಟವಾಗಿ ವಿವರಿಸಲಾಗಿರುವ (ಷೆಡ್ಯೂಲ್ ಪ್ರಾಪರ್ಟಿ) ಕಾಡುಬೀಸನಹಳ್ಳಿ ಗ್ರಾಮ, ವರ್ತೂರ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು ವಿಳಾಸದಲ್ಲಿರುವ, ಬಿಬಿಎಂಪಿ ಖಾತಾ ನಂ. 313/19/5,19/3 ಹೊಂದಿರುವ ಸ್ಥಿರಾಸ್ತಿ ಜಮೀನು ಮತ್ತು ಸರ್ವೀಸ್ ಅಪಾರ್ಟ್‌ಮೆಂಟ್‌ಗೆ ಸಂಬಂಧಿಸಿದಂತೆ, ಕಂಪನಿಗಳ ಕಾಯ್ದೆ, 1956ರ ಅಡಿಯಲ್ಲಿ ಸ್ಥಾಪನೆಗೊಂಡಿರುವ, ಸಿಐಎನ್ L72200TG1990PLC011146 ಹೊಂದಿರುವ, ನಾಗಾರ್ಜುನ ಹಿಲ್ಸ್, ಪಂಜಗುಟ್ಟ, ಹೈದರಾಬಾದ್ ವಿಳಾಸದಲ್ಲಿ ತನ್ನ ನೋಂದಾಯಿತ ಕಚೇರಿಯುಳ್ಳ ಮತ್ತು # 301, ಬಟಾವಿಯಾ ಚೇಂಬರ್ಸ್, 8 ಕುಮಾರ ಕೃಪಾ ರಸ್ತೆ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560001 ಶಾಖಾ ಕಚೇರಿ ಹೊಂದಿರುವ, ಎನ್‌ಸಿಸಿ ಲಿಮಿಟೆಡ್ (ಹಿಂದಿನ ನಾಗಾರ್ಜುನ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿನ) [ಕಂಪನಿ] ಎಂಬ ಸಂಸ್ಥೆಯ ಮಾಲೀಕತ್ವ, ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿಗಳನ್ನು ಪರಿಶೋಧನೆ ಮಾಡುತ್ತಿದ್ದೇವೆ.

ಮೇಲ್ಕಂಡ ಷೆಡ್ಯೂಲ್ ಪ್ರಾಪರ್ಟಿಯ ಮೇಲೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗದ ಮೇಲಾಗಲಿ ಅಥವಾ ಕಂಪನಿಯ ವಿರುದ್ಧ ಯಾವುದೇ ಸ್ವರೂಪದಲ್ಲಿ, ಯಾವುದೇ ವ್ಯಕ್ತಿ, ಸಂಘ, ಸಂಸ್ಥೆಗಳು (ಕಾರ್ಪೊರೇಟ್ ಅಥವಾ ಇನ್ನಿತರೆ) ಯಾವುದೇ ರೀತಿಯ ಕ್ಲೇಮ್, ಹಕ್ಕು, ಅಧಿಕಾರ, ಹಿತಾಸಕ್ತಿ, ಪಾಲು, ಪ್ರಯೋಜನ, ಬಾಕಿ ವ್ಯಾಜ್ಯ, ಆಕ್ಷೇಪಣೆ ಅಥವಾ ಯಾವುದೇ ಸ್ವರೂಪದ (ಕ್ಲೇಮ್ಸ್) ಡಿಮಾಂಡ್ ಹೊಂದಿದ್ದರೆ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ 14 (ಹದಿನಾಲ್ಕು) ದಿನಗಳೊಳಗೆ ತಮ್ಮ ಆಕ್ಷೇಪಣೆಗಳನ್ನು ಕೆಳಕಂಡ ಸಹಿದಾರರಿಗೆ ಲಿಖಿತ ರೂಪದಲ್ಲಿ ಪೂರಕ ದಾಖಲಾತಿಗಳ ಸಮೇತ ಮಾಹಿತಿ ನೀಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಮೇಲ್ಕಂಡ ಕಂಪನಿಯ ಮಾಲೀಕತ್ವ ಮತ್ತು ಅಧಿಕಾರ ಸ್ಪಷ್ಟವಾಗಿದೆ, ವ್ಯಾಪಾರಕ್ಕೆ ಯೋಗ್ಯವಾಗಿದೆ ಹಾಗೂ ಯಾವುದೇ ರೀತಿಯ ಋಣಭಾರಗಳಿಂದ ಮುಕ್ತವಾಗಿದೆ, ಜಮೀನಿನ ಮೇಲೆ ಅಥವಾ ಜಮೀನಿನ ಯಾವುದೇ ಭಾಗದಲ್ಲಿ ಇನ್ನಿತರ ಯಾವುದೇ ಅನ್ಯ ವ್ಯಕ್ತಿಯ ಹಕ್ಕು, ಅಧಿಕಾರ ಅಥವಾ ಹಿತಾಸಕ್ತಿಗಳು ಇರುವುದಿಲ್ಲವೆಂದು ಪರಿಗಣಿಸಲಾಗುತ್ತದೆ ಮತ್ತು ನಮ್ಮ ಕಕ್ಷಿದಾರರು ಸದರಿ ಕಂಪನಿಯಿಂದ ಷೆಡ್ಯೂಲ್ ಪ್ರಾಪರ್ಟಿ ಖರೀದಿಸಲು ಮುಂದಾಗುತ್ತಾರೆ. ಒಂದು ವೇಳೆ, ಈ ಪ್ರಕಟಣೆಯ ದಿನಾಂಕದಿಂದ 14 (ಹದಿನಾಲ್ಕು) ದಿನಗಳ ಅವಧಿಯ ನಂತರದಲ್ಲಿ ಯಾವುದೇ ಕ್ಲೇಮ್‌ಗಳು ಅಥವಾ ಆರೋಪಿತ ಹಿತಾಸಕ್ತಿಗಳು ಏನಾದರು ಎದುರಾದರೆ, ಅವುಗಳನ್ನು ವಿವೇಚನಾಪೂರ್ವಕವಾಗಿಯೇ ಕೈಬಿಡಲಾಗುತ್ತದೆ ಮತ್ತು ಎಲ್ಲಾ ಉದ್ದೇಶಗಳಿಂದ ಅವನ್ನು ನಿರ್ಲಕ್ಷಿಸಲಾಗುತ್ತದೆ ಹಾಗೂ ಅವುಗಳು ನಮ್ಮ ಕಕ್ಷಿದಾರರ ಮೇಲೆ ಯಾವುದೇ ನಿರ್ಬಂಧಗಳನ್ನು ರೂಪಿಸಲಾಗುವುದಿಲ್ಲ.

ಷೆಡ್ಯೂಲ್

ಕಾಡುಬೀಸನಹಳ್ಳಿ ಗ್ರಾಮ, ವರ್ತೂರ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು ವಿಳಾಸದ ಸರ್ವೆ ನಂ. 19/5ರ (ಹಳೆಯ ಸರ್ವೆ ನಂ. 19/3ರ ಭಾಗವಾಗಿರುವ) ಭಾಗವಾಗಿರುವ, ಬಿಬಿಎಂಪಿ ಖಾತಾ ನಂ. 313/19/5,19/3 ಹೊಂದಿರುವ (ಹಿಂದೆ ಗ್ರಾಮ ಪಂಚಾಯತಿ ಖಾತಾ ನಂ. 155 ಹೊಂದಿದ್ದ), 32 ಗುಂಟಾ ವಿಸ್ತೀರ್ಣದಲ್ಲಿ ಸ್ಥಿತಗೊಂಡಿರುವ, ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆಗೊಂಡಿರುವ ಜಮೀನು ಮತ್ತು ಅದರಲ್ಲಿರುವ ಬೇಸ್‌ಮೆಂಟ್, ನೆಲಮಹಡಿ ಮತ್ತು 3 (ಮೂರು) ಮೇಲ್ಮಹಡಿಗಳ ಸಮೇತ ಒಟ್ಟು 68 (ಅರವತ್ತೆಂಟು) ಯೂನಿಟ್‌ಗಳನ್ನು ಹೊಂದಿರುವ ಸರ್ವೀಸ್ ಅಪಾರ್ಟ್‌ಮೆಂಟ್ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:– ಪೂರ್ವಕ್ಕೆ: ಖಾಸಗಿ ಸ್ವತ್ತು; ಪಶ್ಚಿಮಕ್ಕೆ: ಸರ್ವೆ ನಂ. 19/3 ರಲ್ಲಿರುವ ಜಮೀನು; ಉತ್ತರಕ್ಕೆ: ಬಿಡಿಎ ರಸ್ತೆ; ಮತ್ತು ದಕ್ಷಿಣಕ್ಕೆ: ಖಾಸಗಿ ಸ್ವತ್ತು.

ಮೃದುಲ್ ಕುಂಬಲತ್, ಪಾಲುದಾರರು ಟ್ರೈಲೀಗಲ್
ವಕೀಲರು ಮತ್ತು ಸಾಲಿಸಿಟರ್
ಟ್ರೈಲೀಗಲ್, 7ನೇ ಮಹಡಿ, ಮಾರ್ಕ್‌ಸ್ಕ್ವೇರ್, ನಂ. 61, ಸೈಂಟ್ ಮಾರ್ಕ್ಸ್ ರಸ್ತೆ, ಬೆಂಗಳೂರು–560001, ಕರ್ನಾಟಕ. ಫೋನ್: 080–43434646
ಇಮೇಲ್: mridul.kumbalath@trilegal.com
ಸ್ಥಳ: ಬೆಂಗಳೂರು ದಿನಾಂಕ: 26–12–2024

ROUNAQH

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: SG-SWR-PROJ-Kavach-UBL ದಿನಾಂಕ: 20.12.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಹುಬ್ಬಳ್ಳಿ ಮತ್ತು ಮೈಸೂರು ವಿಭಾಗದಲ್ಲಿ 790 ಆರ್‌ಕೆಎಂ ಗೂ ಹೆಚ್ಚಿನ ದೂರಕ್ಕೆ ಕವಚ್ ಉಪಕರಣದ ಸಮೀಕ್ಷೆ, ವಿನ್ಯಾಸ, ಪೂರೈಕೆ, ಸ್ಥಾಪನೆ, ಪರಿಶೀಲನೆ ಮತ್ತು ಕಾರ್ಯಾರಂಭಗೊಳಿಸುವಿಕೆ ಹಾಗೂ ಅದಕ್ಕೆ ಸಂಬಂಧಿಸಿದ ಕಾಮಗಾರಿಗಳು.	ರೂ. 188,09,29,943.85

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13.01.2025, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ ಯೋಜನೆ/ಹುಬ್ಬಳ್ಳಿ

PUB/655/AAF/PRB/SWR/2024-25

South Western Railway - SWR | SWRRLY | SWRRLY

ದಿ ಸಿಟಿಜನ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ. 651/ಎ, 1ನೇ ಮುಖ್ಯ ರಸ್ತೆ, ಡಿ ಬ್ಲಾಕ್, 2ನೇ ಹಂತ, ಡಾ|| ರಾಜ್ ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು–560010. ದೂರವಾಣಿ : 080–2332 1923, 2332 8735, 2352 0466
E-mail: citizenbk@rediffmail.com

"ಚುನಾವಣಾ ಪತ್ರಿಕಾ ಪ್ರಕಟಣೆ"

ದಿ ಸಿಟಿಜನ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ನಂ.651/ಎ, 1ನೇ ಮುಖ್ಯರಸ್ತೆ, 'ಡಿ' ವಿಭಾಗ, 2ನೇ ಹಂತ, ಡಾ|| ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು–560010. ಈ ಬ್ಯಾಂಕಿನ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ ಬ್ಯಾಂಕಿನ ಆಡಳಿತ ಮಂಡಲಿ ಚುನಾವಣೆಯು **ದಿನಾಂಕ: 12–01–2025 ರ ಭಾನುವಾರ ಬೆಳಗ್ಗೆ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ** ಬಸವೇಶ್ವರ ಶಾಲೆ, 2ನೇ ಬ್ಲಾಕ್ ರಾಜಾಜಿನಗರ, ಬೆಂಗಳೂರು–560010 ಇಲ್ಲಿ ನಡೆಯಲಿದೆ. ನಾಮಪತ್ರಗಳನ್ನು ಸಲ್ಲಿಸಲು ಪ್ರಾರಂಭದ **ದಿನಾಂಕ: 01–01–2025** ರಿಂದ **ಕೊನೆಯ ದಿನಾಂಕ: 05–01–2025 ಬೆಳಗ್ಗೆ 11–00 ರಿಂದ ಮ.3.00 ಗಂಟೆಯವರೆಗೆ** ಬ್ಯಾಂಕಿನ ಕಛೇರಿಯಲ್ಲಿ ನಾಮಪತ್ರಗಳ ಪರಿಶೀಲನೆ **ದಿನಾಂಕ: 06–01–2025 ಬೆಳಗ್ಗೆ 11–00 ಗಂಟೆಯಿಂದ** ಬ್ಯಾಂಕಿನ ಕಛೇರಿಯಲ್ಲಿ ಮತ್ತು ನಾಮಪತ್ರಗಳ ವಾಪಸ್ಸು ಪಡೆಯಲು **ದಿನಾಂಕ: 07–01–2025 ಮಧ್ಯಾಹ್ನ 3.00 ಘಂಟೆಯೊಳಗೆ** ಬ್ಯಾಂಕಿನ ಕಛೇರಿಯಲ್ಲಿ.

ಮಾನ್ಯ ಸದಸ್ಯರ ವಿಳಾಸಕ್ಕೆ ಚುನಾವಣಾ ವೇಳಾಪಟ್ಟಿಯನ್ನು/ಸೂಚನಾ ಪತ್ರಗಳನ್ನು ಈಗಾಗಲೇ ನಿಯಮನುಸಾರ ರವಾನಿಸಲಾಗಿರುತ್ತದೆ. ಒಂದು ವೇಳೆ ಚುನಾವಣಾ ವೇಳಾ ಪಟ್ಟಿ / ಸೂಚನಾ ಪತ್ರಗಳು ನಿಗದಿತ ಸಮಯದಲ್ಲಿ ತಲುಪದೆ ಇದ್ದಲ್ಲಿ, ಇದನ್ನೆ ಚುನಾವಣಾ ಸೂಚನಾ ಪತ್ರವೆಂದು ಪರಿಗಣಿಸಿ ಸದರಿ ಚುನಾವಣೆಯಲ್ಲಿ ಭಾಗವಹಿಸಲು ಈ ಮೂಲಕ ಕೋರಿದೆ.

ದಿನಾಂಕ: 24.12.2024 ಸಹಿ/–
ಸ್ಥಳ : ಬೆಂಗಳೂರು ರಿಟರ್ನಿಂಗ್ ಅಧಿಕಾರಿ

PUBLIC NOTICE

My client intends to purchase the property described in the SCHEDULE hereunder, from its owners **Smt. Gowramma** W/o Late Chickkapapanna and her two daughters namely Smt. Ramya. C. and Smt. Sowmya. C. Any person/s/bank/ society/firm or any other body having any right, title, interest, claim or charge over the schedule mentioned property or any part thereof is hereby notified to lodge their objections/claims if any, in writing with documentary proof regarding their manner of right, title, interest or charge over the schedule mentioned property with the office of the undersigned within **Fifteen days (15 days)** from date of publication of this notice, after which period my client shall proceed to purchase the schedule mentioned property, on the basis that there are no objections / claims of whatsoever nature with regard to the schedule mentioned property.

SCHEDULE PROPERTY

All the piece and parcel of the Property being converted land bearing **Sy No. 25/1 (Old Sy No- 22/2)** Measuring **2-00 Acres,** Guttahalli Village, Kasaba Hobli, Devanahalli Taluk, Bangalore Rural District,(converted vide Official Memorandum dated 04-11-2004, No. ALN (DE) SR.88/2004-05 issued by the Deputy Commissioner, Bangalore Rural District) and bounded on by;

East by : Sy No. 25/2;
West by : Sy No. 24/1,
North by : Nandi Road,
South by : Doddakalappa's Property;

Sd/- **A. V. NARASIMHA REDDY,** Advocate
Office at No. 464, 20th Main, 26th Cross, Judicial Layout, G.K.V.K. Post, Yelahanaka New Town, Bangalore – 560 065.
Moblie: 9480333221, 6366168523

PUBLIC NOTICE

Public are hereby informed that our client **SRI. Padmasen Sujnan**, S/o. Brahmananda Sharma Padhmanabha, Residing at No.7, 7th Cross, 1st Main. Prashanthnagar, Vijayanagar North, Bangalore-560079, Aadhar No.696902596740 PAN. No. BMHPS47291, Phone No.9986004770 is the absolute owner in possession and enjoyment of property bearing converted residential site No.7, bearing Khatha No.224/51/2/7, new Property No.455/224/51/27, E.P.I.D No.3389117433 measuring East to West on the Northern side 53.3 feet East to West on the Southern side 54.3 feet and North to South 30 feet totally measuring 1614 Sq. feet formed in Sy. No.51/2, Agrahara Village, Yelahanka Hobli/Taluk, Bangalore bounded on East by : 30 feet road, West by : Private Property, North by : Site No.8 and South by : Site No.6, Within the limits of BBMP jurisdiction. On 20-12-2024 our client noticed that he had lost the Original registered Sale Deed dated 22-12-2012 vide., registered document No. 07815/2012-13 CD. No. YAND 449, Book No. 1, duly registered before the Sub-Registrar, Yelahanka, Bengaluru, duly executed by Smt. Vijaya Kollipara through her GPA holder Sri. H.R.Suresh on her behalf by virtue of Registered General Power of Attorney dated 10-8-2012 vide registered document No. BNG (U)YLNK/107/2012-13 and duly singed by confirming party Sri. S.Devendra. Our client filed complaint with the jurisdictional police to trace and to hand over the lost sale deed. It is hereby informed to all individuals and General Public that in case if anybody finds or is in possession of said sale deed, it may be handed over to us at our Office or to our client to his address. Nobody other than our client and his subsequent purchaser is having any sort of title or right over the above property. Generally public are warned not to enter any transaction with aforesaid property through any stranger.

Sri. K.V. Keshava,
Sri. Sanketh K.K., Advocates
No. 121/5&6 "OM Complex" Avenue Road, Bengaluru-02. M.Ph. No. 9448059626

CIVIL COURT PUNE MAHARASHTRA
IN THE COURT OF SHRI. J. G. PAWAR
12TH JOINT C.J.S.D AND ADDL C.J.M PUNE, Pune City, Pune
SUMMONS TO APPEAR IN PERSON (O.5, R. 3.)
Spl.C.S./269/2024
Virendra Amitchandra Pathronia Vs Mrs Aarti Virendra Pathronia Alias Cheryl Anthony Fernandez NEXT DATE:28.01.2025

To,
Mrs Aarti Virendra Pathronia Alias Cheryl Anthony Fernandez
90/554, 1st Cross, II Main, V.V.Nagar, Subramanyapura, P.O. Bengaluru Karnataka-560061

Whereas Virendra Amitchandra Pathronia has instituted a suit against you for you are hereby summoned to appear in this Court in person on the 28-01-2025 at 11:00 o'clock in the forenoon, to answer the claim; and you are directed to produce on that day all the documents upon which you intend to rely in support of your defence.

Take notice that, in default of your appearance of the day before mentioned, the suit will be heard and determined in your absence.

Given under my hand and the seal of the Court, this **17-12-2024**

12TH JOINT C.J.S.D AND ADDL C.J.M PUNE

JOB OPPORTUNITIES

Hospital & Medical Jobs

NURSE REQUIRED for my Aunt aged 70 years at Basavanagudi Jayanagar contact 9901501185. 24/7 or 12 hour shift.

DH Classifieds More value, more impact | ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
*Conditions apply
Book your ad with us now! For more details contact:
9845114560 | 9901641752

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ

ವಿಚಾರಣಾ ನೋಟಿಸ್

ಈ ಮೂಲಕ ತಿಳಿಸುವುದು ಏನೆಂದರೆ, ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಿರುವ ನೋಟಿಸ್‌ದಾರರಿಗೆ ವಿಚಾರಣಾ ನೋಟಿಸ್‌ಗಳನ್ನು ಹೊರಡಿಸಲಾಗಿತ್ತು. ಸದರಿ ನೋಟಿಸ್‌ಗಳು ದಾಖಲಾತಿಗಳಲ್ಲಿರುವ ಅವರ ಹಿಂದಿನ ಬಲ್ಲ ವಿಳಾಸಕ್ಕೆ ಬಟವಾಡೆ ಆಗಿರುವುದಿಲ್ಲ. ವಿಚಾರಣಾ ನೋಟಿಸ್‌ಗಳ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕ್ರ. ಸಂ.	ನೋಟಿಸ್ ದಾರರ ಹೆಸರು	ನೋಟಿಸ್‌ದಾರರ ವಿಳಾಸ	ಸ್ಕ್ರಿಪ್/ ಕೇಸ್ ಹೆಸರು	ನೋಟಿಸ್ ದಿನಾಂಕ ಮತ್ತು ಸಂಖ್ಯೆ	ವಿಚಾರಣಾ ದಿನಾಂಕ ಮತ್ತು ಸಮಯ	ಸ್ಥಳ
1	ಶ್ರೀ. ಮಸರೂರ್ ಅಹ್ಮದ್ ಬಷೀರ್	1. 21/36, 3ನೇ ಅಡ್ಡರಸ್ತೆ, 7ನೇ ಎ ಮುಖ್ಯರಸ್ತೆ, 1ನೇ ಹಂತ, ಬಿಟಿಎಂ ಬಡಾವಣೆ, ಬೆಂಗಳೂರು–560029 2. 13.14/119 1ನೇ ಮಹಡಿ, ಪಂತರಪಾಳ್ಯ, ಮೈಸೂರು ರಸ್ತೆ, ಬೆಂಗಳೂರು–560039	ವೆಯಿರ್ಡ್ ಇನ್ಫ್ರಾಸ್ಟ್ರಕ್ಚರ್ ಕಾರ್ಪೊರೇಶನ್ ಲಿಮಿಟೆಡ್	ಸೆಬಿ/ ಎನ್‌ಆರ್‌ಒ–ಡಿವಿ–3/ ಜಿಎನ್/ ಎಸ್‌ಆರ್/ ಒಡಬ್ಲ್ಯು/ ಎಚ್‌ಎನ್/ 2024/ 39167/2 ದಿನಾಂಕ ಡಿಸೆಂಬರ್ 19, 2024	ದಿನಾಂಕ ಜನವರಿ 21, 2025 ಸಮಯ ಬೆಳಗ್ಗೆ 11:30	ಸೆಬಿ ಭವನ 2, ಪ್ಲಾಟ್ ಸಿ–7, 'ಜಿ' ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ), ಮುಂಬೈ– 400051

ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ, ಸೆಬಿ ಉತ್ತರ ಪ್ರಾದೇಶಿಕ ಕಚೇರಿ: ಪ್ಲೇಟ್–ಬಿ, 8ನೇ ಮಹಡಿ, ಕಚೇರಿ ಟವರ್–1, ಎನ್‌ಬಿಸಿಸಿ ಕಾಂಪ್ಲೆಕ್ಸ್, ಈಸ್ಟ್ ಕಿದ್ವಾಯಿ ನಗರ, ನವದೆಹಲಿ–110023 ವಿಳಾಸದಿಂದ ವಿಚಾರಣಾ ನೋಟಿಸ್‌ಗಳನ್ನು ಪಡೆದುಕೊಳ್ಳಬೇಕೆಂದು ಈ ಮೂಲಕ ಸದರಿ ನೋಟಿಸ್‌ದಾರರಿಗೆ ಸೂಚಿಸಲಾಗಿದೆ. ನೋಟಿಸ್‌ದಾರರು, ಸೆಬಿ ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿರುವ **(www.sebi.gov.in)** "ಅನ್‌ಸರ್ವ್ಡ್ ಸಮನ್ಸ್/ನೋಟಿಸಸ್" ಲಿಂಕ್‌ನಿಂದ ಕೂಡ ವಿಚಾರಣಾ ನೋಟಿಸ್ ಪ್ರತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಒಂದು ವೇಳೆ, ನೋಟಿಸ್‌ದಾರರು ಆನ್‌ಲೈನ್ ಮಾದರಿಯಲ್ಲಿ ವಿಚಾರಣೆಗೆ ಹಾಜರಾಗಲು ಬಯಸುವುದಾದಲ್ಲಿ, ಅಂತಹವರು ಮೇಲ್ಕಂಡ ಇಮೇಲ್ ವಿಳಾಸದಲ್ಲಿ ಮಾಹಿತಿ ನೀಡಬಹುದು.

ಸದರಿ ವಿಚಾರಣಾ ನೋಟಿಸ್‌ಗೆ ಪ್ರತಿಕ್ರಿಯೆ ನೀಡದಿದ್ದಲ್ಲಿ, ಅಥವಾ ನೋಟಿಸ್‌ದಾರರಾಗಲಿ ಅಥವಾ ಅವರ ಅಧಿಕೃತ ಪ್ರತಿನಿಧಿಗಳಾಗಲಿ, ಸದರಿ ವಿಚಾರಣೆಗೆ ಹಾಜರಾಗದಿದ್ದಲ್ಲಿ, ದಾಖಲೆಗಳಲ್ಲಿ ಲಭ್ಯವಿರುವ ವಾಸ್ತವಾಂಶಗಳ ಆಧಾರದ ಮೇರೆಗೆ, ಈ ವಿಷಯದಲ್ಲಿ ಸೆಬಿ ಸಂಸ್ಥೆಯಿಂದ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ದಿನಾಂಕ: ಡಿಸೆಂಬರ್ 20, 2024 ಜ್ಞಾನೇಂದ್ರ ನೀರಜ್
ಸ್ಥಳ: ನವದೆಹಲಿ ಅಪರ ಮಹಾ ಪ್ರಬಂಧಕರು
CBC 15204/11/0198/2425 ಉತ್ತರ ಪ್ರಾದೇಶಿಕ ಕಚೇರಿ

ಬಣ್ಣ ಬಣ್ಣದ ವಿದ್ಯುತ್ ದೀಪ, ಆಲಂಕಾರಿಕ ವಸ್ತುಗಳಿಂದ ಕಂಗೊಳಿಸಿದ ಚರ್ಚ್‌ಗಳು ● ಸಾಮೂಹಿಕ ಪ್ರಾರ್ಥನೆ

ನಗರದಲ್ಲೆಡೆ ಸಂಭ್ರಮದ ಕ್ರಿಸ್‌ಮಸ್ ಆಚರಣೆ

ಚರ್ಚ್ ಸ್ಟ್ರೀಟ್: ಕ್ರಿಸ್‌ಮಸ್ ಸಂಭ್ರಮದಲ್ಲಿ ಪುಟಾಣಿ ಕಾಣಿಸಿಕೊಂಡಿದ್ದು ಹೀಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಣ್ಣ ಬಣ್ಣದ ವಿದ್ಯುತ್ ದೀಪ ಮತ್ತು ಆಲಂಕಾರಿಕ ವಸ್ತುಗಳಿಂದ ಸಿಂಗಾರಗೊಂಡಿದ್ದ ಚರ್ಚ್‌ಗಳು, ಅಲ್ಲಲ್ಲಿ ಸಾಂಟಾ ಕ್ಲಾಸ್ ವೇಷಧಾರಿಗಳು, ಚರ್ಚ್‌ಗಳಲ್ಲಿ ಸಾಮೂಹಿಕ ಪ್ರಾರ್ಥನೆ...

ಇದು ನಗರದಲ್ಲಿ ಬುಧವಾರ ಕಂಡು ಬಂದ ದೃಶ್ಯ. ಕ್ರಿಸ್‌ಮಸ್ ಅಂಗವಾಗಿ ನಗರದ ಹಲವೆಡೆ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಚರ್ಚ್‌ಗಳ ಆವರಣ ಮತ್ತು ಹೊರಗಿನ ರಸ್ತೆಗಳು ಕಳೆಗಟ್ಟಿದ್ದವು. ಚರ್ಚ್‌ಗಳ ಒಳಗೆ ಸಾಮೂಹಿಕ ಪ್ರಾರ್ಥನೆ ನಡೆದರೆ, ಸುತ್ತಮುತ್ತಲ ಮಾರುಕಟ್ಟೆಗಳಲ್ಲಿ ಕ್ರಿಸ್‌ಮಸ್‌ಗಾಗಿ ಅಲಂಕಾರಿಕ ವಸ್ತುಗಳು, ಉಡುಗೊರೆಗಳ ಖರೀದಿ ಭರಾಟೆಯಿಂದ ನಡೆದಿತ್ತು.

ಮಂಗಳವಾರ ರಾತ್ರಿಯಿಂದಲೇ ಚರ್ಚ್‌ಗಳಲ್ಲಿ ಪ್ರಾರ್ಥನೆಗಳು ಆರಂಭವಾಗಿದ್ದವು. ಬುಧವಾರ ಮಧ್ಯಾಹ್ನದ ತನಕವೂ ಪ್ರಾರ್ಥನೆಗಳು ನಡೆದವು.

ಶಿವಾಜಿನಗರದ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್, ಫ್ರೇಜರ್ ಟೌನ್‌ನಲ್ಲಿರುವ ಸೇಂಟ್ ಫ್ರಾನ್ಸಿಸ್ ಕ್ಸೇವಿಯರ್ ಕೆಥೆಡ್ರಲ್ ಚರ್ಚ್, ಬ್ರಿಗೇಡ್ ರಸ್ತೆಯಲ್ಲಿರುವ ಸೇಂಟ್ ಪ್ಯಾಟ್ರಿಕ್ಸ್ ಚರ್ಚ್, ಸೇಂಟ್ ಮಾರ್ಕ್ಸ್ ಕೆಥೆಡ್ರಲ್, ಚಾಮರಾಜಪೇಟೆಯ ಸೇಂಟ್ ಜೋಸೆಫ್ಸ್ ಚರ್ಚ್, ಲಿಂಗರಾಜಪುರದ ಹೋಲಿ ಗೋಸ್ಟ್ ಚರ್ಚ್, ಹಲಸೂರಿನ ಹೋಲಿ ಟ್ರಿನಿಟಿ ಚರ್ಚ್, ಎಂ.ಜಿ. ರಸ್ತೆಯ ಈಸ್ಟ್ ಪರೇಡ್ ಚರ್ಚ್, ರಿಚ್ಮಂಡ್ ರಸ್ತೆಯಲ್ಲಿರುವ ಸೇಕ್ರೆಡ್ ಹಾರ್ಟ್ ಚರ್ಚ್, ಸಂಪಂಗಿರಾಮನಗರದ ಹಡ್ಸನ್ ಸ್ಮಾರಕ ಚರ್ಚ್ ಸೇರಿದಂತೆ ನಗರದ ವಿವಿಧ ಚರ್ಚ್‌ಗಳಲ್ಲಿ ಸಾಮೂಹಿಕ ಪ್ರಾರ್ಥನೆಗಳು ನಡೆದವು. ಕ್ರೈಸ್ತ ಧರ್ಮೀಯರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಹಬ್ಬದ ಅಂಗವಾಗಿ ಚರ್ಚ್‌ಗಳು ವಿದ್ಯುತ್ ದೀಪ ಹಾಗೂ ಆಲಂಕಾರಿಕ ವಸ್ತುಗಳಿಂದ ಕಂಗೊಳಿಸಿದವು. ಸಾಂಟಾ ಕ್ಲಾಸ್ ವೇಷಧಾರಿಗಳು ಚರ್ಚ್‌ನ ಆವರಣದಲ್ಲಿದ್ದ ಭಕ್ತಾದಿಗಳಿಗೆ ಬಗೆಬಗೆಯ ಉಡುಗೊರೆಗಳನ್ನು ನೀಡಿದರು. ಉಡುಗೊರೆ ಪಡೆಯಲು ಮಕ್ಕಳು ಮುಗಿಬೀಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಕ್ರಿಸ್‌ಮಸ್ ಕೇಕ್ ಹಾಗೂ ಸಿಹಿ ತಿನಿಸುಗಳನ್ನು ಹಂಚಲಾಯಿತು.

ಯೇಸು ಹುಟ್ಟಿದ ಸಂದರ್ಭದ ಪ್ರತಿಕೃತಿಗಳು ಹಾಗೂ ಬಾಲ ಯೇಸುವನ್ನು ಮೇರಿ ಮಾತೆ ಎತ್ತಿಕೊಂಡಿರುವ ಮೂರ್ತಿಗಳನ್ನು ಚರ್ಚ್ ಆವರಣದಲ್ಲಿ ಇಡಲಾಗಿತ್ತು. ಕ್ರಿಸ್‌ಮಸ್ ಮರಕ್ಕೆ ಉಡುಗೊರೆಗಳನ್ನು ಕಟ್ಟಲಾಗಿತ್ತು. ಚರ್ಚ್‌ಗಳಲ್ಲಿ ಬೈಬಲ್ ಪಠಣದ ಜತೆಗೆ ಯೇಸುವಿನ ಮಹಿಮೆಯ ಗೀತೆಗಳನ್ನು ಹಾಡಲಾಯಿತು. ನೃತ್ಯರೂಪಕಗಳು, ಕೆಲವೆಡೆ ಮೇರಿ ಮಾತೆ, ಬಾಲ ಯೇಸುವಿನ ಮೆರವಣಿಗೆ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆದವು.

ಮನೆಗಳಲ್ಲಿ ವಿಶೇಷ ಅಲಂಕಾರ: ವಿಭಿನ್ನ ವಿನ್ಯಾಸದ ಗೋದಲಿಗಳು, ಸಾಂಟಾ ಕ್ಲಾಸ್‌ನ ಪ್ರತಿಬಿಂಬ, ಶುಭ ಸಂಕೇತದ ಗಂಟೆಗಳು, ಬಣ್ಣ ಬಣ್ಣದ ದೀಪಗಳಿಂದ ಕ್ರೈಸ್ತರ ಮನೆಗಳು ಅಲಂಕಾರಗೊಂಡಿದ್ದವು. ಕ್ರಿಸ್‌ಮಸ್ ಕಾರ್ಡ್‌ಗಳು ಮತ್ತು ಉಡುಗೊರೆಗಳನ್ನು ನೀಡುವ ಮೂಲಕ ಶುಭ ಕೋರಿದರು. ಅಶಕ್ತರಿಗೆ ಮತ್ತು ಬಡವರಿಗೆ ಬಟ್ಟೆ, ಉಡುಗೊರೆ, ಹಣ ನೀಡುವ ಮೂಲಕ ಕೆಲವರು ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ಕ್ರಿಸ್‌ಮಸ್ ಪ್ರಯುಕ್ತ ಮಾಲ್‌ಗಳಲ್ಲಿ ವಿಶೇಷ ಅಲಂಕಾರಗಳನ್ನು ಮಾಡಲಾಗಿತ್ತು. ಸಂಗೀತ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗಿತ್ತು. ಮಕ್ಕಳಿಗೆ ವಿವಿಧ ಸ್ಪರ್ಧೆಗಳನ್ನು ನಡೆಸಲಾಯಿತು. ಶಾಲಾ-ಕಾಲೇಜುಗಳಿಗೆ ರಜೆಗಳಿದ್ದರಿಂದ ಮಾಲ್‌ಗಳಲ್ಲಿ ಜನಜಂಗುಳಿ ಹೆಚ್ಚಾಗಿತ್ತು.

ಶಿವಾಜಿನಗರದ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್‌ನಲ್ಲಿ ಕ್ರೈಸ್ತ ಧರ್ಮೀಯರು ಬುಧವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು (ಎಡಚಿತ್ರ) ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್‌ನಲ್ಲಿ ಮೇಣದ ದೀಪಗಳನ್ನು ಹಚ್ಚುವ ಮೂಲಕ ಯೇಸುವಿಗೆ ನಮಿಸಲಾಯಿತು ಪ್ರಜಾವಾಣಿ ಚಿತ್ರಗಳು: ಬಿ.ಕೆ. ಜನಾರ್ದನ್

ಬ್ರಿಗೇಡ್ ರಸ್ತೆ: ಜನಜಂಗುಳಿ ಜಾತ್ರೆ

ತಂಡೋಪತಂಡವಾಗಿ ಬಂದ ಯುವ ಸಮುದಾಯ ● ಗಮನ ಸೆಳೆದ ವಿದ್ಯುತ್ ಅಲಂಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಸ್‌ಮಸ್ ಹಬ್ಬದ ಸಂಭ್ರಮವನ್ನು ಚರ್ಚ್ ಸ್ಟ್ರೀಟ್, ಬ್ರಿಗೇಡ್ ರಸ್ತೆಗಳಲ್ಲಿ ಆಚರಿಸಲು ಯುವ ಸಮುದಾಯವು ತಂಡೋಪತಂಡವಾಗಿ ಬಂದಿದ್ದರಿಂದ ಎಂ.ಜಿ. ರಸ್ತೆ ಸುತ್ತಮುತ್ತ ಬುಧವಾರ ಜನಜಂಗುಳಿಯ ಜಾತ್ರೆಯೇ ಉಂಟಾಗಿತ್ತು.

ಬೇರೆ ರಾಜ್ಯ, ಬೇರೆ ಜಿಲ್ಲೆಗಳಿಂದ ವಿದ್ಯಾಭ್ಯಾಸ, ಉದ್ಯೋಗಕ್ಕಾಗಿ ಬೆಂಗಳೂರಿಗೆ ಬಂದಿರುವ ಯುವಕ, ಯುವತಿಯರ ಸುತ್ತಾಟದ ನೆಚ್ಚಿನ ತಾಣಗಳಲ್ಲಿ ಬ್ರಿಗೇಡ್ ರಸ್ತೆ–ಚರ್ಚ್‌ಸ್ಟ್ರೀಟ್ ಒಂದಾಗಿದೆ. ಹಾಗಾಗಿ ವಾರಾಂತ್ಯದಲ್ಲಿ ಈ ರಸ್ತೆಗಳಲ್ಲಿ ಜನದಟ್ಟಣೆ ಹೆಚ್ಚಿರುತ್ತಿತ್ತು. ಬುಧವಾರ ರಜೆ ಆಗಿರುವುದರಿಂದ ಪ್ರವಾಹದಂತೆ ಬಂದಿರುವುದರಿಂದ ಮಂದಿ ಮಧ್ಯೆ ಅಂತರವೇ ಇಲ್ಲದಂತಾಗಿತ್ತು.

ಕೈ ಹಿಡಿದು ನಡೆಯುವ ಜೋಡಿಗಳು, ಹೇರ್‌ಬ್ಯಾಂಡ್, ಸಾಂಟಾಕ್ಲಾಸ್ ಟೋಪಿ ಧರಿಸಿಕೊಂಡವರು, ಇಂಥದ್ದ್ಯಾವುದೂ ಇಲ್ಲದೇ ಸುಮ್ಮನೆ ಇವನ್ನೆಲ್ಲ ನೋಡಿಕೊಂಡು ತಿರುಗಾಡಲು ಬಂದ ಹುಡುಗರು, ಇವರಿಗೆ ಉತ್ಸಾಹ ತುಂಬಲೆಂದೇ ಆಕರ್ಷಕವಾಗಿ ಮಾಡಲಾದ ವಿದ್ಯುತ್ ಅಲಂಕಾರಗಳು ಕ್ರಿಸ್‌ಮಸ್‌ನ ಸಡಗರಕ್ಕೆ ಸಾಕ್ಷಿ ಬರೆದವು. ಬಾರ್, ಪಬ್, ಹೋಟೆಲ್, ಅಂಗಡಿಗಳಲ್ಲಿಯೂ ಹಬ್ಬದ ಪ್ರಯುಕ್ತ ಗ್ರಾಹಕರ ಸಂಖ್ಯೆ ಭಾರಿ ಹೆಚ್ಚಳ ವಾಗಿತ್ತು. ಬ್ರಿಗೇಡ್ ರಸ್ತೆಗೆ ಚರ್ಚ್‌ಸ್ಟ್ರೀಟ್ ಕೂಡುವ ಜಾಗದಲ್ಲಿ ಜನರು ಕಿಕ್ಕಿರಿದಿದ್ದರು. ಅನೇಕರು ಫೋಟೊ, ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

‘ತಿರುಗಾಡಲೆಂದೆ ಬಂದಿದ್ದೇವೆ’ ಎಂದು ವಿದ್ಯಾರ್ಥಿ, ಆಂಧ್ರಪ್ರದೇಶದ ವೆಂಕಟೇಶ್ ಸುತ್ತಾಟದ ಬಗ್ಗೆ ಪ್ರತಿಕ್ರಿಯಿಸಿದರೆ, ‘ಇಲ್ಲಿ ಎಲ್ಲ ವಸ್ತುಗಳ ಬೆಲೆ ಜಾಸ್ತಿ ನಾವು ಯಾವುದನ್ನೂ ಖರೀದಿಸುವುದಿಲ್ಲ. ಎಲ್ಲ ನೋಡಿಕೊಂಡು ಖುಷಿಪಡೋಣ ಎಂದು ಬಂದೆವು’ ಎಂದು ಎಲೆಕ್ಟ್ರಾನಿಕ್ ಸಿಟಿಯಲ್ಲಿ ಉದ್ಯೋಗಿಗಳಾಗಿರುವ ಕೇರಳದ ಇಜಾಜ್, ಸಿನಾನ್, ಫಝಿಲ್ ತಿಳಿಸಿದರು.

ಭಾಷೆಗಳ ಸಮ್ಮಿಲನ: ಈ ರಸ್ತೆಗಳು ಭಾಷಾ ಸಮ್ಮಿಲನದ, ಸೌಹಾರ್ದದ ಕೇಂದ್ರಗಳಾದವು. ಕನ್ನಡ, ತಮಿಳು, ತೆಲುಗು, ಹಿಂದಿ, ಇಂಗ್ಲಿಷ್, ತುಳು, ಉರ್ದು ಸಹಿತ ನಾನಾ ಭಾಷೆಗಳ ಸೊಲ್ಲುಡಿಗಳು ಒಟ್ಟೊಟ್ಟಿಗೆ ಕೇಳುವಂತಾಗಿತ್ತು.

ಬ್ರಿಗೇಡ್ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಜಾಗವೇ ಇಲ್ಲದಾದಾಗ ಪೊಲೀಸರು ಬಂದುಇ ಲಾಠಿ ಹಿಡಿದು ಜನರನ್ನು ಚದುರಿಸಿ ವಾಹನಗಳಿಗೆ ಜಾಗ ಮಾಡಿಕೊಟ್ಟರು.

ಕ್ರಿಸ್‌ಮಸ್ ರಜಾದಿನವಾದ ಬುಧವಾರ ನಗರದ ಬ್ರಿಗೇಡ್ ರಸ್ತೆಯಲ್ಲಿ ಬುಧವಾರ ಜನರು ಕಿಕ್ಕಿರಿದು ತುಂಬಿದ್ದರು ಪ್ರಜಾವಾಣಿ ಚಿತ್ರಗಳು: ಕೃಷ್ಣ ಕುಮಾರ್ ಪಿ.ಎಸ್.

ಬ್ರಿಗೇಡ್ ರಸ್ತೆ ಹಾಗೂ ಚರ್ಚ್ ಸ್ಟ್ರೀಟ್‌ಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿದ್ದ ಕಾರಣ ಎಂ.ಜಿ ರಸ್ತೆ ಮೆಟ್ರೊ ನಿಲ್ದಾಣದಲ್ಲಿ ಜನಸಂದಣಿ ಹೆಚ್ಚಿತ್ತು

ನಂದಿ ಬೆಟ್ಟದಲ್ಲಿ ಜನ ದಟ್ಟಣೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಕ್ರಿಸ್‌ಮಸ್ ರಜೆಯ ಕಾರಣ ನಂದಿಗಿರಿಧಾಮಕ್ಕೆ ಬುಧವಾರ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿದರು. ಇದರಿಂದ ಗಿರಿಧಾಮದ ಹಾದಿಯಲ್ಲಿ ದೊಡ್ಡ ಮಟ್ಟದಲ್ಲಿ ಸಂಚಾರ ದಟ್ಟಣೆ ಉಂಟಾಯಿತು.

ಬೆಳಿಗ್ಗೆ ಐದು ಗಂಟೆಯ ವೇಳೆಗೆ ನಂದಿಕ್ರಾಸ್‌ನಲ್ಲಿ ಕಾರು, ಬೈಕು ಸಾಲುಗಟ್ಟಿ ನಿಂತಿದ್ದವು. ದಾರಿ ಬಿಡಲಿಲ್ಲ ಎಂದು ಕಾರಿನಲ್ಲಿದ್ದ ಕೆಲ ಯುವಕರು ಆಟೊ ಚಾಲಕರ ಜೊತೆ ವಾಗ್ವಾದ ನಡೆಸಿದರು. ಕೈ ಕೈ ಮಿಲಾಯಿಸುವ ಹಂತಕ್ಕೂ ಪರಿಸ್ಥಿತಿ ತಲುಪಿತ್ತು.

ಬೆಳಗ್ಗೆ 5.30ರ ಸುಮಾರಿನಲ್ಲಿಯೇ 200ಕ್ಕೂ ಹೆಚ್ಚು ವಾಹನ ಗಿರಿಧಾಮದ ವಾಹನ ನಿಲುಗಡೆ ಸ್ಥಳದಲ್ಲಿದ್ದವು. ಇವುಗಳ ಜೊತೆಗೆ ವಾಹನ ನಿಲುಗಡೆಗೆ ತಿರುವು ಪಡೆಯುವ ಮಿರ್ಜಾ ಕ್ರಾಸ್‌ನಲ್ಲಿಯೂ ಅಧಿಕ ಸಂಖ್ಯೆಯ ಕಾರು ಪಾರ್ಕಿಂಗ್ ಸ್ಥಳದ ನಿರೀಕ್ಷೆಯಲ್ಲಿ ಕಾಯುತ್ತ ನಿಂತಿದ್ದವು.

ಮತ್ತೊಂದು ಕಡೆ ಪ್ರವೇಶ ದ್ವಾರ ಮತ್ತು ಗಿರಿಧಾಮದ ರಸ್ತೆಯಲ್ಲಿಯೂ ಮತ್ತಷ್ಟು ಕಾರುಗಳು ಸಾಲುಗಟ್ಟಿ ನಿಂತಿದ್ದವು. ವಾಹನ ನಿಲುಗಡೆ ಸ್ಥಳದಲ್ಲಿ ಒಮ್ಮೆ 300 ಕಾರು ನಿಲುಗಡೆಗೆ ಅವಕಾಶವಿದೆ. ಇವು ಇಲ್ಲಿಂದ ತೆರವಾದ ನಂತರವೇ ಬೇರೆ ಕಾರುಗಳ ಪ್ರವೇಶ ಸಾಧ್ಯ.

ಆದ್ದರಿಂದ ನಿಲುಗಡೆ ಸ್ಥಳದಲ್ಲಿದ್ದ ಕಾರುಗಳು ಹೊರ ಹೋಗುವವರೆಗೂ ಪೊಲೀಸರು ಪ್ರವೇಶ ದ್ವಾರ ಮತ್ತು ಗಿರಿಧಾಮದ ನಡುರಸ್ತೆಯಲ್ಲಿ ವಾಹನಗಳನ್ನು ತಡೆದಿದ್ದರು. 5.30ಕ್ಕೆ ಗಿರಿಧಾಮ ಪ್ರವೇಶದ್ವಾರಕ್ಕೆ ಬಂದವರು. 7.30ಕ್ಕೆ ಗಿರಿಧಾಮ ತಲುಪುವ ಸ್ಥಿತಿ ಇತ್ತು. ಬಹಳಷ್ಟು ಮಂದಿ ವಾಹನಗಳಿಂದ ಇಳಿದು ಕಾಲ್ನಡಿಗೆ ಮೂಲಕ ಗಿರಿಧಾಮಕ್ಕೆ ತರಳಿದರು. ಬೆಳಗ್ಗೆ 10.30ರವರೆಗೂ ಇದೇ ಸ್ಥಿತಿ ಇತ್ತು.

ನಂದಿಗಿರಿಧಾಮದ ಹಾದಿಯಲ್ಲಿ ಸಾಲುಗಟ್ಟಿರುವ ಕಾರುಗಳು

ವಾಹನ ಸವಾರರ ಪರದಾಟ

ಕ್ರಿಸ್‌ಮಸ್ ರಜೆ ಹಾಗೂ ಹೊಸ ವರ್ಷಾಚರಣೆಗೆಂದು ಪ್ರವಾಸಿ ತಾಣ, ಊರು ಸೇರಿದಂತೆ ಬೇರೆ ಬೇರೆ ಸ್ಥಳಗಳಿಗೆ ನಗರದ ನಿವಾಸಿಗಳು ಹೊರಟ್ಟಿದ್ದು ಬುಧವಾರ ಹಲವೆಡೆ ದಟ್ಟಣೆ ಉಂಟಾಗಿ ವಾಹನ ಸವಾರರು ಪರದಾಡಿದರು. ಮೆಜೆಸ್ಟಿಕ್ ಸೇರಿದಂತೆ ಹಲವು ಸ್ಥಳಗಳಲ್ಲಿ ದಟ್ಟಣೆ ಇತ್ತು.

ತುಮಕೂರು ರಸ್ತೆಯ ಯಶವಂತಪುರ, ಗೊರಗುಂಟೆಪಾಳ್ಯ, ಪೀಣ್ಯ, ಜಾಲಹಳ್ಳಿ, ಎಂಟನೇ ಮೈಲು, ನಾಗಸಂದ್ರದ ಜಂಕ್ಷನ್‌ಗಳಲ್ಲಿ ಬುಧವಾರ ರಾತ್ರಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಹಗಲು ವೇಳೆಯೂ ಇದೇ ರೀತಿಯ ದೃಶ್ಯ ಕಂಡುಬಂದಿತ್ತು. ನೆಲಮಂಗಲದ ಬಳಿ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಹೆಬ್ಬಾಳ ಮೇಲ್ಸೇತುವೆ, ಕೆ.ಆರ್.ಪುರ ಹಾಗೂ ಮೈಸೂರು ರಸ್ತೆಯಲ್ಲೂ ದಟ್ಟಣೆಯಿಂದ ವಾಹನ ಚಾಲಕರು ಪರದಾಡಿದರು. ವಾಹನಗಳು ಮುಂದಕ್ಕೆ ಸಾಗಲು ಹಲವು ನಿಮಿಷಗಳೇ ಬೇಕಾಗಿತ್ತು. ನೈಸ್ ರಸ್ತೆ ಹಾಗೂ ಹೊರವರ್ತುಲ ರಸ್ತೆಗಳಲ್ಲೂ ಭಾರಿ ಸಂಖ್ಯೆಯ ವಾಹನಗಳು ನಗರದಿಂದ ವಿವಿಧ ಜಿಲ್ಲೆಗಳತ್ತ ಸಾಗಿದವು. ರೈಲು ಹಾಗೂ ಬಸ್ ನಿಲ್ದಾಣಗಳಲ್ಲೂ ದಟ್ಟಣೆ ಕಂಡುಬಂತು.

ಯಶವಂತಪುರ, ಕಂಟೋನ್ಮೆಂಟ್, ಬೈಯಪ್ಪನಹಳ್ಳಿ, ಸಂಗೊಳ್ಳಿ ರಾಯಣ್ಣ, ಕೆಂಗೇರಿ ಹಾಗೂ ಚಿಕ್ಕಬಾಣಾವರ ರೈಲು ನಿಲ್ದಾಣಗಳಲ್ಲಿ ಪ್ರಯಾಣಿಕರ ದಟ್ಟಣೆ ಇತ್ತು. ಕೆಂಪೇಗೌಡ ಬಸ್ ನಿಲ್ದಾಣದ ಎರಡೂ ಟರ್ಮಿನಲ್‌ಗಳಲ್ಲೂ ಭಾರಿ ಪ್ರಯಾಣಿಕರಿದ್ದರು.

ಇ–ಖಾತಾ ಪಡೆಯಲು ಐದು ದಾಖಲೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಆಸ್ತಿ ಮಾಲೀಕರು ಇ-ಖಾತಾವನ್ನು ಪಡೆಯಲು ಐದು ದಾಖಲೆಗಳನ್ನು ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ.

ಇ-ಖಾತಾ ವ್ಯವಸ್ಥೆ ಸ್ವಯಂಚಾಲಿತ ಪ್ರಕ್ರಿಯೆಯಾಗಿದ್ದು, ಯಾವುದೇ ದಾಖಲೆಯನ್ನು ಪಡೆಯದೆ ಅಂತಿಮ ಇ-ಖಾತಾ ನೀಡುವ ಪ್ರಕ್ರಿಯೆಯ ಮೇಲೆ ಪಾಲಿಕೆ ಅಧಿಕಾರಿಗಳಿಗೆ ಯಾವುದೇ ರೀತಿಯ ನಿಯಂತ್ರಣ ಅಥವಾ ಅಧಿಕಾರ ಇರುವುದಿಲ್ಲ. ಆದ್ದರಿಂದ, ಮಾಲೀಕರು ನಿಗದಿಪಡಿಸಿರುವ ದಾಖಲೆಗಳನ್ನು ಅಪ್‌ಲೋಡ್ ಮಾಡಿ ಇ-ಖಾತಾ ಪಡೆದುಕೊಳ್ಳಬಹುದು ಎಂದು ಬಿಬಿಎಂಪಿಯ ಕಂದಾಯ ಇಲಾಖೆಯ ಪ್ರಕಟಣೆ ತಿಳಿಸಿದೆ.

ಮಾಲೀಕರ ಆಧಾರ್ ಕಾರ್ಡ್, ಆಸ್ತಿ ತೆರಿಗೆ ಐಡಿ, ಮಾರಾಟ/ ರಿಜಿಸ್ಟರ್ ಡೀಡ್ ಸಂಖ್ಯೆ, ಬೆಸ್ಕಾಂ ಖಾತೆಯ ಸಂಖ್ಯೆ (ಖಾಲಿ ನಿವೇಶನವಿದ್ದರೆ ಅಗತ್ಯವಿಲ್ಲ) ಹಾಗೂ ಆಸ್ತಿ ಫೋಟೊವನ್ನು ಅಪ್‌ಲೋಡ್ (BBMPeAasthi.karnataka.gov.in) ಮಾಡಬೇಕಿದೆ.

ಈ ಎಲ್ಲ ದಾಖಲೆಗಳು ಬಿಬಿಎಂಪಿಯಲ್ಲಿರುವ ದಾಖಲೆಗಳೊಂದಿಗೆ ಹೊಂದಾಣಿಕೆಯಾದರೆ ಕೂಡಲೇ ಅಂತಿಮ ಇ-ಖಾತಾವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಯಾವುದಾದರೂ ದಾಖಲೆಯಲ್ಲಿ ವ್ಯತ್ಯಾಸವಿದ್ದರೆ ಅಥವಾ ಕೊರತೆ ಇದ್ದರೆ ಸಹಾಯಕ ಕಂದಾಯ ಅಧಿಕಾರಿಗೆ ಅರ್ಜಿ ವರ್ಗಾವಣೆಯಾಗಲಿದ್ದು, ಅವರನ್ನು ಭೇಟಿ ಮಾಡಿ ಅಗತ್ಯ ದಾಖಲೆ ಸಲ್ಲಿಸಬೇಕಾಗುತ್ತದೆ ಎಂದು ತಿಳಿಸಲಾಗಿದೆ.

ಯುಟ್ಯೂಬ್‌ನಲ್ಲಿ (https://m.youtube.com/watch?v=JR3BxET46po) ಇ-ಖಾತಾ ಪಡೆಯುವ ಮಾಹಿತಿ ನೀಡಲಾಗಿದೆ. ಅಲ್ಲದೆ, ಇ-ಖಾತಾ ಸಹಾಯವಾಣಿ 94806 83695 ಕರೆ ಮಾಡಿ ಸಲಹೆ ಪಡೆಯಬಹುದು ಎಂದು ಹೇಳಲಾಗಿದೆ.

ಅಂಚೆ ಜೀವವಿಮೆ: ಪ್ರತಿನಿಧಿ ನೇಮಕ 30ಕ್ಕೆ ಸಂದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಜೀವ ವಿಮೆ ಪಾಲಿಸಿಗಳನ್ನು ಮಾರಾಟ ಮಾಡಲು ಪ್ರತಿನಿಧಿಗಳ ನಿಯುಕ್ತಿಗಾಗಿ ಅಂಚೆ ಇಲಾಖೆಯು ಇದೇ 30 ರಂದು ಬೆಳಿಗ್ಗೆ 11ಕ್ಕೆ ಅಭ್ಯರ್ಥಿಗಳ ನೇರ ಸಂದರ್ಶನ ಏರ್ಪಡಿಸಿದೆ.

ಅಭ್ಯರ್ಥಿಗಳು ತಮ್ಮ ಇತ್ತೀಚಿನ ಭಾವಚಿತ್ರಗಳೊಂದಿಗೆ ಸ್ವವಿವರ, ಶೈಕ್ಷಣಿಕ ಪ್ರಮಾಣ ಪತ್ರದ ನಕಲು ಪ್ರತಿಗಳೊಂದಿಗೆ ಮಹಾಲಕ್ಷ್ಮಿಪುರ ಪೊಲೀಸ್ ಠಾಣೆ ಬಳಿ ಇರುವ ಬೆಂಗಳೂರು ಪಶ್ಚಿಮ ಅಂಚೆ ವಿಭಾಗ, ವರಿಷ್ಠ ಅಂಚೆ ಅಧೀಕ್ಷಕರ ಕಾರ್ಯಾಲಯ, ಬೆಂಗಳೂರು ಇಲ್ಲಿ ಸಂದರ್ಶನಕ್ಕೆ ಹಾಜರಾಗಬೇಕು ಎಂದು ಪ್ರಕಟಣೆ ತಿಳಿಸಿದೆ. ನಿರುದ್ಯೋಗಿಗಳು, ಸ್ವಯಂ ಉದ್ಯೋಗಿಗಳು, ಮಾಜಿ ಸೈನಿಕರು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮ ಪಂಚಾಯಿತಿಗಳ ಮಾಜಿ ಸದಸ್ಯರು ಮತ್ತು ಇತರರು ಭಾಗವಹಿಸಬಹುದು. ವಿವರಗಳಿಗೆ 9886854974 ಸಂಖ್ಯೆಗೆ ಸಂಪರ್ಕಿಸುವುದು.

ಪಿತೂರಿಯಿಂದ ತಪ್ಪಿದ ಅಧಿಕಾರ: ಬಿ.ಟಿ. ಲಲಿತಾ ನಾಯಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೀವನದಲ್ಲಿ ಬುದ್ಧ, ಬಸವ, ಗಾಂಧಿ ಹಾಗೂ ಇತರರು ನನಗೆ ಆದರ್ಶ’ ಎಂದು ಸಾಹಿತಿ ಬಿ.ಟಿ.ಲಲಿತಾ ನಾಯಕ್ ತಿಳಿಸಿದರು.

ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ವತಿಯಿಂದ ಆಯೋಜಿಸಿದ್ದ ಕಳತಾವೂರ್ ಮಳಾವ್ -03(ಸಜ್ಜನರ ಸಲ್ಲಾಪ-03) ತಿಂಗಳ ಅತಿಥಿ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಸಾಂಸಾರಿಕ ತೊಂದರೆಯಿಂದ 8ನೇ ತರಗತಿಗೆ ಶಾಲೆ ಬಿಟ್ಟು, ಸಂಸಾರದ ಕೆಲ ಸಂಗತಿಗಳನ್ನೇ ಬರಹ ರೂಪದಲ್ಲಿ ಹೊರತಂದೆ. ನನ್ನ ಬರಹಕ್ಕೆ ತಂದೆಯ ಒತ್ತಾಸೆ ಹಾಗೂ ಪತ್ರಿಕೆಗಳು ಕಾರಣ. ರಾಜಕೀಯ ಕ್ಷೇತ್ರದಲ್ಲಿ ಕೆಲವರ ಪಿತೂರಿಗಳಿಂದ ಅಧಿಕಾರ ಕಳೆದುಕೊಂಡೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಸಾಹಿತ್ಯ ರಚನೆ ಬಗ್ಗೆಯೇ ಹೆಚ್ಚಿನ ತುಡಿತವಿತ್ತು. ಸತ್ಯನಿಷ್ಠೆ, ಸರಳ ಜೀವನ ಸಚಿವೆಯಾಗಿ ಹೆಚ್ಚು ದಿನ ಮುಂದುವರೆಯದಂತೆ ಮಾಡಿದವು. ಆದರೂ ಧೃತಿಗೆಡಲಿಲ್ಲ, ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡೆ’ ಎಂದರು.

ಬಂಜಾರಾ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್ ಗೋವಿಂದಸ್ವಾಮಿ ಮಾತನಾಡಿ, ‘ಬಂಜಾರ ವಿಶ್ವಕೋಶ ರಚನೆ ಸಂಬಂಧ ಸಾಹಿತಿ ಬರಗೂರು ರಾಮಚಂದ್ರಪ್ಪ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಪ್ರಥಮ ಸಾಹಿತಿ ಹಾಗೂ ಕಲಾವಿದರ ಬಗ್ಗೆ ಸಾಕ್ಷ್ಯಚಿತ್ರ ನಿರ್ಮಾಣವಾಗುತ್ತಿವೆ’ ಎಂದರು.

ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಮಾತನಾಡಿ, ‘ಬಿ. ಟಿ. ಲಲಿತಾ ನಾಯಕ್ ಅವರು ಸಚಿವರಾಗಿದ್ದಾಗ ದೊಡ್ಡ ಸಂಚು ನಡೆದು ಅಧಿಕಾರ ಕಳೆದುಕೊಳ್ಳಬೇಕಾಯಿತು’ ಎಂದು ಹೇಳಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಶಿಕ್ಷಣ ತಜ್ಞ ಪ್ರೊ. ಪಾಂಡುನಾಯಕ್, ಅಕಾಡೆಮಿಯ ಸದಸ್ಯ ಸಂಚಾಲಕ ಉತ್ತಮ್ ರಾಥೋಡ್, ಕಾರ್ಮಿಕ ಮುಖಂಡರಾದ ಗವಿಕುಮಾರ್, ಸಾಹಿತಿ ಬಾಲು ನಾಯಕ್ ಇದ್ದರು.

ಬೆಟ್ಟದ ತುದಿಯ ತೀರ್ಥ ಕಂಬದ ಬಳಿ ಭಕ್ತರೊಂದಿಗೆ ಭಜನೆ

ಶಿವಗಂಗೆ ಬೆಟ್ಟ ಏರಿದ ನಿರ್ಮಲಾನಂದನಾಥ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಆದಿಚುಂಚನಗಿರಿಯ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಬುಧವಾರ ಶಿವಗಂಗೆ ಬೆಟ್ಟ ಏರಿದರು. ಬೆಟ್ಟದ ಮೇಲಿಂದ ಪ್ರಕೃತಿ ಸೌಂದರ್ಯವನ್ನು ಸವಿದು, ಬೆಟ್ಟದ ತುತ್ತ ತುದಿಯ ಮೇಲೆ ಭಕ್ತರೊಂದಿಗೆ ಭಜನೆ ಮಾಡಿದರು.

‘ಶ್ರೀ ಆದಿಚುಂಚನಗಿರಿ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪ್ರತಿಷ್ಠಾನ’ದ ವತಿಯಿಂದ ಬುಧವಾರ ದಿವ್ಯ ದರ್ಶನ ಯಾತ್ರೆ ಹಾಗೂ ಗಿರಿ ನಡಿಗೆ ಕಾರ್ಯಕ್ರಮವನ್ನು ನಿರ್ಮಲಾನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಶಿವಗಂಗೆಯ ಹಿಪ್ಪೆವನದಿಂದ (ಪ್ರವಾಸಿ ಮಂದಿರದ ಪಕ್ಕ) ಬೆಳಗ್ಗೆ 7 ಗಂಟೆಗೆ ‘ಗಿರಿ ನಡಿಗೆ’ ಆರಂಭವಾಯಿತು. ಬೆಟ್ಟದ ಹೆಬ್ಬಾಗಿಲಿನಿಂದ, ಸುಮಾರು 4 ಸಾವಿರ ಅಡಿಗಳ ಎತ್ತರದ ಬೆಟ್ಟದ ತುತ್ತತುದಿಯವರೆಗೆ ಸ್ವಾಮೀಜಿ ಜೊತೆ ಹಲವಾರು ಮಠಾಧೀಶರು, ಬಿಜಿಎಸ್ ಸಮೂಹ ಶಿಕ್ಷಣ ಸಂಸ್ಥೆಯ 1,500ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು, ನೆಲಮಂಗಲ ತಾಲೂಕಿನ ಸಮುದಾಯದ ಮುಖಂಡರು, ಭಕ್ತರು ಪಾಲುದಾರರಾದರು.

ಬೆಟ್ಟದ ತುದಿಯ ತೀರ್ಥ ಕಂಬದ ಬಳಿ ಭಜನೆ ನಡೆಸಿದರು. ಸ್ವಾಮೀಜಿ ಹಾರ್ಮೋನಿಯಂ ನುಡಿಸಿದರು. ಭಕ್ತಿ ಗೀತೆಗಳನ್ನು ಹಾಡಿದರು.

ಒಳಕಲ್ಲು ತೀರ್ಥ, ನಾಟ್ಯರಾಣಿ ಶಾಂತಲಾ ಐಕ್ಯವಾದ ಸ್ಥಳ, ಶ್ರೀ ಹೊನ್ನಾದೇವಿ ಸಮೇತ ಗಂಗಾಧರೇಶ್ವರ ಸ್ವಾಮಿ ದೇವಾಲಯ, ನಾಡಪ್ರಭು ಕೆಂಪೇಗೌಡರ ಪುತ್ಥಳಿ, ಹಜಾರ ಇನ್ನಿತರ ಸ್ಥಳಗಳನ್ನು ವೀಕ್ಷಿಸಿದರು.

‘ಭಕ್ತರ ಜೊತೆ ಆಧ್ಯಾತ್ಮಿಕ ಪಾದಯಾತ್ರೆ ಮಾಡಬೇಕೆಂಬ ಬಯಕೆಯಿತ್ತು. ಅದು ಇಂದು ಈಡೇರಿದೆ. ಶಿವಗಂಗೆಯಲ್ಲಿ ಶಾಖಾ ಮಠ ಆರಂಭಿಸಬೇಕು ಎನ್ನುವುದು ಬಹುದಿನಗಳ ಬಯಕೆ ಆಗಿದೆ’ ಎಂದು ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಚಿಕ್ಕಬಳ್ಳಾಪುರ ಶಾಖಾ ಮಠದ ಮಂಗಳನಾಥ ಸ್ವಾಮೀಜಿ, ಚಿತ್ರದುರ್ಗದ ಮಾದಾರ ಚನ್ನಯ್ಯ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ರಮಣಾನಂದ ಸ್ವಾಮೀಜಿ ಉಪಸ್ಥಿತರಿದ್ದರು.

ನಿರ್ಮಲಾನಂದನಾಥ ಸ್ವಾಮೀಜಿ ಅವರು ಭಕ್ತರ ಜೊತೆ ಶಿವಗಂಗೆ ಬೆಟ್ಟ ಇಳಿದರು

eco crystal® WATER TREATMENT AN ISO 9001:2015
Pollet Water Group

Introducing
European technology leader in domestic water treatment
EURAQUA
Pollet Water Group

Are you ready to grow your business and make a difference in the personal lives of people? Join hands with a trusted domestic water treatment company to convert your water to safe water in your homes.

STOP WORRYING ABOUT HAIR FALL, SKIN ISSUES AND DAMAGED CLOTHES CAUSED BY HARD WATER!!!

DEALERS WANTED

Why Choose Us?
- Innovative Solutions: Advanced water treatment systems designed for every household.
  1. Multi port valve for sustaining high inlet water pressure.
  2. High quality of Resin Life (10yrs).
  3. High Quality Softening difference of converting Hard Water to Soft Water.
- High Profit Potential: Attractive margins and exclusive dealership opportunities.
- Full Dealer Support: Training, marketing materials, and technical assistance.

Partner with Us for Success!
Become a part of our mission to deliver safe and healthy water to every home.

Office Address: Whitefield, Bangalore, Karnataka
Call: +91 94483 81691 E-mail: murali@eccrystal.com
Act Now! Limited Territories Available!

ಬಿಜೆಪಿ ಮಹಿಳಾ ಮೋರ್ಚಾ ತಾಯಂದಿರು ರವಿಗೆ ಬುದ್ಧಿ ಹೇಳಲಿ: ಸಚಿವ ಶಿವರಾಜ ತಂಗಡಗಿ

‘ಸುಳ್ಳು ಹೇಳೋದು ಬಿಡಿ; ಕ್ಷಮೆ ಕೇಳಿ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವಾಚ್ಯ ಪದ ಬಳಕೆ ಮಾಡಿದ್ದು ಇಡೀ ಸದನವೇ ಕೇಳಿದೆ. ಹಟ ಮಾಡುವುದು, ಸುಳ್ಳು ಹೇಳುವುದನ್ನು ಬಿಟ್ಟು ಅವರು ಕ್ಷಮೆ ಕೇಳಿ ಮುಂದುವರಿಯಲಿ’ ಎಂದು ಸಚಿವ ಶಿವರಾಜ ತಂಗಡಗಿ ಹೇಳಿದರು.

ಶಿವರಾಜ ತಂಗಡಗಿ

ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಬಿಜೆಪಿ ನಾಯಕರು ರವಿ ಅವರಿಗೆ ಬುದ್ಧಿ ಹೇಳದೆ ಮೆರವಣಿಗೆ ಮಾಡುತ್ತಿದ್ದಾರೆ. ಆಡಿದ ಮಾತಿಗೆ ಕ್ಷಮೆ ಕೇಳಬೇಕೆ ವಿನಾ ಪಾದಯಾತ್ರೆ ಮಾಡುತ್ತೇನೆ, ಆಣೆ ಮಾಡುತ್ತೇನೆ ಎನ್ನುವುದು ಒಳ್ಳೆಯದಲ್ಲ’ ಎಂದರು.

‘ಬಿಜೆಪಿಯವರಿಗೆ ಸುಳ್ಳು ಹೇಳುವುದನ್ನು ಕಲಿಸುವ ತರಗತಿಯಿದ್ದು, ಒಂದು ಸಂಸ್ಥೆಯೂ ಇದೆ. ಅಲ್ಲಿ ಕಲಿತು ಬಂದ ಗಿರಾಕಿಯೇ ಸಿ.ಟಿ. ರವಿ. ಬಿಜೆಪಿ ಮಹಿಳಾ ಮೋರ್ಚಾದ ತಾಯಂದಿಯರಾದರೂ ಅವರನ್ನು ಕರೆದು ಬುದ್ಧಿ ಹೇಳಬೇಕು’ ಎಂದು ಹೇಳಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ‘ನಕಲಿ ಎನ್‌ಕೌಂಟರ್’ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಎನ್‌ಕೌಂಟರ್‌ಗೆ ಇದು ಗುಜರಾತ್ ಅಲ್ಲ, ಅದೇನಿದ್ದರೂ ಬಿಜೆಪಿ ಸಂಸ್ಕೃತಿ. ಇಲ್ಲಿ ಕಾಂಗ್ರೆಸ್ ಸರ್ಕಾರವಿದೆ. ಪೊಲೀಸರು ತಮ್ಮ ಕರ್ತವ್ಯ ನಿಭಾಯಿಸಿದ್ದಾರೆ’ ಎಂದು ಪ್ರತಿಕ್ರಿಯಿಸಿದರು.

ಹರಕೆ ಹೊತ್ತಿದ್ದೇನೆ, ತನಿಖೆ ಮುಗಿದ ಮೇಲೆ ತೀರಿಸ್ತೇನೆ – ಸಿ.ಟಿ.ರವಿ

ಚಿಕ್ಕಮಗಳೂರು: ‘ಕಾನೂನಾತ್ಮಕ ಹೋರಾಟ ಮುಗಿದ ಬಳಿಕ ನಾನು ಧರ್ಮಸ್ಥಳಕ್ಕೆ ಹೋಗುತ್ತೇನೆ. ಸವದತ್ತಿ ಯಲ್ಲಮ್ಮನ ದೇವಸ್ಥಾನಕ್ಕೂ ಹೋಗಿ ಹರಕೆ ತೀರಿಸುತ್ತೇನೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಸಿ.ಟಿ.ರವಿ

‘ಆಣೆ ಮಾಡಲು ಲಕ್ಷ್ಮೀ ಹೆಬ್ಬಾಳಕರ ಅವರು ಧರ್ಮಸ್ಥಳಕ್ಕೆ ಕರೆದಿದ್ದಾರೆ. ಪ್ರಕರಣ ಈಗ ತನಿಖಾ ಹಂತದಲ್ಲಿ ಇದೆ. ಎಲ್ಲವೂ ಮುಗಿದ ಬಳಿಕ ಹೋಗುತ್ತೇನೆ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಬುಧವಾರ ಪ್ರತಿಕ್ರಿಯಿಸಿದರು.

‘ನನ್ನನ್ನು ಬಂಧಿಸಿ ಇಡೀ ರಾತ್ರಿ ಸುತ್ತಾಡಿಸಿದಾಗ ವಾಹನ ಸವದತ್ತಿ ಯಲ್ಲಮ್ಮನ ದೇವಾಲಯದ ಎದುರೇ ಹಾದು ಹೋಯಿತು. ಆಗ ಹರಕೆ ಕಟ್ಟಿಕೊಂಡಿದ್ದೆ. ದೇವಿಯ ಬಳಿ ಏನು ಬೇಡಿಕೊಂಡಿದ್ದೇನೆ ಎಂಬುದನ್ನು ಹರಕೆ ತೀರಿಸುವ ದಿನವೇ ಹೇಳುತ್ತೇನೆ’ ಎಂದರು.

‘ಖಾನಾಪುರ ಠಾಣೆ ಸಬ್ ಇನ್‌ಸ್ಪೆಕ್ಟರ್ ಅಮಾನತು ಬಗ್ಗೆ ಗೊತ್ತಿಲ್ಲ. ಪಿಎಸ್‌ಐ ಅಮಾನತು ಕ್ರಮದಿಂದ ಪ್ರಯೋಜನ ಇಲ್ಲ. ಅನುಮತಿ ಇಲ್ಲದಿದ್ದರೂ ನಾಲ್ಕು ಜಿಲ್ಲೆ ಸುತ್ತಾಡಿಸಿದ್ದಾರೆ. ಎನ್‌ಕೌಂಟರ್ ಅಥವಾ ಹಲ್ಲೆ ಮಾಡುವ ಉದ್ದೇಶದಿಂದ ಕರೆದುಕೊಂಡು ಹೋಗಿದ್ದಾರೆ. ಈ ಬಗ್ಗೆ ತನಿಖೆ ಆಗಬೇಕು. ಅಲ್ಲಿನ ಎಸ್ಪಿ, ಪೊಲೀಸ್ ಕಮಿಷನರ್ ಮತ್ತು ಆಗಾಗ ನಿರ್ದೇಶನ ನೀಡುತ್ತಿದ್ದವರ ವಿರುದ್ಧ ಕ್ರಮ ಆಗಬೇಕು’ ಎಂದು ಒತ್ತಾಯಿಸಿದರು.

‘ಲಕ್ಷ್ಮೀ ಹೆಬ್ಬಾಳಕರ ಅವರ ಆಪ್ತ ಸಹಾಯಕ ಮತ್ತು ಸದ್ದಾಂ ಎಂಬ ವ್ಯಕ್ತಿ ನನ್ನ ಮೇಲೆ ದಾಳಿ ಮಾಡಿದರು. ಅಲ್ಲಿ ಅಧಿಕಾರೇತರ ಆಪ್ತ ಸಹಾಯಕರನ್ನು ನೇಮಿಸಿಕೊಂಡಿದ್ದಾರೆ ಎಂಬುದು ನನಗೆ ಗೊತ್ತಿರಲಿಲ್ಲ’ ಎಂದು ಹೇಳಿದರು.

‘ನೌಕರ ರುದ್ರೇಶ್ ಆತ್ಮಹತ್ಯೆ ಪ್ರಕರಣದಲ್ಲಿ ಲಕ್ಷ್ಮೀ ಹೆಬ್ಬಾಳಕರ ಅವರ ರಾಜೀನಾಮೆಯನ್ನು ಮುಖ್ಯಮಂತ್ರಿ ಪಡೆಯಬೇಕಿತ್ತು. ಈಶ್ವರಪ್ಪ ವಿಷಯದಲ್ಲಿ ಸಿದ್ದರಾಮಯ್ಯ ಅವರೂ ರಾಜೀನಾಮೆಗೆ ಆಗ್ರಹಿಸಿದ್ದರು. ಆದರೆ, ಲಕ್ಷ್ಮೀ ಹೆಬ್ಬಾಳಕರ ಅವರ ವಿಷಯದಲ್ಲಿ ಮೌನ ವಹಿಸಿದರು. ಬೇರೊಬ್ಬರಿಗೆ ಮೋಹ ಇದೆ ಎಂದು ಭಾವಿಸಿದ್ದೆ. ಸಿದ್ದರಾಮಯ್ಯ ಅವರಿಗೆ ಯಾವಾಗ ಮೋಹ ಹುಟ್ಟಿಕೊಂಡಿತೊ ಗೊತ್ತಿಲ್ಲ’ ಎಂದರು.

ಇನ್‌ಸ್ಪೆಕ್ಟರ್ ಅಮಾನತು

ಖಾನಾಪುರ (ಬೆಳಗಾವಿ ಜಿಲ್ಲೆ): ಸಿ.ಟಿ.ರವಿ ಅವರನ್ನು ವಿಚಾರಣೆಗಾಗಿ ಖಾನಾಪುರ ಠಾಣೆಗೆ ಕರೆತಂದಾಗ (ಡಿ.19ರಂದು) ಬಿಜೆಪಿ ಮುಖಂಡರಿಗೆ ಠಾಣೆಯೊಳಗೆ ಬರಲು ಅನುಮತಿ ನೀಡಿ ಕರ್ತವ್ಯಲೋಪ ಎಸಗಿದ ಆರೋಪದಡಿ, ಇನ್‌ಸ್ಪೆಕ್ಟರ್ ಮಂಜುನಾಥ ನಾಯ್ಕ ಅವರನ್ನು ಅಮಾನತುಗೊಳಿಸಿ ಉತ್ತರವಲಯ ಐಜಿಪಿ ವಿಕಾಶಕುಮಾರ ವಿಕಾಶ ಆದೇಶ ಹೊರಡಿಸಿದ್ದಾರೆ.

ಮಂಜುನಾಥ ನಾಯ್ಕ

ಅಮಾನತು ಆದೇಶವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿ, ತಾಲ್ಲೂಕಿನ ವಿವಿಧ ಸಂಘಟನೆಯವರು ಶುಕ್ರವಾರ (ಡಿ.27) ಖಾನಾಪುರ ಬಂದ್‌ಗೆ ಕರೆ ಕೊಟ್ಟಿದ್ದಾರೆ.

‘ಮಂಜುನಾಥ ನಾಯ್ಕ ವಿವಿಧ ಸಮುದಾಯದವರು ಮತ್ತು ಸಂಘ-ಸಂಸ್ಥೆಗಳ ಜತೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಇಂಥ ದಕ್ಷ ಅಧಿಕಾರಿಯನ್ನು ಅಮಾನತು ಮಾಡಬಾರದು’ ಎಂದು ದಲಿತ ಸಂಘರ್ಷ ಸಮಿತಿ (ಸಂಯೋಜಕ) ಸಂಘಟನೆಯ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ರಾಜಶೇಖರ ಹಿಂಡಲಗಿ ಅವರು ಆಗ್ರಹಿಸಿದ್ದಾರೆ.

‘ಪ್ರಕರಣದ ಸಂಬಂಧ ಇಲಾಖೆ ಮಟ್ಟದಲ್ಲೇ ನ್ಯಾಯ ಸಿಗುವ ವಿಶ್ವಾಸವಿದೆ. ಯಾರೂ ಬಂದ್‌ಗೆ ಕರೆ ಕೊಡಬಾರದು ಅಥವಾ ಪ್ರತಿಭಟಿಸಬಾರದು’ ಎಂದು ಮಂಜುನಾಥ ನಾಯ್ಕ ಅವರು ವಿಡಿಯೊ ಹೇಳಿಕೆ ಮೂಲಕ ಮನವಿ ಮಾಡಿದ್ದಾರೆ.

‘ರಾಜಿ ಆದರೆ ತನಿಖೆ ನಿಲ್ಲಬಹುದು’

ಹುಬ್ಬಳ್ಳಿ: ‘ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹಾಗೂ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಇಬ್ಬರೂ ರಾಜಿ ಮಾಡಿಕೊಳ್ಳುವ ವಾತಾವರಣ ಮೂಡಿದರೆ, ಇಬ್ಬರನ್ನು ಕರೆಸಿ ಪ್ರಕರಣ ಅಂತ್ಯಗೊಳಿಸಲು ಯತ್ನಿಸಲಾಗುವುದು’ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಹೊರಟ್ಟಿ

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಹೇಗಾದರೂ ಪ್ರಕರಣ ಇಲ್ಲಿಗೆ ಅಂತ್ಯಗೊಳಿಸಬೇಕು ಎಂದುಕೊಂಡಿದ್ದೇನೆ. ಹೊಂದಾಣಿಕೆಗೆ ಒಪ್ಪಿಕೊಂಡರೆ ಸಿಐಡಿ ತನಿಖೆ ಅಲ್ಲಿಗೇ ನಿಲ್ಲಬಹುದು’ ಎಂದು ಅಭಿಪ್ರಾಯಪಟ್ಟರು.

‘ಸದನದಲ್ಲೇ ವಿಷಯ ಚರ್ಚೆಗೆ ಅವಕಾಶ ನೀಡಿದ್ದರೆ ಸದನ ರಣರಂಗವಾಗುವ ಸಾಧ್ಯತೆ ಇತ್ತು. ಮನೆಯಲ್ಲಿ ಮಕ್ಕಳು ಜಗಳವಾಡಿದರೆ ಹಿರಿಯರು ಸಮಾಧಾನಪಡಿಸಬೇಕು. ತುಪ್ಪ ಸುರಿಯುವ ಕೆಲಸ ಮಾಡಬಾರದು’ ಎಂದರು.

₹448 ಕೋಟಿ ಬಳಕೆಗೆ ಅಡ್ಡಿ

ಒಂದನೇ ಪುಟದಿಂದ...

ಸ್ವಂತ ವರಮಾನವಿಲ್ಲದ ಗ್ರಾಮ ಪಂಚಾಯಿತಿಗಳಿಗೆ ಪ್ರಸಕ್ತ ಆರ್ಥಿಕ ವರ್ಷದ ಮೂರು ತ್ರೈಮಾಸಿಕಗಳಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲು ಸಾಧ್ಯವಾಗಿರಲಿಲ್ಲ. ಆಯೋಗದಿಂದ ಮೊದಲ ಕಂತು ಬಿಡುಗಡೆ ಆಗುತ್ತಿದ್ದಂತೆಯೇ ಬಹುತೇಕ ಗ್ರಾಮ ಪಂಚಾಯಿತಿಗಳು ಕ್ರಿಯಾಯೋಜನೆ ಸಿದ್ಧಪಡಿಸಿಕೊಂಡಿದ್ದವು. ಅನುದಾನ ಸೆಳೆಯಲು ಅವಕಾಶ ದೊರಕದೇ ಇರುವುದರಿಂದ ಕ್ರಿಯಾಯೋಜನೆಳು ಕಡತದಲ್ಲೇ ಉಳಿದಿವೆ.

ಇನ್ನೂ ಮೂರು ಕಂತು ಬಾಕಿ: ಕೇಂದ್ರ ಹಣಕಾಸು ಆಯೋಗವು ನಾಲ್ಕು ಕಂತುಗಳಲ್ಲಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡುತ್ತದೆ.

ದೇಶದ ಕೆಲವು ರಾಜ್ಯಗಳು ಈ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಪಡೆದುಕೊಂಡಿವೆ. ಹಲವು ರಾಜ್ಯಗಳು ಎರಡು ಮತ್ತು ಮೂರನೇ ಕಂತಿನ ಅನುದಾನ ಪಡೆದಿವೆ. ಆದರೆ, ರಾಜ್ಯಕ್ಕೆ ಇನ್ನೂ ಮೂರು ಕಂತುಗಳ ಅನುದಾನ ಬಿಡುಗಡೆ ಬಾಕಿ ಇದೆ.

ಪಂಚತಂತ್ರ 2.0 ತಂತ್ರಾಂಶದ ಮೂಲಕ ಕೇಂದ್ರ ಸರ್ಕಾರದ ಇ-ಗ್ರಾಮ ಸ್ವರಾಜ್ ಪೋರ್ಟಲ್‌ಗೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಗಳನ್ನು (ಜಿಪಿಡಿಪಿ) ಅಪ್‌ಲೋಡ್ ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪ್ರಯತ್ನಿಸಿತ್ತು. ಆದರೆ, ಅರ್ಧ ವರ್ಷ ಕಳೆದರೂ ಪ್ರಯತ್ನ ಫಲ ಕೊಡದ ಕಾರಣ ಹಿಂದಿನಂತೆ ನೇರವಾಗಿ ಇ-ಗ್ರಾಮ ಸ್ವರಾಜ್ ಪೋರ್ಟಲ್‌ಗೆ ನೇರವಾಗಿ ಜಿಪಿಡಿಪಿ ಅಪ್‌ಲೋಡ್ ಮಾಡಲಾಗಿದೆ. ಆ ಬಳಿಕ ಕೇಂದ್ರ ಗ್ರಾಮೀಣಾಭಿವೃದ್ಧಿ ಇಲಾಖೆ ಮೊದಲ ಕಂತಿನ ಅನುದಾನ ಬಿಡುಗಡೆ ಮಾಡಿತ್ತು.

ಸುದ್ದಿ 2 ನಿಮಿಷ

ಶಿವರಾಜಕುಮಾರ್‌ಗೆ ಚಿಕಿತ್ಸೆ ಯಶಸ್ವಿ

ಬೆಂಗಳೂರು: ಮೂತ್ರಕೋಶ (ಬ್ಲಾಡರ್) ಕ್ಯಾನ್ಸರ್‌ನಿಂದ ಬಳಲುತ್ತಿರುವ ನಟ ಶಿವರಾಜ್‌ಕುಮಾರ್ ಅವರ ಶಸ್ತ್ರಚಿಕಿತ್ಸೆ ಯಶಸ್ವಿ ಆಗಿದ್ದು, ಅವರು ಉತ್ತಮವಾಗಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಅಮೆರಿಕದ ವೈದ್ಯ ಡಾ. ಮುರುಗೇಶ ಮನೋಹರನ್ ಹೇಳಿದ್ದಾರೆ.

‘ಕ್ಯಾನ್ಸರ್ ಆಗಿದ್ದ ಮೂತ್ರಕೋಶ ತೆಗೆದಿದ್ದೇವೆ. ಶಸ್ತ್ರಚಿಕಿತ್ಸೆ ಬಳಿಕ ಕೃತಕ ಮೂತ್ರಕೋಶವನ್ನು ಅಳವಡಿಸಲಾಗಿದ್ದು ಶಿವರಾಜ್‌ಕುಮಾರ್ ಆರೋಗ್ಯ ಸ್ಥಿರವಾಗಿದೆ. ಶಸ್ತ್ರಚಿಕಿತ್ಸೆಗೆ ಮೊದಲು ಮತ್ತು ನಂತರ ಅವರು ಸ್ಪಂದಿಸುತ್ತಿದ್ದಾರೆ. ಶಿವರಾಜ್‌ಕುಮಾರ್ ಮಾನಸಿಕ ಹಾಗೂ ದೈಹಿಕವಾಗಿ ಗಟ್ಟಿಯಾಗಿದ್ದು, ಬಹಳ ಬೇಗ ಚೇತರಿಸಿಕೊಳ್ಳಲಿದ್ದಾರೆ’ ಎಂದು ಮನೋಹರನ್ ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

ಅಮೆರಿಕದ ಮಿಯಾಮಿ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನಲ್ಲಿ ಶಿವಣ್ಣ ಚಿಕಿತ್ಸೆ ಪಡೆಯುತ್ತಿದ್ದು, ಅವರ ಸಂಬಂಧಿ, ಸಚಿವ ಮಧು ಬಂಗಾರಪ್ಪ ಹಾಗೂ ಪತ್ನಿ ಗೀತಾ ಶಿವರಾಜ್‌ಕುಮಾರ್ ಅವರ ಜೊತೆಗಿದ್ದಾರೆ.

‘ನಟನಿಗೆ ಅಭಿಮಾನಿಗಳು ದೇವರು. ಅದೇ ರೀತಿ ನಮಗೆ ವೈದ್ಯರು ದೇವರು. ಡಾ. ಮುರುಗೇಶ ಮನೋಹರನ್ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನೆರವೇರಿಸಿದ್ದಾರೆ. ಸದ್ಯ ಶಿವಣ್ಣ ಅವರನ್ನು ಐಸಿಯುಗೆ ವರ್ಗಾವಣೆ ಮಾಡಲಾಗಿದೆ. ಎಲ್ಲರ ಹಾರೈಕೆ, ಪೂಜೆ, ಪ್ರಾರ್ಥನೆಗಳಿಂದಾಗಿ ಶಿವಣ್ಣ ಅವರ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ಪೂರ್ಣಗೊಂಡಿದೆ. ಇನ್ನೊಂದು 3–4 ದಿನಗಳೊಳಗೆ ಶಿವಣ್ಣ ಕೂಡ ಅಭಿಮಾನಿಗಳಿಗೆ ವಿಡಿಯೊ ಸಂದೇಶ ನೀಡಲಿದ್ದಾರೆ’ ಎಂದು ಗೀತಾ ಶಿವರಾಜ್‌ಕುಮಾರ್ ಹೇಳಿದ್ದಾರೆ.

ಕುಂಭಮೇಳ: ವಿಶೇಷ ರೈಲು

ಬೆಂಗಳೂರು: ಕುಂಭಮೇಳದಲ್ಲಿ ಭಾಗವಹಿಸುವ ಯಾತ್ರಿಗಳಿಗೆ ಅನುಕೂಲ ಮಾಡಿಕೊಡಲು, ಪ್ರಯಾಣಿಕರ ದಟ್ಟಣೆಯನ್ನು ನಿಯಂತ್ರಿಸಲು ನೈರುತ್ಯ ರೈಲ್ವೆಯು ಏಕಮಾರ್ಗ ವಿಶೇಷ ರೈಲು ಓಡಿಸಲಿದೆ.

ಡಿ.26ರಂದು ರಾತ್ರಿ 11ಕ್ಕೆ ಬೆಂಗಳೂರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣದಿಂದ ವಿಶೇಷ ರೈಲು ಹೊರಡಲಿದೆ. ಡಿ.28ರಂದು ಮಧ್ಯಾಹ್ನ 1.30ಕ್ಕೆ ಪ್ರಯಾಗ್‌ರಾಜ್ ತಲುಪಲಿದೆ. ಈ ರೈಲು 15 ಸ್ಲೀಪರ್ ಕ್ಲಾಸ್ ಬೋಗಿಗಳು, 3 ಸಾಮಾನ್ಯ ದ್ವಿತೀಯ ದರ್ಜೆ ಬೋಗಿಗಳು ಮತ್ತು 2 ಎಸ್‌ಎಲ್‌ಆರ್/ಡಿ ಸೇರಿ 20 ಬೋಗಿಗಳನ್ನು ಒಳಗೊಂಡಿರುತ್ತದೆ.

ರೈಲಿನ ಪ್ರತಿ ನಿಲ್ದಾಣದ ಆಗಮನ–ನಿರ್ಗಮನ ಸಮಯ ತಿಳಿಯಲು ಭಾರತೀಯ ರೈಲ್ವೆಯ ವೆಬ್ ಸೈಟ್ www.enquiry.indianrail.gov.in ಸಂಪರ್ಕಿಸಬಹುದು. 139ಕ್ಕೆ ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾಂಗ್ರೆಸ್ ಗೂಂಡಾಗಳ ಕೃತ್ಯ ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಜನಪ್ರತಿನಿಧಿಗಳಿಗೆ ರಕ್ಷಣೆ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಕಾನೂನು ಸುವ್ಯವಸ್ಥೆಯ ಭಯವೇ ಇಲ್ಲದ ಗೂಂಡಾಗಳು ಬಿಜೆಪಿ ಶಾಸಕರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಬೆಳಗಾವಿಯ ಸುವರ್ಣಸೌಧದಲ್ಲಿ ಶಾಸಕ ಸಿ.ಟಿ. ರವಿ ಅವರ ಮೇಲೆ ನಡೆದ ಹಲ್ಲೆಯ ಪ್ರಕರಣವನ್ನು ಲಘುವಾಗಿ ತೆಗೆದುಕೊಂಡಿದ್ದ ಸರ್ಕಾರದ ಧೋರಣೆಯಿಂದ ಕಾಂಗ್ರೆಸ್ ಗೂಂಡಾಗಳು ಪ್ರೇರಣೆ ಪಡೆದಿದ್ದಾರೆ. ಬಿಜೆಪಿ ಶಾಸಕ ಮುನಿರತ್ನ ಅವರ ಮೇಲೆ ಹಲ್ಲೆ ನಡೆಸಿದ ಘಟನೆ ಖಂಡನೀಯ. ಜನರಿಗೆ ರಕ್ಷಣೆ ನೀಡಬೇಕಾದ ಜನಪ್ರತಿನಿಧಿಗಳಿಗೇ ರಕ್ಷಣೆ ಇಲ್ಲವಾಗಿದೆ. ರಾಜ್ಯ ಅರಾಜಕತೆಯತ್ತ ಸಾಗುತ್ತಿದೆ ಎಂದು ದೂರಿದರು.

ಶಾಸಕ ಮುನಿರತ್ನ ಅವರ ಮೇಲೆ ಆಪಾದನೆ ಏನೇ ಇರಲಿ, ಅದಕ್ಕೆ ನ್ಯಾಯದ ಪರಿಧಿಯಲ್ಲಿ ಉತ್ತರ ಸಿಗುತ್ತದೆ. ಮುನಿರತ್ನ ಅವರ ಮೇಲೆ ಹಲ್ಲೆ ನಡೆಸಿರುವ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಿದ್ದರೆ ಬಿಜೆಪಿ ಹೋರಾಟ ಕೈಗೆತ್ತಿಕೊಳ್ಳಲಿದೆ ಎಂದು ಎಚ್ಚರಿಸಿದ್ದಾರೆ.

ಮಿತಿ ಮೀರಿದ ದುರಾಡಳಿತ: ಸಂಸದ ಬಸವರಾಜ ಬೊಮ್ಮಾಯಿ ಈ ಕುರಿತು ಮಾತನಾಡಿ, ಕಾಂಗ್ರೆಸ್‌ನವರ ದುರಾಡಳಿತ ಮಿತಿ ಮೀರಿದೆ. ಕಾನೂನು ಕೈಗೆ ತೆಗೆದುಕೊಳ್ಳಬಾರದು ಎನ್ನುವ ಕನಿಷ್ಠ ಜ್ಞಾನವೂ ಇವರಿಗೆ ಇಲ್ಲ. ಇವರು ನೂರು ವರ್ಷ ಆಚರಣೆ ಮಾಡಿ ಏನು ಪ್ರಯೋಜನ ಎಂದು ಪ್ರಶ್ನಿಸಿದರು.

ಮೊಟ್ಟೆ ಎಸೆತ: ಶಾಸಕ ಮುನಿರತ್ನ ತಲೆಗೆ ಗಾಯ

ಒಂದನೇ ಪುಟದಿಂದ...

ಆ್ಯಸಿಡ್ ಮೊಟ್ಟೆ ಎಸೆತ ಆರೋಪ: ‘ಶಾಸಕರ ಮೇಲೆ ಅಪರಿಚಿತರು ಆ್ಯಸಿಡ್ ತುಂಬಿದ ಮೊಟ್ಟೆ ಎಸೆದಿದ್ದಾರೆ. ಅವರ ತಲೆಗೆ ಗಾಯವಾಗಿದೆ’ ಎಂದು ಬೆಂಬಲಿಗರು ಆರೋಪಿಸಿದ್ದಾರೆ. ಈ ಘಟನೆ ಬಳಿಕ ಮುನಿರತ್ನ ಅವರು ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಗೆ ದಾಖಲಾಗಿದ್ದು, ವಿಶೇಷ ಕೊಠಡಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಘಟನಾ ಸ್ಥಳಕ್ಕೆ ಉತ್ತರ ವಿಭಾಗದ ಡಿಸಿಪಿ ಸೈದುಲ್ಲಾ ಅದಾವತ್ ಅವರು ಭೇಟಿ ನೀಡಿ ಪರಿಶೀಲಿಸಿದರು.

ಬಳಿಕ ಮಾತನಾಡಿದ ಡಿಸಿಪಿ, ‘ಕಾರ್ಯಕ್ರಮ ಆಯೋಜನೆ ಸ್ಥಳದಲ್ಲಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಕಾರ್ಯಕ್ರಮ ಮುಕ್ತಾಯವಾದ ಮೇಲೆ ಶಾಸಕರು 50 ಮೀಟರ್ ದೂರ ನಡೆದು ತೆರಳುತ್ತಿದ್ದರು. ಆಗ ಮೊಟ್ಟೆ ಎಸೆಯಲಾಗಿದೆ’ ಎಂದರು.

ತನಿಖೆ ಚುರುಕು: ಕೃತ್ಯವೆಸಗಿದ ಆರೋಪದಡಿ ಕೃಷ್ಣಮೂರ್ತಿ, ಚಂದ್ರು ಹಾಗೂ ವಿಶ್ವನಾಥ್ ಅವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಮೊಟ್ಟೆ ಎಸೆಯಲು ಕಾರಣ ಹಾಗೂ ಆರೋಪಿತರ ಹಿನ್ನೆಲೆ ಪತ್ತೆ ಮಾಡಲಾಗುತ್ತಿದೆ. ವೈದ್ಯರ ವರದಿ ಬಂದ ಬಳಿಕವೇ ಮೊಟ್ಟೆಯಲ್ಲಿ ಏನು ತುಂಬಲಾಗಿತ್ತು ಎಂಬುದು ಗೊತ್ತಾಗಲಿದೆ ಎಂದು ಪೊಲೀಸರು ಹೇಳಿದರು.

‘ಶಾಸಕರ ಜತೆಗೆ ನನ್ನ ಮೇಲೆಯೂ ಕಿಡಿಗೇಡಿಗಳು ಹಲ್ಲೆ ನಡೆಸಿದರು. ಮೊಟ್ಟೆಯಲ್ಲಿದ್ದ ದ್ರಾವಣ ನನ್ನ ಕಣ್ಣಿನ ಮೇಲೆ ಬಿದ್ದಿತ್ತು. ಇದರಿಂದ ಪ್ರಜ್ಞೆತಪ್ಪಿ ಕೆಳಕ್ಕೆ ಬಿದ್ದೆ. ತಕ್ಷಣವೇ ನನ್ನನ್ನು ಆಸ್ಪತ್ರೆಗೆ ಕರೆತರಲಾಯಿತು’ ಎಂದು ಶಾಸಕರ ಬೆಂಬಲಿಗ ಆನಂದ್ ತಿಳಿಸಿದರು.

ಕಾಂಗ್ರೆಸ್ ಮುಖಂಡರ ಸೂಚನೆಯಂತೆ ಆ ಪಕ್ಷದ ಕಾರ್ಯಕರ್ತರು ಮೊಟ್ಟೆ ಎಸೆದಿದ್ದಾರೆ ಎಂದು ಮುನಿರತ್ನ ಆರೋಪಿಸಿದರು. ಈ ಘಟನೆ ಬಳಿಕ ಕಾಂಗ್ರೆಸ್ ಹಾಗೂ ಬಿಜೆಪಿ ಮುಖಂಡರ ಮಧ್ಯೆ ವಾಕ್ಸಮರ ಬಿರುಸು ಪಡೆದಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹಾಗೂ ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿಗೌಡ ಅವರು ಆಸ್ಪತ್ರೆಗೆ ಭೇಟಿ ನೀಡಿ ಮುನಿರತ್ನ ಅವರ ಆರೋಗ್ಯ ವಿಚಾರಿಸಿದರು.

‘ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಾಸಕರ ಹೇಳಿಕೆ ಪಡೆದು ದೂರು ಸ್ವೀಕರಿಸಲಾಗಿದೆ. ಎಫ್‌ಐಆರ್ ಕೂಡ ದಾಖಲಿಸಿಕೊಳ್ಳಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮೊಟ್ಟೆ ಎಸೆದ ಪ್ರಕರಣ ಖಂಡಿಸಿ ಮುನಿರತ್ನ ಅವರ ಬೆಂಬಲಿಗರು ರಸ್ತೆತಡೆ ನಡೆಸಿದರು

ಕೊಲೆಗೆ ಸಂಚು: ಮುನಿರತ್ನ

‘ನನ್ನನ್ನು ಹತ್ಯೆ ಮಾಡಲು ಸಂಚು ರೂಪಿಸಿರುವುದು ಗೊತ್ತಾಗಿದೆ. ಡಿ.ಕೆ. ಸುರೇಶ್, ಆರ್.ಆರ್. ನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಕುಸುಮಾ, ಅವರ ತಂದೆ ಹನುಮಂತರಾಯಪ್ಪ ಅವರೇ ಇದಕ್ಕೆ ಕಾರಣ’ ಎಂದು ಮುನಿರತ್ನ ದೂರಿದರು.

‘ಡಿ.ಕೆ.ಶಿವಕುಮಾರ್ ನಿರ್ದೇಶನದಂತೆ ನನ್ನ ಮೇಲೆ ಹಲ್ಲೆ ನಡೆಸಲಾಗಿದೆ. ಕುಸುಮಾ ಅವರನ್ನು ಶಾಸಕಿಯಾಗಿ ಮಾಡಲು ಈ ರೀತಿ ದಾಳಿ ನಡೆಸಲಾಗುತ್ತಿದೆ’ ಎಂದು ಅವರು ಆರೋಪಿಸಿದರು.

‘ನಿಮ್ಮ ಕೊಲೆಗೆ ಯತ್ನ ನಡೆಯಲಿದೆ ಎಂಬ ಗುಪ್ತಚರ ವರದಿ ಇದೆ. ಕಾರಿನಲ್ಲಿ ಕೂರಿ ಎಂಬುದಾಗಿ ಪೊಲೀಸರು ಹೇಳಿದ್ದರು. ಅದಾದ ಕೆಲವೇ ಕ್ಷಣದಲ್ಲಿ ನನ್ನ ಮೇಲೆ ಮೊಟ್ಟೆ ಎಸೆಯಲಾಗಿದೆ. ಪೊಲೀಸರು ನನ್ನನ್ನು ಕಾಪಾಡಿದರು’ ಎಂದು ಅವರು ಹೇಳಿದರು.

‘ಮೂರು ತಿಂಗಳ ಹಿಂದೆ ವಕೀಲರ ರೂಪದಲ್ಲಿ ಬಂದ ಅಪರಿಚಿತರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡದಿದ್ದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದರು. ಜಾಲಹಳ್ಳಿ ಬಳಿಯೂ ಹಲ್ಲೆಗೆ ಯತ್ನ ನಡೆದಿತ್ತು. ರಾಷ್ಟ್ರಪತಿ, ಪ್ರಧಾನಿ ಹಾಗೂ ಎನ್‌ಐಎಗೆ ದೂರು ನೀಡಿದ್ದೇನೆ’ ಎಂದರು.

‘ಮುನಿರತ್ನ ತಲೆಕೂದಲು ಸುಟ್ಟಿದೆ’

‘ಮುನಿರತ್ನ ಅವರ ತಲೆಯ ಹಿಂಭಾಗಕ್ಕೆ ಪೆಟ್ಟು ಬಿದ್ದಿದೆ. ರಾಸಾಯನಿಕ ಮಾದರಿಯ ಪದಾರ್ಥದಿಂದ ಅವರಿಗೆ ಹೊಡೆದಿದ್ದಾರೆ. ಇದರಿಂದ ತಲೆ ಸುತ್ತು, ವಾಂತಿ ಬಂದಂತಾಗಿದೆ. ಸದ್ಯ ಅವರು ವಿಶ್ರಾಂತಿ ಪಡೆಯುತ್ತಿದ್ದಾರೆ. ಮೊಟ್ಟೆ ಎಸೆತದಿಂದ ಮುನಿರತ್ನ ಅವರ ತಲೆಕೂದಲು ಸ್ವಲ್ಪ ಸುಟ್ಟಿದೆ’ ಎಂದು ಬಿಜೆಪಿ ಸಂಸದ ಡಾ. ಸಿ.ಎನ್. ಮಂಜುನಾಥ್ ಹೇಳಿದರು.

ಆಸ್ಪತ್ರೆಗೆ ಭೇಟಿ ನೀಡಿ, ಶಾಸಕರ ಆರೋಗ್ಯ ವಿಚಾರಿಸಿದ ಬಳಿಕ ಸುದ್ದಿಗಾರರ ಜತೆಗೆ ಅವರು ಮಾತನಾಡಿದರು.

‘ಕೆಲವು ತಿಂಗಳಿಂದ ನಡೆಯುತ್ತಿರುವ ಘಟನೆಗಳನ್ನು ಗಮನಿಸಿದರೆ ಮುನಿರತ್ನ ಅವರನ್ನು ಗುರಿ ಮಾಡಿದಂತೆ ಕಾಣಿಸುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆರೋಗ್ಯಕರ ರಾಜಕಾರಣ ಇರಬೇಕು. ಈ ರೀತಿಯ ಬೆಳವಣಿಗೆಗಳು ಯಾರಿಗೂ ಶೋಭೆ ತರುವುದಿಲ್ಲ’ ಎಂದು ಮಂಜುನಾಥ್ ಹೇಳಿದರು.

ವಿಚಾರಣೆಗೆ ಅನುಮತಿ ಕೋರಿ ಪತ್ರ

ಬಿಬಿಎಂಪಿ ಗುತ್ತಿಗೆದಾರ ಚಲುವರಾಜು ಬಳಿ ಲಂಚಕ್ಕೆ ಬೇಡಿಕೆ ಇಟ್ಟು ಜೀವ ಬೆದರಿಕೆ ಹಾಕಿದ್ದ ಪ್ರಕರಣದಲ್ಲಿ ಮುನಿರತ್ನ ಅವರ ವಿಚಾರಣೆ ನಡೆಸಲು ಅನುಮತಿ ನೀಡುವಂತೆ ಕೋರಿ ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್ ಅವರಿಗೆ ಸಿಐಡಿ ವಿಶೇಷ ತನಿಖಾ ದಳದ ಪೊಲೀಸರು ಪತ್ರ ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಸ ವಿಲೇವಾರಿ ಗುತ್ತಿಗೆ ನೀಡಲು ಮುನಿರತ್ನ ಅವರು ₹30 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಆರೋಪಿಸಿ ಚಲುವರಾಜು ಅವರು ವೈಯಾಲಿಕಾವಲ್ ಠಾಣೆಗೆ ದೂರು ನೀಡಿದ್ದರು. ನಂತರ, ಪ್ರಕರಣದ ತನಿಖೆಯನ್ನು ಸರ್ಕಾರ ಎಸ್‌ಐಟಿಗೆ ವಹಿಸಿತ್ತು.

ಮುನಿರತ್ನ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿ ತನಿಖೆ ನಡೆಸಬೇಕಿದೆ. ಹೀಗಾಗಿ ಅನುಮತಿಗಾಗಿ ಪತ್ರ ಬರೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ಶಾಸಕರಿಗೆ ಮೊಟ್ಟೆ ಎಸೆದವರು ಯಾರು ಹಾಗೂ ಯಾವ ಪಕ್ಷಕ್ಕೆ ಸೇರಿದವರು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. ಈ ಬಗ್ಗೆ ಪೊಲೀಸರು ತನಿಖೆ ಮಾಡಲಿದ್ದಾರೆ’

ಸಿದ್ದರಾಮಯ್ಯ, ಮುಖ್ಯಮಂತ್ರಿ

(ಶಾಸಕ ಮುನಿರತ್ನ ಅವರಿಗೆ ಮೊಟ್ಟೆ ಎಸೆದ ಪ್ರಕರಣದ ಬಗ್ಗೆ ಬೆಳಗಾವಿಯಲ್ಲಿ ಪ್ರತಿಕ್ರಿಯೆ)

ಮಾರಾಟಕ್ಕಿದೆ ಮಂಡ್ಯ ಜಿಲ್ಲಾ ಕಸಾಪ ಭವನ

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಗಿದ ಬೆನ್ನಲ್ಲೇ, ‘ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಭವನ’ವನ್ನು ಮಾರಾಟ ಮಾಡಲು ಚಿಂತನೆ ನಡೆಸಿದೆ. ಇದು, ಜಿಲ್ಲೆಯಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.

‘ನಗರದ ಬಂದೀಗೌಡ ಬಡಾವಣೆಯಲ್ಲಿರುವ ಪರಿಷತ್ತಿನ ಭವನ ಜನಸಂಪರ್ಕಕ್ಕೆ ಸೂಕ್ತವಾದ ಸ್ಥಳವಾಗಿಲ್ಲ, ಅಲ್ಲಿ ವಿಷಜಂತುಗಳ ಕಾಟ ಹೆಚ್ಚಾಗಿದೆ. ಕಾರ್ಯಕ್ರಮ ನಡೆಸಲು ಸಭಾಂಗಣ ಕಿರಿದಾಗಿದೆ. ಹೀಗೆ ಹಲವಾರು ಕಾರಣಗಳಿಂದ ಪರಿಷತ್ತಿನ ಭವನವನ್ನು ಮಾರಾಟ ಮಾಡಿ, ಅದರಿಂದ ಬಂದ ಹಣದಲ್ಲಿ ಹೊಸ ನಿವೇಶನ ಖರೀದಿಸಿ, ಸುಸಜ್ಜಿತ ಕಟ್ಟಡ ಕಟ್ಟುತ್ತೇವೆ’ ಎಂದು ಪರಿಷತ್ತಿನ ಜಿಲ್ಲಾ ಘಟಕದ ನೂತನ ಅಧ್ಯಕ್ಷ ಎಚ್.ಎಸ್.ಮುದ್ದೇಗೌಡ ತಿಳಿಸಿದ್ದಾರೆ.

‘ಈಗಾಗಲೇ ಸರ್ಕಾರ ಹಾಗೂ ಜಿಲ್ಲಾಡಳಿತದ ಮಟ್ಟದಲ್ಲಿ ಚರ್ಚಿಸಲಾಗಿದೆ. ಸಚಿವರಿಗೂ ಈ ಮಾಹಿತಿ ಇದೆ. ಸಮ್ಮೇಳನದ ನೆನಪಿನಲ್ಲಿ ಕಟ್ಟಲಿರುವ ‘ಕನ್ನಡ ಭವನ’ಕ್ಕೆ ಅಗತ್ಯಬಿದ್ದರೆ, ಆರ್ಥಿಕ ನೆರವು ನೀಡುತ್ತೇವೆ’ ಎಂದು ಮುದ್ದೇಗೌಡ ಹೇಳಿದ್ದಾರೆ. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಸಮ್ಮೇಳನದ ಉಳಿಕೆ ಹಣದಲ್ಲಿ ನಿರ್ಮಾಣ: ‘1994ರಲ್ಲಿ ಮಂಡ್ಯದಲ್ಲಿ ನಡೆದಿದ್ದ 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ₹20 ಲಕ್ಷ ಉಳಿತಾಯ ಮಾಡಿ, ಅದರಲ್ಲಿ ₹6.25 ಲಕ್ಷ ವೆಚ್ಚ ಮಾಡಿ ಭವನ ನಿರ್ಮಿಸಿದ್ದೆವು. ಭವನ ಕಟ್ಟಲು ಮಂಡ್ಯ ನಗರಸಭೆಯು 90X20 ಚ.ಅಡಿಯ ನಿವೇಶನವನ್ನು ಉಚಿತವಾಗಿ ನೀಡಿತ್ತು. ಹೊಸ ಭವನ ಬೇಕೆಂದರೆ 87ನೇ ನುಡಿಜಾತ್ರೆಯಲ್ಲಿ ಉಳಿದ ಹಣದಿಂದ ಕಟ್ಟಲಿ. ಕನ್ನಡಿಗರ ಅಸ್ಮಿತೆಯ ಪರಿಷತ್ತಿನ ಭವನವನ್ನು ಮಾರುವುದಕ್ಕೆ ನನ್ನ ತೀವ್ರ ವಿರೋಧವಿದೆ’ ಎಂದು ಕಸಾಪ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಪ್ರೊ.ಜಿ.ಟಿ. ವೀರಪ್ಪ ಕಿಡಿಕಾರಿದ್ದಾರೆ.

‘ಕನ್ನಡ ಭವನ’ ನಿರ್ಮಾಣ: ‘87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿನಲ್ಲಿ ‘ಕನ್ನಡ ಭವನ’ ನಿರ್ಮಿಸಲಾಗುವುದು. ಈಗಾಗಲೇ ಜಾಗ ಗುರುತಿಸಲು ಜಿಲ್ಲಾಡಳಿತಕ್ಕೆ ಸೂಚಿಸಿದ್ದು, ಶೀಘ್ರದಲ್ಲೇ ಶಂಕುಸ್ಥಾಪನೆ ನೆರವೇರಲಿದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಮಂಗಳವಾರ ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದ್ದರು.

‘ಸಾಹಿತ್ಯ ಪರಿಷತ್ತಿನ ಪ್ರಸ್ತುತ ಭವನವನ್ನು ಯಾವುದೇ ಕಾರಣಕ್ಕೂ ಮಾರಬಾರದು. ಸರ್ಕಾರ ಇದಕ್ಕೆ ಅವಕಾಶ ಕೊಡಬಾರದು’ ಎಂದು ಕನ್ನಡ ಸೇನೆ ಮಂಜುನಾಥ್, ಕದಂಬ ಸೇನೆ ಅಧ್ಯಕ್ಷ ಬೇಕ್ರಿ ರಮೇಶ್ ಅವರು ಒತ್ತಾಯಿಸಿದರು.

ಸಮ್ಮೇಳನಕ್ಕೆ ಪೂರ್ಣ ಹಣ ಖರ್ಚಾಗಿದೆಯೋ? ಉಳಿದಿದೆಯೋ? ಗೊತ್ತಿಲ್ಲ. ಹಣ ಉಳಿಯಲಿ, ಬಿಡಲಿ ‘ಕನ್ನಡ ಭವನ’ ನಿರ್ಮಿಸುವುದು ಖಚಿತ

ಎನ್.ಚಲುವರಾಯಸ್ವಾಮಿ
ಜಿಲ್ಲಾ ಉಸ್ತುವಾರಿ ಸಚಿವ

ಬಂದೀಗೌಡ ಬಡಾವಣೆಯಲ್ಲಿ ಇರುವ ಕಸಾಪ ಭವನ ಮಾರಾಟ ಮಾಡುವುದು ನನ್ನ ಗಮನಕ್ಕೆ ಬಂದಿಲ್ಲ, ಯಾವುದೇ ಸಭೆಯಲ್ಲೂ ಚರ್ಚೆಯಾಗಿಲ್ಲ

ಕುಮಾರ
ಜಿಲ್ಲಾಧಿಕಾರಿ

ಪರಿಷತ್ತಿನ ಎಲ್ಲ ಆಸ್ತಿಗಳು ಕೇಂದ್ರ ಕಸಾಪ ಅಧ್ಯಕ್ಷರ ಹೆಸರಿನಲ್ಲಿ ಇರಬೇಕು. ಮಂಡ್ಯ ಕಸಾಪ ಭವನ ಮಾರಾಟ ಮಾಡುವ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ

ಮಹೇಶ ಜೋಶಿ
ಕಸಾಪ ಅಧ್ಯಕ್ಷ

ವಿಧಾನಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಎಂಎಫ್‌ನ ನಂದಿನಿ ಬ್ರ್ಯಾಂಡ್ ದೋಸೆ ಹಾಗೂ ಇಡ್ಲಿ ಹಿಟ್ಟನ್ನು ಬುಧವಾರ ಬಿಡುಗಡೆ ಮಾಡಿದರು. ಸಚಿವರಾದ ಕೆ. ವೆಂಕಟೇಶ್, ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ್, ವ್ಯವಸ್ಥಾಪಕ ನಿರ್ದೇಶಕ ಕೆ.ಶಿವಸ್ವಾಮಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನೂರರ ನೆನಪು, ‘ಕೈ’ಗೆ ಹುರುಪು

ಒಂದನೇ ಪುಟದಿಂದ...

ಗತ 100 ವಸಂತಗಳನ್ನು ‘ಗಾಂಧಿ ಭಾರತ’ ಹೆಸರಿನಲ್ಲಿ ಮೆಲುಕು ಹಾಕುತ್ತಲೇ, ದೇಶ ಹಾಗೂ ರಾಜ್ಯಗಳು ಎದುರಿಸುತ್ತಿರುವ ಸವಾಲುಗಳ ಕುರಿತು ಚರ್ಚಿಸುವ ಜತೆಗೆ 2025ಕ್ಕೆ ಪಕ್ಷದ ಕಾರ್ಯಸೂಚಿಯನ್ನು ರೂಪಿಸಲು ಕಾಂಗ್ರೆಸ್ ಪಕ್ಷವು ವಿಸ್ತೃತ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯನ್ನು ‘ನವ ಸತ್ಯಾಗ್ರಹ ಬೈಠಕ್’ ಹೆಸರಿನಲ್ಲಿ ನಡೆಸಲಿದೆ.

ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್ ಕುರಿತು ಗೃಹ ಸಚಿವ ಅಮಿತ್ ಶಾ ಅವರು ನೀಡಿರುವ ಹೇಳಿಕೆ, ಸಂವಿಧಾನದ ಮೇಲಿನ ದಾಳಿ, ಪಕ್ಷ ಸಂಘಟನೆ, ಬದಲಾದ ಕಾಲಘಟ್ಟದಲ್ಲಿ ರಾಜಕೀಯ, ಆರ್ಥಿಕ ಪರಿಸ್ಥಿತಿ ಕುರಿತು ಪಕ್ಷ ತೆಗೆದುಕೊಳ್ಳಬೇಕಾದ ನಿಲುವುಗಳ ಚಿಂತನ - ಮಂಥನ, ನಿರ್ಣಯ ಈ ಸಭೆಯ ಉದ್ದೇಶ ಎಂದು ಪಕ್ಷದ ನಾಯಕರು ಹೇಳಿಕೊಂಡಿದ್ದಾರೆ.

ಗಾಂಧೀಜಿಯವರ ನೇತೃತ್ವದಲ್ಲಿ ವೀರಸೌಧದ ಬಳಿ ನಡೆದಿದ್ದ ಸಭೆಯಂತೆಯೇ ಗುರುವಾರ ಅದೇ ಸಮಯಕ್ಕೆ ಅದೇ ಜಾಗದಲ್ಲಿ ಸಿಡಬ್ಲ್ಯುಸಿ ಸಭೆ ನಿಗದಿಯಾಗಿದೆ.

ನೂರು ವರ್ಷಗಳ ನಂತರ ನಡೆಯುತ್ತಿರುವ ಕಾಂಗ್ರೆಸ್ ಪಕ್ಷದ ಅಧಿವೇಶನದಲ್ಲಿ ‘ಗಾಂಧಿ ಪರಿವಾರ’ ಭಾಗಿಯಾಗುತ್ತಿದೆ. ಸಿಡಬ್ಲ್ಯುಸಿಯ 150 ಸದಸ್ಯರು ಸೇರಿ ದೇಶದ ಮೂಲೆಮೂಲೆಗಳಿಂದ ಪಕ್ಷದ 300ಕ್ಕೂ ಹೆಚ್ಚು ನಾಯಕರು ‘ಕುಂದಾ ನಗರಿ’ಯಲ್ಲಿ ಒಟ್ಟುಗೂಡುತ್ತಿದ್ದಾರೆ. ರಾಜ್ಯಸಭೆ ಸದಸ್ಯೆ ಸೋನಿಯಾ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಂಸದೆ ಪ್ರಿಯಾಂಕಾ ಗಾಂಧಿ, ಎಐಸಿಸಿ ನಾಯಕರು, ಕಾಂಗ್ರೆಸ್ ಅಧಿಕಾರದಲ್ಲಿರುವ ರಾಜ್ಯಗಳ ಮುಖ್ಯಮಂತ್ರಿಗಳು, ಶಾಸಕಾಂಗ ಪಕ್ಷಗಳ ನಾಯಕರು, ಎಲ್ಲ ರಾಜ್ಯಗಳ ಪ್ರದೇಶದ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಭಾಗವಹಿಸಲಿದ್ದಾರೆ.

ಅಪಘಾತ ಯೋಧ ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಣಿಪುರದ ಇಂಫಾಲ್ ಜಿಲ್ಲೆಯ ಇಂಫಾಲ್ ಕಣಿವೆಯಲ್ಲಿ ಮಂಗಳವಾರ ಸೇನಾ ವಾಹನ ಉರುಳಿ, ಚಿಕ್ಕೋಡಿ ತಾಲ್ಲೂಕಿನ ಕುಪ್ಪನವಾಡಿ ಗ್ರಾಮದ ಯೋಧ ಧರ್ಮರಾಜ ಸುಭಾಷ ಖೋತ (42) ಮೃತಪಟ್ಟಿದ್ದಾರೆ.

ಧರ್ಮರಾಜ ಸುಭಾಷ ಖೋತ

ಆರು ಯೋಧರು ಪ್ರಯಾಣಿಸುತ್ತಿದ್ದ ವಾಹನ ಭೂಮಿ ಕುಸಿದು ಕಂದಕಕ್ಕೆ ಉರುಳಿತು. ಗಾಯಗೊಂಡಿದ್ದ ಯೋಧರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಧರ್ಮರಾಜ ಮೃತಪಟ್ಟರು ಎಂದು ಮೂಲಗಳು ತಿಳಿಸಿವೆ.

ರಾಜ್ಯ ಅಧ್ಯಕ್ಷ ಸ್ಥಾನ, ಖಜಾಂಚಿ ಹುದ್ದೆಗೆ ಎರಡು ಬಣಗಳ ಹಣಾಹಣಿ

ಸರ್ಕಾರಿ ನೌಕರರ ಸಂಘಕ್ಕೆ ನಾಳೆ ಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮತ್ತು ಖಜಾಂಚಿ ಹುದ್ದೆಗೆ ಇದೇ 27ರಂದು ಮತದಾನ ನಡೆಯಲಿದ್ದು, ಅದೇ ದಿನ ಫಲಿತಾಂಶ ಪ್ರಕಟವಾಗಲಿದೆ.

ಕಬ್ಬನ್ ಉದ್ಯಾನದಲ್ಲಿರುವ ಸಂಘದ ಕಚೇರಿಯ ಆವರಣದಲ್ಲಿ ಇದೇ ಶುಕ್ರವಾರ ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಒಟ್ಟು 5.25 ಲಕ್ಷ ಸರ್ಕಾರಿ ನೌಕರರ ಸದಸ್ಯತ್ವ ಹೊಂದಿರುವ ಸಂಘದ 971 ಪ್ರತಿನಿಧಿಗಳು ಮತ ಚಲಾಯಿಸಲಿದ್ದಾರೆ.

2024–2029ನೇ ಅವಧಿಗಾಗಿ ಸಂಘದ ವಿವಿಧ ಸ್ತರಗಳ ಚುನಾವಣಾ ಪ್ರಕ್ರಿಯೆ ಸೆ. 17ರಿಂದ ಆರಂಭವಾಗಿತ್ತು. ಮೊದಲ ಹಂತದಲ್ಲಿ ಮೂರು ಶೈಕ್ಷಣಿಕ ಜಿಲ್ಲೆ ಒಳಗೊಂಡ 33 ಜಿಲ್ಲೆಗಳು ಹಾಗೂ 191 ತಾಲ್ಲೂಕುಗಳ ನಿರ್ದೇಶಕ ಸ್ಥಾನಗಳಿಗೆ ಚುನಾವಣೆ ನಡೆದು, ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿತ್ತು. ರಾಜ್ಯ ಪರಿಷತ್‌ನ 102 ಸ್ಥಾನಗಳಿಗೂ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿತ್ತು.

ಡಿ. 6ರಿಂದ ಈ ಎರಡೂ ಸ್ಥಾನಗಳಿಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿತ್ತು.

ರಾಜ್ಯ ಘಟಕದ ಹಾಲಿ ಅಧ್ಯಕ್ಷರಾಗಿರುವ ಸಿ.ಎಸ್. ಷಡಾಕ್ಷರಿ ಮತ್ತು ಹಾಲಿ ಖಜಾಂಚಿ ನಾಗರಾಜ ಜುಮ್ಮನ್ನನವರ ಅವರು ಅದೇ ಹುದ್ದೆಗಳಿಗೆ ಅಭ್ಯರ್ಥಿಗಳಾಗಿ ಕಣಕ್ಕೆ ಇಳಿದಿದ್ದಾರೆ.

ಪ್ರಜಾಸತ್ತಾತ್ಮಕ ನೌಕರರ ವೇದಿಕೆಯಿಂದ ಅಧ್ಯಕ್ಷ ಹುದ್ದೆಗೆ ಬಿ.ಪಿ. ಕೃಷ್ಣೇಗೌಡ ಮತ್ತು ಖಜಾಂಚಿ ಹುದ್ದೆಗೆ ಶಿವರುದ್ರಯ್ಯ ವಿ.ವಿ ಅವರು ಕಣಕ್ಕೆ ಇಳಿದಿದ್ದಾರೆ.

ತಾಲ್ಲೂಕು ಮತ್ತು ಜಿಲ್ಲಾ ಪದಾಧಿಕಾರಿಗಳ ಚುನಾವಣೆಯಲ್ಲಿ ನಮ್ಮ ಬಣ ಈಗಾಗಲೇ ಮೇಲುಗೈ ಸಾಧಿಸಿದೆ. 31 ಜಿಲ್ಲೆಗಳ ಪೈಕಿ 27ರಲ್ಲಿ ನಮ್ಮವರೇ ಚುನಾಯಿತರಾಗಿದ್ದಾರೆ. ಈಗಿನ ಅವಧಿಯಲ್ಲಿ ಸಂಘದ ಒಳಿತಿಗಾಗಿ ತೆಗೆದುಕೊಂಡ ಕ್ರಮಗಳ ಕಾರಣದಿಂದ ನೌಕರರ ಬೆಂಬಲ ದೊರೆತಿದೆ.

ಸಿ.ಎಸ್.ಷಡಾಕ್ಷರಿ, ಅಧ್ಯಕ್ಷ ಸ್ಥಾನದ ಅಭ್ಯರ್ಥಿ



ಎದುರಾಳಿ ಬಣದವರು ಅಧಿಕಾರಕ್ಕೆ ಬರುವ ಮುನ್ನ ನೀಡಿದ್ದ ಆಶ್ವಾಸನೆಗಳಲ್ಲಿ ಹಲವನ್ನು ಈಡೇರಿಸಿಲ್ಲ. ಹಳೆ ಪಿಂಚಣಿ ವ್ಯವಸ್ಥೆ ಬರಲಿಲ್ಲ. ವೇತನ ಆಯೋಗದ ಶಿಫಾರಸು ಜಾರಿಯಲ್ಲಿ ನೌಕರರಿಗೆ ಭಾರಿ ನಷ್ಟವಾಯಿತು. ಇದರಿಂದ ಎಲ್ಲ ನೌಕರರು ಅಸಮಾಧಾನಗೊಂಡಿದ್ದಾರೆ. ಈ ಬಾರಿ ನಾವು ಗೆಲ್ಲುತ್ತೇವೆ.

ಬಿ.ಪಿ.ಕೃಷ್ಣೇಗೌಡ, ಅಧ್ಯಕ್ಷ ಸ್ಥಾನದ ಅಭ್ಯರ್ಥಿ

‘ಸಾಂವಿಧಾನಿಕ ಸಂಸ್ಥೆಯಲ್ಲೇ ರಕ್ಷಣೆಯಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಂವಿಧಾನಿಕ ಸಂಸ್ಥೆಯಲ್ಲಿಯೇ ಸ್ತ್ರೀಯರಿಗೆ ರಕ್ಷಣೆ ಇಲ್ಲವಾಗಿದೆ. ಬೆಳಗಾವಿಯಲ್ಲಿ ನಡೆದ ವಿಧಾನ ಮಂಡಲದ ಅಧಿವೇಶನದಲ್ಲಿ ನಡೆದ ಘಟನೆಯೇ ಇದಕ್ಕೆ ಪುರಾವೆ’ ಎಂದು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಕಳವಳ ವ್ಯಕ್ತಪಡಿಸಿದರು.

ಗೋಪಾಲಗೌಡ

ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ‘ಕನ್ನಡ ನುಡಿ ಸಮ್ಮೇಳನ’ ಉದ್ಘಾಟಿಸಿ, ಮಾತನಾಡಿದರು.

‘ನಮ್ಮನ್ನು ಆಳುವ ಜನಪ್ರತಿನಿಧಿಗಳಿಗೆ ಸದನದಂತಹ ಪವಿತ್ರ ಸ್ಥಳದಲ್ಲಿ ಹೇಗೆ ಮಾತನಾಡಬೇಕು ಎಂಬುದು ತಿಳಿದಿಲ್ಲ. ಮಹಿಳೆಗೆ ಹೇಗೆ ಗೌರವ ನೀಡಬೇಕು ಎನ್ನುವುದೂ ಗೊತ್ತಿಲ್ಲ. ಒಬ್ಬ ಮಹಿಳೆಯನ್ನು ಅವಾಚ್ಯ ಶಬ್ದದಿಂದ ನಿಂದಿಸಿದರೂ, ಹಾಗೆ ಹೇಳಿಲ್ಲ ಎಂದು ಸಮರ್ಥಿಸಿಕೊಳ್ಳಲಾಗುತ್ತಿದೆ. ಯಾವ ಮಹಿಳೆಯೂ ತನಗೆ ಬಂದಿರುವ ಇಂತಹ ಆರೋಪದ ಬಗ್ಗೆ ಸುಳ್ಳು ಹೇಳುವುದಿಲ್ಲ’ ಎಂದರು.

‘ಬೆಳಗಾವಿ ಅಧಿವೇಶನದಲ್ಲಿ ನಡೆದ ಘಟನೆಗೆ ಆಡಿಯೊ, ವಿಡಿಯೊ ಸಾಕ್ಷಿಯಿಲ್ಲ ಎಂದು ಹೇಳುತ್ತಿರುವ ಸಭಾಪತಿ, ಮಹಿಳೆ ಕುರಿತು ಅವಾಚ್ಯ ಶಬ್ದಗಳನ್ನು ಬಳಸಿರುವುದಕ್ಕೆ ಸಾಕ್ಷಿ ಇದ್ದರೂ ಅವರ ಮಾತು ನಂಬಲು ಸಿದ್ಧರಿಲ್ಲ. ಹೆಣ್ಣಿಗೆ ಅವಮಾನ ಮಾಡಿದಾಗ ಕ್ಷಮೆ ಕೇಳುವುದು ದೊಡ್ಡತನ’ ಎಂದು ಹೇಳಿದರು.

ಸಮ್ಮೇಳನಾಧ್ಯಕ್ಷ ಪ್ರೊ.ಕೆ.ಆರ್. ಅಂಜಿನ ರೆಡ್ಡಿ, ‘ಕನ್ನಡ ಭಾಷೆ ಉಳಿಯಲು ಗಡಿ ಪ್ರದೇಶಗಳೂ ಸೇರಿ ವಿವಿಧೆಡೆ ಮುಚ್ಚುತ್ತಿರುವ ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಬೇಕಿದೆ. ಶಿಕ್ಷಣಕ್ಕೆ ಸೀಮಿತವಾಗದೆ, ಆಡಳಿತ ಸೇರಿ ಎಲ್ಲ ರಂಗದಲ್ಲೂ ಕನ್ನಡ ಭಾಷೆಗೆ ಆದ್ಯತೆ ನೀಡಬೇಕಿದೆ. ಆದರೆ, ಗಡಿ ಪ್ರದೇಶಗಳಲ್ಲಿ ನೆರೆ ರಾಜ್ಯಗಳ ಭಾಷೆಯ ಬಳಕೆ ವ್ಯಾಪಕವಾಗಿದ್ದು, ಅನ್ಯಭಾಷಿಕರ ನಡುವೆ ಕನ್ನಡ ಉಳಿಸಬೇಕಿದೆ. ಹಾಗಾಗಿ, ನಮ್ಮಲ್ಲಿಯೂ ಭಾಷಾಭಿಮಾನ ಬೆಳೆಸಿಕೊಳ್ಳುವ ಅಗತ್ಯವಿದೆ’ ಎಂದು ಹೇಳಿದರು.

ಸಮ್ಮೇಳನದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ‘ಕದಂಬ ರತ್ನ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಬಿ.ಕೆ. ಸಪ್ತಶ್ರೀ (ಸಾರ್ವಜನಿಕ ಆಡಳಿತ), ಶೋಭಾ (ಶಿಕ್ಷಣ), ಪ್ರಿಯಾಂಕಾ ನೀಷ್ಮಾ ಡಿ. ಕೋಸ್ಟ್ (ಸಾರ್ವಜನಿಕ ಆಡಳಿತ), ಚಂದ್ರಪ್ಪ ಸಿ. (ಸಾಹಿತ್ಯ), ಟಿ. ಮನು (ಶಿಕ್ಷಣ) ಮತ್ತು ಬಿ.ವಿ. ನರಸಿಂಹಯ್ಯ (ಸಮಾಜಸೇವೆ) ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಗಾಂಧಿ ತೋರಿದ ಹಾದಿ

ಕಾಂಗ್ರೆಸ್ ರಸ್ತೆ

ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ನಂತರ ಗಾಂಧೀಜಿ ಪ್ರಯಾಣಿಸಿದ ರಸ್ತೆಯನ್ನು ಕಾಂಗ್ರೆಸ್ ರಸ್ತೆ ಎಂದು ಹೆಸರಿಸಲಾಗಿದೆ.



ಗಾಂಧೀಜಿ ಭಾಷಣದ ಮುಖ್ಯಾಂಶಗಳು

- ಸತ್ಯಾಗ್ರಹದ ಕಲ್ಪನೆ
- ಖಾದಿಯ ಮಹತ್ವ
- ಹಿಂದೂ–ಮುಸ್ಲಿಮರ ಐಕ್ಯತೆ
- ಹರಿಜನರ ಉದ್ಧಾರ
- ಮದ್ಯಪಾನ ನಿಷೇಧ
- ಮಹಿಳೆಯರಿಗೆ ಗೌರವ

ಶತಮಾನ ಕಂಡ ಬೆಳಗಾವಿ ಕಾಂಗ್ರೆಸ್ ಅಧಿವೇಶನ

ನೂರು ವರ್ಷಗಳ ಹಿಂದೆ 1924ರ ಡಿ.25 ಮತ್ತು 26ರಂದು 39ನೇ ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿ ಸಾಂಗವಾಗಿ ನಡೆದಿತ್ತು. ಅಧಿವೇಶನದ ಅಧ್ಯಕ್ಷತೆಯನ್ನು ಮಹಾತ್ಮ ಗಾಂಧಿ ವಹಿಸಿದ್ದರೆಂಬುದು ಇತಿಹಾಸ. ಆದರೆ, ಅಧಿವೇಶನದ ಪ್ರಮುಖ ರೂವಾರಿ ಗದಗಿನ ಹುದಲಿಯ ಗಂಗಾಧರರಾವ್ ದೇಶಪಾಂಡೆ ಎಂಬುದು ಹೆಗ್ಗಳಿಕೆ ಸಂಗತಿ.

1922ರಲ್ಲಿ ಚರಕ ಸಂಘ, 1937ರಲ್ಲಿ ಹುದಲಿಯಲ್ಲಿ ಗಾಂಧಿಸೇವಾ ಸಂಘ ಸ್ಥಾಪಿಸಿದ್ದ ದೇಶಪಾಂಡೆ ಅವರು ಆರಂಭದಲ್ಲಿ ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರ ತಿಲಕ್ ಅನುಯಾಯಿಯಾಗಿದ್ದರು. ತಿಲಕ್ ಅವರು ಕಾಲವಾದ ಬಳಿಕ ಮಹಾತ್ಮ ಗಾಂಧಿ ಸಂಪರ್ಕಕ್ಕೆ ಬಂದರು. ಗಾಂಧೀಜಿಯ ಐವರು ಅತ್ಯಾಪ್ತರಲ್ಲಿ ಇವರೂ ಒಬ್ಬರು. ಅಪ್ಪಟ ಗಾಂಧಿವಾದಿಯಾಗಿದ್ದ ಗಂಗಾಧರರಾವ್ ಖಾದಿ ಬಟ್ಟೆಯನ್ನೇ ಧರಿಸುತ್ತಿದ್ದರು. ಅವರದು ಸರಳ ಜೀವನ. ಗಾಂಧೀಜಿ ಅವರಿಂದ 'ಕರ್ನಾಟಕ ಸಿಂಹ' ಎಂದೇ ಗಂಗಾಧರರಾವ್ ಕರೆಸಿಕೊಂಡಿದ್ದರು.

ಅಧಿವೇಶನಕ್ಕೆ ಬೆಳಗಾವಿ ಆಯ್ಕೆಯಾಗಿದ್ದು ಹೇಗೆ?: 1923ರಲ್ಲಿ ಆಂಧ್ರ ಪ್ರದೇಶದ ಕಾಕಿನಾಡದಲ್ಲಿ 38ನೇ ಕಾಂಗ್ರೆಸ್ ಅಧಿವೇಶನ ನಡೆದಿತ್ತು. ಆ ವೇಳೆ ಜವಾಹರಲಾಲ್ ನೆಹರು ಹಾಗೂ ಗಂಗಾಧರರಾವ್ ದೇಶಪಾಂಡೆ ಇಬ್ಬರೂ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಮುಂದಿನ ಅಧಿವೇಶನ ಕರ್ನಾಟಕದಲ್ಲಿ ನಡೆಸುವ ಬಗ್ಗೆ ನಿರ್ಧರಿಸಲಾಗಿತ್ತು. ಆದರೆ, ಕರ್ನಾಟಕದಲ್ಲಿ ಎಲ್ಲಿ ಆಗಬೇಕು ಎಂಬ ತೀರ್ಮಾನ ಆಗಿರಲಿಲ್ಲ. ವಿಜಯಪುರದ ಶ್ರೀನಿವಾಸ ಕೌಜಲಗಿ ಅವರ ಮನೆಯಲ್ಲಿ ನಡೆದ ಸಭೆಯಲ್ಲಿ ಅವರು ವಿಜಯಪುರದಲ್ಲೇ ಆಗಲಿ ಎಂದಿದ್ದರು. ಬಳಿಕ ಹುಬ್ಬಳ್ಳಿಯಲ್ಲಿ ನಡೆದ ಕರ್ನಾಟಕ ಪ್ರಾಂತೀಯ ಸಭೆಯಲ್ಲಿ ಹುಬ್ಬಳ್ಳಿ-ಧಾರವಾಡ ನಾಯಕರು ಇಲ್ಲಿಯೇ ಆಗಲಿ ಎಂದು ವಾದಿಸಿದ್ದರು. ಆದರೆ, ಗಂಗಾಧರರಾವ್ ದೇಶಪಾಂಡೆ ಅವರು ಅಧಿವೇಶನಕ್ಕೆ ಈಗಾಗಲೇ ನಾವು ಸಿದ್ಧತೆ ನಡೆಸಿದ್ದೇವೆ. ಆದ್ದರಿಂದ ಬೆಳಗಾವಿಯೇ ಸೂಕ್ತ ಎಂದು ವಾದಿಸಿ ಅಂತಿಮಗೊಳಿಸಿ ಯಶಸ್ವಿಯಾಗಿದ್ದರು.

ಗಾಂಧೀಜಿ ಮನವೊಲಿಸಿದ್ದು ಗಂಗಾಧರರಾವ್ ದೇಶಪಾಂಡೆ: ಮಹಾತ್ಮ ಗಾಂಧಿಯವರು ಹಿಂದಿನ ಅಧಿವೇಶನದಲ್ಲಿ ಭಾಗಿಯಾಗಿರಲಿಲ್ಲ. ಅಲ್ಲದೇ ಅಧ್ಯಕ್ಷತೆ ವಹಿಸಲು ನಿರಾಕರಿಸಿದ್ದರು. ಗಾಂಧೀಜಿ ನಾನು ಅಧ್ಯಕ್ಷ ಇರಲಿ, ಬಿಡಲಿ. ಜನ ನನ್ನ ಚಳವಳಿಯಲ್ಲಿ ಪಾಲ್ಗೊಳ್ಳುತ್ತಾರೆ ಎಂದಿದ್ದರು. ಆದರೆ, ಗಂಗಾಧರರಾವ್ ಮಾತ್ರ ಬಿಡಲಿಲ್ಲ. ಗಾಂಧೀಜಿ ಮನವೊಲಿಸಿ ಅಧ್ಯಕ್ಷರಾಗುವಂತೆ ಮಾಡಿದ್ದು ಇತಿಹಾಸ. ಈ ಬೆಳಗಾವಿ ಅಧಿವೇಶನದಲ್ಲೂ ನೆಹರು ಮತ್ತು ಗಂಗಾಧರರಾವ್ ದೇಶಪಾಂಡೆ ಪ್ರಧಾನ ಕಾರ್ಯದರ್ಶಿ ಕಾರ್ಯನಿರ್ವಹಿಸಿದ್ದರು.

ಗಾಂಧಿ ಕರೆ

'ಸಾಮ್ರಾಜ್ಯದೊಳಗಡೆಯೇ ನಾನು ಸ್ವರಾಜ್ಯಕ್ಕಾಗಿ ಹೋರಾಡುವೆ... ಆದರೆ ಬ್ರಿಟನ್ನಿನ ತಪ್ಪಿನಿಂದಾಗಿ ಎಲ್ಲ ಸಂಬಂಧಗಳನ್ನು ಕಡಿದುಕೊಳ್ಳುವುದು ಅನಿವಾರ್ಯವಾದರೆ ಅದಕ್ಕೂ ಸಿದ್ಧ... ಎಂದು ಅಧಿವೇಶನದಲ್ಲಿ ಕರೆ ನೀಡಿದ್ದರು.'

ರಾಜ್ಯದ ಜನತೆಯಲ್ಲಿ ಹರ್ಷ: ಗಾಂಧೀಜಿಯವರು ಬೆಳಗಾವಿ ಕಾಂಗ್ರೆಸ್ಸಿನ ಅಧಿವೇಶನದ ಅಧ್ಯಕ್ಷತೆ ವಹಿಸಿಕೊಂಡಿದ್ದು ರಾಜ್ಯದ ಜನರಿಗೆ ಹರ್ಷ ತಂದಿತ್ತು. ಅಧಿವೇಶನದ ಪ್ರಾಮುಖ್ಯತೆ ಎಲ್ಲರ ಗಮನಕ್ಕೆ ಬಂದಿತ್ತು. ನಂತರ ರಾಜ್ಯದ ಬೇರೆ ಬೇರೆ ಜಿಲ್ಲಾ ಕೇಂದ್ರಗಳಲ್ಲಿ, ಜಿಲ್ಲಾ ಹಾಗೂ ರಾಜ್ಯ ಕಾಂಗ್ರೆಸ್ ಅಧಿವೇಶನ ನಡೆಯಿತು. ಕರ್ನಾಟಕ ಖಿಲಾಫತ್ ಪರಿಷತ್ತು, ಮಹಿಳೆಯರ ಸಮಾವೇಶ ಮತ್ತು ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳು ನಡೆದವು. ರಾಜಗೋಪಾಲಾಚಾರಿ ಯವರು ಧಾರವಾಡದಲ್ಲಿ ನಡೆದ ಕರ್ನಾಟಕ ಪ್ರಾಂತೀಯ ಅಧಿವೇಶನದ ಅಧ್ಯಕ್ಷತೆ ವಹಿಸಿದರೆ, ಹರ್ಡೀಕರ್ ಮಂಜಪ್ಪ ಹಾಗೂ ಕಾರ್ನಾಡ್ ಸದಾಶಿವರಾವ್ ಅವರು ಕ್ರಮವಾಗಿ ಧಾರವಾಡ ಮತ್ತು ಬಿಜಾಪುರ ಜಿಲ್ಲಾ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಗಾಂಧೀಜಿ ಅಧ್ಯಕ್ಷೀಯ ಭಾಷಣ

ಗಾಂಧೀಜಿಯವರು ಬೆಳಗಾವಿ ಸಮಾವೇಶದ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಅಹಿಂಸಾತ್ಮಕ ಅಸಹಕಾರ ಚಳವಳಿಯ ಬಗ್ಗೆ ತಮಗಿರುವ ನಂಬಿಕೆ ವ್ಯಕ್ತಪಡಿಸಿದ್ದರು. ರಾಜಕೀಯ ಗುಂಪುಗಳು ಹಾಗೂ ಸಮುದಾಯಗಳ ಬಗ್ಗೆ ಪ್ರಸ್ತಾಪಿಸುತ್ತಾ ಗಾಂಧೀಜಿ, 'ಹಿಂದು–ಮುಸ್ಲಿಂ ಐಕ್ಯತೆಗೆ ಸಂಬಂಧಪಡುವಂತದು, ಬೇರೆ ಬೇರೆ ರಾಜಕೀಯ ಗುಂಪುಗಳಿಗೂ ಅನ್ವಯವಾಗುತ್ತದೆ– ನಾವು ಪರಸ್ಪರರನ್ನು ಸಹಿಸಿಕೊಳ್ಳಬೇಕು. ಅಷ್ಟೇ ಅಲ್ಲ ಕಾಲದಲ್ಲಿ ನಂಬಿಕೆಯಿಟ್ಟು, ಒಬ್ಬರು ಇನ್ನೊಬ್ಬರ ನಂಬಿಕೆಗಳಿಗೆ ಬದಲಾಗುವ ಹೊಂದುವ ತನಕ ಕಾಯಬೇಕು. ಅಸ್ಪೃಶ್ಯತೆ ತೊಡೆದು ಹಾಕುವ ದೀಕ್ಷೆಯನ್ನು ಸವರ್ಣೀಯರು ಹಿಂದೂ ಧರ್ಮಕ್ಕಾಗಿ ಮತ್ತು ತಮಗಾಗಿ ತೊಡಬೇಕಾಗಿರುವುದು ಅನಿವಾರ್ಯವಾಗಿದೆ.' ಜನರು ಸಹಿಷ್ಣುತೆ, ಸಮಾನತೆ, ಐಕ್ಯತೆ ಪ್ರದರ್ಶಿಸಿದಾಗ ಮಾತ್ರ ಸ್ವರಾಜ್ಯ ಸಾಧ್ಯವಾಗುತ್ತದೆ ಎಂಬ ತಮ್ಮ ಪರಿಕಲ್ಪನೆಯ ಸ್ವಾತಂತ್ರ್ಯದ ಬಗ್ಗೆ ಗಾಂಧೀಜಿ ವಿವರಿಸಿದ್ದರು.

ಹೋರಾಟಕ್ಕೆ ನಾಂದಿ: ಅಧಿವೇಶನ ಅರಣ್ಯ ಸತ್ಯಾಗ್ರಹ, ಉಪ್ಪಿನ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿ, ಜವಾಬ್ದಾರಿಯುತ ಸರ್ಕಾರ, ಕರ್ನಾಟಕ ಏಕೀಕರಣಕ್ಕೆ ಇದು ನಾಂದಿಯಾಗಿತ್ತು. ಗದಗ, ಸಿರಸಿ, ಧಾರವಾಡ, ಮೈಸೂರು, ವಿದುರಾಶ್ವತ ಸೇರಿದಂತೆ ದೇಶದ ಎಲ್ಲ ಕಡೆಗಳಲ್ಲೂ ಹೋರಾಟಕ್ಕೆ ಪ್ರೇರೇಪಣೆಯಾಗಿತ್ತು. ❖

ದಿಗ್ಗಜರ ತಂಡ

ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಮಹಾತ್ಮ ಗಾಂಧೀಜಿ ಅವರೊಂದಿಗೆ, ಮೋತಿಲಾಲ್ ನೆಹರೂ, ಜವಾಹರಲಾಲ್ ನೆಹರೂ, ಸಿ. ರಾಜಗೋಪಾಲಚಾರಿ, ಸರ್ದಾರ್ ವಲ್ಲಭಭಾಯ್ ಪಟೇಲ್, ಬಾಬು ರಾಜೇಂದ್ರ ಪ್ರಸಾದ್, ಮೌಲಾನಾ ಮಹಮ್ಮದ್ ಅಲಿ, ಮೌಲಾನಾ ಶೌಕತ್ ಅಲಿ, ಸರೋಜಿನಿ ನಾಯ್ಡು, ಲಾಲಾ ಲಜಪತ ರಾಯ್, ಜಮನ್‌ಲಾಲ್ ಬಜಾಜ್, ಶೌಕತ್ ಖುರೇಶಿ ಅವರಂತಹ ದಿಗ್ಗಜರ ತಂಡ ಪಾಲ್ಗೊಂಡಿತ್ತು.

ವೀರಸೌಧದಲ್ಲಿ ಏನೇನಿದೆ?

ಗಾಂಧೀಜಿ ಬಾಲ್ಯ, ಶಿಕ್ಷಣ, ಹೋರಾಟವನ್ನು ಬಿಂಬಿಸುವ ಹಾಗೂ ಕಾಂಗ್ರೆಸ್ ಅಧಿವೇಶನಕ್ಕೆ ಸಂಬಂಧಿಸಿದ ಅಪರೂಪದ ಚಿತ್ರಗಳನ್ನು ವೀರಸೌಧದಲ್ಲಿ ಪ್ರದರ್ಶಿಸಲಾಗಿದೆ. ಗಾಂಧಿ ಅವರ ಕಂಚಿನ ಪ್ರತಿಮೆ ಇದೆ. ಅದರ ಹಿಂಬದಿಯ ಗೋಡೆಯಲ್ಲಿ ಮಹಾನ್ ನಾಯಕರ ಉಬ್ಬುಶಿಲ್ಪಗಳಿವೆ. ಅಧಿವೇಶನದ ಜಾಗವನ್ನು 2002ರಲ್ಲಿ ಸ್ಮಾರಕವಾಗಿ ಅಭಿವೃದ್ಧಿ ಮಾಡಲಾಗಿದ್ದು, ಸ್ವಾತಂತ್ರ್ಯಯೋಧ ಆರ್. ಎಚ್. ಕುಲಕರ್ಣಿ ನೇತೃತ್ವದಲ್ಲಿ ಹಲವು ಸೇನಾನಿಗಳು ಇದಕ್ಕೆ ವೀರಸೌಧ ರೂಪ ಕೊಟ್ಟಿದ್ದಾರೆ.

ಕಾಂಗ್ರೆಸ್ ಬಾವಿ: ಬೆಳಗಾವಿ ಅಧಿವೇಶನದಲ್ಲಿ ಪಾಲ್ಗೊಳ್ಳುವ 30 ಸಾವಿರ ಮಂದಿಗೆ ಕುಡಿಯುವ ನೀರಿಗಾಗಿ ಬಾವಿ ಸಹ ತೋಡಲಾಗಿತ್ತು. ಅದು ಇಂದು 'ಕಾಂಗ್ರೆಸ್ ಬಾವಿ' ಎಂದೇ ಖ್ಯಾತಿ ಪಡೆದಿದೆ. ಅಧಿವೇಶನದ ಅಂಗವಾಗಿ ತಾತ್ಕಾಲಿಕ ರೈಲು ನಿಲ್ದಾಣ ಕೂಡ ನಿರ್ಮಿಸಲಾಗಿತ್ತು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

'ಗಾಂಧಿ ಭಾರತ' ಅಧಿವೇಶನವು ಕಾಂಗ್ರೆಸ್‌ಗೆ ಹೊಸ ದಿಕ್ಕು ನೀಡಲಿದೆ. ಸರ್ವಾಧಿಕಾರಿ ಮೋದಿ ಹಾಗೂ ಬಿಜೆಪಿಯ ವಿರುದ್ಧ ನಮ್ಮ ಚಳವಳಿ ಹೇಗೆ ಇರಬೇಕು ಎಂಬುದಕ್ಕೆ ಸ್ಪಷ್ಟ ರೂಪ ಸಿಗಲಿದೆ. ದೇಶದ ಸಾರ್ವಜನಿಕ ವಲಯಗಳನ್ನು ಮೋದಿ ಅವರು ಅದಾನಿ ಎಂಬ ಒಬ್ಬನೇ ಉದ್ಯಮಿಗೆ ಮಾರುತ್ತಿದ್ದಾರೆ. ಕೇಂದ್ರದ ಈ ನಡೆಯಿಂದ ಬಡವರು ಹೆಚ್ಚು ಬಡವಾಗುತ್ತ, ಶ್ರೀಮಂತರು ಹೆಚ್ಚು ಶ್ರೀಮಂತರಾಗುತ್ತ ಸಾಗಿದ್ದಾರೆ. ಗಾಂಧೀಜಿ ಸರ್ವೋದಯ ತತ್ವಕ್ಕೆ ಇದು ವಿರುದ್ಧ. ಎಲ್ಲವನ್ನೂ ಈ ವೇಳೆ ಚರ್ಚೆಗೆ ತೆಗೆದುಕೊಳ್ಳಲಾಗುವುದು

ಕೆ.ಸಿ.ವೇಣುಗೋಪಾಲ, ಪ್ರಧಾನ ಕಾರ್ಯದರ್ಶಿ, ಎಐಸಿಸಿ

1924ರ ಕಾಂಗ್ರೆಸ್ ಅಧಿವೇಶನಕ್ಕೆ ಈಗ ನೂರು ವರ್ಷ. ಗಾಂಧೀಜಿ ವಿಚಾರಧಾರೆಯನ್ನು ಪ್ರಚುರಪಡಿಸಲು ವರ್ಷಪೂರ್ತಿ ರಾಜ್ಯದೆಲ್ಲೆಡೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಗಾಂಧಿ ತತ್ವಗಳನ್ನು ವಿಶ್ವವೇ ಒಪ್ಪಿಕೊಂಡಿದೆ. ಅದನ್ನು ರಾಜ್ಯದ ಪ್ರತಿಯೊಬ್ಬರಿಗೂ ಮುಟ್ಟಿಸಬೇಕಿದೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

ಬೆಳಗಾವಿಯಲ್ಲಿರುವ ಗಾಂಧೀಜಿ ಬಾವಿಯಿಂದಲೇ ನೀರು ತೆಗೆದು ಬಿಜೆಪಿಯ ಕರ್ಮಕಾಂಡಗಳನ್ನು ಸ್ವಚ್ಛಗೊಳಿಸಿ ಚುನಾವಣೆಗೆ ಹೋಗಿದ್ದೇವು. ನಮಗೆ ಜಯವಾಯಿತು. ಈಗ ಕಾಂಗ್ರೆಸ್ ಅಧಿವೇಶನ ನಡೆದ ನೆಲದಲ್ಲಿ, ಅದೇ ದಿನಕ್ಕೆ, ಅದೇ ಸಮಯಕ್ಕೆ ನೂರು ವರ್ಷಗಳ ಬಳಿಕ ಅಧಿವೇಶನ ಮಾಡುತ್ತಿದ್ದೇವೆ. ಆಗ ಗಾಂಧಿ ಅವರು ಅಧ್ಯಕ್ಷರಾಗಿದ್ದರು, ಈಗ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷರಾಗಿದ್ದಾರೆ. ಇದು ಸುದೈವ. ಇಲ್ಲಿಂದಲೇ ಕಾಂಗ್ರೆಸ್‌ನ ಹೋರಾಟದ ದಿಕ್ಕು ಬದಲಾಗಲಿದೆ.

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ದೇಶದ ಮರು ನಿರ್ಮಾಣಕ್ಕೆ ಕಾಂಗ್ರೆಸ್ ಬೆಳಗಾವಿಯಿಂದಲೇ ಮುಂದಡಿ ಇಡಲಿದೆ. ಎಲ್ಲ ಜಾತಿ, ಜನಾಂಗಗಳನ್ನು ಒಗ್ಗೂಡಿಸಿಕೊಂಡು ಸತ್ಯ, ಅಹಿಂಸೆ ಅಸ್ತ್ರಗಳ ಮೂಲಕ ಗಾಂಧೀಜಿ ಅವರು 1924ರಲ್ಲಿ ಆಂದೋಲನ ಆರಂಭಿಸಿದ್ದರು. ಅದರ ಶತಮಾನೋತ್ಸವ ನೆನಪಲ್ಲಿ ಈಗಿನ ಕಾಂಗ್ರೆಸ್ ಕೂಡ ಎಲ್ಲರನ್ನೂ ಒಳಗೊಂಡ ಆಂದೋಲನಕ್ಕೆ ಚಾಲನೆ ನೀಡಲಿದೆ

ರಣದೀಪ್‌ಸಿಂಗ್ ಸುರ್ಜೇವಾಲಾ, ಪ್ರಧಾನ ಕಾರ್ಯದರ್ಶಿ, ಎಐಸಿಸಿ

ಗಾಂಧಿ ಹಾದಿಯಲ್ಲಿ ಕಾಂಗ್ರೆಸ್ ಯಾತ್ರೆಗಳು

ಭಾರತದ ಇತಿಹಾಸದಲ್ಲಿ ನಾಯಕರು, ರಾಜಕೀಯ ನಾಯಕರು ಮತ್ತು ಪಕ್ಷಗಳು ಕೈಗೊಂಡ ಪಾದಯಾತ್ರೆಗಳು ರಾಜಕೀಯ ಸಮೀಕರಣವನ್ನೇ ಬದಲಿಸಿದ ಉದಾಹರಣೆಗಳು ಸಾಕಷ್ಟಿವೆ. ಭಾರತದ ಇತಿಹಾಸದಲ್ಲಿ ಅತ್ಯಂತ ಮಹತ್ವ ಪಡೆದ ಮೊದಲ ಮತ್ತು ಮುಂಚೂಣಿಯ ಪಾದಯಾತ್ರೆ ಮಹಾತ್ಮ ಗಾಂಧಿ ಅವರ 'ದಂಡೀಯಾತ್ರೆ'. ಬ್ರಿಟಿಷರು ಉಪ್ಪಿನ ಮೇಲೆ ಹೇರಿದ ತೆರಿಗೆಯನ್ನು ವಿರೋಧಿಸಿ ಗಾಂಧೀಜಿ ನೇತೃತ್ವದಲ್ಲಿ ಕೈಗೊಳ್ಳಲಾದ ಕರ ನಿರಾಕರಣೆ ಚಳುವಳಿಯ ಭಾಗವಾಗಿ ನಡೆದ ಪಾದಯಾತ್ರೆಯೇ ದಂಡೀಯಾತ್ರೆ. ಗಾಂಧೀಜಿ ಅವರ ಸತ್ಯಾಗ್ರಹದ ಸ್ವರೂಪಗಳಲ್ಲಿ ಒಂದಾದ ಪಾದಯಾತ್ರೆಯನ್ನು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಾಂಗ್ರೆಸ್ ಪಕ್ಷವು ಮತ್ತೆ ಮತ್ತೆ ಕೈಗೊಂಡಿದೆ. ರಾಜ್ಯದಲ್ಲಿ ಈಚೆಗೆ ನಡೆದ ಅಂತಹ ಕೆಲ ಯಾತ್ರೆಗಳ ವಿವರ ಇಲ್ಲಿದೆ.

ಮೇಕೆದಾಟು ಪಾದಯಾತ್ರೆ

ಕಾವೇರಿ ನದಿಗೆ ಮೇಕೆದಾಟು ಬಳಿ ಸಮತೋಲಿತ ಜಲಾಶಯ ನಿರ್ಮಿಸಿ, ಬೆಂಗಳೂರಿಗೆ ಕುಡಿಯುವ ನೀರು ಒದಗಿಸುವ ಯೋಜನೆಗೆ ಆಗ್ರಹಿಸಿ ಕರ್ನಾಟ ಪ್ರದೇಶ ಕಾಂಗ್ರೆಸ್ ಸಮಿತಿಯು 2022 ಜನವರಿಯಲ್ಲಿ ಪಾದಯಾತ್ರೆ ನಡೆಸಿತ್ತು. ಯೋಜನೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿರಲಿಲ್ಲ ಮತ್ತು ಆಗ ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರವು ಅಂತಹ ಅನುಮತಿ ಪಡೆದುಕೊಳ್ಳುವ ಯತ್ನವನ್ನೇ ಮಾಡುತ್ತಿರಲಿಲ್ಲ. ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿಯಿಂದ ರಾಜ್ಯದ ಜನತೆಗೆ ಆಗುತ್ತಿದ್ದ ಅನ್ಯಾಯದ ವಿರುದ್ಧದ ಪ್ರತಿಭಟನೆಗಾಗಿ ಪಾದಯಾತ್ರೆ ಆಯೋಜಿಸಲಾಗಿತ್ತು. ಈ ಅನ್ಯಾಯದ ವಿರುದ್ಧ ಜೆಡಿಎಸ್ ಕೂಡ ದನಿ ಎತ್ತಿರಲಿಲ್ಲ. ಕಾವೇರಿ ಮತ್ತು ಅರ್ಕಾವತಿ 'ಸಂಗಮ'ದಿಂದ ಜನವರಿ 9ರಂದು ಪಾದಯಾತ್ರೆಗೆ ಚಾಲನೆ ನೀಡಲಾಗಿತ್ತು. ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ. ಶಿವಕುಮಾರ್ ರೂಪಿಸಿದ್ದ ಈ ಯಾತ್ರೆಗೆ ಅಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಮಲ್ಲಿಕಾರ್ಜುನ ಖರ್ಗೆ, ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಅವರು ನಗಾರಿ ಬಾರಿಸುವ ಮೂಲಕ ಹತ್ತು ದಿನಗಳ ಪಾದಯಾತ್ರೆಗೆ ಚಾಲನೆ ನೀಡಿದ್ದರು. ಮೇಕೆದಾಟುವರೆಗೆ ನಡೆದ ಪಾದಯಾತ್ರೆಯಲ್ಲಿ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಜತೆಜತೆಗೆ ಹೆಜ್ಜೆಹಾಕಿದರು. ಪಾದಯಾತ್ರೆಯನ್ನು ಹತ್ತಿಕ್ಕಲು ರಾಜ್ಯ ಸರ್ಕಾರವು ಹಲವು ನಿರ್ಬಂಧಗಳನ್ನು ಹೇರಿತು, ಒತ್ತಡ ತಂತ್ರದ ಮೊರೆ ಹೋಯಿತು. ಆದರೆ ಆ ಎಲ್ಲಾ ಸಂಚುಗಳನ್ನು ಗಾಂಧೀಜಿ ಅವರ ಅಹಿಂಸಾಮಾರ್ಗದ ಮೂಲಕ ಎದುರಿಸಲಾಯಿತು. ಶಾಂತಿಯುತವಾಗಿ ಪಾದಯಾತ್ರೆ ನಡೆಸಿ, ಯೋಜನೆಯ ಅಗತ್ಯದ ಬಗ್ಗೆ ರಾಜ್ಯದ ಗಮನ ಸೆಳೆಯಲಾಯಿತು. 'ಮೇಕೆದಾಟು ಪಾದಯಾತ್ರೆ' ರಾಜ್ಯ ಕಾಂಗ್ರೆಸ್‌ಗೆ, ಕಾಂಗ್ರೆಸ್ ನಾಯಕರಿಗೆ, ಕಾರ್ಯಕರ್ತರಿಗೆ ಹೊಸ ಹುಮ್ಮಸ್ಸು ನೀಡಿತ್ತು. ಜೆಡಿಎಸ್ ಪ್ರಾಬಲ್ಯವಿದ್ದ ಪ್ರದೇಶದಲ್ಲಿ ಕಾಂಗ್ರೆಸ್ ನಡೆಸಿದ ಈ ಯಾತ್ರೆ ಪಕ್ಷಕ್ಕೆ ಹಾಗೂ ಅದರಲ್ಲೂ ಡಿ.ಕೆ. ಶಿವಕುಮಾರ್ ಅವರಿಗೆ ದೊಡ್ಡ ಬಲವನ್ನು ತಂದುಕೊಟ್ಟಿತು. ಈ ಯಾತ್ರೆಯ ಮೂಲಕವೇ 2023ರ ವಿಧಾನಸಭಾ ಚುನಾವಣೆಗೆ ಕಣಕ್ಕೆ ಕಾಂಗ್ರೆಸ್ ರಣವೀಳ್ಯ ನೀಡಿತ್ತು.

ಬಳ್ಳಾರಿ ಪಾದಯಾತ್ರೆ

2010ರ ಜುಲೈ ತಿಂಗಳಲ್ಲಿ ವಿಧಾನಮಂಡಲದ ಮುಂಗಾರು ಅಧಿವೇಶನ ನಡೆಯುತ್ತಿತ್ತು. ಅಕ್ರಮ ಗಣಿಗಾರಿಕೆ ಕುರಿತು ವಿಧಾನಸಭೆಯಲ್ಲಿ ಕಾವೇರಿದ ಚರ್ಚೆಯೂ ಸಾಗಿತ್ತು. ಆಗ ವಿರೋಧ ಪಕ್ಷದ ನಾಯಕರಾಗಿದ್ದ ಸಿದ್ದರಾಮಯ್ಯ ಮತ್ತು ಆಗಿನ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದ ಜಿ. ಜನಾರ್ದನ ರೆಡ್ಡಿ ಮಧ್ಯೆ ಭಾರಿ ವಾಕ್ಸಮರ ನಡೆಯುತ್ತಿತ್ತು. ಬಳ್ಳಾರಿಗೆ ಬರುವಂತೆ ಜನಾರ್ದನ ರೆಡ್ಡಿ ತೊಡೆ ತಟ್ಟಿ ಸವಾಲು ಹಾಕಿದ್ದರು. ಪ್ರತಿಸವಾಲು ಹಾಕಿದ್ದ ಸಿದ್ದರಾಮಯ್ಯ, ಪಂಥಾಹ್ವಾನ ಸ್ವೀಕರಿಸಿದ್ದರು. ಜುಲೈ 25ಕ್ಕೆ ಬೆಂಗಳೂರಿನಲ್ಲಿ ಆರಂಭವಾದ ಪಾದಯಾತ್ರೆ ಆಗಸ್ಟ್ 10ಕ್ಕೆ ಬಳ್ಳಾರಿಯಲ್ಲಿ ಸಮಾರೋಪಗೊಂಡಿತು. ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ 320 ಕಿ.ಮೀ. ಉದ್ದದ ಪಾದಯಾತ್ರೆಯಲ್ಲಿ ಕೆಪಿಸಿಸಿ ಅಧ್ಯಕ್ಷರು ಆರ್.ವಿ. ದೇಶಪಾಂಡೆ ಮತ್ತು ಕಾರ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಇತರ ನಾಯಕರು ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಆ.10ರಂದು ಬಳ್ಳಾರಿಯಲ್ಲಿ ನಡೆದ ಸಮಾರೋಪ ಸಮಾರಂಭಕ್ಕೆ ಜನಸಾಗರವೇ ಹರಿದುಬಂದಿತ್ತು. ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರು ಸಮಾವೇಶದಲ್ಲಿ ಪಾಲ್ಗೊಂಡು, ಬಿಜೆಪಿ ಮತ್ತು ರೆಡ್ಡಿ ಸಹೋದರರ ವಿರುದ್ಧ ಸಮರ ಸಾರಿದ್ದರು. ಬೆಂಗಳೂರಿನಿಂದ ಬಳ್ಳಾರಿವರೆಗೆ ನಡೆದ ಪಾದಯಾತ್ರೆ ಮತ್ತು ಬಳ್ಳಾರಿಯಲ್ಲಿ ನಡೆದ ಸಮಾವೇಶ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಬಲವರ್ಧನೆಗೆ ನಾಂದಿ ಹಾಡಿತು. ಅದರ ಪರಿಣಾಮವಾಗಿಯೇ 2013ರ ವಿಧಾನಸಭಾ ಚುನಾವಣೆಯಲ್ಲಿ ನಿಚ್ಚಳ ಬಹುಮತದೊಂದಿಗೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯಿತು.

ಅಂದು ಗಾಂಧೀಜಿ; ಇಂದು ಖರ್ಗೆ ಅಧ್ಯಕ್ಷತೆ

ಭಾರತದ ಭವಿತವ್ಯದ ದಿಕ್ಕನ್ನೇ ಬದಲಿಸಿದ 'ಬೆಳಗಾವಿ ಕಾಂಗ್ರೆಸ್ ಅಧಿವೇಶನ'ದ ಶತಮಾನೋತ್ಸವದ ಈ ಹೊತ್ತಿನಲ್ಲಿ ನೂರಾರು ಸುಮಧುರ ನೆನಪುಗಳು ಅನುರಣಿಸುತ್ತಿದೆ. 1924ರಲ್ಲಿ ಅಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧಿವೇಶನವನ್ನು ಸಾಂಗಗೊಳಿಸಿತ್ತು. ನೂರು ವರ್ಷಗಳಲ್ಲಿನ ತ್ಯಾಗ, ಬಲಿದಾನ, ಹೋರಾಟದ ಬಹುದೊಡ್ಡ ಪರಂಪರೆಯನ್ನು ಬೆನ್ನಿಗೇರಿಸಿಕೊಂಡಿರುವ ಕಾಂಗ್ರೆಸ್, ಅದೇ ನೆಲದಲ್ಲಿ ಮತ್ತೊಮ್ಮೆ ಹೋರಾಟದ ದೀಕ್ಷೆ ಪಡೆಯಲು ಸನ್ನದ್ಧವಾಗಿದೆ.

ಬೆಳಗಾವಿ ಅಧಿವೇಶನದಲ್ಲಿಯೇ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಗಾಂಧೀಜಿ ಆಯ್ಕೆಯಾದರು. ಬ್ರಿಟೀಷರ ಎದೆ ನಡುಗಿಸಿದ್ದ ಕ್ರಾಂತಿಕಾರರ ಹೋರಾಟಗಾರರೇ ಮುಂಚೂಣಿಯಲ್ಲಿದ್ದು, ಈ ಪ್ರಧಾನ ಧಾರೆಯೇ ಸ್ವಾತಂತ್ರ್ಯ ಹೋರಾಟದ ಸತ್ವವಾಗಿತ್ತು. ಆಂಗ್ಲರ ದೌರ್ಜನ್ಯ ಎದುರಿಸಲು 'ಅಹಿಂಸೆ'ಯ ಅಸ್ತ್ರ ಹಿಡಿದಿದ್ದ ಗಾಂಧೀಜಿ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಆಯಾಮವನ್ನೇ ಕೊಟ್ಟರು. ಕಾಂಗ್ರೆಸ್ ನೇತೃತ್ವ ವಹಿಸಿಕೊಂಡ ಅವರು, ಪಕ್ಷಕ್ಕೆ ಹೊಸ ದಿಕ್ಕು ಸೃಷ್ಟಿಸಿಕೊಟ್ಟರು.

ಅಂದು ಗಾಂಧೀಜಿಯವರಿಗೆ ಸಾರಥ್ಯ ಕೊಟ್ಟಿದ್ದ ಬೆಳಗಾವಿ ನೆಲದಲ್ಲಿಯೇ ಎಐಸಿಸಿ ಅಧಿವೇಶನ ನಡೆಯುತ್ತಿದೆ. ಅಂದು ಗಾಂಧೀಜಿಯವರು ಆಸೀನರಾಗಿದ್ದ ಮಹತ್ವದ ಪೀಠದಲ್ಲಿ ಕನ್ನಡಿಗರೇ ಆಗಿರುವ, ಹಿರಿಯ ನೇತಾರ ಮಲ್ಲಿಕಾರ್ಜುನ ಖರ್ಗೆಯವರು ಕೂರಲಿದ್ದಾರೆ. ಕರ್ನಾಟಕದ ಮಣ್ಣಿನಿಂದ ದೆಹಲಿಯವರೆಗೆ ತಮ್ಮ ರಾಜಕೀಯ ಪಯಣ ನಡೆಸಿರುವ ಖರ್ಗೆಯವರು, ಎಐಸಿಸಿ ಅಧ್ಯಕ್ಷರಾದ ಬಳಿಕ ಪಕ್ಷಕ್ಕೆ ಹೊಸ ಚೈತನ್ಯ ತುಂಬಿದವರು. ಬಸವಳಿದಿದ್ದ ಕಾಂಗ್ರೆಸ್ ಪಕ್ಷವು, ಖರ್ಗೆ ಹಾಗೂ ರಾಹುಲ್ ಗಾಂಧಿಯವರ ಜಂಟಿ ನಾಯಕತ್ವದಲ್ಲಿ ಲೋಕಸಭೆಯಲ್ಲಿ ನೂರರ ಗಡಿ ತಲುಪಿದೆ.

ದೇಶವನ್ನು ಆಳುತ್ತಿರುವ ಪಕ್ಷ ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡುತ್ತಾ ಕೋಮುದ್ವೇಷದ ವಿಷ ಬೀಜ ಬಿತ್ತಿ, ಜನರನ್ನು ಒಡೆದಾಳುತ್ತಿರುವ ವಿದ್ಯಮಾನ ನಡೆಯುತ್ತಿದೆ. ಗಾಂಧೀಜಿಯವರ ಆಶಯ– ಡಾ. ಬಿ.ಆರ್. ಅಂಬೇಡ್ಕರ್ ಅವರು ರೂಪಿಸಿದ ಸಂವಿಧಾನವನ್ನು ಬದಲಾವಣೆ ಮಾಡುವ ಮಾತುಗಳು ದೇಶವನ್ನಾಳುತ್ತಿರುವ ಪಕ್ಷದ ನಾಯಕರಿಂದ ಆಗಾಗ್ಗೆ ಹೊರಬರುತ್ತಿವೆ. ಅಂಬೇಡ್ಕರ್ ಕುರಿತು ಗೃಹ ಸಚಿವ ಅಮಿತ್ ಶಾ ಆಡಿದ ಮಾತೇ, ಆ ಪಕ್ಷದ ಅಂತರಂಗದ ಭಾವನೆಯೂ ಆಗಿದೆ.

ಜಾತಿ–ಜಾತಿಗಳ ಮಧ್ಯೆ ಜಗಳ ತಂದಿಕ್ಕಿ ತಮ್ಮ ಕೋಮು ರಾಜಕಾರಣ ಮಾಡುತ್ತಿರುವ ದೇಶವನ್ನು ಆಳುತ್ತಿರುವ ಪಕ್ಷ, ಜನರ ಸಮಸ್ಯೆಯನ್ನು ಪರಿಹರಿಸುವ ಗೋಜಿಗೆ ಹೋಗಿಲ್ಲ. ದೇಶದ ಜನರನ್ನೆಲ್ಲ ಒಂದುಗೂಡಿಸಿ 'ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿ ತೆರೆ'ಯುವ ಕೆಲಸವನ್ನು ಮಲ್ಲಿಕಾರ್ಜನ ಖರ್ಗೆಯವರ ನೇತೃತ್ವದ ಕಾಂಗ್ರೆಸ್ ಮಾಡುತ್ತಿದೆ. ಖರ್ಗೆಯವರ ಕರ್ಮಭೂಮಿಯಾದ ಕರ್ನಾಟಕದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ, ಇದಕ್ಕೆ ಹೆಗಲು ಕೊಟ್ಟು ಮುನ್ನಡೆಯುತ್ತಿದೆ.

'ಗಾಂಧಿ ನಡಿಗೆ'

ಮಹಾತ್ಮ ಗಾಂಧಿಯವರ 155ನೇ ಜನ್ಮದಿನಾಚರಣೆ ಅಂಗವಾಗಿ ಇದೇ ಅಕ್ಟೋಬರ್ 2ರಂದು ಬೆಂಗಳೂರಿನಲ್ಲಿ 'ಗಾಂಧಿ ನಡಿಗೆ' ಆಯೋಜಿಸಲಾಗಿತ್ತು. ನಗರದ ಗಾಂಧಿ ಭವನದಿಂದ ವಿಧಾನಸೌಧದ ಆವರಣದಲ್ಲಿ ಇರುವ ಗಾಂಧಿ ಪ್ರತಿಮೆವರೆಗೆ 'ಗಾಂಧಿ ನಡಿಗೆ' ನಡೆಯಿತು. ಗಾಂಧೀಜಿ ಅವರ ದಂಡೀಯಾತ್ರೆ ಮತ್ತು ಸತ್ಯಾಗ್ರಹದಿಂದ ಪ್ರೇರಣೆ ಪಡೆದು ಆಯೋಜಿಸಲಾಗಿದ್ದ 'ಗಾಂಧಿ ನಡಿಗೆ'ಯು, ಯಶಸ್ವಿಯಾಗಿತ್ತು. ಗಾಂಧೀಜಿ ಅವರು ಪ್ರತಿಪಾದಿಸಿದ್ದ ಸತ್ಯಾಗ್ರಹ, ಅಹಿಂಸೆ ಮತ್ತು ಸ್ವಚ್ಛತೆಯ ಪರಿಕಲ್ಪನೆಗಳನ್ನು ಹೊಸ ತಲೆಮಾರಿನವರಿಗೆ ಮನವರಿಕೆ ಮಾಡಿಕೊಟ್ಟಿತು.

ಗ್ಯಾರಂಟಿಗಳಿಗೆ ಗಾಂಧೀವಾದವೇ ಪ್ರೇರಣೆ

ರಾಜ್ಯ ಕಾಂಗ್ರೆಸ್ ಸರ್ಕಾರು ಜಾರಿಗೆ ತಂದಿರುವ ಐದು ಗ್ಯಾರೆಂಟಿಗಳಿಗೆ ಗಾಂಧೀವಾದವೇ ಪ್ರೇರಣೆ. ಮಹಾತ್ಮ ಗಾಂಧಿ ಅವರು ಗ್ರಾಮ ಸ್ವರಾಜ್ಯದ ಕನಸು ಕಂಡಿದ್ದರು. ದೇಶವು ಸದೃಢವಾಗಬೇಕೆಂದರೆ ದೇಶದ ಎಲ್ಲ ಗ್ರಾಮಗಳೂ ಆರ್ಥಿಕವಾಗಿ ಸಬಲವಾಗಬೇಕು ಎಂದು ಪ್ರತಿಪಾದಿಸಿದ್ದರು. ಆ ನೆಲೆಯಲ್ಲಿಯೇ ಐದು ಗ್ಯಾರೆಂಟಿ ಯೋಜನೆಗಳನ್ನು ರೂಪಿಸಲಾಗಿದೆ.

ರಾಜ್ಯದ ಮಹಿಳೆಯರ ಕೈಯಲ್ಲಿ ಹಣ ಇದ್ದರೆ, ಅವರು ಅದನ್ನು ಸರಿಯಾಗಿ ಬಳಸಿಕೊಳ್ಳುತ್ತಾರೆ. ಹೀಗಾಗಿ ಪ್ರತಿ ಕುಟುಂಬದ ಯಜಮಾನಿಗೆ ಮಾಸಿಕ ₹2,000 ನೀಡುವ 'ಗೃಹಲಕ್ಷ್ಮೀ' ಯೋಜನೆ ಜಾರಿಗೆ ತರಲಾಗಿದೆ. ಹಲವು ಮಹಿಳೆಯರು ಈ ಹಣವನ್ನು ಕುಟುಂಬ ನಿರ್ವಹಣೆಗೆ, ಮಕ್ಕಳ ಶಿಕ್ಷಣಕ್ಕೆ, ಸಣ್ಣ–ಪುಟ್ಟ ಅಂಗಡಿ ತೆರೆಯಲು ಮತ್ತು ಕೊಳವೆ ಬಾವಿ ಕೊರೆಸಲು ಸದ್ಬಳಕೆ ಮಾಡಿಕೊಂಡಿದ್ದಾರೆ.

ಉಚಿತ ವಿದ್ಯುತ್ ನೀಡುವ ಗೃಹಜ್ಯೋತಿ ಯೋಜನೆಯಿಂದ, ಅನ್ನಭಾಗ್ಯ ಯೋಜನೆಯಿಂದ ಫಲಾನುಭವಿ ಕುಟುಂಬಗಳಿಗೆ ಹಣ ಉಳಿತಾಯವಾಗುತ್ತಿದೆ. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಶಕ್ತಿ ಯೋಜನೆಯ ಮೂಲಕವೂ ಕುಟುಂಬ ನಿರ್ವಹಣೆಯ ವೆಚ್ಚ ಇಳಿಕೆಯಾಗುತ್ತಿದೆ. ಈ ಎಲ್ಲಾ ಯೋಜನೆಗಳ ಕಾರಣದಿಂದ ಮಹಿಳೆಯರ ಉಳಿತಾಯ ವೃದ್ಧಿಸಿದೆ. ಯುವನಿಧಿಯ ಕಾರಣದಿಂದ ವಿದ್ಯಾವಂತ ನಿರುದ್ಯೋಗಿ ಯುವಕರ ಬಳಿಯೂ ಹಣ ಚಲಾವಣೆಯಾಗುತ್ತಿದೆ.

ಹೀಗೆ ಉಳಿಯುತ್ತಿರುವ ಹಣವನ್ನು ಅವರು ಕುಟುಂಬದ ಅಭಿವೃದ್ಧಿ ಕಾರ್ಯಗಳಿಗೆ ಬಳಸುತ್ತಿದ್ದು, ತಳ ಸಮುದಾಯ ಮತ್ತು ಕೆಳಮಧ್ಯಮ ವರ್ಗದ ಜನರ ಆರ್ಥಿಕತೆ ಚುರುಕುಗೊಂಡಿದೆ. ಪರಿಣಾಮವಾಗಿ ರಾಜ್ಯದ ಆರ್ಥಿಕತೆಗೆ ಹೊಸ ಚಾಲನಾಶಕ್ತಿ ದೊರೆತಿದೆ. ಗಾಂಧೀಜಿ ಅವರ ಗ್ರಾಮಸ್ವರಾಜ್ಯದ ಕನಸನ್ನು ನನಸಾಗಿಸುವತ್ತ ಈ ಐದು ಗ್ಯಾರೆಂಟಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ.

4.5 ಕೋಟಿ ಗ್ಯಾರಂಟಿ ಯೋಜನೆಗಳ ಲಾಭ ಪಡೆಯುತ್ತಿರುವ ಒಟ್ಟು ಫಲಾನುಭವಿಗಳು

- **4.42 ಕೋಟಿ** ಅನ್ನಭಾಗ್ಯ
- **1.28 ಕೋಟಿ** ಗೃಹಲಕ್ಷ್ಮಿ
- **1.49 ಕೋಟಿ** ಗೃಹಜ್ಯೋತಿ
- **1.45 ಕೋಟಿ** ಯುವನಿಧಿ
- **60 ಲಕ್ಷ** (ಪ್ರತಿ ದಿನದ ಸರಾಸರಿ) ಶಕ್ತಿ ಯೋಜನೆ

ಭಾರತ ಜೋಡೋ ಯಾತ್ರೆ

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 4,000ಕಿ.ಮೀ.ಗಿಂತಲೂ ಹೆಚ್ಚು ದೂರವನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿದ ರಾಹುಲ್ ಗಾಂಧಿ ಅವರ 'ಭಾರತ್ ಜೋಡೊ' ಯಾತ್ರೆಯು, ಮಹಾತ್ಮ ಗಾಂಧಿ ಅವರ ಸತ್ಯಾಗ್ರಹದಿಂದಲೇ ಪ್ರೇರಣೆ ಪಡೆದದ್ದು. ಜನರ ಬಳಿಯೇ ಹೋಗಿ ಸತ್ಯವನ್ನು ತಿಳಿಸುವ ಮತ್ತು ಜನರ ಸತ್ಯವನ್ನು ಅರಿಯುವುದಕ್ಕಾಗಿ ಕೈಗೊಳ್ಳಲಾದ ಈ ಯಾತ್ರೆಯು ಕರ್ನಾಟಕದಲ್ಲೂ ರಾಜಕೀಯ ಸಮೀಕರಣವನ್ನು ಬದಲಿಸಿತ್ತು.

ಚಾಮರಾಜನಗರದ ಗುಂಡ್ಲುಪೇಟೆಯನ್ನು 2022ರ ಸೆಪ್ಟೆಂಬರ್ 30ರಂದು ಪ್ರವೇಶಿಸಿದ ಯಾತ್ರೆಯು, ರಾಜ್ಯದ 20 ವಿಧಾನಸಭಾ ಕ್ಷೇತ್ರಗಳನ್ನು ಹಾದು ಹೋಗಿತ್ತು. 21 ದಿನಗಳ ಅವಧಿಯಲ್ಲಿ ರಾಹುಲ್ ಗಾಂಧಿ ಜತೆಗೆ ರಾಜ್ಯ ಕಾಂಗ್ರೆಸ್ ನಾಯಕರು, ಕಾರ್ಯಕರ್ತರು, ಸಾರ್ವಜನಿಕರು ಮತ್ತು ಗಣ್ಯರು 511 ಕಿ.ಮೀ.ನಷ್ಟು ಹೆಜ್ಜೆಹಾಕಿದರು. ಸಾರ್ವಜನಿಕರಿಂದ ಅಭೂತಪೂರ್ವ ಪ್ರತಿಕ್ರಿಯೆ ದೊರೆತ ಈ ಯಾತ್ರೆಯು, 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿನ ಅಂತರವನ್ನು ಹೆಚ್ಚಿಸಿತು.

ಈ ಯಾತ್ರೆ ಸಾಗಿದ 20 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ 15ನ್ನು ಗೆದ್ದುಕೊಂಡಿತು. ಅದಕ್ಕೂ ಮೊದಲು 20ರ ಪೈಕಿ ಬಿಜೆಪಿ 9 ಕ್ಷೇತ್ರಗಳು, ಜೆಡಿಎಸ್ ಆರು ಕ್ಷೇತ್ರಗಳು ಮತ್ತು ಕಾಂಗ್ರೆಸ್ ಐದು ಕ್ಷೇತ್ರಗಳನ್ನು ಹೊಂದಿದ್ದವು. ತನ್ನ ಐದು ಕ್ಷೇತ್ರಗಳನ್ನು ಕಾಂಗ್ರೆಸ್ ಉಳಿಸಿಕೊಂಡಿತ್ತಲ್ಲದೆ, ಬಿಜೆಪಿಯ ಐದು ಮತ್ತು ಜೆಡಿಎಸ್‌ನ ಐದು ಕ್ಷೇತ್ರಗಳನ್ನು ಗೆದ್ದುಕೊಂಡಿತು. ಜತೆಗೆ 20 ಕ್ಷೇತ್ರಗಳಲ್ಲೂ ಮತಪ್ರಮಾಣವನ್ನು ಹೆಚ್ಚಿಸಿಕೊಂಡಿತು. ಮಹಾತ್ಮ ಗಾಂಧಿ ಅವರ ಪರಿಕಲ್ಪನೆಯ ಪಾದಯಾತ್ರೆಯು ಎಲ್ಲ ಕಾಲಕ್ಕೂ ಪರಿಣಾಮಕಾರಿ ಮತ್ತು ಅತ್ಯಂತ ಶಕ್ತಿಯುತ ಅಸ್ತ್ರ ಎಂಬುದನ್ನು ರಾಹುಲ್ ಗಾಂಧಿ ಅವರ 'ಭಾರತ್ ಜೋಡೊ' ಯಾತ್ರೆ ಸಾಬೀತು ಮಾಡಿತ್ತು.

ಸ್ಪರ್ಧಾ ವಾಣಿ

31.5 ಇಂಚು ಓರೆಯಾದ ಭೂಮಿ!

ಈಚೆಗೆ ಹವಾಮಾನ ಬದಲಾವಣೆ, ಜಾಗತಿಕ ಉಷ್ಣತೆಯ ಏರಿಕೆ ಹಾಗೂ ನಿಸರ್ಗದಲ್ಲಿ ಅತಿಯಾದ ಮಾನವ ಹಸ್ತಕ್ಷೇಪಗಳಿಂದಾಗಿ ಭೂಸಂರಚನೆ, ಭೌಗೋಳಿಕ ವಿದ್ಯಮಾನಗಳಲ್ಲೂ ಕೂಡ ಗಮನಾರ್ಹ ಬದಲಾವಣೆ ಕಂಡುಬರುತ್ತಿವೆ. ಈ ಬದಲಾವಣೆಗಳು ಮುಂದೊಮ್ಮೆ ಮನುಕುಲಕ್ಕೆ ಅಪಾಯ ತಂದೊಡ್ಡುವ ಸಾಧ್ಯತೆ ಇದ್ದು, ಈ ನಿಟ್ಟಿನಲ್ಲಿ ಈಗಲೇ ಸೂಕ್ತ ಮುನ್ನೆಚ್ಚರಿಕೆಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ. ಇಂಥ ಕೆಲ ಮಹತ್ವದ ಭೂವಿದ್ಯಮಾನಗಳ ಮೇಲೆ ಇಲ್ಲಿ ಬೆಳಕು ಚೆಲ್ಲಲಾಗಿದೆ

ಚನ್ನಬಸಪ್ಪ ರೊಟ್ಟಿ

'ಜಿಯೋಫಿಸಿಕಲ್ ರಿಸರ್ಚ್ ಲೆಟರ್ಸ್' ಸಂಸ್ಥೆಯ ಇತ್ತೀಚಿನ ಅಧ್ಯಯನ ಅತಿಯಾದ ಅಂತರ್ಜಲ ಹೊರತೆಗೆಯುವಿಕೆಯಿಂದಾಗಿ ಭೂಮಿಯ ತಿರುಗುವ ಧ್ರುವದಲ್ಲಿ ಪ್ರಮುಖ ಬದಲಾವಣೆಯಾಗಿದ್ದು, ಭೂಮಿ 31.5 ಇಂಚು ಓರೆಯಾಗಿದೆ ಎಂಬುದನ್ನು ಬಹಿರಂಗಪಡಿಸಿದೆ. ಕಿ-ವೀನ್ ಸಿಯೊ ಮತ್ತು ಅವರ ತಂಡದಿಂದ ನಡೆದ ಸಂಶೋಧನೆ 1993 ರಿಂದ 2010 ರವರೆಗಿನ ದತ್ತಾಂಶಗಳನ್ನು ಪರಿಶೀಲಿಸಿ ಈ ನಿರ್ಣಯಕ್ಕೆ ಬಂದಿದೆ. ಅತಿಯಾದ ಅಂತರ್ಜಲ ಹೊರತೆಗೆಯುವಿಕೆಯಿಂದಾಗಿ ಭೂಮಿಯ ಧ್ರುವವು ಸರಿಸುಮಾರು 80 ಸೆಂಟಿಮೀಟರ್ (31.5 ಇಂಚು) ಪೂರ್ವಕ್ಕೆ ಸ್ಥಳಾಂತರಗೊಂಡಿದೆ ಎಂದು ಈ ಅಧ್ಯಯನ ವರದಿ ಸೂಚಿಸಿದೆ.

ಭೂಮಿಯ ಅಂತರಾಳದಿಂದ ಸುಮಾರು 2,150 ಗಿಗಾಟನ್‌ಗಳಷ್ಟು ಅಂತರ್ಜಲವನ್ನು ಹೊರತೆಗೆದಿರುವುದರಿಂದ ಈ ರೀತಿ ವಿದ್ಯಮಾನ ನಡೆದಿದೆ ಎಂದು ತಜ್ಞರು ತಿಳಿಸಿದ್ದಾರೆ. ಅಂತರ್ಜಲಮಟ್ಟ ಕುಸಿತ ಸಮುದ್ರ ಮಟ್ಟದಲ್ಲಿ ಸುಮಾರು 0.24 ಇಂಚುಗಳಷ್ಟು ಏರಿಕೆಗೆ ಕಾರಣವಾಗಿದೆ. ಅಂತರ್ಜಲವನ್ನು ಹೊರತೆಗೆದು ಸಾಗರಗಳಿಗೆ ಹರಿಸುವುದರಿಂದ ಭೂಮಿಯ ದ್ರವ್ಯರಾಶಿ ಪುನರ್‌ರಚನೆಯಾಗಿದೆ. ದ್ರವ್ಯರಾಶಿ ಬದಲಾವಣೆ ಭೂಮಿಯ ಸಮತೋಲನವನ್ನು ಬದಲಾಯಿಸಿದ್ದು, ಧ್ರುವೀಯ ಚಲನೆಯ ಮೇಲೆ ಪ್ರಭಾವ ಬೀರಿದೆ ಎಂದು ಅಧ್ಯಯನ ತಿಳಿಸಿದೆ.

ವಿಶೇಷವಾಗಿ ಪಶ್ಚಿಮ ಉತ್ತರ ಅಮೆರಿಕಾ ಮತ್ತು ವಾಯುವ್ಯ ಭಾರತದಲ್ಲಿ ಭೂಮಿಯ ಅಂತರ್ಜಲದ ಬಳಕೆಯ ಪ್ರಮಾಣ ಮಿತಿಮೀರಿದೆ ಎಂದು ಅಧ್ಯಯನವು ಎಚ್ಚರಿಸಿದೆ. ಅಂತರ್ಜಲ ಕುಸಿತವು ದೀರ್ಘಾವಧಿಯ ಹವಾಮಾನ ಸ್ಥಿರತೆಗೂ ಅಪಾಯವನ್ನು ಉಂಟುಮಾಡುತ್ತದೆ. ಸಾವಿರಾರು ವರ್ಷಗಳಿಂದ, ಭೂಮಿಯ ಅಕ್ಷದಲ್ಲಿನ ಬದಲಾವಣೆಗಳು ಜಾಗತಿಕ ಹವಾಮಾನ ವ್ಯವಸ್ಥೆಗಳ ಮೇಲೆ ಪ್ರಮುಖ ಪರಿಣಾಮಗಳನ್ನು ಬೀರಲಿವೆ.

30 ವರ್ಷಗಳಲ್ಲಿ ಒಣಗಿದ ಶೇ 77ರಷ್ಟು ಭೂಭಾಗ!

ಕಳೆದ ಮೂರು ದಶಕಗಳಲ್ಲಿ ಭೂಮಿಯ ಶೇಕಡ 77ರಷ್ಟು ಭೂಮಿ ತೇವಾಂಶವನ್ನು ಕಳೆದುಕೊಂಡು ಒಣಗಿದೆ ಎಂದು ವಿಶ್ವಸಂಸ್ಥೆ ವರದಿ ಮಾಡಿದೆ. ಇದರಿಂದ ಕೃಷಿ, ಜಲಸಂಪನ್ಮೂಲ ಮತ್ತು ವನ್ಯಜೀವಿಗಳಿಗೆ ಗಂಭೀರ ಅಪಾಯ ಉಂಟಾಗಿದೆ ಮತ್ತು ಈ ಸವಾಲುಗಳನ್ನು ಎದುರಿಸಲು ತುರ್ತು ಕ್ರಮ ಹಾಗೂ ಸುಸ್ಥಿರ ಭೂ ಬಳಕೆಯ ಅಗತ್ಯವಿದೆ ಎಂದು ವಿಶ್ವಸಂಸ್ಥೆ ಎಚ್ಚರಿಸಿದೆ.

ಭೂಶುಷ್ಕತೆಯಿಂದ ಆಫ್ರಿಕಾ ಮತ್ತು ಏಷ್ಯಾದ ಮೇಲೆ ಹೆಚ್ಚಿನ ಆರ್ಥಿಕ ಪರಿಣಾಮಗಳು ಉಂಟಾಗಿವೆ ಎಂಬುದನ್ನು ವರದಿ ಗುರುತಿಸಿದೆ.

ಆಫ್ರಿಕಾ ಖಂಡ 1990 ಮತ್ತು 2015 ರ ನಡುವೆ ಭೂಶುಷ್ಕ ಮತ್ತು ಬರಗಾಲಗಳಿಂದ ತನ್ನ GDP ಯ ಸರಿಸುಮಾರು 12 ಪ್ರತಿಶತವನ್ನು ಕಳೆದುಕೊಂಡಿದೆ. ಮುಂದಿನ ಐದು ವರ್ಷಗಳಲ್ಲಿ ಶೇ 16 ಪ್ರತಿಶತ GDP ನಷ್ಟ ಅನುಭವಿಸಲಿದೆ. ಏಷ್ಯಾ ಖಂಡ ಕೂಡ ಇದೇ ರೀತಿಯ ಪರಿಸ್ಥಿತಿಗಳಿಂದಾಗಿ ಸುಮಾರು 7 ಪ್ರತಿಶತದಷ್ಟು GDP ನಷ್ಟ ಅನುಭವಿಸಲಿದೆ ಎಂದು ವರದಿ ಹೇಳಿದೆ.

ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಮೆಕ್ಕೆಜೋಳ ಹಾಗೂ ಜೋಳದ ಉತ್ಪಾದನೆ 2050 ರ ವೇಳೆಗೆ ಶೇ 50 ರಷ್ಟು ಕುಸಿಯಲಿದೆ ಎಂಬ ಆತಂಕವನ್ನು ವರದಿ ವ್ಯಕ್ತಪಡಿಸಿದೆ. ಇದರಿಂದ ಆಹಾರ ಭದ್ರತೆಯೂ ಡೋಲಾಯಮಾನವಾಗಲಿದೆ. ಒಣಭೂಮಿಗಳಲ್ಲಿ ನೀರಿನ ಲಭ್ಯತೆಯು ಸೀಮಿತವಾಗಿರುತ್ತದೆ. 2050 ರ ವೇಳೆಗೆ ವಿಶ್ವದ ಮೂರನೇ ಎರಡರಷ್ಟು ಭೂಮಿಯಲ್ಲಿ ನೀರಿನ ಸಂಗ್ರಹ ಕಡಿಮೆಯಾಗಲಿದೆ ಎಂದು ವರದಿ ಭವಿಷ್ಯ ನುಡಿದಿದೆ.

ಈ ನಿಟ್ಟಿನಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವುದು, ಹವಾಮಾನ ಬದಲಾವಣೆಯನ್ನು ನಿಯಂತ್ರಿಸುವುದು ಹಾಗೂ ಅಳಿವಿನಂಚು ತಲುಪಿರುವ ದುರ್ಬಲ ಪರಿಸರ ವ್ಯವಸ್ಥೆಗಳು ಮತ್ತು ಸಮುದಾಯಗಳನ್ನು ರಕ್ಷಿಸಲು ಪರಿಣಾಮಕಾರಿ ಕಾರ್ಯತಂತ್ರಗಳನ್ನು ಅಳವಡಿಸಬೇಕು ಎಂದು ತಜ್ಞರು ಸೂಚಿಸಿದ್ದಾರೆ. ❖

2030 ರ ಹೊತ್ತಿಗೆ ಆರ್ಕ್ಟಿಕ್‌ನ ಮಂಜುಗಡ್ಡೆ ಕರಗುವ ಸಾಧ್ಯತೆ

ಗೋಥೆನ್‌ಬರ್ಗ್ ವಿಶ್ವವಿದ್ಯಾಲಯ ಮತ್ತು ಕೊಲೊರಾಡೋ ಬೌಲ್ಡರ್ ವಿಶ್ವವಿದ್ಯಾಲಯದ ಸಂಶೋಧಕರು ಇತ್ತೀಚೆಗೆ ನಡೆಸಿದ ಅಧ್ಯಯನದ ಪ್ರಕಾರ, ಆರ್ಕ್ಟಿಕ್ ಮಹಾಸಾಗರದಲ್ಲಿರುವ ಮಂಜುಗಡ್ಡೆ 2030 ರ ವೇಳೆಗೆ ಸಂಪೂರ್ಣ ಕರಗುವ ಸಾಧ್ಯತೆ ಇದೆ. ಹೆಚ್ಚುತ್ತಿರುವ ಹಸಿರುಮನೆ ಅನಿಲಗಳ (GHGs) ಕಾರಣದಿಂದ ಈ ಬದಲಾವಣೆ ಉಂಟಾಗಲಿದ್ದು, ಇದರಿಂದ ಜಾಗತಿಕ ತಾಪಮಾನ ಹಾಗೂ ಸಮುದ್ರ ಮಟ್ಟದಲ್ಲಿ ಮತ್ತಷ್ಟು ಏರಿಕೆಯಾಗಲಿದೆ.

ಆರ್ಕ್ಟಿಕ್ ಸಮುದ್ರದ ಮಂಜುಗಡ್ಡೆ ಕಳೆದ 40 ವರ್ಷಗಳಲ್ಲಿ ಪ್ರತಿ ದಶಕಕ್ಕೆ ಸರಿಸುಮಾರು ಶೇ 12.6 ರಷ್ಟು ಕರಗುತ್ತಿದೆ. ಆರ್ಕ್ಟಿಕ್ ಸಮುದ್ರದ ಮಂಜುಗಡ್ಡೆಯ ಕರಗುವಿಕೆಯಿಂದ ಆರ್ಕ್ಟಿಕ್ ಪರಿಸರ ವ್ಯವಸ್ಥೆಗೂ ತೀವ್ರ ಅಪಾಯ ಉಂಟಾಗಲಿದ್ದು, ಹಿಮಕರಡಿಗಳು, ವಾಲ್ರಸ್ ಮತ್ತು ಸೀಲ್‌ಗಳಂಥ ಪ್ರಭೇದಗಳ ಅಸ್ತಿತ್ವಕ್ಕೆ ಕುತ್ತು ಬರಲಿದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಮಂಡಳಿಯ ಸ್ಥಾಪನೆಯ ಹಿಂದಿನ ಶಕ್ತಿ ಎಂದು ಯಾರನ್ನು ಕರೆಯಬಹುದು?
ಎ. ಜವಾಹರ್ ಲಾಲ್ ನೆಹರು.
ಬಿ. ಸರ್ದಾರ್ ವಲ್ಲಭ್‌ಬಾಯ್ ಪಟೇಲ್.
ಸಿ. ಡಾ. ವರ್ಗೀಸ್ ಕುರಿಯನ್.
ಡಿ. ಶ್ರೀಮತಿ ಇಂದಿರಾಗಾಂಧಿ.
ಉತ್ತರ : ಸಿ

2. ಕೆಳಗಿನ ಯಾವ ಸಂಸ್ಥೆ ಉಕ್ಕು ನಿರ್ಮಾಣದಲ್ಲಿ ಸೃಷ್ಟಿಯಾಗುವ ತ್ಯಾಜ್ಯವನ್ನು ಬಳಸಿಕೊಳ್ಳುವ ತಂತ್ರಜ್ಞಾನವನ್ನು ಕಂಡು ಹಿಡಿದಿದೆ?
ಎ. ಕೇಂದ್ರ ರಸ್ತೆ ಸಂಶೋಧನಾ ಸಂಸ್ಥೆ.
ಬಿ. ಕೇಂದ್ರ ರೈಲು ಸಂಶೋಧನಾ ಸಂಸ್ಥೆ.
ಸಿ. ಕೇಂದ್ರ ರಸ್ತೆ ಮತ್ತು ರೈಲು ಸಂಶೋಧನಾ ಸಂಸ್ಥೆ.
ಡಿ. ಕೇಂದ್ರ ಹಡಗು ನಿರ್ಮಾಣ ಸಂಶೋಧನಾ ಸಂಸ್ಥೆ.
ಉತ್ತರ : ಎ

3. ಕೆಳಗಿನ ಯಾವ ಸ್ಥಳಗಳಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಅನುಮೋದಿಸಿದರು?
ಎ. ರಿಯೋ ಡಿ ಜನೇ ರಿಯೋ.
ಬಿ. ಲಂಡನ್. ಸಿ. ಟೋಕಿಯೋ.
ಡಿ. ಸ್ಯಾನ್ ಫ್ರಾನ್ಸಿಸ್ಕೋ.
ಉತ್ತರ : ಎ

4. ಬಹು ಆಯಾಮದ ಬಡತನದಿಂದ ಹೊರಬರುವ ವಿಚಾರದಲ್ಲಿ ಕೆಳಗಿನ ಯಾವ ರಾಜ್ಯಗಳು ಗಣನೀಯ ಪ್ರಗತಿಯನ್ನು ತೋರಿದೆ?
1. ಮಧ್ಯಪ್ರದೇಶ. 2. ಬಿಹಾರ್.
3. ಉತ್ತರ ಪ್ರದೇಶ. 4. ಒಡಿಸ್ಸ.
5. ರಾಜಸ್ಥಾನ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2, 3, 4 ಮತ್ತು 5 ಬಿ. 1 ಮತ್ತು 3
ಸಿ. 2 ಮತ್ತು 4 ಡಿ. 3 ಮತ್ತು 5
ಉತ್ತರ : ಎ

5. ರಫ್ತು ಸಿದ್ಧತೆ ಸೂಚ್ಯಂಕದಲ್ಲಿ ಕೆಳಗಿನ ಯಾವ ರಾಜ್ಯ/ಕೇಂದ್ರಾಡಳಿತ ಪ್ರದೇಶ ಕೊನೆಯ ಸ್ಥಾನವನ್ನು ಅಲಂಕರಿಸಿದೆ?
ಎ. ಲಕ್ಷದ್ವೀಪ
ಬಿ. ಅಂಡಮಾನ್ ಮತ್ತು ನಿಕೋಬಾರ್
ಸಿ. ಕೇರಳ ಡಿ. ಮಧ್ಯಪ್ರದೇಶ
ಉತ್ತರ : ಎ

6. ಇತ್ತೀಚೆಗೆ ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯಲ್ಲಿ ಕೆಳಗಿನ ಯಾವ ಸಾಮ್ರಾಜ್ಯದ ಕಾಲದ ಕಲಾಕೃತಿಗಳು ಕಂಡುಬಂದಿದೆ?
ಎ. ಶಾತವಾಹನ ಸಾಮ್ರಾಜ್ಯ
ಬಿ. ಕಾಕತೀಯ ಸಾಮ್ರಾಜ್ಯ
ಸಿ. ಚಾಲುಕ್ಯ ಸಾಮ್ರಾಜ್ಯ
ಡಿ. ಚೋಳ ಸಾಮ್ರಾಜ್ಯ
ಉತ್ತರ : ಬಿ

7. ಭಾರತ-ಫ್ರಾನ್ಸ್ ದ್ವಿಪಕ್ಷೀಯ ಸಂಬಂಧಕ್ಕೆ ಸಂಬಂಧಿಸಿದ ಸರಿಯಾದ ಹೇಳಿಕೆಗಳನ್ನು ಗುರುತಿಸಿ?
1. ಭಾರತ ಮತ್ತು ಫ್ರಾನ್ಸ್ ರಾಷ್ಟ್ರಗಳು ನಡುವಿನ ದ್ವಿ ತೆರಿಗೆ ವಿನಾಯತಿ ಒಪ್ಪಂದ ಜಾರಿಗೆ ಬಂದಿದೆ.
2. ಭಾರತದ ಗಗನಯಾನ ಅಭಿಯಾನದಲ್ಲಿ ಫ್ರಾನ್ಸ್ ರಾಷ್ಟ್ರ ಭಾರತಕ್ಕೆ ಬೆಂಬಲವನ್ನು ನೀಡಲು ಅನುಮೋದಿಸಿದೆ.
3. ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಎರಡು ರಾಷ್ಟ್ರಗಳು ಭಯೋತ್ಪಾದನೆಯ ವಿರುದ್ಧ ಹೋರಾಡುವ ನಿರ್ಧಾರವನ್ನು ಕೈಗೊಂಡಿವೆ.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2 ಡಿ. 1, 2 ಮತ್ತು 3
ಉತ್ತರ : ಡಿ

8. ಕೆಳಗಿನ ಯಾವ ಅಂಶಗಳನ್ನು ಭಾರತ ಮತ್ತು ಫ್ಯಾನ್ಸ್ ರಾಷ್ಟ್ರಗಳ ನಡುವಿನ ಸಿದ್ಧಾಂತ ಎಂದು ಪರಿಗಣಿಸಬಹುದು?
1. ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡದೇ ಇರುವುದು.
2. ಕಾರ್ಯತಂತ್ರದ ಸ್ವಾಯತ್ತತೆಯಲ್ಲಿ ಸಮಾನ ನಂಬಿಕೆಯನ್ನು ಹೊಂದಿರುವುದು.
3. ಮಿಲಿಟರಿ ಒಕ್ಕೂಟಗಳಿಗೆ ಸಹಮತವನ್ನು ಸೂಚಿಸದೆ ಇರುವುದು.
ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.
ಎ. 1, 2 ಮತ್ತು 3 ಬಿ. 2 ಮತ್ತು 3
ಸಿ. 1 ಮತ್ತು 2 ಡಿ. 1 ಮತ್ತು 3
ಉತ್ತರ : ಎ

9. ಕೆಳಗಿನ ಯಾವ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ಕೊಲಿಜಿಯಂ ವ್ಯವಸ್ಥೆಯನ್ನು ಜಾರಿಗೆ ತರುವಂತೆ ಆದೇಶಿಸಿತು?
ಎ. ಮೊದಲನೇ ನ್ಯಾಯಾಧೀಶರ ಪ್ರಕರಣ.
ಬಿ. ಎರಡನೇ ನ್ಯಾಯಾಧೀಶರ ಪ್ರಕರಣ.
ಸಿ. ಮೂರನೇ ನ್ಯಾಯಾಧೀಶರ ಪ್ರಕರಣ.
ಡಿ. ನಾಲ್ಕನೇ ನ್ಯಾಯಾಧೀಶರ ಪ್ರಕರಣ.
ಉತ್ತರ : ಸಿ

10. ನಾಲ್ಕನೇ ನ್ಯಾಯಾಧೀಶರ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಕೆಳಗಿನ ಯಾವ ಸಂಸ್ಥೆಯನ್ನು ಸಂವಿಧಾನ ಬಾಹಿರ ಎಂದು ಘೋಷಿಸಿತು?
ಎ. ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ.
ಬಿ. ಪ್ರಾದೇಶಿಕ ನ್ಯಾಯಾಂಗೀಯ ನೇಮಕಾತಿ ಆಯೋಗ.
ಸಿ. ರಾಜ್ಯ ನ್ಯಾಯಾಂಗೀಯ ನೇಮಕಾತಿ ಆಯೋಗ.
ಡಿ. ಕೇಂದ್ರ ನ್ಯಾಯಾಂಗೀಯ ನೇಮಕಾತಿ ಮತ್ತು ಬಡ್ತಿ ಆಯೋಗ.
ಉತ್ತರ : ಎ

11. ಭಾರತದಲ್ಲಿ ವಿಶೇಷ ಆರ್ಥಿಕ ವಲಯಗಳು ಕೆಳಗಿನ ಯಾವ ಕಾಯ್ದೆಯ ಜಾರಿಯ ನಂತರ ಅಸ್ತಿತ್ವಕ್ಕೆ ಬಂದವು?
ಎ. ವಿಶೇಷ ಆರ್ಥಿಕ ವಲಯ ಕಾಯ್ದೆ-2005
ಬಿ. ವಿಶೇಷ ಆರ್ಥಿಕ ವಲಯ ಕಾಯ್ದೆ-2006
ಸಿ. ವಿಶೇಷ ಆರ್ಥಿಕ ವಲಯ ಕಾಯ್ದೆ-2000
ಡಿ. ವಿಶೇಷ ಆರ್ಥಿಕ ವಲಯ ಕಾಯ್ದೆ-1999
ಉತ್ತರ : ಎ

12. ರಾಷ್ಟ್ರೀಯ ಸೌರ ಅಭಿಯಾನವನ್ನು ಪ್ರಾಥಮಿಕ ಹಂತದಲ್ಲಿ ಯಾವ ಹೆಸರಿನಿಂದ ಕರೆಯಲಾಗುತ್ತಿತ್ತು?
ಎ. ಮಹಾತ್ಮ ಗಾಂಧಿ ರಾಷ್ಟ್ರೀಯ ಸೌರ ಅಭಿಯಾನ
ಬಿ. ಜವಾಹರ್ ಲಾಲ್ ನೆಹರು ರಾಷ್ಟ್ರೀಯ ಸೌರ ಅಭಿಯಾನ
ಸಿ. ಇಂದಿರಾಗಾಂಧಿ ರಾಷ್ಟ್ರೀಯ ಸೌರ ಅಭಿಯಾನ
ಡಿ. ಪ್ರಧಾನಮಂತ್ರಿ ರಾಷ್ಟ್ರೀಯ ಸೌರ ಅಭಿಯಾನ
ಉತ್ತರ : ಬಿ

13. ಇತ್ತೀಚೆಗೆ ಕೆಳಗಿನ ಯಾವ ಅರಬ್ ರಾಷ್ಟ್ರ ಮೊಟ್ಟಮೊದಲ ಬಾರಿಗೆ ಏಷ್ಯನ್-ಪೆಸಿಫಿಕ್ ಗ್ರೂಪ್ ಆನ್ ಮನಿ ಲಾಂಡರಿಂಗ್ ಸಂಸ್ಥೆಯ ವೀಕ್ಷಕ ಸ್ಥಾನಮಾನವನ್ನು ಪಡೆದಿದೆ?
ಎ. ಯುನೈಟೆಡ್ ಅರಬ್ ಎಮಿರೇಟ್ಸ್
ಬಿ. ಸೌದಿ ಅರೇಬಿಯಾ ಸಿ. ಕತಾರ್
ಬಿ. ಲೆಬನಾನ್
ಉತ್ತರ : ಎ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Second Language ENGLISH

Prose- Chapter 6 :The Discovery

Check Your Understanding

6. "Columbus is always furious when he hears the song 'Here's a keg o' rum, "What makes him react so?

Ans: Being a Captain, Columbus had a great responsibility. By nature, he had a strong will. He was not ready to give up his task. But the Seamen are very simple and ordinary persons and they were homesick. The discontented seamen are sung the song to criticize his captain. So whenever he heard the song he became furious because of this reason.

Share your Responses:

1.This section reveals the behavior of ________ (Fill in the blank).

Ans: This section reveals the behavior of Pepe.

2. Why do you think Pepe prefers to be in the company of Columbus?

Ans: Pepe was a young boy. He had great respect for Columbus. Pepe was an obedient, loyal and devoted servant of Columbus. The Seamen were against Columbus. So Pepe likes or prefers to be in the company of his beloved captain than any other.

3. Pepe is always eager to say that he is ever……….. to Columbus. (Fill in the blank).

Ans: Pepe is always eager to say that he is ever believed in Columbus.

4. Pepe warns Columbus about some people. Who are they?

Ans: Pepe warns Columbus about Seamen, the Seamen were discontented, and sometimes they were desperate

Share your Responses:

1. Seamen expressing their discontent even as Columbus can hear them?

Ans: The seamen had no fear about Colum-bus. They have unity and all were homesick and had no hope to get success. So they were expressing their discontentment even as Co-lumbus can hear.

2. Pepe is heard saying, "They shan't'
a. Who is meant by 'they'?
b. What does the boy mean by saying 'They shan't?

Ans: (a) They meant the crew or Seamen. (b) They shall not show, the mischief for the trouble maker.

3. "Santa Maria will be lighter for his carcass'. Whose words are Pepe quoting here? (Choose the right answer and complete the sentence).
a) Diego b) Francisco
c) Pedro e) Guillermo Ires

Ans: Pepe was quoting Guillermo Ires words.

4. Which statement of Francisco suggests that he too has lost his temper? Quote his words.

Ans: Francisco had lost his temper. His words were "Discipline is a thing of past, Sir. It's you or us".

Share your Responses:

1. 'Who's to put him in irons? challengers Guillerno. The person meant by 'him' in this context is:
a.Guillerno
b. The first man to move towards Columbus
c. Columbus
d. The first man who challenged Columbus

Ans: The first man to move towards Columbus.

2. 'I will perform it myself', says Columbus. What does 'it' mean here?

Ans: 'It' means that if nobody among the crew is available to put Guillermo in irons, Columbus would himself put Guillermo in irons.

3. 'Devil's track to nowhere', says Guillermo. What does this suggest about the thinking of the seamen?

Ans: Guillermo said the above words. The seamen thought that they were very clear that the track is not correct, it leads to nowhere, why should they take the risk for nothing.

4. After 'a perceptible pause', who grows more mutinous than others?
a. Name that character.
b. Quote his words.

Ans: (a) After a perceptible pause, Diego grew more mutinous than others. All are kept quiet except him. So he comments that. (b) Words for Children! Froth and Scum! We are men: reason with us.

Share your Responses

1. In his somewhat a long speech, what does Columbus say he has discovered?

Ans: In his long speech, Columbus said that he wanted to discover the New world but during his voyage, he discovered the new experience. That was when a man is given a vision, he must follow it alone. Loyalty passes like seaweed on an outgoing tide. Friendship breaks as a mast hollowed by worms. Discipline, duty and honorable obedience are bubbles that burst at the first contact. There remains but oneself.

2. Pepe excitedly declares that he is still loyal to the leader. What effect does it have on others like Juan and Guillermo?

Ans: Pepe's declaration of loyalty on the face of mutiny from others has a dramatic effect. People like Juan, who haven't been rebellious like the other seamen, feel guilty over their behaviour and try to explain their behaviour by saying that they are simple men who go by their simple understanding of things. Guillermo, though still surlily, states that things could be put off till the next day. Thus we see that Pepe's declaration of loyalty is a turning point in the course of events.

3. Compare Francisco's words of confession with what he had said earlier in anger. How does Columbus react to his confession?

Ans:- *(Contd………)*

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - CHEMISTRY

Alcohols, Phenols and Ethers

3(i) Draw the structures of all isomeric alcohols of molecular formula $C_5H_{12}O$ and give their IUPAC names.

(ii) Classify the isomers of alcohols in question.

Soln : (i) The structures & IUPAC names of all isomeric alcohols with a molecular formula of $C_5H_{12}O$ are shown below:

(a) CH_3-CH_2-CH_2-CH_2-CH_2-OH
Pentan – 1 – ol (1 °)

(b)

2 - methylbutan-1-ol (1°)

(c)

3 - methylbutan-1-ol (1°)

(d)

2, 2-Dimethylpropan-1-ol (1°)

(e)

Pentan-2-ol (2°)

(f)

3-Methylbutan-2-ol (2°)

(g)

Pentan-3-ol (2°)

(h)

2 – Methylbutan – 2 – ol (3 °)

(ii)Primary alcohol: Pentan –1– ol ; 2– Methylbutan–1 –ol ; 3 – Methylbutan – 1 – ol ; 2, 2 – Dimethylpropan – 1 – ol

Secondary alcohol: Pentan – 2–ol; 3– Methylbutan –2 –ol ; Pentan – 3 – ol

Tertiary alcohol: 2 – methylbutan – 2 – ol

***4)* Explain why propanol has higher boiling point than that of the hydrocarbon, butane.**

Soln: The presence of – OH group makes Propanol undergo intermolecular H-bonding. Butane, while on the other side does not have the same privilege



Hence, additional energy would be required to break the intermolecular hydrogen bonds.

This is the reason why hydrocarbon butane has a lower boiling point than propanol.

***5)*Alcohols are comparatively more soluble in water than hydrocarbons of comparable molecular masses. Explain this fact.**

Soln :Due to the presence of – OH group, alcohols form H – bonds with water.



As a result, alcohols are comparatively more soluble in water than hydrocarbons of comparable molecular masses.

***6)* What is meant by the hydroboration-oxidation reaction? Illustrate it with an example.**

Soln : The hydroboration – oxidation reaction is the reaction where borane is added in order for the oxidation to take place. For example, propan –1– ol is formed by making propene undergo the hydroboration–oxidation reaction. In the above reaction, the reaction between propene and diborane $(BH_3)_2$ takes place in order to form **trialkyl borane** which acts an additional product. This additional product is oxidized to alcohol by hydrogen peroxide in the presence of aqueous sodium hydroxide.



***7).*Explain why ortho nitrophenol is more acidic than ortho methoxyphenol.**

Soln : The nitro – group is an electron-withdrawing group. The existence of this group in the ortho position decreases the electron density in the O – H bond. Consequently, it is easier to give away a proton. Furthermore, the o-nitrophenoxide ion formed after the loss of protons is stabilized by resonance. Therefore, ortho nitrophenol is a stronger acid. In contrast, a methoxy group is an electron – releasing group. Hence, it increases the electron density in the O – H bond and thus, losing proton is not possible easily. Therefore, ortho – nitrophenol is more acidic than ortho – methoxyphenol.

ವಾಸುದೇವನ್ ನಾಯರ್ ನಿಧನ

ಕೋಯಿಕ್ಕೋಡ್(ಪಿಟಿಐ): ಮಲಯಾಳದ ಖ್ಯಾತ ಸಾಹಿತಿ ಹಾಗೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಎಂ.ಟಿ.ವಾಸುದೇವನ್ ನಾಯರ್ (91) ಹೃದಯಾಘಾತದಿಂದಾಗಿ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ಅನಾರೋಗ್ಯದಿಂದ ಬಳಲುತ್ತಿದ್ದ ನಾಯರ್ ಅವರನ್ನು ಕಳೆದ ವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೃದ್ರೋಗ ತಜ್ಞರು ಸೇರಿ ವಿವಿಧ ವೈದ್ಯರನ್ನು ಒಳಗೊಂಡ ತಂಡ ಅವರಿಗೆ ಚಿಕಿತ್ಸೆ ನೀಡುತ್ತಿತ್ತು.

'ಎಂ.ಟಿ' ಎಂದೇ ಪ್ರಸಿದ್ಧರಾಗಿದ್ದ ಅವರು ಒಟ್ಟು 9 ಕಾದಂಬರಿ, 19 ಸಣ್ಣ ಕತೆಗಳ ಸಂಕಲನಗಳನ್ನು ರಚಿಸಿದ್ದರು. 6 ಚಲನಚಿತ್ರಗಳನ್ನು ನಿರ್ದೇಶಿಸಿದ್ದ ಅವರು, 54 ಚಿತ್ರಗಳಿಗೆ ಚಿತ್ರಕತೆ ಬರೆದಿದ್ದರು. 7 ದಶಕಗಳ ಸಾಹಿತ್ಯಕ ಪಯಣದಲ್ಲಿ ಅವರು, ಪ್ರಬಂಧಗಳ ಹಲವು ಸಂಕಲನಗಳನ್ನು ಹಾಗೂ ಸ್ಮರಣ ಸಂಚಿಕೆಗಳನ್ನು ರಚಿಸಿದ್ದರು.

ಅವರ 'ನಾಲುಕೆಟ್ಟು' (ಪೂರ್ವಿಕರ ಮನೆ) ಕಾದಂಬರಿಯನ್ನು ಮಲಯಾಳ ಸಾಹಿತ್ಯದ ಮೇರು ಕೃತಿ ಎಂದೇ ಪರಿಗಣಿಸಲಾಗುತ್ತದೆ.

'ಅರಸುವೀಟ್ಟು', 'ಮಂಜು' ಹಾಗೂ 'ಕಾಲಮ್'ನಂತಹ ಹಲವು ಮಹಾನ್ ಕೃತಿಗಳನ್ನು ರಚಿಸಿದ್ದರು.

ಸಾಹಿತ್ಯ ಸೇವೆ ಪರಿಗಣಿಸಿ 1995ರಲ್ಲಿ ಅವರಿಗೆ ಜ್ಞಾನಪೀಠ ಪ್ರಶಸ್ತಿ ಪ್ರದಾನ ಮಾಡಲಾಗಿತ್ತು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇರಳ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಯಲಾರ್ ಪ್ರಶಸ್ತಿ, ವಲ್ಲತ್ತೋಳ್ ಪ್ರಶಸ್ತಿ, ಎಳುತ್ತಚ್ಚನ್ ಪ್ರಶಸ್ತಿ, ಮಾತೃಭೂಮಿ ಸಾಹಿತ್ಯ ಪ್ರಶಸ್ತಿ, ಒ.ಎನ್.ಸಾಹಿತ್ಯ ಪ್ರಶಸ್ತಿಗೆ ಭಾಜನರಾಗಿದ್ದರು.

2005ರಲ್ಲಿ ಅವರಿಗೆ ಮೂರನೇ ಅತ್ಯುನ್ನತ ನಾಗರಿಕ ಪುರಸ್ಕಾರ ಪದ್ಮಭೂಷಣ, ಮಲಯಾಳ ಚಿತ್ರರಂಗದಲ್ಲಿ ಜೀವಮಾನ ಸಾಧನೆಗಾಗಿ 2013ರಲ್ಲಿ ಅವರಿಗೆ ಜೆ.ಸಿ.ಡ್ಯಾನಿಯಲ್ ಪ್ರಶಸ್ತಿ ಪ್ರದಾನ ಮಾಡಲಾಗಿತ್ತು. ರಾಜ್ಯ ಸರ್ಕಾರ ಸ್ಥಾಪಿಸಿದ ಅತ್ಯುನ್ನತ ನಾಗರಿಕ ಪುರಸ್ಕಾರ 'ಕೇರಳ ಜ್ಯೋತಿ ಪ್ರಶಸ್ತಿ'ಯನ್ನು 2022ರಲ್ಲಿ ಮೊದಲು ವಾಸುದೇವನ್ ನಾಯರ್ ಅವರಿಗೆ ನೀಡಲಾಗಿತ್ತು.

ಕೆಲ ವರ್ಷಗಳ ಕಾಲ ಅವರು ಮಾತೃಭೂಮಿ ವಾರಪತ್ರಿಕೆಯ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದರು.

ಎರಡು ದಿನ ಶೋಕಾಚರಣೆ: ಎಂ.ಟಿ.ವಾಸುದೇವನ್ ನಾಯರ್ ಗೌರವಾರ್ಥ ಕೇರಳ ಸರ್ಕಾರ ಡಿ.26 ಹಾಗೂ 27ರಂದು ರಾಜ್ಯದಲ್ಲಿ ಶೋಕಾಚರಣೆ ಘೋಷಿಸಿದೆ.

ಡಿ.26ರಂದು ನಡೆಸಲು ಉದ್ದೇಶಿಸಿದ್ದ ಸಚಿವ ಸಂಪುಟ ಸಭೆ ಸೇರಿದಂತೆ ಎಲ್ಲ ಸರ್ಕಾರಿ ಕಾರ್ಯಕ್ರಮಗಳನ್ನು ಮುಂದೂಡುವಂತೆ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಆದೇಶಿಸಿದ್ದಾರೆ.

ಎಂ.ಟಿ.ವಾಸುದೇವನ್ ನಾಯರ್ ಅವರು ತಮ್ಮ ಕೃತಿಗಳ ಮೂಲಕ ಕೇರಳದ ಬದುಕಿನ ಸೌಂದರ್ಯ ಮತ್ತು ಸಂಕೀರ್ಣತೆಗಳನ್ನು ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ

ಪಿಣರಾಯಿ ವಿಜಯನ್, ಕೇರಳ ಮುಖ್ಯಮಂತ್ರಿ

ಕಾಂಗ್ರೆಸ್ ನಾಯಕ ಅಜಯ್ ಮಾಕನ್ ಹೇಳಿಕೆ ● 12 ಅಂಶಗಳ 'ಶ್ವೇತಪತ್ರ' ಬಿಡುಗಡೆ

'ಎಎಪಿ ಬೆಂಬಲಿಸಿದ್ದೇ ದುಃಸ್ಥಿತಿಗೆ ಕಾರಣ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಅರವಿಂದ ಕೇಜ್ರಿವಾಲ್ ಅವರ 40 ದಿನದ ಸರ್ಕಾರಕ್ಕೆ 2013ರಲ್ಲಿ ಬೆಂಬಲ ನೀಡಿದ್ದೇ ರಾಷ್ಟ್ರ ರಾಜಧಾನಿಯಲ್ಲಿ ಕಾಂಗ್ರೆಸ್ ಪಕ್ಷವು ದುರ್ಬಲಗೊಳ್ಳಲು ಪ್ರಮುಖ ಕಾರಣ ಎಂದು ಕಾಂಗ್ರೆಸ್‌ನ ನಾಯಕ ಅಜಯ್ ಮಾಕನ್ ಅವರು ಬುಧವಾರ ಹೇಳಿದರು.

ಇತ್ತೀಚಿನ ಲೋಕಸಭೆ ಚುನಾವಣೆಯಲ್ಲೂ ಎಎಪಿ ಜತೆ ಮೈತ್ರಿ ಮಾಡಿಕೊಳ್ಳಲಾಗಿತ್ತು. ಈ ತಪ್ಪು ಪುನಃ ಆಗದಂತೆ ಸರಿಪಡಿಸಬೇಕಿದೆ ಎಂದು ಅವರು ಅಭಿಪ್ರಾಯಪಟ್ಟರು.

'ಕೇಜ್ರಿವಾಲ್ ಅವರು 'ದೇಶವಿರೋಧಿ. ಏಕರೂಪ ನಾಗರಿಕ ಸಂಹಿತೆ ಮತ್ತು ಸಂವಿಧಾನದ 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸುವ ಸಂದರ್ಭದಲ್ಲಿ ಬಿಜೆಪಿಗೆ ಸೈದ್ಧಾಂತಿಕ ಬೆಂಬಲ ನೀಡಿದ್ದರು' ಎಂದು ಆರೋಪಿಸಿದರು.

ಕೇಜ್ರಿವಾಲ್ ಅವರಿಗೆ ಸಿದ್ಧಾಂತವೇ ಇಲ್ಲ. ಸಿದ್ಧಾಂತವೇ ಇಲ್ಲದ ವ್ಯಕ್ತಿಯನ್ನು ನಂಬುವುದು ಹೇಗೆ? ಕೇಜ್ರಿವಾಲ್ ಅವರು ದೇಶದ್ರೋಹಿ

ಅಜಯ್ ಮಾಕನ್, ಕಾಂಗ್ರೆಸ್‌ನ ನಾಯಕ

ದೆಹಲಿ ಕಾಂಗ್ರೆಸ್ ಘಟಕವು ಎಎಪಿ ಮತ್ತು ಬಿಜೆಪಿ ಪಕ್ಷಗಳನ್ನು ಗುರಿಯಾಗಿಸಿ, 12 ಅಂಶಗಳನ್ನು ಒಳಗೊಂಡ 'ಶ್ವೇತಪತ್ರ'ವನ್ನು ಬುಧವಾರ ಬಿಡುಗಡೆ ಮಾಡಿತು. ಶ್ವೇತಪತ್ರದಲ್ಲಿ ಉಭಯ ಪಕ್ಷಗಳು ಆಶ್ವಾಸನೆಗಳನ್ನು ಈಡೇರಿಸಿಲ್ಲ ಹಾಗೂ ಮಾಲಿನ್ಯ, ನಾಗರಿಕ ಸೌಲಭ್ಯಗಳು ಮತ್ತು ಕಾನೂನು ಸುವ್ಯವಸ್ಥೆಯ ನಿರ್ವಹಣೆಯಲ್ಲಿ ವಿಫಲವಾಗಿವೆ ಎಂದು ಆರೋಪಿಸಲಾಗಿದೆ.

ಈ ಸಂದರ್ಭದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 'ಕಾಂಗ್ರೆಸ್ ಪಕ್ಷದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯ ನಾಯಕರಿಗೆ ಇದೆ. ನನ್ನ ಪ್ರಕಾರ, ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷದ ಸ್ಥಿತಿಗೆ 2013ರಲ್ಲಿ 40 ದಿನ ಬೆಂಬಲ ನೀಡಿದ್ದೇ ಕಾರಣ. ಕೇಜ್ರಿವಾಲ್ ಅವರ ಪಕ್ಷದೊಂದಿಗಿನ ಮೈತ್ರಿಯನ್ನು ನಾನು ಯಾವಾಗಲೂ ಬೆಂಬಲಿಸುವುದಿಲ್ಲ' ಎಂದರು.

'ಜನಲೋಕಪಾಲ ಚಳವಳಿಯ ಕಾರಣದಿಂದ ಎಎಪಿ ಅಧಿಕಾರದ ಚುಕ್ಕಾಣಿ ಹಿಡಿಯಿತು. ಆದರೆ ಭ್ರಷ್ಟಾಚಾರ ನಿಗ್ರಹ ದಳ 'ಜನಲೋಕಪಾಲ' ಸ್ಥಾಪಿಸುವಲ್ಲಿ ಪಕ್ಷವು ವಿಫಲವಾಗಿದೆ. ದೆಹಲಿಯಲ್ಲಿ ಲೆಫ್ಟಿನೆಂಟ್ ಗವರ್ನರ್ ಅವರು ಅಡ್ಡಿಪಡಿಸುವುದಾದರೆ, ಪಂಜಾಬ್‌ನಲ್ಲಿ 'ಜನ ಲೋಕಪಾಲ' ಏಕೆ ಸ್ಥಾಪಿಸಿಲ್ಲ. ಅಲ್ಲಿ ಅಡ್ಡಿಪಡಿಸುವವರು ಯಾರು? ಅಲ್ಲಿ ಬಹುಮತದ ಸರ್ಕಾರ ಅಸ್ತಿತ್ವದಲ್ಲಿದೆ ಅಲ್ಲವೇ' ಎಂದು ಪ್ರಶ್ನಿಸಿದರು.

'ದೆಹಲಿಯನ್ನು ಲಂಡನ್‌ನಂತೆ ಮಾಡುವುದಾಗಿ ಹೇಳುತ್ತಾರೆ. ಆದರೆ ಮಾಲಿನ್ಯದಲ್ಲಿ ದೆಹಲಿಗೆ ಪ್ರಥಮ ಸ್ಥಾನ ನೀಡಿದ್ದಾರೆ' ಎಂದು ಟೀಕಿಸಿದರು.

ದೇಶದ ಜನರು ಕೋವಿಡ್ ಸಾಂಕ್ರಾಮಿಕದಿಂದ ನಲುಗುತ್ತಿರುವಾಗ ಎಎಪಿ ಸರ್ಕಾರವು ದೆಹಲಿ ಮುಖ್ಯಮಂತ್ರಿಯವರ ಅಧಿಕೃತ ನಿವಾಸವನ್ನು ನವೀಕರಿಸಿತು ಮತ್ತು ಕೇಂದ್ರ ಸರ್ಕಾರವು ಸೆಂಟ್ರಲ್ ವಿಸ್ತಾ ನಿರ್ಮಿಸಿತು ಎಂದು ಆರೋಪಿಸಿದರು.

2ನೇ ಪಟ್ಟಿ ಪ್ರಕಟ

ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ 26 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಕಾಂಗ್ರೆಸ್ ಮಂಗಳವಾರ ಬಿಡುಗಡೆ ಮಾಡಿದೆ. ಜಂಗಾಪುರ ಕ್ಷೇತ್ರದಲ್ಲಿ ಎಎಪಿ ಅಭ್ಯರ್ಥಿ ಮನೀಶ್ ಸಿಸೋಡಿಯಾ ಅವರ ವಿರುದ್ಧ ಫರ್ಹಾದ್ ಸೂರಿ ಅವರನ್ನು ಕಣಕ್ಕಿಳಿಸಿದೆ.

ಇತ್ತೀಚೆಗೆ ಕಾಂಗ್ರೆಸ್ ಸೇರ್ಪಡೆಯಾಗಿರುವ ಎಎಪಿಯ ಮಾಜಿ ಶಾಸಕರಾದ ಆಸಿಂ ಖಾನ್ ಮತ್ತು ದೇವಿಂದರ್ ಸರ್ಹಾವತ್ ಅವರಿಗೆ ಟಿಕೆಟ್ ನೀಡಿದೆ. ಮಟಿಯಾ ಮಹಲ್ ಕ್ಷೇತ್ರದಿಂದ ಖಾನ್ ಮತ್ತು ಬಿಜವಾಸನ ಕ್ಷೇತ್ರದಿಂದ ಸರ್ಹಾವತ್ ಅವರಿಗೆ ಟಿಕೆಟ್ ನೀಡಿದೆ.

ಇದಕ್ಕೂ ಮುನ್ನ ಮೊದಲ ಪಟ್ಟಿಯಲ್ಲಿ 21 ಅಭ್ಯರ್ಥಿಗಳ ಹೆಸರುಗಳನ್ನು ಘೋಷಿಸಿತ್ತು. ಇದರೊಂದಿಗೆ ಕಾಂಗ್ರೆಸ್ ಪಕ್ಷವು ಈವರೆಗೆ 47 ಅಭ್ಯರ್ಥಿಗಳ ಹೆಸರನ್ನು ಘೋಷಿಸಿದಂತಾಗಿದೆ.

ದೆಹಲಿ ವಿಧಾನಸಭೆ ಚುನಾವಣೆಯು ಮುಂದಿನ ವರ್ಷ ಫೆಬ್ರುವರಿಯಲ್ಲಿ ನಡೆಯುವ ಸಾಧ್ಯತೆ ಇದೆ.

ಬಿಜೆಪಿ ವಿರುದ್ಧ ಸರಣಿ ಆರೋಪ ಮಾಡಿದ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್

'ಸುಳ್ಳು ಪ್ರಕರಣ: ಆತಿಶಿ ಬಂಧನ ಸಾಧ್ಯತೆ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: 'ಮುಖ್ಯಮಂತ್ರಿ ಆತಿಶಿ ಅವರನ್ನು ಬಿಜೆಪಿಯ ಆದೇಶದ ಮೇರೆಗೆ ಕೇಂದ್ರದ ತನಿಖಾ ಏಜೆನ್ಸಿಗಳು 'ನಕಲಿ' ಪ್ರಕರಣದಲ್ಲಿ ಬಂಧಿಸುವ ಸಾಧ್ಯತೆಯಿದೆ' ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಬುಧವಾರ ಹೇಳಿದ್ದಾರೆ.

ನಮ್ಮ ಸರ್ಕಾರ ಜಾರಿಗೆ ತಂದಿರುವ 'ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಯೋಜನೆ' ನಿಲ್ಲಿಸಲು ಬಿಜೆಪಿ ಈ ಪ್ರಯತ್ನಕ್ಕೆ ಕೈಹಾಕಿದೆ ಎಂದು ಅವರು ದೂರಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೇಜ್ರಿವಾಲ್, 'ಬಿಜೆಪಿ ನಿರ್ದೇಶನದ ಮೇರೆಗೆ ಸಿಬಿಐ, ಜಾರಿ ನಿರ್ದೇಶನಾಲಯ ಮತ್ತು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳ ಸಭೆ ನಡೆದಿದೆ. ಬಂಧನಕ್ಕೆ ಮೇಲಿನವರಿಂದ ಸೂಚನೆಗಳು ಬಂದಿರುವ ಮಾಹಿತಿ ಮೂಲಗಳಿಂದ ನಮಗೆ ಗೊತ್ತಾಗಿದೆ' ಎಂದು ಹೇಳಿದ್ದಾರೆ.

'ಆತಿಶಿ ಅವರ ವಿರುದ್ಧ ಸಾರಿಗೆ ಇಲಾಖೆಯಲ್ಲಿ ನಕಲಿ ಪ್ರಕರಣ ರೂಪಿಸುತ್ತಿರುವುದು ಮೂಲಗಳಿಂದ ನಮಗೆ ಗೊತ್ತಾಗಿದೆ. ಬಂಧನಕ್ಕೂ ಮೊದಲು ಆತಿಶಿ ಮತ್ತು ಎಎಪಿಯ ಇತರ ಹಿರಿಯ ನಾಯಕರ ಮೇಲೆ ದಾಳಿ ನಡೆಸುವ ಯೋಜನೆಯೂ ಅವರಿಗಿದೆ. ವಿಧಾನಸಭೆ ಚುನಾವಣೆಗೆ ಸಿದ್ಧತೆ ನಡೆಸದಂತೆ ಎಎಪಿ ನಾಯಕತ್ವಕ್ಕೆ ಅಡ್ಡಿಪಡಿಸಲು ಬಿಜೆಪಿ ಪ್ರಯತ್ನಿಸುತ್ತಿದೆ' ಎಂದು ಸರಣಿ ಆರೋಪ ಮಾಡಿದ್ದಾರೆ.

'ನಾನು ಬದುಕಿರುವವರೆಗೂ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಯೋಜನೆ ನಿಲ್ಲಿಸಲು ಬಿಡುವುದಿಲ್ಲ' ಎಂದು ಕೇಜ್ರಿವಾಲ್ ಹೇಳಿದ್ದಾರೆ. ಮುಂಬರುವ ದೆಹಲಿ ವಿಧಾನಸಭಾ ಚುನಾವಣೆಗೆ ಮುನ್ನ ಎಎಪಿ, ಮಹಿಳೆಯರು ಮತ್ತು ಹಿರಿಯ ನಾಗರಿಕರಿಗೆ ಕಲ್ಯಾಣ ಯೋಜನೆಗಳನ್ನು ಘೋಷಿಸಿದೆ.

ಅವರು ನನ್ನನ್ನು ಬಂಧಿಸಬಹುದು. ಆದರೆ ನನಗೆ ನ್ಯಾಯಾಂಗದ ಮೇಲೆ ಸಂಪೂರ್ಣ ನಂಬಿಕೆ ಇದೆ ಮತ್ತು ಸತ್ಯ ಹೊರಬರುತ್ತದೆ

ಆತಿಶಿ, ದೆಹಲಿ ಮುಖ್ಯಮಂತ್ರಿ

ಯೋಜನೆಗಳು ಅಸ್ತಿತ್ವದಲ್ಲಿಲ್ಲ: ನೋಟಿಸ್ ಪ್ರಕಟಿಸಿದ ಇಲಾಖೆಗಳು

ಆಡಳಿತಾರೂಢ ಎಎಪಿಯು ಘೋಷಿಸಿರುವ ಮಹಿಳೆಯರಿಗೆ ₹2,100 ಮತ್ತು ವೃದ್ಧರಿಗೆ ಉಚಿತ ಚಿಕಿತ್ಸೆ ನೀಡುವ ಯೋಜನೆಗಳು ಪ್ರಸ್ತುತ ಅಸ್ತಿತ್ವದಲ್ಲಿಲ್ಲ. ಜನರನ್ನು ಸೇರಿಸುವ ನೆಪದಲ್ಲಿ ಇಂತಹ ಯೋಜನೆಗಳಿಗೆ ವಿವರಗಳನ್ನು ಸಂಗ್ರಹಿಸುವುದು ವಂಚನೆ ಎಂದು ದೆಹಲಿ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಆರೋಗ್ಯ ಇಲಾಖೆಗಳು ಬುಧವಾರ ಸಾರ್ವಜನಿಕ ತಿಳಿವಳಿಕೆ ಪತ್ರ ಪ್ರಕಟಿಸಿವೆ.

ಎರಡೂ ಇಲಾಖೆಗಳು ಹೊರಡಿಸಿರುವ ನೋಟಿಸ್‌ಗಳಲ್ಲಿ, 'ಅಸ್ತಿತ್ವದಲ್ಲಿಲ್ಲದ ಯೋಜನೆಗಳಿಗೆ ನೋಂದಣಿ ನೆಪದಲ್ಲಿ ಯಾರಿಗಾದರೂ ವೈಯಕ್ತಿಕ ವಿವರಗಳನ್ನು ನೀಡುವುದು ಸರಿಯಲ್ಲ. ಅಂತಹ ಮಾಹಿತಿಯನ್ನು ಸಂಗ್ರಹಿಸಲು ವ್ಯಕ್ತಿ ಅಥವಾ ಪಕ್ಷಕ್ಕೆ ಯಾವುದೇ ಅಧಿಕಾರವಿಲ್ಲ. ಹಾಗೆ ಮಾಡಿದರೆ ಅದು ವಂಚನೆಯಾಗುತ್ತದೆ. ಈ ಬಗ್ಗೆ ಜನರು ಎಚ್ಚರವಾಗಿರಬೇಕು' ಎಂದು ಹೇಳಿದೆ.

ಅಧಿಕಾರಿಗಳ ವಿರುದ್ಧ ಕ್ರಮ: ಸಿ.ಎಂ

'ಯೋಜನೆಗಳ ಬಗ್ಗೆ ಸಂಪುಟದ ಅಧಿಸೂಚನೆಯು ಸಾರ್ವಜನಿಕವಾಗಿಯೂ ಲಭ್ಯವಿದೆ. ಆದರೆ, ಈ ರೀತಿ ನೋಟಿಸ್ ನೀಡಿದವರು ಆಡಳಿತಾತ್ಮಕ ಮತ್ತು ಪೊಲೀಸ್ ಕ್ರಮಗಳನ್ನು ಎದುರಿಸಬೇಕಾಗುತ್ತದೆ' ಎಂದು ದೆಹಲಿ ಮುಖ್ಯಮಂತ್ರಿ ಆತಿಶಿ ಎಚ್ಚರಿಕೆ ನೀಡಿದ್ದಾರೆ.

'ಇವು ಕೇಜ್ರಿವಾಲ್ ಅವರ ಖಾತರಿಗಳು. ಬಿಜೆಪಿಯ ಒತ್ತಡದ ಮೇರೆಗೆ ಈ ಅಧಿಕಾರಿಗಳು ಈ ನೋಟಿಸ್‌ಗಳನ್ನು ನೀಡಿದ್ದಾರೆ' ಎಂದು ಅವರು ಹೇಳಿದರು. 'ಇದು ಎಎಪಿ ಭರವಸೆ ಮತ್ತು ಅದರ ಕಾರ್ಯಕರ್ತರು ಯೋಜನೆಗೆ ಜನರನ್ನು ನೋಂದಾಯಿಸಿಕೊಳ್ಳುತ್ತಾರೆ' ಎಂದು ಕೇಜ್ರಿವಾಲ್ ಹೇಳಿದರು.

ಆರೋಪ ಅಲ್ಲಗಳೆದ ಬಿಜೆಪಿ: ಎಎಪಿ ನಾಯಕರ ಆರೋಪಗಳನ್ನು ನಿರಾಧಾರ ಎಂದು ಬಿಜೆಪಿ ಐಟಿ ಸೆಲ್ ಮುಖ್ಯಸ್ಥ ಅಮಿತ್ ಮಾಳವೀಯ ಹೇಳಿದ್ದಾರೆ. 'ದೆಹಲಿ ಸರ್ಕಾರದ ಎರಡು ಇಲಾಖೆಗಳು ಸಾರ್ವಜನಿಕ ನೋಟಿಸ್ ಪ್ರಕಟಿಸಿದ ನಂತರ ಕೇಜ್ರಿವಾಲ್ ಸಮತೋಲನ ಕಳೆದುಕೊಂಡಿದ್ದಾರೆ' ಎಂದು ಅವರು ಟೀಕಿಸಿದ್ದಾರೆ.

ಬಿಜೆಪಿಯಿಂದ ನಗದು ಹಂಚಿಕೆ ಆತಿಶಿ ಆರೋಪ

ಅರವಿಂದ ಕೇಜ್ರಿವಾಲ್ ಅವರು ಪ್ರತಿನಿಧಿಸುವ ನವದೆಹಲಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ, ವಿಧಾನಸಭಾ ಚುನಾವಣೆಗೂ ಮುನ್ನ ಮಹಿಳೆಯರಿಗೆ ನಗದು ಹಂಚುತ್ತಿದೆ ಎಂದು ದೆಹಲಿ ಮುಖ್ಯಮಂತ್ರಿ ಆತಿಶಿ ಮತ್ತು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಬುಧವಾರ ಆರೋಪಿಸಿದ್ದಾರೆ.

ವಿಂಡ್ಸರ್ ಪ್ಲೇಸ್‌ನಲ್ಲಿರುವ ಬಿಜೆಪಿಯ ಮಾಜಿ ಸಂಸದ ಪರ್ವೇಶ್ ವರ್ಮಾ ಅವರ ನಿವಾಸದಲ್ಲಿ ಕೊಳೆಗೇರಿ ನಿವಾಸಿ ಮಹಿಳಾ ಮತದಾರರಿಗೆ ಅವರ ಮತದಾರ ಗುರುತಿನ ಚೀಟಿ ವಿವರ ಪಡೆದು, ತಲಾ ₹1,100 ನೀಡಲಾಗಿದೆ ಎಂದು ಆತಿಶಿ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

ಕೋಟ್ಯಂತರ ರೂಪಾಯಿ ಇರಿಸಲಾಗಿರುವ ಬಂಗಲೆಯ ಮೇಲೆ ದೆಹಲಿ ಪೊಲೀಸರು, ಸಿಬಿಐ, ಇ.ಡಿ ದಾಳಿ ನಡೆಸಬೇಕು ಮತ್ತು ವರ್ಮಾ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿರುವ ಅವರು, ಪೊಲೀಸರು ಮತ್ತು ಚುನಾವಣಾ ಆಯೋಗಕ್ಕೆ ಪಕ್ಷವು ಈ ಬಗ್ಗೆ ದೂರು ನೀಡಲಿದೆ ಎಂದರು.

ಆರೋಪಗಳನ್ನು ನಿರಾಕರಿಸಿರುವ ವರ್ಮಾ, 'ದಿವಂಗತರಾದ ನಮ್ಮ ತಂದೆ ಮತ್ತು ದೆಹಲಿಯ ಮಾಜಿ ಮುಖ್ಯಮಂತ್ರಿ ಸಾಹಿಬ್ ಸಿಂಗ್ ವರ್ಮಾ ಅವರು ಕಟ್ಟಿದ್ದ ಎನ್‌ಜಿಒ 'ರಾಷ್ಟ್ರೀಯ ಸ್ವಾಭಿಮಾನ್' ಅಭಿಯಾನದ ಭಾಗವಾಗಿ, ಸಮಾಜದ ಬಡ ವರ್ಗಗಳ ಮಹಿಳೆಯರಿಗೆ ತಿಂಗಳಿಗೆ ₹1,100 ಆರ್ಥಿಕ ನೆರವು ನೀಡಲಾಗುತ್ತಿದೆ' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಭತ್ತ ಕಳವು ಆರೋಪ: ಗುಂಪು ದಾಳಿಗೆ ಯುವಕ ಸಾವು

ಧಮ್ತಾರಿ (ಪಿಟಿಐ): ಗ್ರಾಮಸ್ಥರೊಬ್ಬರ ಮನೆಯಿಂದ ಭತ್ತ ಕದ್ದ ಆರೋಪದ ಮೇಲೆ 19 ವರ್ಷದ ಯುವಕನ ಮೇಲೆ ಗುಂಪು ದಾಳಿ ನಡೆಸಿ ಹತ್ಯೆ ಮಾಡಿರುವ ಘಟನೆ ಛತ್ತೀಸಗಢದ ಧಮ್ತಾರಿ ಜಿಲ್ಲೆಯಲ್ಲಿ ನಡೆದಿದೆ.

ಮೃತ ಯುವಕನನ್ನು ಕಾರ್ತಿಕ್ ಪಟೇಲ್ (19) ಎಂದು ಗುರುತಿಸಲಾಗಿದೆ. ಯುವಕನ ಐವರು ಸಹಚರರ ಮೇಲೂ ಹಲ್ಲೆಯಾಗಿದೆ. ಕುರುದ್ ಪೊಲೀಸ್ ಠಾಣೆ ವ್ಯಾಪ್ತಿಯ ಸಿರ್ಸಿದಾ ಗ್ರಾಮದಲ್ಲಿ ಭಾನುವಾರ ರಾತ್ರಿ ಈ ಘಟನೆ ನಡೆದಿತ್ತು. ಈ ಪ್ರಕರಣ ಸಂಬಂಧ ಮೂವರು ಮಹಿಳೆಯರು ಸೇರಿ 13 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

'ಭಿಖಂ ಸಾಹು ಎಂಬವರ ಮನೆಯಲ್ಲಿ ಎರಡು ಮೂಟೆ ಭತ್ತ ಕದಿಯುತ್ತಿದ್ದ ಓಂಕಾರ ಸಾಹು ಎಂಬಾತನನ್ನು ಸಿರ್ಸಿದಾ ಗ್ರಾಮದ ಕೆಲ ನಿವಾಸಿಗಳು ಹಿಡಿದಿದ್ದಾರೆ. ಆತನನ್ನು ವಿಚಾರಿಸಿದಾಗ, ಕಾರ್ತಿಕ್ ಪಟೇಲ್ ಹಾಗೂ ಇತರ ಯುವಕರು ಇದ್ದರೆಂದು ತಿಳಿಸಿದ್ದಾನೆ. ಗ್ರಾಮಸ್ಥರು ಶಸ್ತ್ರಸಜ್ಜಿತರಾಗಿ, ಭತ್ತ ಕಳವಿಗೆ ಯತ್ನಿಸಿದ ಯುವಕರ ಮನೆಗಳಿಗೆ ನುಗ್ಗಿ ಅವರನ್ನು ಹೊರಗೆ ಎಳೆದುಕೊಂಡು ಬಂದು ತೀವ್ರ ಹಲ್ಲೆ ನಡೆಸಿದ್ದಾರೆ. ಪೊಲೀಸರಿಗೆ ದೂರು ನೀಡಬಾರದಜು ಎಂದೂ ಬೆದರಿಕೆ ಹಾಕಿದ್ದಾರೆ' ಎಂದು ಅವರು ಹೇಳಿದರು.

ತೀವ್ರವಾಗಿ ಗಾಯಗೊಂಡಿದ್ದ ಕಾರ್ತಿಕ್ ಪಟೇಲ್ ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯೆ ಅಸುನೀಗಿದ್ದಾರೆ. ಮೃತ ಯುವಕನ ಕುಟುಂಬದವರು ನೀಡಿದ ದೂರು ಆಧರಿಸಿ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಮಂಗಳವಾರ ಮೂವರು ಮಹಿಳೆಯರು ಸೇರಿ 13 ಮಂದಿಯನ್ನು ಬಂಧಿಸಲಾಯಿತು. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಸಂಸತ್ ಭವನದ ಬಳಿ ಆತ್ಮಹತ್ಯೆಗೆ ಯತ್ನ

ನವದೆಹಲಿ (ಪಿಟಿಐ): ನೂತನ ಸಂಸತ್ ಭವನದ ಬಳಿ ವ್ಯಕ್ತಿಯೊಬ್ಬರು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಬುಧವಾರ ಯತ್ನಿಸಿದ್ದಾರೆ.

ಸಂಸತ್ ಭವನದ ಎದುರಿನಲ್ಲಿರುವ ರೈಲ್ವೆ ಭವನದ ಬಳಿ ಮಧ್ಯಾಹ್ನ 3.35 ಗಂಟೆಗೆ ವ್ಯಕ್ತಿಯೊಬ್ಬರು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದರು. ಸಂಸತ್ತಿನ ಭದ್ರತಾ ಸಿಬ್ಬಂದಿ ಅವರನ್ನು ರಾಮ ಮನೋಹರ್ ಲೋಹಿಯಾ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ ಎಂದು ಅಗ್ನಿಶಾಮಕ ಅಧಿಕಾರಿಗಳು ಮಾಹಿತಿ ನೀಡಿದರು.

ದಿ ಜಯನಗರ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ.,

ನಂ. 902, 8ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಜಯನಗರ, ಬೆಂಗಳೂರು–11

ಚುನಾವಣಾ ನೋಟೀಸ್

ಮೇಲ್ಕಂಡ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ 5 ವರ್ಷಗಳ ಅವಧಿಗೆ ಚುನಾವಣೆಯನ್ನು **ದಿನಾಂಕ: 12/01/2025ನೇ ಭಾನುವಾರ ಬೆಳಿಗ್ಗೆ 9:00 ಘಂಟೆಯಿಂದ 4:00 ಘಂಟೆಯವರೆಗೆ "ಸಹಕಾರಿ ವಿದ್ಯಾಕೇಂದ್ರ"** ನಂ.3, 41ನೇ ಅಡ್ಡ ರಸ್ತೆ, ಈಸ್ಟ್ ಎಂಡ್ 'ಬಿ' ಮುಖ್ಯರಸ್ತೆ, ಜಯನಗರ 9ನೇ ಬ್ಲಾಕ್, ಬೆಂಗಳೂರು – 560069 ಇಲ್ಲಿ ನಡೆಸಲಾಗುವುದು.

ನಾಮ ಪತ್ರವನ್ನು ಸಲ್ಲಿಸಲು **ದಿನಾಂಕ: 04/01/2025 ಮಧ್ಯಾಹ್ನ 4:00 ಘಂಟೆಗೆ** ಕೊನೆಯ ದಿನವಾಗಿದ್ದು, ಈಗಾಗಲೇ ಮಾನ್ಯ ಸದಸ್ಯರಿಗೆ ತಿಳುವಳಿಕೆ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗಿದೆ. ತಿಳುವಳಿಕೆ ಪತ್ರ ತಲುಪದಿದ್ದ ಪಕ್ಷದಲ್ಲಿ ಇದನ್ನು ಅಧಿಕೃತ ತಿಳುವಳಿಕೆ ಪತ್ರವೆಂದು ಪರಿಗಣಿಸಿ, ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕಾಗಿ ಕೋರಿದೆ. ಮತ ಚಲಾಯಿಸಲು ಸಂಘದಿಂದ ನೀಡಿರುವ **"ಗುರುತಿನ ಚೀಟಿ"** ಕಡ್ಡಾಯವಾಗಿರುವುದರಿಂದ ಗುರುತಿನ ಚೀಟಿಯನ್ನು ಪಡೆಯದೇ ಇದ್ದವರು **ದಿನಾಂಕ: 11/01/2025** ರೊಳಗಾಗಿ ಸಂಘದ ಕಛೇರಿ ಕೆಲಸದ ವೇಳೆಯಲ್ಲಿ [ಬೆಳಗ್ಗೆ 10:00 ರಿಂದ ಸಾಯಂಕಾಲ 5:00 ಗಂಟೆ] ಪಡೆಯತಕ್ಕದ್ದು.

ಸಹಿ/– (ಎಲ್.ಸರಳ)

ಚುನಾವಣಾಧಿಕಾರಿ,

ದಿ ಜಯನಗರ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ.,

ಜಯನಗರ, ಬೆಂಗಳೂರು–11 ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಪತ್ತು–2 ಕೇಂದ್ರ ಕಛೇರಿ, ಬೆಂಗಳೂರು–52

ಮಂಡಲ ಪೂಜೆ

ಕೇರಳದ ಪತ್ತನಂತಿಟ್ಟ ಜಿಲ್ಲೆಯ ಶಬರಿಮಲೆ ದೇವಸ್ಥಾನದಲ್ಲಿ ಮಂಡಲ ಪೂಜೆ ವೇಳೆ ಅಯ್ಯಪ್ಪಸ್ವಾಮಿ ಮೂರ್ತಿ ಅಲಂಕಾರಕ್ಕೆ ಬುಧವಾರ ಮೆರವಣಿಗೆಯಲ್ಲಿ ಹೊತ್ತುತಂದ ಚಿನ್ನಾಭರಣ ಮತ್ತು ವಸ್ತ್ರವಿರುವ 'ತಂಕ ಅಂಕಿ'ಗೆ ಸಚಿವ ವಿ.ಎನ್. ವಾಸವನ್ ಅವರು ದೇಗುಲದ ಧ್ವಜಸ್ತಂಭದ ಬಳಿ ಹೂಮಾಲೆ ಹಾಕಿ ಬರಮಾಡಿಕೊಂಡರು – ಪಿಟಿಐ ಚಿತ್ರ

'ಹಾದಿ ತಪ್ಪಿಸುವ ಪೋಸ್ಟ್ ಬೇಡ'

ಹೈದರಾಬಾದ್ (ಪಿಟಿಐ): 'ಪುಷ್ಪ 2' ಪ್ರದರ್ಶನದ ವೇಳೆ ಸಂಭವಿಸಿದ ಕಾಲ್ತುಳಿತದ ವಿಚಾರವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹಾದಿ ತಪ್ಪಿಸುವಂಥ ವಿಡಿಯೊಗಳನ್ನು ಪೋಸ್ಟ್ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಹೈದರಾಬಾದ್ ಪೊಲೀಸರು ಬುಧವಾರ ಎಚ್ಚರಿಕೆ ನೀಡಿದರು.

ಈ ಬಗ್ಗೆ ಪೊಲೀಸರು 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. 'ಪ್ರಕರಣ ಸಂಬಂಧ ತನಿಖೆ ನಡೆಸಿ, ಸತ್ಯಾಂಶವಿರುವ ವಿಡಿಯೊವನ್ನು ನಾವೇ ಬಿಡುಗಡೆ ಮಾಡಿದ್ದೇವೆ. ಆದರೂ ನಟ ಅಲ್ಲು ಅರ್ಜುನ್ ಅವರು ಚಿತ್ರ ಮಂದಿರಕ್ಕೆ ಬರುವ ಮೊದಲೇ ಕಾಲ್ತುಳಿತ ಸಂಭವಿಸಿತ್ತು ಎಂದು ಉದ್ದೇಶಪೂರ್ವಕವಾಗಿ ಪೋಸ್ಟ್‌ಗಳ ಜೊತೆಗೆ ವಿಡಿಯೊಗಳನ್ನು ಹಂಚಿಕೊಳ್ಳಲಾಗುತ್ತಿದೆ' ಎಂದರು.

ಅಲ್ಲು ಅರ್ಜುನ್

'ನಮ್ಮ ಇಲಾಖೆಯ ಕುರಿತು ಅಪಪ್ರಚಾರ ಮಾಡಿದರೆ, ಇಲಾಖೆಯನ್ನು ಅವಮಾನಿಸಿದರೆ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

'₹2 ಕೋಟಿ ನೀಡುತ್ತೇವೆ'

ಕಾಲ್ತುಳಿತದಲ್ಲಿ ಮೃತಪಟ್ಟ ಮಹಿಳೆಯ ಕುಟುಂಬಕ್ಕೆ 'ಅಲ್ಲು ಅರ್ಜುನ್ ಅವರು ₹1 ಕೋಟಿ, ನಿರ್ಮಾಣ ಸಂಸ್ಥೆ ಮೈತ್ರಿ ಮೂವಿ ಮೇಕರ್ಸ್ ₹50 ಲಕ್ಷ ಹಾಗೂ ಸಿನಿಮಾದ ನಿರ್ದೇಶಕ ಸುಕುಮಾರ್ ಅವರು ₹50 ಲಕ್ಷ ನೀಡಲಿದ್ದಾರೆ' ಎಂದು ಅಲ್ಲು ಅರ್ಜುನ್ ಅವರ ತಂದೆ, ನಿರ್ಮಾಪಕ ಅಲ್ಲು ಅರವಿಂದ್ ಅವರು ಘೋಷಿಸಿದರು. ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಮಗುವಿನ ಆರೋಗ್ಯ ಸ್ಥಿತಿಯನ್ನು ವಿಚಾರಿಸಲು ಅಲ್ಲು ಅರವಿಂದ, ತೆಲಂಗಾಣ ರಾಜ್ಯ ಸಿನಿಮಾ ಅಭಿವೃದ್ಧಿ ನಿಗಮದ ಮುಖ್ಯಸ್ಥ ದಿಲ್ ರಾಜು ಸೇರಿದಂತೆ ಇತರರು ಆಸ್ಪತ್ರೆಗೆ ಭೇಟಿ ನೀಡಿದ್ದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಪಿಎಂಸಿ/ಇಪಿಇಟಿಎನ್‌ಡಿ–ಇಪಿ–13/599/2024–25 ದಿನಾಂಕ: 24.12.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ)

(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ) ಕ್ವಾಲಿಟಿ ಬೇಸ್ಡ್ ಕನ್ಸಲ್ಟೆನ್ಸಿ ಸಿಸ್ಟಮ್ (ಕ್ಯೂಸಿಬಿಎಸ್) ಅಡಿಯಲ್ಲಿ ಅರ್ಹ ಸಲಹಾ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು : ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು, ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶದಲ್ಲಿ ಆರ್.ಸಿ.ಸಿ ರಸ್ತೆ ಬದಿ ಚರಂಡಿ, ಆರ್.ಸಿ.ಸಿ ಅಡ್ಡ ಚರಂಡಿ ಮಳೆನೀರು ಚರಂಡಿ, ಹೆಚ್.ಡಿ.ಇ.ಪಿ ಕೊಳವೆ ಮಾರ್ಗದೊಂದಿಗೆ 24ಮೀ ಅಗಲ ಮತ್ತು 18ಮೀ ಅಗಲದ ಡಾಂಬರೀಕರಣ ರಸ್ತೆ ನಿರ್ಮಾಣದೊಂದಿಗೆ ಉಪ ಬಡಾವಣೆ ರಚಿಸುವ ಕಾಮಗಾರಿಗೆ ಪಿಎಂಸಿ ಸೇವೆಗಳನ್ನು ಒದಗಿಸುವುದು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 08.01.2025 ಸಂಜೆ 4.30 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–

DIPR/CP/3973/Zen/2024-25 ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ

ಬಲಿಯಾ (ಪಿಟಿಐ): ಉತ್ತರ ಪ್ರದೇಶದ ಬಲಿಯಾ ಜಿಲ್ಲೆಯಲ್ಲಿ 16 ವರ್ಷ ವಯಸ್ಸಿನ ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದ್ದು, ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೌಟುಂಬಿಕ ಕಲಹದ ಬಳಿಕ ಸಂತ್ರಸ್ತೆಯು ಮಂಗಳವಾರ ರಾತ್ರಿ ಆಟೊರಿಕ್ಷಾದಲ್ಲಿ ಮನೆಬಿಟ್ಟು ಹೋಗಿದ್ದಳು. ಈ ಸಂದರ್ಭದಲ್ಲಿ ಇಬ್ಬರು ಯುವಕರು ಬಾಲಕಿಗೆ ಆಮಿಷವೊಡ್ಡಿ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾಂತು ಯಾದವ್ (19) ಮತ್ತು ಅಮಿತ್ ಪ್ರಜಾಪತಿ (22) ಆರೋಪಿಗಳು. ಬಾಲಕಿಯ ತಂದೆ ನೀಡಿರುವ ದೂರಿನ ಆಧಾರದಲ್ಲಿ ಆರೋಪಿಗಳ ವಿರುದ್ಧ ಭಾರತೀಯ ನ್ಯಾಯಸಂಹಿತೆಯ ವಿವಿಧ ಸೆಕ್ಷನ್‌ಗಳು ಮತ್ತು ಪೋಕ್ಸೊ ಕಾಯ್ದೆ ಅಡಿಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಇಬ್ಬರು ಆರೋಪಿಗಳನ್ನು ಬುಧವಾರ ಬಂಧಿಸಿದ್ದು, ತನಿಖೆ ಮುಂದುವರಿದಿದೆ ' ಎಂದು ಠಾಣಾಧಿಕಾರಿ ರಾಕೇಶ್ ಸಿಂಗ್ ಮಾಹಿತಿ ನೀಡಿದ್ದಾರೆ.

ಅಣ್ಣಾ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಘಟನೆ

ವಿದ್ಯಾರ್ಥಿನಿ ಮೇಲೆ ಲೈಂಗಿಕ ದೌರ್ಜನ್ಯ

ಪ್ರಜಾವಾಣಿ ವಾರ್ತೆ

ಚೆನ್ನೈ: ನಗರದ ಹೃದಯ ಭಾಗದಲ್ಲಿರುವ ಪ್ರತಿಷ್ಠಿತ ಅಣ್ಣಾ ವಿಶ್ವವಿದ್ಯಾಲಯದ ಕ್ಯಾಂಪಸ್‌ನೊಳಗೆ ಎರಡನೇ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿನಿಯ ಮೇಲೆ ರಸ್ತೆ ಬದಿಯ ವ್ಯಾಪಾರಿಯೊಬ್ಬ ಲೈಂಗಿಕ ದೌರ್ಜನ್ಯ ನಡೆಸಿ, ಆಕೆಯ ಸ್ನೇಹಿತನ ಮೇಲೂ ಹಲ್ಲೆ ಮಾಡಿರುವ ಘಟನೆ ನಡೆದಿದೆ.

ಡಿಸೆಂಬರ್ 23ರಂದು ರಾತ್ರಿ ಈ ಘಟನೆ ನಡೆದಿದ್ದು, ಸಂತ್ರಸ್ತರು ಮರುದಿನ ಪೊಲೀಸರಿಗೆ ದೂರು ನೀಡಿದ್ದಾರೆ.

ಆರೋಪಿ ಜ್ಞಾನಶೇಖರನ್ (37) ಎಂಬಾತನನ್ನು ಬಂಧಿಸಲಾಗಿದೆ. ಈತ ಈ ಹಿಂದೆಯೂ ಲೈಂಗಿಕ ಅಪರಾಧದಲ್ಲಿ ಬಂಧಿತನಾಗಿದ್ದ. ಈತನ ವಿರುದ್ಧ ಬಿಎನ್‌ಎಸ್ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಅತ್ಯಾಚಾರ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿ, ವಿ.ವಿ ಬಳಿಯ ಕೊಟ್ಟೂರ್‌ಪುರಂನಲ್ಲಿ ರಸ್ತೆ ಬದಿ ಉಪಾಹಾರ ಗೃಹ ನಡೆಸುತ್ತಿದ್ದ. ಸಿಸಿಟಿವಿ ಕ್ಯಾಮೆರಾಗಳ ದೃಶ್ಯಗಳನ್ನು ಪರಿಶೀಲಿಸಿದ ನಂತರ ಆರೋಪಿ ಬಂಧಿಸಲಾಯಿತು. ಕೃತ್ಯ ಎಸಗಿರುವುದನ್ನು ಆತ ಒಪ್ಪಿಕೊಂಡಿದ್ದಾನೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

19 ವರ್ಷದ ವಿದ್ಯಾರ್ಥಿನಿ ಮತ್ತು ಆಕೆಯ ಗೆಳೆಯ ಸೋಮವಾರ ರಾತ್ರಿ ಊಟದ ನಂತರ ಕ್ಯಾಂಪಸ್‌ನಲ್ಲಿ ಕಟ್ಟಡದ ಬಳಿ ಮಾತನಾಡುತ್ತ ನಿಂತಿದ್ದರು. ಆಗ ಆರೋಪಿಯು ಅವರ ವಿಡಿಯೊ ಮಾಡಿಕೊಂಡು, ವಿದ್ಯಾರ್ಥಿಗೆ ಬೆದರಿಕೆ ಹಾಕಿ, ಹಲ್ಲೆ ನಡೆಸಿದ್ದಾನೆ. ವಿದ್ಯಾರ್ಥಿನಿಯನ್ನು ಸಮೀಪದ ಪೊದೆಗೆ ಎಳೆದೊಯ್ದು, ಲೈಂಗಿಕ ದೌರ್ಜನ್ಯ ನಡೆಸಿದ್ದಾನೆ ಎಂದು ಅವರು ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ರಕ್ಷಣೆ ನೀಡುವಂತೆ ಒತ್ತಾಯಿಸಿ ವಿದ್ಯಾರ್ಥಿ ಸಂಘಟನೆಗಳು ಬುಧವಾರ ಅಣ್ಣಾ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರತಿಭಟನೆ ನಡೆಸಿದವು.

ಘಟನೆಯನ್ನು ರಾಜಕೀಯಗೊಳಿಸಬೇಡಿ. ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಭದ್ರತೆ ಖಾತ್ರಿಗೆ ಕ್ರಮ ತೆಗೆದುಕೊಳ್ಳಲಾಗುವುದು

ಗೋವಿ ಚೆಜಿಯಾನ್ ಉನ್ನತ ಶಿಕ್ಷಣ ಸಚಿವ

ಸರ್ಕಾರ ನನ್ನ ಟೀಕೆಯನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಂಡಿದ್ದರೆ ಇಂತಹ ಘಟನೆಗಳನ್ನು ತಡೆಯಬಹುದಿತ್ತು

ಎಡಪ್ಪಾಡಿ ಕೆ. ಪಳನಿಸ್ವಾಮಿ ಪ್ರತಿಪಕ್ಷದ ನಾಯಕ

ತಮಿಳುನಾಡು ಕಾನೂನುಬಾಹಿರ ಚಟುವಟಿಕೆಗಳ ತಾಣವಾಗಿದೆ ಮತ್ತು ಅಪರಾಧಿಗಳ ಸ್ವರ್ಗವಾಗಿದೆ

ಕೆ.ಅಣ್ಣಾಮಲೈ ತಮಿಳುನಾಡು ಬಿಜೆಪಿ ಮುಖ್ಯಸ್ಥ

ಘಟನೆಗೆ ವಿಪಕ್ಷಗಳ ಆಕ್ರೋಶ

ಈ ಘಟನೆಯು ತಮಿಳುನಾಡಿನಲ್ಲಿ ಹದಗೆಡುತ್ತಿರುವ ಕಾನೂನು ಮತ್ತು ಸುವ್ಯವಸ್ಥೆಗೆ ಮತ್ತೊಂದು ಉದಾಹರಣೆ ಎಂದು ಎಐಎಡಿಎಂಕೆ, ಬಿಜೆಪಿ ಆಕ್ರೋಶ ವ್ಯಕ್ತಪಡಿಸಿವೆ.

ಇದು ನಾಚಿಕೆಗೇಡಿನ ಸಂಗತಿ ಎಂದು ಬಣ್ಣಿಸಿರುವ ಪ್ರತಿಪಕ್ಷದ ನಾಯಕ ಎಡಪ್ಪಾಡಿ ಕೆ. ಪಳನಿಸ್ವಾಮಿ, 'ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ನಾನು ಗಮನ ಸೆಳೆದಾಗಲೆಲ್ಲಾ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸತ್ಯ ನಿರಾಕರಿಸುತ್ತಿದ್ದರು. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಖಾತ್ರಿಪಡಿಸುವಲ್ಲಿ ಅವರು ವಿಫಲರಾಗಿದ್ದಾರೆ' ಎಂದು ಆರೋಪಿಸಿದರು.

'ಇದು ಕಾನೂನಿನ ಹೀನಾಯ ಸ್ಥಿತಿ. ರಾಜ್ಯದಲ್ಲಿ ಮಹಿಳೆಯರು ಸುರಕ್ಷಿತವಾಗಿಲ್ಲ. ಪೊಲೀಸರು ಸರ್ಕಾರದ ಪರವಾಗಿ, ವಿರೋಧ ಪಕ್ಷದವರನ್ನು ಮೌನವಾಗಿರುವಂತೆ ಮಾಡುವುದರಲ್ಲಿ ಕಾರ್ಯನಿರತರಾಗಿದ್ದಾರೆ. ಅಪರಾಧಿ ಡಿಎಂಕೆ ಕಾರ್ಯಕರ್ತನಾಗಿದ್ದರೆ, ಪೊಲೀಸರು ಕ್ರಮ ಕೈಗೊಳ್ಳುವುದು ಅನುಮಾನ. ಹಾಗೇನಾದರೂ ಆದರೆ, ಬಿಜೆಪಿಯು ಪ್ರತಿಭಟನೆಗೆ ಕರೆ ನೀಡಬೇಕಾಗುತ್ತದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ

(ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಮುಖ್ಯ ಅಭಿಯಂತರರ ಕಚೇರಿ (ತ್ಯಾಜ್ಯ ನೀರು ನಿರ್ವಹಣೆ–ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560 009.

ಕ್ರ. ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
ಐಎಫ್‌ಟಿ ಸಂ: ಬೆಂಜಮಂ/ಮುಅ(ತ್ಯಾನೀನಿ–ಪ)/ಅಮುಅ(ತ್ಯಾನೀನಿ–ನೆ–ಪ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–2/1281/2024–25 ದಿನಾಂಕ: 24.12.2024		
1.	ಬೆಂಗಳೂರಿನ ಅನ್ನಪೂರ್ಣೇಶ್ವರಿನಗರದ ಡಿ–ಗ್ರೂಪ್ ಬಡಾವಣೆಯಲ್ಲಿ ರಾಷ್ಟ್ರಕವಿ ಕುವೆಂಪು ಉದ್ಯಾನವನದಿಂದ ಅಕ್ಷಯ ಸ್ಟುಡಿಯೋ ಹಿಂಭಾಗದವರೆಗೆ 700ಮಿಮೀ ವ್ಯಾಸದ ಆರ್‌ಸಿಸಿ/ಡಿಡಬ್ಲ್ಯೂಸಿ ಒಳಚರಂಡಿ ಕೊಳವೆಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವುದು (3ನೇ ಕರೆ)	₹ 108.07 ಲಕ್ಷಗಳು / ₹ 1.62 ಲಕ್ಷಗಳು

ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ 09.01.2025ರ ಸಂಜೆ 4:30 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ 10.01.2025ರ ಸಂಜೆ 5:30 ಗಂಟೆಗೆ ತೆರೆಯಲಾಗುವುದು.

ಸಹಿ/– ಮುಖ್ಯ ಅಭಿಯಂತರರು (ತ್ಯಾನೀನಿ–ಪಶ್ಚಿಮ)

ಮುಖ್ಯ ಅಭಿಯಂತರರ ಕಚೇರಿ (ಯೋಜನೆ), 3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560 009.

ಕ್ರ. ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
ಐಎಫ್‌ಟಿ ಸಂಖ್ಯೆ:ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ&ಡಿಸಿಡಬ್ಲ್ಯೂ)/ತಾಂಸ/1915/2024–25 ದಿನಾಂಕ: 24.12.2024		
2.	ಇತ್ತೀಚಿನ ತಿದ್ದುಪಡಿಗಳೊಂದಿಗೆ ಐಎಸ್:779/1994ಕ್ಕೆ ಅನುಗುಣವಾಗುವಂತೆ 25ಮಿಮೀ ವ್ಯಾಸದ 2000ಸಂಖ್ಯೆ ಮತ್ತು 20ಮಿಮೀ ವ್ಯಾಸದ 2000ಸಂಖ್ಯೆ ಮಲ್ಟಿ ಜೆಟ್ "ಬಿ" ದರ್ಜೆಯ ಮ್ಯಾಗ್ನೆಟಿಕ್ ಮಾದರಿಯ ಜಲ ಮಾಪಕಗಳನ್ನು ಖರೀದಿಸುವುದು.	₹ 1,54,58,000/- / ₹ 2,32,000/-
ಐಎಫ್‌ಟಿ ಸಂಖ್ಯೆ:ಬೆಂಜಮಂ/ಮುಅ(ಯೋ)/ಅಮುಅ(ಕೇಂ.ಉ&ಡಿಸಿಡಬ್ಲ್ಯೂ)/ತಾಂಸ/1916/2024–25 ದಿನಾಂಕ: 24.12.2024		
3.	ಪಿಎನ್.1.6ನ ಇತ್ತೀಚಿನ ತಿದ್ದುಪಡಿಗಳೊಂದಿಗೆ ಐಎಸ್:14846–2000ಕ್ಕೆ ಅನುಗುಣವಾಗುವಂತೆ 700ಮಿಮೀ ನಿಂದ 1000ಮಿಮೀ ವರೆಗಿನ ವ್ಯಾಪ್ತಿಯ ವಿವಿಧ ವ್ಯಾಸಗಳ 24ಸಂಖ್ಯೆ ಗ್ಲ್ಯಾಂಡ್‌ಲೆಸ್ ಡಿಐ ಸ್ಲೂಯಿಸ್ ವಾಲ್ವ್‌ಗಳನ್ನು ಖರೀದಿಸುವುದು.	₹ 4,68,93,737/- / ₹ 7,04,000/-

ಈ ಮೇಲಿನ ಕಾಮಗಾರಿಗಳಿಗೆ, ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ 02.01.2025ರ ಸಂಜೆ 4:00 ಗಂಟೆಯೊಳಗೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ 03.01.2025ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು.

ಸಹಿ/– ಮುಖ್ಯ ಅಭಿಯಂತರರು (ಯೋಜನೆ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಡಿ.ಐ.ಪಿ.ಆರ್/ಎಸ್ಐ/3955/2024–25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ನಿಮ್ಮ ಬಗ್ಗೆ ನೀವು ಮೊದಲು ಕಾಳಜಿ ವಹಿಸಿ. ಆ ಬಳಿಕ, ಕುಟುಂಬದ ಇತರರ ಬಗ್ಗೆ ಇನ್ನೂ ಹೆಚ್ಚಿನ ಕಾಳಜಿ ವಹಿಸಲು ನೀವು ಸಮರ್ಥರಾಗುತ್ತೀರಿ. – **ದೀಪಕ್ ಚೋಪ್ರಾ**

ರೂಪಾಯಿ ಮೌಲ್ಯದ ತೀವ್ರ ಕುಸಿತ ದೀರ್ಘಾವಧಿ ಪರಿಹಾರ ಕ್ರಮ ಬೇಕು

ಅಮೆರಿಕದ ಡಾಲರ್ ಎದುರು ರೂಪಾಯಿಯ ಮೌಲ್ಯವು ₹ 85ಕ್ಕಿಂತ ಕಡಿಮೆ ಮಟ್ಟಕ್ಕೆ ಕುಸಿದಿದೆ. ಇದು ನಿರೀಕ್ಷಿತವಾಗಿತ್ತಾದರೂ ರೂಪಾಯಿ ಮೌಲ್ಯದ ಈ ಪರಿಯ ಕುಸಿತವು ಒಂದಿಷ್ಟು ಕಳವಳಗಳಿಗೆ ಕಾರಣವಾಗಿದೆ. ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಈಗ ಸಾರ್ವಕಾಲಿಕ ಕನಿಷ್ಠ ಮಟ್ಟಕ್ಕೆ ಬಂದಿದೆ. ಈ ಮಟ್ಟದಿಂದ ರೂಪಾಯಿ ಮೌಲ್ಯವು ತಕ್ಷಣಕ್ಕೆ ಚೇತರಿಕೆ ಕಂಡುಕೊಳ್ಳುವ ಸಾಧ್ಯತೆ ಬಹಳ ಕಡಿಮೆ. ಮುಂಬರುವ ವಾರಗಳಲ್ಲಿ, ತಿಂಗಳುಗಳಲ್ಲಿ ರೂಪಾಯಿ ಮತ್ತಷ್ಟು ದುರ್ಬಲಗೊಳ್ಳುವ ಸಾಧ್ಯತೆ ಇದೆ. ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಆಡಳಿತ ವಹಿಸಿಕೊಂಡ ನಂತರ ರೂಪಾಯಿ ಮೌಲ್ಯವು ಶೇಕಡ 8ರಿಂದ ಶೇ 10ರಷ್ಟು ಕುಸಿಯಬಹುದು ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಅಂದಾಜಿಸಿದೆ. ಕರೆನ್ಸಿಯು ದುರ್ಬಲವಾದ ಸಂದರ್ಭದಲ್ಲಿ ಆರ್ಥಿಕತೆಗೆ ಒಳಿತಾಗುವುದೂ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಕರೆನ್ಸಿಯನ್ನು ದುರ್ಬಲಗೊಳಿಸಲು ಪ್ರಜ್ಞಾಪೂರ್ವಕವಾಗಿ ಕ್ರಮ ಕೈಗೊಳ್ಳಲಾಗುತ್ತದೆ. ಆದರೆ ಭಾರತದ ರೂಪಾಯಿ ಮೌಲ್ಯ ಈಗ ಕುಸಿಯುತ್ತಿರುವುದು ಆ ಕಾರಣಕ್ಕಾಗಿ ಅಲ್ಲ. ಭಾರತದ ರೂಪಾಯಿ ಈಗ ದುರ್ಬಲವಾಗುತ್ತಿರುವುದಕ್ಕೆ ಜಾಗತಿಕ ಹಾಗೂ ಆಂತರಿಕ ಸಂಗತಿಗಳು ಕಾರಣವಾಗಿವೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ಆರ್ಥಿಕ ಬೆಳವಣಿಗೆ ದರವು ಎರಡು ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆ. ವ್ಯಾಪಾರ ಕೊರತೆ ಅಂತರವು ಹಿಗ್ಗಿದೆ. ಅಮೆರಿಕದ ಅರ್ಥವ್ಯವಸ್ಥೆಗೆ ಸಂಬಂಧಿಸಿದ ಅಂಕಿ–ಅಂಶಗಳು ಬಹಳ ಆಶಾದಾಯಕವಾಗಿ ಇರುವ ಪರಿಣಾಮವಾಗಿ, ಅಮೆರಿಕದ ಫೆಡರಲ್ ರಿಸರ್ವ್ ಕೆಲವು ಪೂರಕವಾದ ಕ್ರಮಗಳನ್ನು ಕೈಗೊಳ್ಳುತ್ತಿರುವುದರ ಪರಿಣಾಮವಾಗಿ ಅಮೆರಿಕದ ಡಾಲರ್ ಬಲವರ್ಧನೆ ಆಗುತ್ತಿದೆ. ಜಾಗತಿಕವಾಗಿ ಹಲವು ದೇಶಗಳ ಕರೆನ್ಸಿಗಳ ಮೌಲ್ಯವು ಅಮೆರಿಕದ ಡಾಲರ್ ಎದುರು ಕುಸಿತ ಕಂಡಿವೆ. ಯೂರೊದಂತಹ ಇತರ ಜಾಗತಿಕ ಕರೆನ್ಸಿಗಳ ಎದುರು ಭಾರತದ ರೂಪಾಯಿಯು ಬಲಗೊಂಡಿದೆ ಎಂಬುದು ಇಲ್ಲಿ ಗಮನಾರ್ಹ.

ದೇಶಿ ಉತ್ಪಾದನೆ ಹಾಗೂ ತಯಾರಿಕೆಯನ್ನು ಹೆಚ್ಚು ಮಾಡಲು ಆದ್ಯತೆ ನೀಡಿ, ಆಮದಿನ ಮೇಲಿನ ಅವಲಂಬನ ತಗ್ಗಿಸಬೇಕಾಗಿದೆ

ಡಾಲರ್ ಮುಂದಿನ ದಿನಗಳಲ್ಲಿಯೂ ಬಲ ಹೆಚ್ಚಿಸಿಕೊಳ್ಳುವ ಸಾಧ್ಯತೆಗಳು ಇವೆ. ಇದರ ಪರಿಣಾಮವು ಭಾರತದ ರೂಪಾಯಿಯ ಮೇಲೆ ಇನ್ನಷ್ಟು ಉಂಟಾಗಬಹುದು. ಅಮೆರಿಕದ ಆರ್ಥಿಕ ಬೆಳವಣಿಗೆಯು ನಿರೀಕ್ಷೆಗಿಂತ ಹೆಚ್ಚು ಉತ್ತಮವಾಗಿ ಇದೆ. ಜಾಗತಿಕವಾಗಿ ಪರಿಸ್ಥಿತಿಯು ಅನಿಶ್ಚಿತತೆಗಳಿಂದ ಕೂಡಿರುವ ಕಾರಣದಿಂದಾಗಿ ಹೂಡಿಕೆದಾರರಿಗೆ ಡಾಲರ್ ಸುರಕ್ಷಿತ ಹೂಡಿಕೆಯಾಗಿ ಕಂಡಿದೆ. ಅಮೆರಿಕದ ಕೇಂದ್ರೀಯ ಬ್ಯಾಂಕ್ ಆಗಿರುವ ಫೆಡರಲ್ ರಿಸರ್ವ್ ಮುಂಗಾಣ್ಕೆಯಿಂದ ಒಂದಿಷ್ಟು ಕ್ರಮಗಳನ್ನು ಕೈಗೊಳ್ಳುತ್ತಿದೆ. ಅದು ಬಡ್ಡಿ ದರವನ್ನು ಶೇಕಡ 0.25ರಷ್ಟು ಕಡಿಮೆ ಮಾಡಿದೆಯಾದರೂ ಹಣದುಬ್ಬರ ನಿಯಂತ್ರಣದ ಮೇಲೆ ಗಮನ ಇಟ್ಟುಕೊಂಡು, ಬಿಗಿ ಹಣಕಾಸು ನೀತಿಯನ್ನು ಮುಂದುವರಿಸುವ ಸೂಚನೆಯನ್ನು ನೀಡಿದೆ. ಡಾಲರ್ ಎದುರು ರೂಪಾಯಿ ದುರ್ಬಲಗೊಂಡಿರುವುದರಿಂದ ದೇಶದಿಂದ ಹೊರಹರಿಯುವ ಬಂಡವಾಳದ ಪ್ರಮಾಣವು ಹೆಚ್ಚಾಗುತ್ತಿದೆ. ಅದರ ಪರಿಣಾಮವಾಗಿ ರೂಪಾಯಿ ಮೇಲೆ ಇನ್ನಷ್ಟು ಒತ್ತಡ ಸೃಷ್ಟಿಯಾಗುತ್ತಿದೆ.

ರೂಪಾಯಿ ಮೌಲ್ಯ ದುರ್ಬಲಗೊಂಡಿರುವುದು ಒಂದಿಷ್ಟು ಅವಕಾಶಗಳನ್ನು ಕೂಡ ತೆರೆದಿಟ್ಟಿದೆ. ರಫ್ತನ್ನು ನೆಚ್ಚಿಕೊಂಡಿರುವ ಜವಳಿಯಂತಹ ಉದ್ಯಮಗಳಿಗೆ ಇದರಿಂದ ಅನುಕೂಲ ಆಗಬಹುದು. ಇಂತಹ ಉದ್ಯಮಗಳಿಗೆ ಇನ್ನಷ್ಟು ಉತ್ತೇಜನ ನೀಡುವ, ಸುಸ್ಥಿರವಾದ ವ್ಯಾಪಾರ ಕಾರ್ಯತಂತ್ರವನ್ನು ರೂಪಿಸುವ ಕೆಲಸವನ್ನು ಸಂಬಂಧಪಟ್ಟವರು ಈ ಸಂದರ್ಭದಲ್ಲಿ ಮಾಡಬಹುದು. ದೇಶಿ ಉತ್ಪಾದನೆ ಹಾಗೂ ತಯಾರಿಕೆಯನ್ನು ಹೆಚ್ಚು ಮಾಡುವ ಕೆಲಸಕ್ಕೆ ಈಗ ಆದ್ಯತೆ ನೀಡಬೇಕು. ಆಮದು ವಸ್ತುಗಳು ದುಬಾರಿ ಆಗುವ ಕಾರಣ, ಆಮದಿನ ಮೇಲಿನ ಅವಲಂಬನೆಯನ್ನು ತಗ್ಗಿಸಬೇಕು. ಆಮದು ಮಾಡಿಕೊಳ್ಳುವ ಉತ್ಪನ್ನಗಳು ಹಾಗೂ ಸೇವೆಗಳು ದುಬಾರಿ ಆಗುವ ಕಾರಣ, ರೂಪಾಯಿ ಮೌಲ್ಯ ಕುಸಿತವು ದೇಶದಲ್ಲಿ ಹಣದುಬ್ಬರವು ಹೆಚ್ಚಳ ಕಾಣಬಹುದು. ರೂಪಾಯಿ ಮೌಲ್ಯವು ಶೇ 5ರಷ್ಟು ಕುಸಿತ ಆದಾಗ, ಹಣದುಬ್ಬರದ ಪ್ರಮಾಣವು ಶೇ 0.25–ಶೇ 0.30ರ ಪ್ರಮಾಣದಲ್ಲಿ ಹೆಚ್ಚಾಗುತ್ತದೆ ಎಂದು ಎಸ್‌ಬಿಐ ಅಂದಾಜು ಮಾಡಿದೆ. ಹಣದುಬ್ಬರವನ್ನು ಮಿತಿಯಲ್ಲಿ ಇರಿಸಲು ಹಾಗೂ ವಿದೇಶಿ ವಿನಿಮಯ ಸಂಗ್ರಹವನ್ನು ಕಾಪಿಟ್ಟುಕೊಳ್ಳಲು ಆರ್‌ಬಿಐ ಹೆಚ್ಚಿನ ಪ್ರಯತ್ನ ನಡೆಸಬೇಕಾಗಬಹುದು. ಆಮದನ್ನು ನೆಚ್ಚಿಕೊಂಡಿರುವ ಹಾಗೂ ವಿದೇಶಿ ಸಾಲವನ್ನು ಅವಲಂಬಿಸಿರುವ ಉದ್ಯಮಿಗಳಿಗೆ ಸವಾಲುಗಳು ಎದುರಾಗಬಹುದು. ಆರ್‌ಬಿಐ ಮಧ್ಯಪ್ರವೇಶವು ಸಮಸ್ಯೆಯನ್ನು ತಾತ್ಕಾಲಿಕ ಅವಧಿಗೆ ಶಮನಗೊಳಿಸಬಹುದು. ದೇಶದಲ್ಲಿ ಉತ್ಪಾದಕತೆಯನ್ನು ಹೆಚ್ಚು ಮಾಡುವುದು ಹಾಗೂ ದೇಶದಿಂದ ರಫ್ತನ್ನು ಹೆಚ್ಚಿಸುವುದು, ಆ ಮೂಲಕ ದೇಶದ ಅರ್ಥವ್ಯವಸ್ಥೆಯನ್ನು ಗಟ್ಟಿಗೊಳಿಸುವುದು ದೀರ್ಘಾವಧಿ ಪರಿಹಾರ ಕ್ರಮವಾಗುತ್ತದೆ.

ಆರ್ಥಿಕ ಸಮೃದ್ಧಿ ಕೆಲವರ ಪಾಲಾಗುತ್ತಿರುವ ಕಾರಣ ಅಸಮಾನತೆ ಮಿತಿಮೀರುತ್ತಿದೆ

ಆರ್ಥಿಕತೆಯ ಆ ಮುಖ, ಈ ಮುಖ

ವಿಶ್ಲೇಷಣೆ

ಟಿ.ಆರ್.ಚಂದ್ರಶೇಖರ

ಭಾರತದ ಆರ್ಥಿಕತೆ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಮುಂದಿನ ಒಂದೆರಡು ವರ್ಷಗಳಲ್ಲಿ ಜಿಡಿಪಿ ಐದು ಟ್ರಿಲಿಯನ್ ಡಾಲರ್ ಮುಟ್ಟುವ ಸಾಧ್ಯತೆ ಇದೆ. ಸರ್ಕಾರವು ವಿಕಸಿತ ಭಾರತದ ಬಗ್ಗೆ, ಅಭಿವೃದ್ಧಿ 'ಹೊಂದಿದ' ಆರ್ಥಿಕತೆಯ ಬಗ್ಗೆ ಮಾತನಾಡುತ್ತಿದೆ. ಇದು, ನಮ್ಮ ಆರ್ಥಿಕತೆಯ ಒಂದು ಮುಖ. ಮತ್ತೊಂದು ಮುಖ ಇದೆ. ಅದು ಕರಾಳವಾಗಿದೆ. ರೈತರು, ಕಾರ್ಮಿಕರು, ಅಸಂಘಟಿತ ವಲಯದ ದಿನಗೂಲಿಗಳು, ಸಣ್ಣಪುಟ್ಟ ವ್ಯಾಪಾರ, ವ್ಯವಹಾರ ಮಾಡುತ್ತಿರುವವರ ಬದುಕು ದುಃಸ್ಥಿತಿಯಲ್ಲಿದೆ.

ಜಿಡಿಪಿ ಲೆಕ್ಕದಲ್ಲಿ ನಮ್ಮದು ಜಗತ್ತಿನಲ್ಲಿ ಐದನೆಯ ಬೃಹತ್ ಆರ್ಥಿಕತೆಯಾಗಿದೆ. ಆದರೆ ತಲಾ ವರಮಾನದ ಲೆಕ್ಕದಲ್ಲಿ ಜಗತ್ತಿನ 192 ದೇಶಗಳ ಪೈಕಿ ಭಾರತದ ಸ್ಥಾನ 141ನೆಯದು. ಪ್ರಸಕ್ತ ವರ್ಷದಲ್ಲಿ ದೇಶದ ತಲಾ ವರಮಾನ 2,698 ಡಾಲರ್ ಆಗಿದೆ. ಚೀನಾದ್ದು 12,969 ಡಾಲರ್. ಜಗತ್ತಿನ ಸರಾಸರಿ ತಲಾ ವರಮಾನ 13,900 ಡಾಲರ್. ಜಿಡಿಪಿ ಲೆಕ್ಕದಲ್ಲಿ ಭಾರತದ ಆರ್ಥಿಕತೆ ಸಮೃದ್ಧವಾಗಿದೆಯಾದರೂ ತಲಾ ವರಮಾನ ಅತ್ಯಂತ ಕೆಳಮಟ್ಟದಲ್ಲಿದೆ. ಹೀಗಿರುವಾಗ ಜನರ ಬದುಕು ಸಮೃದ್ಧವಾಗಿರುವುದು ಸಾಧ್ಯವಿಲ್ಲ.

ನಮ್ಮ ಯುವಜನರ ಬದುಕನ್ನು ನಿರುದ್ಯೋಗ ಹೈರಾಣ ಮಾಡುತ್ತಿದೆ. ತೀವ್ರಗತಿಯಲ್ಲಿ ಏರಿಕೆಯಾಗುತ್ತಿರುವ ಹಣದುಬ್ಬರವು ಆರ್ಥಿಕತೆಯನ್ನು ದುರ್ಬಲಗೊಳಿಸುತ್ತಿದೆ. ಬೇಡಿಕೆಯ ಕೊರತೆಯಿಂದ ಉದ್ದಿಮೆರಂಗದಲ್ಲಿ ಉತ್ಪಾದನೆ ಕುಸಿದಿದೆ. ಖಾಸಗಿ ಹಾಗೂ ಸರ್ಕಾರಿ ಬಂಡವಾಳ ಹೂಡಿಕೆಯಲ್ಲಿ ಏರಿಕೆಯಾಗುತ್ತಿಲ್ಲ. ಈ ಎಲ್ಲ ಕಾರಣಗಳಿಂದ 2024- 25ರ ಎರಡನೆಯ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು ಆರ್‌ಬಿಐನ ಅಂದಾಜು ಆದ ಶೇಕಡ 7ಕ್ಕೆ ಪ್ರತಿಯಾಗಿ ಶೇ 5.4ಕ್ಕೆ ಇಳಿದಿದೆ. ನಮ್ಮ ಮಾರುಕಟ್ಟೆಯನ್ನು ನಿರಾಶೆಯ ಛಾಯೆ ಆವರಿಸಿಕೊಂಡಿದೆ. ಇದರಿಂದ ನಮ್ಮ ಆರ್ಥಿಕತೆಯ ಭವಿಷ್ಯದ ಬಗ್ಗೆ ಆತಂಕ ಉಂಟಾಗಿದೆ.

ಯುವಜನರನ್ನು ಕಾಡುತ್ತಿರುವ ಇಂದಿನ ನಿರುದ್ಯೋಗ ಪ್ರಮಾಣವು 45- 50 ವರ್ಷಗಳ ಅವಧಿಯಲ್ಲೇ ಅತ್ಯಧಿಕವಾದುದು ಎನ್ನಲಾಗಿದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ) ಪ್ರಕಟಿಸಿರುವ 'ಇಂಡಿಯಾ ಎಂಪ್ಲಾಯ್‌ಮೆಂಟ್ ರಿಪೋರ್ಟ್– 2024'ರ ಪ್ರಕಾರ, 2022ರಲ್ಲಿ ಉದ್ಯೋಗಕ್ಕೆ ಅರ್ಹರಾದ ಒಟ್ಟು ದುಡಿಮೆಗಾರರ ಸಂಖ್ಯೆ ಇದ್ದದ್ದು 54.45 ಕೋಟಿ. ಆದರೆ ಉದ್ಯೋಗದಲ್ಲಿದ್ದ ಮತ್ತು ಉದ್ಯೋಗವನ್ನು ಅರಸುತ್ತಿದ್ದ ಕಾರ್ಮಿಕರ ಒಟ್ಟು ಸಂಖ್ಯೆ 56.74 ಕೋಟಿ. ಇವೆರಡರ ನಡುವಿನ ವ್ಯತ್ಯಾಸ 2.29 ಕೋಟಿ. ಅಂದರೆ, 2022ರಲ್ಲಿದ್ದ ನಿರುದ್ಯೋಗಿಗಳ ಸಂಖ್ಯೆ 2.29 ಕೋಟಿ. ಇದರ ಒಳಾರ್ಥವಿಷ್ಟು. ಕಾರ್ಮಿಕರ ಸಂಖ್ಯೆಗೆ ಅನುಗುಣವಾಗಿ ಉದ್ಯೋಗಗಳ ಸಂಖ್ಯೆ ಹೆಚ್ಚುತ್ತಿಲ್ಲ. ಒಂದು ನೆಲೆಯಲ್ಲಿ, ಆರ್ಥಿಕತೆಯ ಬೆಳವಣಿಗೆ ಮತ್ತು ಉದ್ಯೋಗಗಳ ಬೆಳವಣಿಗೆಯ ನಡುವಿನ ಸಂಬಂಧ ಕಡಿದುಹೋಗಿರುವಂತೆ ಕಾಣುತ್ತದೆ. ಉದ್ಯೋಗದ ಸ್ಥಿತಿ ಎಷ್ಟು ಆತಂಕಕಾರಿಯಾಗಿದೆ ಎಂಬುದನ್ನು ಖಾಲಿ ಹುದ್ದೆಗಳ ಭರ್ತಿಗೆ ಸರ್ಕಾರ ನೀಡುವ ಜಾಹೀರಾತಿಗೆ ಎಷ್ಟೊಂದು ಯುವಕರು, ಯುವತಿಯರು ಅರ್ಜಿ ಹಾಕುತ್ತಾರೆ ಎಂಬುದರಿಂದ ತಿಳಿದುಕೊಳ್ಳಬಹುದು. ಕೆಲವು ವಿದ್ಯಮಾನಗಳನ್ನು ಇದಕ್ಕೆ ನಿದರ್ಶನವಾಗಿ ನೀಡಬಹುದು. ಉತ್ತರಪ್ರದೇಶದ ಪೊಲೀಸ್ ಇಲಾಖೆಯಲ್ಲಿ ಇದ್ದ 62 ಜವಾನರ ಹುದ್ದೆಗಳಿಗೆ 3,700 ಮಂದಿ ಪಿಎಚ್.ಡಿ ಪದವೀಧರರು, 28,000 ಮಂದಿ ಸ್ನಾತಕೋತ್ತರ ಪದವೀಧರರು ಮತ್ತು 5,000 ಪದವೀಧರರನ್ನು ಒಳಗೊಂಡು 92,000 ಮಂದಿ ಅರ್ಜಿ ಸಲ್ಲಿಸಿದ್ದರು ಎನ್ನಲಾಗಿದೆ.

ರೈಲ್ವೆಯ 1.5 ಲಕ್ಷ ಹುದ್ದೆಗಳಿಗೆ ಬಿಹಾರವೊಂದರಿಂದಲೇ 10 ಲಕ್ಷಕ್ಕೂ ಅಧಿಕ ಅರ್ಜಿಗಳು ಬಂದಿದ್ದವು. ಆದರೆ ವಿವಿಧ ಕಾರಣಗಳಿಂದ ಈ ಪರೀಕ್ಷೆಯನ್ನು ರದ್ದುಪಡಿಸಲಾಯಿತು. ಇದೇ ರೀತಿ ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಜವಾನ, ವಾಹನ ಚಾಲಕ ಮತ್ತು ಕಾವಲುಗಾರರ 15 ಹುದ್ದೆಗಳಿಗೆ 11,000 ಯುವಕರು ಅರ್ಜಿ ಸಲ್ಲಿಸಿದ್ದರೆ, ಗುಜರಾತಿನಲ್ಲಿ 10ನೇ ತರಗತಿ ವಿದ್ಯಾರ್ಹತೆಯ 3,400 ಹುದ್ದೆಗಳಿಗೆ 17 ಲಕ್ಷ ಜನ ಅರ್ಜಿ ಸಲ್ಲಿಸಿದ್ದರು.

ಒಟ್ಟು ಉದ್ಯೋಗಿಗಳಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಪ್ರಮಾಣ ಶೇ 90ಕ್ಕಿಂತ ಅಧಿಕವಾಗಿದೆ. ಇಂಡಿಯಾ ಎಂಪ್ಲಾಯ್‌ಮೆಂಟ್ ರಿಪೋರ್ಟ್– 2024ರ ಪ್ರಕಾರ, ಒಟ್ಟು ಉದ್ಯೋಗಿಗಳಲ್ಲಿ ಸ್ವಉದ್ಯೋಗಿಗಳ ಪ್ರಮಾಣ ಶೇ 55.8ರಷ್ಟು ಇದ್ದರೆ, ಕಾಯಂ ಉದ್ಯೋಗಿಗಳ ಪ್ರಮಾಣ ಶೇ 21.5ರಷ್ಟು. ಅರೆಕಾಲಿಕ ಕಾರ್ಮಿಕರ ಪ್ರಮಾಣ ಶೇ 22.7ರಷ್ಟು. ಅಂದರೆ, ಉದ್ಯೋಗ ಅಭದ್ರತೆಯನ್ನು ಎದುರಿಸುತ್ತಿರುವ ಸ್ವ ಉದ್ಯೋಗಿಗಳು ಮತ್ತು ಅರೆಕಾಲಿಕ ಉದ್ಯೋಗಿಗಳ ಪ್ರಮಾಣ ಶೇ 78ರಷ್ಟು. ಈ ವರ್ಗದ ಕಾರ್ಮಿಕರಿಗೆ ಉದ್ಯೋಗ ಭದ್ರತೆಯಿಲ್ಲ, ವಿಮಾ ಸೌಲಭ್ಯ ಹಾಗೂ ಪಿಂಚಣಿಯ ಖಾತರಿ ಇಲ್ಲ, ಕೂಲಿ ಅಥವಾ ಸಂಬಳ ಅತ್ಯಂತ ಕಡಿಮೆ. ಉದಾಹರಣೆಗೆ, ಸ್ವಉದ್ಯೋಗಿಗಳ ಮಾಸಿಕ ವರಮಾನ ₹11,973 ಮತ್ತು ಅರೆಕಾಲಿಕ ಉದ್ಯೋಗಿಗಳ ಮಾಸಿಕ ವರಮಾನ ₹ 8,267. ಅಂದರೆ ಸ್ವಉದ್ಯೋಗಿಗಳ ದಿನದ ಗಳಿಕೆ ₹ 400ರಷ್ಟಾದರೆ, ಅರೆಕಾಲಿಕ ಉದ್ಯೋಗಿಗಳ ದಿನದ ದುಡಿಮೆ ₹276. ಈ ಆದಾಯದಲ್ಲಿ ಅವರು ತಮ್ಮ ಕುಟುಂಬಗಳನ್ನು ಹೇಗೆ ನಿರ್ವಹಿಸುತ್ತಿರಬಹುದು ಎಂಬುದನ್ನು ಊಹಿಸಿಕೊಳ್ಳುವುದು ಕಷ್ಟ.

ದೇಶದ ಒಟ್ಟು ನಿರುದ್ಯೋಗಿಗಳಲ್ಲಿ ಯುವಕ–ಯುವತಿಯರ, ಅಂದರೆ 15-29 ವರ್ಷ ವಯೋಮಾನದವರ ಪ್ರಮಾಣ ಅಧಿಕವಾಗಿದೆ. ಗ್ರಾಮೀಣ ಪ್ರದೇಶದ ಯುವಕರಿಗಿಂತ ನಗರ ಪ್ರದೇಶದ ಯುವಕರಲ್ಲಿ ನಿರುದ್ಯೋಗ ಅಧಿಕ. ಅದರಲ್ಲಿಯೂ ವಿದ್ಯಾವಂತ ಯುವಕರು, ಯುವತಿಯರಲ್ಲಿ ಇದು ಹೆಚ್ಚಿನ ಪ್ರಮಾಣದಲ್ಲಿದೆ. ಒಟ್ಟು ನಿರುದ್ಯೋಗಿಗಳಲ್ಲಿ ಯುವಕರ ಪ್ರಮಾಣವೇ ಶೇ 82.9ರಷ್ಟಿದೆ. ವಿದ್ಯಾವಂತ ಯುವಕರ ಪ್ರಮಾಣವು 2000ದಲ್ಲಿ ಶೇ 54.2ರಷ್ಟಿದ್ದುದು 2022ರಲ್ಲಿ ಶೇ 65.7ಕ್ಕೆ ಏರಿದೆ. ಇಲ್ಲಿ ಮತ್ತೊಂದು ವಿಚಿತ್ರವೆಂದರೆ, ವಿದ್ಯಾವಂತ ನಿರುದ್ಯೋಗಿಗಳಲ್ಲಿ ಯುವತಿಯರ ಪ್ರಮಾಣ ಹೆಚ್ಚು.

ಒಟ್ಟು ನಿರುದ್ಯೋಗಿಗಳಲ್ಲಿ ವಿದ್ಯಾವಂತ ಯುವಜನರ ಪ್ರಮಾಣ ಅಧಿಕವಾಗಿದೆ. ಇದಕ್ಕೆ ಒಂದು ಮುಖ್ಯ ಕಾರಣವೆಂದರೆ, ಉದ್ಯೋಗಕ್ಕೆ ಯುವಜನರನ್ನು ಅರ್ಹರನ್ನಾಗಿಸುವ ಸಾಮರ್ಥ್ಯ ನಮ್ಮ ಶಿಕ್ಷಣ ವ್ಯವಸ್ಥೆಗಿಲ್ಲ. ಈ ಕಾರಣದಿಂದ ನಿರುದ್ಯೋಗವು ಉನ್ನತ ಶಿಕ್ಷಣ ಪಡೆದವರಲ್ಲಿ ಅಧಿಕವಾಗಿದೆ. ಇತ್ತೀಚೆಗೆ ಕಂಡುಬರುತ್ತಿರುವ ಮತ್ತೊಂದು ಸಂಗತಿಯೆಂದರೆ, ಅಪಾರ ಸಂಖ್ಯೆಯ ಯುವಕರು ಉದ್ಯೋಗದಲ್ಲಿ ಇಲ್ಲ, ಉದ್ಯೋಗವನ್ನು ಅರಸುತ್ತಿಲ್ಲ, ಶಿಕ್ಷಣ ಪಡೆಯುತ್ತಿಲ್ಲ ಮತ್ತು ತರಬೇತಿ ನಿರತರಾಗಿಯೂ ಇಲ್ಲ. ಇಂತಹವರ ಪ್ರಮಾಣ ಅಧಿಕವಾಗುತ್ತಿದೆ.

'ನರೇಗಾ' ಬಿಟ್ಟರೆ ದೇಶದಲ್ಲಿ ಉದ್ಯೋಗ ನೀಡುವ ಅಥವಾ ಸೃಷ್ಟಿಸುವ ಕಾರ್ಯಕ್ರಮಗಳೇ ಇಲ್ಲ. ನಿರುದ್ಯೋಗಿಗಳಿಗಾಗಿ ಕೆಲವು ಕಾರ್ಯಕ್ರಮಗಳೇನೋ ಇವೆ. ಆದರೆ ಅವು ಸಬ್ಸಿಡಿ-ಬ್ಯಾಂಕ್ ಸಾಲದಂತಹವನ್ನು ಒಳಗೊಂಡಿವೆಯೇ ವಿನಾ ಉದ್ಯೋಗ ನೀಡುವ ಕಾರ್ಯಕ್ರಮಗಳಲ್ಲ. ಹಣಕಾಸು ಸಚಿವರು 2024-25ರ ಬಜೆಟ್ಟಿನಲ್ಲಿ ಹೇಳಿರುವಂತೆ, ನಮ್ಮಲ್ಲಿ ಇರುವುದು 'ಇನ್‌ಸೆಂಟಿವ್ ಲಿಂಕ್ಡ್ ಎಂಪ್ಲಾಯ್‌ಮೆಂಟ್' ಕಾರ್ಯಕ್ರಮಗಳಾಗಿವೆ. 'ಯುವಕರು, ಯುವತಿಯರು ಉದ್ಯೋಗಕ್ಕೆ ಪ್ರಯತ್ನಪಡುವುದಕ್ಕೆ ಬದಲಾಗಿ ಉದ್ಯೋಗ ನೀಡುವವರಾಗಬೇಕು' ಎಂದು ಪ್ರಧಾನಮಂತ್ರಿ ಕರೆ ನೀಡುತ್ತಿದ್ದಾರೆ.

ಆಹಾರ ಹಣದುಬ್ಬರವು 2024ರ ಅಕ್ಟೋಬರ್ ತಿಂಗಳಲ್ಲಿ ಶೇ 10.87ರಷ್ಟಾಗಿದೆ. ಇದರಿಂದ ಒಟ್ಟಾರೆ ಬೇಡಿಕೆಯು ದುರ್ಬಲಗೊಂಡಿದೆ. ಸರ್ಕಾರಿ ವೆಚ್ಚದ ಪ್ರಮಾಣವೂ ಇಳಿಕೆಯಾಗಿದೆ ಎನ್ನಲಾಗಿದೆ. ಬಜೆಟ್ಟಿನಲ್ಲಿ ಸರ್ಕಾರಿ ವೆಚ್ಚದಲ್ಲಿ ರೆವಿನ್ಯೂ ವೆಚ್ಚದ ಪ್ರಮಾಣ 2020-21ರಲ್ಲಿ ಶೇ 86.45ರಷ್ಟಿದ್ದುದು 2024- 25ರಲ್ಲಿ ಶೇ 76.95ಕ್ಕೆ ಇಳಿದಿದೆ.

ಆರ್ಥಿಕ ಸಮೃದ್ಧಿಯು ಹಲವರ ಪಾಲಾಗುವ ಬದಲು ಕೆಲವರ ಪಾಲಾಗುತ್ತಿದೆ. ವರ್ಲ್ಡ್ ಇನೀಕ್ವಾಲಿಟಿ ಲ್ಯಾಬಿನ ಸಾಂಖ್ಯಿಕ ವಿವರಗಳ ಅನುಸಾರ, ಭಾರತದಲ್ಲಿನ ಒಟ್ಟು ವಯಸ್ಕ ಜನಸಂಖ್ಯೆಯಲ್ಲಿ ಶೇ 10ರಷ್ಟು ಮಂದಿ ಅತಿ ಶ್ರೀಮಂತರಾಗಿದ್ದಾರೆ. ಇವರು 2022ರ ಒಟ್ಟು ವರಮಾನದಲ್ಲಿ ಶೇ 57.7ರಷ್ಟನ್ನು ಹೊಂದಿದ್ದು, ಒಟ್ಟು ಸಂಪತ್ತಿನಲ್ಲಿ ಶೇ 65ರಷ್ಟು ಇವರ ಪಾಲಾಗಿದೆ. ಉಳಿದ ಶೇ 90ರಷ್ಟು ಜನರಿಗೆ ಅದರಲ್ಲಿ ಅರ್ಧದಷ್ಟೂ ಪಾಲು ದೊರೆಯುತ್ತಿಲ್ಲ. ಆರ್ಥಿಕ ಸಮೃದ್ಧಿ ಕೆಲವರ ಪಾಲಾಗುತ್ತಿರುವ ಕಾರಣ ಅಸಮಾನತೆ ಮಿತಿಮೀರಿ ಬೆಳೆಯುತ್ತಿದೆ.

ನಿರುದ್ಯೋಗ ಮತ್ತು ಅಸಮಮಾನತೆಯಿಂದ ಯುವಜನ ಕಡುಕಷ್ಟವನ್ನು ಅನುಭವಿಸುವಂತಾಗಿದೆ. ಸರ್ಕಾರಗಳು ನೇರವಾಗಿ ಉದ್ಯೋಗ ನೀಡುವ ಅಥವಾ ಸೃಷ್ಟಿಸುವ ಕಾರ್ಯಕ್ರಮಗಳನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಬೇಕಾಗಿದೆ.

ಚುರುಮುರಿ

ಪಾಪ್‌ಕಾರ್ನ್ ಬರೆ!

• ಗುರು ಪಿ.ಎಸ್.

'ಇಲ್ನೋಡ್ರೀ ಈ ಕಾರು ಎಷ್ಟು ಚೆನ್ನಾಗಿದೆ. ಇದನ್ನೇ ತಗೋಳೋಣ ಕಣ್ರೀ...' ಪೇಪರ್‌ನಲ್ಲಿ ಬಂದ ಕಾರ್ ಫೋಟೊ ನೋಡುತ್ತಾ ಹೇಳಿದಳು ಹೆಂಡತಿ.

'ನಿನಗೇನ್ ತಲೆ ಕೆಟ್ಟಿದೆಯಾ, ಇ.ವಿ. ಕಾರ್ ತಗೊಂಡು ಇನ್ನೂ ಎರಡು ವರ್ಷ ಆಗಿಲ್ಲ, ಆಗಲೇ ಹೊಸ ಕಾರ್ ಬೇಕಾ?' ಸಿಟ್ಟಿನಲ್ಲಿ ಹೇಳಿದೆ.

'ಅದೇನ್ ಕಾರ್ ಬಿಡ್ರೀ, ಒಳಗೆ ಕೂತ್ಕೊಂಡು ಹೋಗ್ತಿದ್ರೆ ಸೌಂಡೇ ಬರಲ್ಲ. ಜರ್ನಿ ಮಾಡಿದ ಫೀಲ್ ಸಿಗೋದೇ ಇಲ್ಲ. ಅದನ್ನ ಮಾರಿಬಿಡಿ'.

'ಇದೇನಮ್ಮ ನೀನು, ಇಷ್ಟ್ ಸುಲಭವಾಗಿ ಹೇಳ್ತೀಯ. ಕಾರು ಮಾರೋದೂ ಕಷ್ಟ ಇದೆ ಗೊತ್ತಾ ಈಗ'.

'ಕಾರು ಖರೀದಿಸಲು ಕಷ್ಟಪಟ್ಟಿದ್ರಿ ಗೊತ್ತು, ಈಗ ಮಾರೋಕೆ ಏನ್ ಪ್ರಾಬ್ಲಂ ರೀ ನಿಮಗೆ?'

'ಸೆಕೆಂಡ್ ಹ್ಯಾಂಡ್ ಇ.ವಿ. ಕಾರ್ ಮಾರಿದ್ರೆ ಶೇ 18ರಷ್ಟು ಜಿಎಸ್‌ಟಿ ಹಾಕ್ತಾರೆ ಈಗ'.

'ಅದ್ಯಾಕ್ ನಮ್ ಸೆಂಟ್ರಲ್ ಫೈನಾನ್ಸ್ ಮಿನಿಸ್ಟರ್ರು ಹೀಗೆಲ್ಲ ಮಾಡ್ತಾರೆ?'

'ನಮ್ಮಂಥ ಮಧ್ಯಮ ವರ್ಗದವರು ಇರೋ ಒಂದ್ ಕಾರನ್ನು ಮಾರಿ ಕಷ್ಟಪಡಬಾರದು, ಟ್ಯಾಕ್ಸ್‌ಗೆ ಹೆದರಿಯಾದರೂ ತಮ್ಮ ಹತ್ತಿರವೇ ಕಾರ್ ಇಟ್ಕೊಂಡು, ಟೋಲ್ ಕಟ್ಕೊಂಡು ಇರಲಿ ಅನ್ನೋ ದೂರಾಲೋಚನೆ ನಮ್ಮ ಮಂತ್ರಿಯವರಿಗೆ' ನಕ್ಕೆ.

'ಏನಾದರೂ ಕೊಡಿಸಿ ಅಂತ ಕೇಳಿಬಿಟ್ಟರೆ ಹರಿಕಥೆಯನ್ನೇ ಸ್ಟಾರ್ಟ್ ಮಾಡಿಬಿಡ್ತೀರಿ. ನಡೀರಿ, ಮಾಲ್‌ಗೆ ಹೋಗಿ ಯುಐ ಫಿಲಂ ಆದರೂ ನೋಡ್ಕೊಂಡು ಬರೋಣ'.

'ಸುಮ್ನೆ ಸಿನಿಮಾ ನೋಡಬೇಕು, ಪಾಪ್‌ಕಾರ್ನ್ ಎಲ್ಲ ಕೇಳಬಾರದು'.

'ಎಷ್ಟ್ ಜುಗ್ಗ ಇದೀರಿ ನೀವು'.

'ಪಾಪ್‌ಕಾರ್ನ್ ಮೇಲೂ ಶೇ 18ರಷ್ಟು ಟ್ಯಾಕ್ಸ್ ಹಾಕಿದಾರಮ್ಮ, ರೇಟ್ ಜಾಸ್ತಿ'.

'ಅಯ್ಯೋ, ನಮ್ ಮಿನಿಸ್ಟರ್ ತಲೆಯಲ್ಲಿ ಏನಾದರೂ ಓಡ್ತಿರಬಹುದು' ಬೇಸರದಲ್ಲಿ ಹೇಳಿದಳು.

'ಯುಐ ಸಿನಿಮಾ ಸ್ಟೋರಿನೇ ಓಡ್ತಿರಬಹುದು. ಅವರ ಸ್ಟೋರಿ ಅವರು ಹೇಳ್ತಾರೆ, ಅರ್ಥ ಆಗದಿದ್ದರೂ ಆಗಿದೆ ಅನ್ನೋ ಥರ ನಾವು ಆ್ಯಕ್ಟ್ ಮಾಡಬೇಕಷ್ಟೇ'. ಇಬ್ಬರೂ ನಕ್ಕೆವು.

ದಿನದ ಟ್ವೀಟ್

ಸ್ಥಳೀಯ ರಾಜಕಾರಣ: ಬೇಕು ಬೆಂಬಲ

ವರ್ಷಗಳ ಹಿಂದೆ ಕಾರ್ಪೊರೇಟರ್ ಒಬ್ಬರು ನನಗೆ ಹೀಗೆ ಹೇಳಿದ್ದರು- 'ನಾನು ಚುನಾವಣೆಯಲ್ಲಿ ಗೆಲ್ಲಲು ಬಹುತೇಕ ನನ್ನ ಸಾಮರ್ಥ್ಯವನ್ನೇ ಅವಲಂಬಿಸುತ್ತೇನೆ. ಆದರೆ ಶಾಸಕ ಮತ್ತು ಸಂಸದರಿಗೆ ಪ್ರತಿ ಪ್ರದೇಶದಲ್ಲಿ ಜಯ ಪಡೆಯಲು ನನ್ನಂತಹ ಸ್ಥಳೀಯರ ಬೆಂಬಲದ ಅಗತ್ಯ ಇರುತ್ತದೆ. ಅಧಿಕಾರ ಯಾವ ದಿಕ್ಕಿನಲ್ಲಿ ಚಲಿಸುತ್ತದೆ ಎಂಬುದು ನನಗೆ ತಿಳಿದಿದೆ'. ಆಡಳಿತದಲ್ಲಿ ಸುಸ್ಥಿರವಾದ ಸುಧಾರಣೆ ತರಬೇಕಾದರೆ, ಸ್ಥಳೀಯ ರಾಜಕಾರಣದಲ್ಲಿ ಸುಧಾರಣೆ ಆಗಲೇಬೇಕಾಗಿದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ



ಆಣೆ– ಪ್ರಮಾಣದ ರಾಜಕಾರಣದ ಬಗ್ಗೆ ನಾನು ಕಾಮೆಂಟ್ ಮಾಡುವುದಿಲ್ಲ. ರಾಜಕಾರಣಿಗಳ ಇಂತಹ ವರಸೆಗಳ ಬಗ್ಗೆ ನನಗೆ ಯಾವ ನಂಬಿಕೆಯೂ ಇಲ್ಲ. ಎಲ್ಲವನ್ನೂ ಎಲ್ಲರದನ್ನೂ ಬಿಚ್ಚಿಡುತ್ತೇವೆ ಎಂದು ಹೇಳುತ್ತಾರೆ. ನಂತರ ಎಲ್ಲರೂ ಸುಮ್ಮನಾಗುತ್ತಾರೆ...

ಪ್ರತಾಪ ಸಿಂಹ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಭಾನುವಾರ, 26-12-1999

• ಕಂದಹಾರ್‌ನಲ್ಲಿ ವಿಮಾನ– ಇನ್ನೂ ಆತಂಕದಲ್ಲಿ ಪ್ರಯಾಣಿಕರು

ನವದೆಹಲಿ, ಡಿ. 25 (ಪಿಟಿಐ)– ಶುಕ್ರವಾರ ಸಂಜೆ ಅಪಹರಣಕ್ಕೆ ಒಳಗಾದ, ಚಾಲಕ ವರ್ಗ ಸೇರಿ 161 ಪ್ರಯಾಣಿಕರು ಇರುವ ಇಂಡಿಯನ್ ಏರ್‌ಲೈನ್ಸ್ ಏರ್‌ಬಸ್ – 300 ವಿಮಾನ ಕಾಬೂಲ್‌ಗೆ 650 ಕಿ.ಮೀ. ದೂರದ ಕಂದಹಾರ್ ವಿಮಾನ ನಿಲ್ದಾಣದಲ್ಲಿ ಇಂದು ಬೆಳಿಗ್ಗೆ ಇಳಿದಿದೆ. ವಿಮಾನ ಅಪಹರಣದ 30 ಗಂಟೆಯ ನಂತರ ತಮ್ಮ ಬೇಡಿಕೆಯನ್ನು ಮುಂದಿಟ್ಟು, ಕೆಲವು ಕಾಶ್ಮೀರಿ ಉಗ್ರಗಾಮಿಗಳನ್ನು ಬಿಡುಗಡೆ ಮಾಡುವಂತೆ ಆಗ್ರಹಪಡಿಸಿದ್ದಾರೆ.

ಆದರೆ ಇಂತಹ ಭಯೋತ್ಪಾದಕ ಚಟುವಟಿಕೆಗೆ ಸರ್ಕಾರ ಬಗ್ಗುವುದಿಲ್ಲ. ನಾವು ಸವಾಲನ್ನು ಆತ್ಮವಿಶ್ವಾಸದಿಂದ ಸ್ವೀಕರಿಸುತ್ತೇವೆ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಹೇಳಿದ್ದಾರೆ.

ಸಕ್ಕರೆಕಾಯಿಲೆ ಪೀಡಿತರಾದ ಒಬ್ಬ ಪ್ರಯಾಣಿಕರನ್ನು ವಿಮಾನದಿಂದ ಬಿಡಲಾಗಿದ್ದು ಅವರನ್ನು ಚಿಕಿತ್ಸೆಗಾಗಿ ಕಂದಹಾರ್ ಆಸ್ಪತ್ರೆಗೆ ಕರೆದೊಯ್ಯಲಾಗಿದೆ.ಕಾಶ್ಮೀರಿ ಉಗ್ರಗಾಮಿ ಮೌಲಾನಾ ಮಸೂದ್ ಅಜರ್ ಎಂಬಾತನ ಹಾಗೂ ಇನ್ನೂ ಕೆಲವು ಬಂದಿಗಳ ಬಿಡುಗಡೆಯ ಆಗ್ರಹವನ್ನು ಅಪಹರಣಕಾರರು ಮುಂದಿಟ್ಟಿದ್ದು ವಿಶ್ವಸಂಸ್ಥೆ ಯೊಡನೆ ಮಾತುಕತೆಗೆ ಆಗ್ರಹಿಸಿದ್ದಾರೆ. ಸಂಧಾನಕ್ಕೆ ಸಿದ್ಧ ಎಂದು ವಿಶ್ವಸಂಸ್ಥೆಯ ವಕ್ತಾರರು ರಾತ್ರಿ ತಿಳಿಸಿದರು. ಆದರೆ ಈ ಸಂಬಂಧ ತಾಲಿಬಾನ್‌ನಿಂದ ಅಧಿಕೃತ ಬೇಡಿಕೆ ಬಂದಿಲ್ಲ ಎಂದು ಅವರು ಹೇಳಿದರು.

• ಕ್ರಿಸ್ಮಸ್ ಸಂಭ್ರಮದ ಮೇಲೆ ವಿಮಾನ ಅಪಹರಣದ ಕರಿನೆರಳು

ನವದೆಹಲಿ, ಡಿ. 25 (ಪಿಟಿಐ)– ಬಹಳ ನಿರೀಕ್ಷೆ, ಸಂಭ್ರಮದೊಂದಿಗೆ ಆಗಮಿಸಿದ್ದ ಶತಮಾನದ ಕೊನೆಯ ಕ್ರಿಸ್ಮಸ್ ಇಂಥ ದುಃಖ, ವಿಷಾದದ ವಾತಾವರಣದಲ್ಲಿ ನಡೆಯಬಹುದೆಂದು ಯಾರೂ ಯೋಚಿಸಿರಲಿಕ್ಕಿಲ್ಲ. ಇಂಡಿಯನ್ ಏರ್‌ಲೈನ್ಸ್ ವಿಮಾನದ ಅಪಹರಣ ಇಡೀ ರಾಷ್ಟ್ರದ ಕ್ರಿಸ್ಮಸ್ ಸಡಗರಕ್ಕೆ ತಣ್ಣೀರೆರಚಿದೆ.

ಕ್ರಿಸ್ಮಸ್‌ನೊಂದಿಗೆ ತಮ್ಮ 75ನೇ ಹುಟ್ಟುಹಬ್ಬವನ್ನು ಆಚರಿಸುತ್ತಿರುವ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ವಿಮಾನಾಪಹರಣಕ್ಕೆ ತೀವ್ರ ದಿಗ್ಭ್ರಮೆ ವ್ಯಕ್ತಪಡಿಸಿ ಎಲ್ಲಾ ಕಾರ್ಯಕ್ರಮಗಳನ್ನು ರದ್ದುಗೊಳಿಸಿದರು.

ಅಪಹರಣಕಾರರ ಕೈಗೆ ಸಿಕ್ಕಿದ ನತದೃಷ್ಟ ವಿಮಾನವು ನಿಲ್ದಾಣದಿಂದ ನಿಲ್ದಾಣಕ್ಕೆ ಹಾರುತ್ತಿದ್ದರೆ, ಇನ್ನೊಂದು ಕಡೆಯಲ್ಲಿ ವಿಮಾನದಲ್ಲಿದ್ದ ಪ್ರಯಾಣಿಕರ ಸಂಬಂಧಿಗಳು ಉದ್ವೇಗದಿಂದ ವಿಮಾನ ನಿಲ್ದಾಣದಲ್ಲಿ ಕಾಯುತ್ತಿದ್ದರು. ನಿರ್ದಯಿ ಅಪಹರಣಕಾರರಿಂದ ಕನಿಷ್ಠ ಒಬ್ಬರು ಸತ್ತಿರುವುದು ಈಗಾಗಲೇ ವರದಿಯಾಗಿದೆ.

• ದೆಹಲಿಗೆ ಬಂದ 27 ಒತ್ತೆಯಾಳುಗಳು

ನವದೆಹಲಿ, ಡಿ. 25 (ಪಿಟಿಐ)– ಅಪಹರಣವಾಗಿರುವ ಭಾರತೀಯ ವಿಮಾನದಿಂದ ಬಿಡುಗಡೆಯಾದ 27 ಜನರನ್ನು ಹೊತ್ತ ವಿಶೇಷ ವಿಮಾನ ಇಲ್ಲಿಂದ ಇಂದು ರಾತ್ರಿ 10.15ಕ್ಕೆ ದೆಹಲಿಗೆ ವಾಪಸಾಯಿತು.

ಅಪಹರಣಕಾರರು ಇಂದು ಹತ್ಯೆ ಮಾಡಿದ ರುಪಿನ್ ಕತ್ಯಾಲ್ ಅವರ ದೇಹವನ್ನು ಇದೇ ವಿಮಾನದಲ್ಲಿ ತರಲಾಯಿತು. ವಿಮಾನದಲ್ಲಿ ಬಂದ ತಮ್ಮ ಆಪ್ತರನ್ನು ಕಂಡು ನಿಲ್ದಾಣದಲ್ಲಿ ಭಾವಾವೇಶದ ದೃಶ್ಯಗಳು ಕಂಡುಬಂದವು.

ವಿಮಾನಯಾನ ಸಚಿವ ಶರದ್ ಯಾದವ್ ಅವರೂ ಪ್ರಯಾಣಿಕರ ಜತೆ ದುಬೈನಿಂದ ಈ ವಿಮಾನದಲ್ಲಿ ಬಂದರು.

ದುಬೈ ವರದಿ: ವಿಮಾನವನ್ನು ಇಂದು ಬೆಳಿಗ್ಗೆ ದಕ್ಷಿಣ ಅಫ್ಗಾನಿಸ್ತಾನದ ಕಂದಹಾರ್‌ಗೆ ಒಯ್ಯುವ ಮುನ್ನ ಈ ಒತ್ತೆಯಾಳುಗಳನ್ನು ಅಪಹರಣಕಾರರು ಬಿಡುಗಡೆ ಮಾಡಿದರು.

ಚರ್ಚೆ

ಕನ್ನಡದಲ್ಲಿ ತೀರ್ಪು: ಅನಗತ್ಯ ಅನುಮಾನ

ಬಹುಮಂದಿ ಕಕ್ಷಿದಾರರ ಪಾಲಿಗೆ ನ್ಯಾಯನಿರ್ಣಯವನ್ನು 'ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತೆ' ಆಗಿಸುವುದು ಬೇಡ

'**ಭಾರತೀಯ** ಭಾಷಾ ದಿವಸ' ಪ್ರಯುಕ್ತ, ಹೈಕೋರ್ಟ್ ನ್ಯಾಯಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಹಾಗೂ ಸಿ.ಎಂ.ಜೋಶಿ ಅವರಿದ್ದ ವಿಭಾಗೀಯ ನ್ಯಾಯಪೀಠವು ಇತ್ತೀಚೆಗೆ ಪ್ರಕರಣವೊಂದರ ತೀರ್ಪನ್ನು ಕನ್ನಡದಲ್ಲಿಯೇ ನೀಡಿರುವುದು ಒಂದು ಐತಿಹಾಸಿಕ ಸಂಗತಿ ಎಂದು ಸಿ.ಸೋಮಶೇಖರ ಹೇಳಿದ್ದಾರೆ (ವಾ.ವಾ., ಡಿ. 14). ನ್ಯಾಯಾಲಯಗಳ ತೀರ್ಪುಗಳು ಕನ್ನಡದಲ್ಲಿ ಇರುವಂತೆ ಸರ್ಕಾರವು ಸಂವಿಧಾನಾತ್ಮಕವಾಗಿ ಕ್ರಮ ಕೈಗೊಳ್ಳಲಿ ಎಂದು ಸಹ ಅವರು ಈ ಸಂದರ್ಭದಲ್ಲಿ ಸಲಹೆ ನೀಡಿದ್ದಾರೆ. ಆದರೆ, 'ತೀರ್ಪುಗಳ ಅನುವಾದ: ಇದೆ ಒಳಸುಳಿ' ಎಂಬ ಪತ್ರದಲ್ಲಿ (ವಾ.ವಾ., ಡಿ. 21) ಕೆ.ಟಿ. ಕೃಷ್ಣಕಾಂತ್ ಈ ವಿಷಯದ ಬಗ್ಗೆ ನೇತ್ಯಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ. ಈ ಪತ್ರಗಳನ್ನು ಓದಿದಾಗ, ಕುವೆಂಪು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಆಗಿದ್ದ ಅನುಭವವೊಂದರ ಕುರಿತು ಓದಿದ್ದು ನೆನಪಾಯಿತು.

ಕುವೆಂಪು ಅವರು ತಮ್ಮ ಬರವಣಿಗೆಯ ಆರಂಭಿಕ ಕಾಲಘಟ್ಟದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಕವನಗಳನ್ನು ರಚಿಸುತ್ತಿದ್ದರಂತೆ. ಅದನ್ನು ಮೆಚ್ಚಿದ್ದ ಅವರ ಅಧ್ಯಾಪಕರು, ಆಗ ಮೈಸೂರಿಗೆ ಬಂದಿದ್ದ ಪ್ರಸಿದ್ಧ ಐರಿಷ್ ಕವಿ ಕಸಿನ್ಸ್ ಅವರಿಗೆ ಅವರ ಕವನಗಳನ್ನು ತೋರಿಸುವಂತೆ ಸೂಚಿಸಿದರು. ಅಂತೆಯೇ ಕುವೆಂಪು ಅವರು ಇಂಗ್ಲಿಷ್ ಭಾಷೆಯಲ್ಲಿ ರಚಿಸಿದ್ದ ತಮ್ಮ ಕವನಗಳನ್ನು ಕಸಿನ್ಸ್ ಅವರಿಗೆ ತೋರಿಸಿದರು. ಅವರು ಅವುಗಳನ್ನು ಓದಿ, 'ಈ ಕವನಗಳನ್ನು ನಿಮ್ಮ ಭಾಷೆಯಲ್ಲಿ ಯಾಕೆ ಬರೆಯಲಿಲ್ಲ?' ಎಂದು ಪ್ರಶ್ನಿಸಿದರು. ಅದಕ್ಕೆ ಕುವೆಂಪು, 'ಸೂಕ್ಷ್ಮ ಭಾವನೆಗಳನ್ನು ಮತ್ತು ಆಳವಾದ ಚಿಂತನೆಗಳನ್ನು ಇಂಗ್ಲಿಷ್ ಭಾಷೆಯಲ್ಲಿ ವ್ಯಕ್ತಪಡಿಸಿದಂತೆ ಕನ್ನಡದಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ, ಅದಕ್ಕಾಗಿ ಇಂಗ್ಲಿಷ್‌ನಲ್ಲಿ ಬರೆದಿದ್ದೇನೆ' ಎಂದರಂತೆ. ಆಗ ಅವರು, 'ಯಾವ ಭಾಷೆಯೂ ಭಾವನೆಯ ಅಭಿವ್ಯಕ್ತಿಗೆ ಅಸಮರ್ಥ ಎಂದು ಹೇಳಲಾಗದು' ಎಂದು ಹೇಳಿ, ಇದಕ್ಕೆ ಪೂರಕವಾಗಿ ರವೀಂದ್ರನಾಥ ಟ್ಯಾಗೋರ್ ಅವರನ್ನು ಉದಾಹರಿಸಿದರಂತೆ.

'ಟ್ಯಾಗೋರ್ ಅವರು ಬಂಗಾಳಿ ಭಾಷೆಯಲ್ಲಿ ಬರೆಯುವವರೆಗೆ ಬಂಗಾಳಿ ಭಾಷೆಯ ಬಗೆಗೂ ಅಂಥದ್ದೇ ಭಾವನೆ ಇತ್ತು. ಟ್ಯಾಗೋರ್ ಅವರು ಬಂಗಾಳಿ ಭಾಷೆಯನ್ನು ಜಗತ್ತಿನ ಮಟ್ಟಕ್ಕೆ ಮುಟ್ಟಿಸಿದರು. ಆದ್ದರಿಂದ ನೀವೂ ನಿಮ್ಮ ಭಾಷೆಯಲ್ಲಿ ಬರೆಯಿರಿ' ಎಂದು ಹೇಳಿದ ಮೇಲೆ ಕುವೆಂಪು ಕನ್ನಡದಲ್ಲಿ ಬರೆಯಲು ಆರಂಭಿಸಿ ಮಹಾನ್ ಕವಿಯಾದರು.

ಹಾಗಾಗಿ, ಇಂಗ್ಲಿಷ್ ಭಾಷೆಯಲ್ಲಿರುವ ಜಟಿಲ ಕಾಯ್ದೆಗಳ ಅರ್ಥಜಿಜ್ಞಾಸೆ, ನಿರ್ದುಷ್ಟವಾದ ಅನುವಾದ ಕನ್ನಡದಲ್ಲಿ ಸಾಧ್ಯವಾಗಲಾರದು ಎಂಬ ಅನುಮಾನ ಅನಗತ್ಯ. ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಇಪ್ಪತ್ತನೆಯ ಶತಮಾನದಲ್ಲಿ ಅದು ಅದ್ಭುತವಾದ ವಿಕಾಸವನ್ನೂ ಪಡೆದಿದೆ. ಒಂದುವೇಳೆ ಎಲ್ಲಿಯಾದರೂ ಅದನ್ನು ಅರ್ಥ ಮಾಡಿಕೊಳ್ಳುವಲ್ಲಿ ಸಂದಿಗ್ಧ ತಲೆದೋರಿದರೆ, ಅಂತಹ ಇಂಗ್ಲಿಷ್ ಪದವನ್ನು ಆವರಣದಲ್ಲಿ ಸೂಚಿಸಿದರಾಯಿತು. ಅಪರೂಪಕ್ಕೆ ಎದುರುಗೊಳ್ಳಬಹುದಾದ ಬಿಕ್ಕಟ್ಟುಗಳನ್ನೇ ಮುಂದುಮಾಡಿ, ಬಹುಮಂದಿ ಕಕ್ಷಿದಾರರ ಪಾಲಿಗೆ ನ್ಯಾಯನಿರ್ಣಯವನ್ನು, 'ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿದಂತೆ' ಆಗಿಸುವುದು ಬೇಡ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಬರೀ ಭಾವನಾತ್ಮಕವಲ್ಲ

'ತೀರ್ಪುಗಳ ಅನುವಾದ ಬರೀ ಭಾವನಾತ್ಮಕ ವಿಷಯವಲ್ಲ. ಅದರಲ್ಲಿ ಒಳಸುಳಿಗಳು ಇರುವುದರಿಂದ ಮುಂದಡಿ ಇಡುವ ಮೊದಲು ಎಚ್ಚರ ವಹಿಸಬೇಕು' ಎಂದು ಹೇಳಿರುವ ಕೆ.ಟಿ.ಕೃಷ್ಣಕಾಂತ್, 'ಕರ್ನಾಟಕವು ಪ್ರತ್ಯೇಕ ದೇಶವಾಗಿ ತನ್ನದೇ ಕಾನೂನು ಹೊಂದಿದ್ದರೆ ಕನ್ನಡದಲ್ಲೇ ತೀರ್ಪು ಬರೆಯುವುದು ಸೂಕ್ತ ಎನಿಸುತ್ತಿತ್ತು' ಎಂದಿದ್ದಾರೆ. ಆದರೆ ಅವರ ಈ ಹೇಳಿಕೆ ಸರಿಯಲ್ಲ.

ಭಾರತವು ರಾಜ್ಯಗಳ ಒಕ್ಕೂಟ. ಪ್ರತಿ ರಾಜ್ಯವೂ ತನ್ನದೇ ಆದ ಭಾಷೆ, ಸಂಸ್ಕೃತಿ, ಆಚಾರ- ವಿಚಾರ, ಸಂವಿಧಾನದ ಅಡಿಯಲ್ಲೇ ಹಲವು ಪ್ರತ್ಯೇಕ ಕಾನೂನುಗಳನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನೂ ಹೊಂದಿದೆ. ಅಲ್ಲದೆ ಆಯಾ ರಾಜ್ಯದ ಭಾಷೆಯಲ್ಲೇ ಕಾನೂನು ಹೋರಾಟ ನಡೆದು, ಕಾನೂನಿನ ಮಜಲುಗಳು, ತನಗೆ ದೊರೆತ ನ್ಯಾಯದ ಬಗ್ಗೆ ನೊಂದವರು ತಿಳಿದುಕೊಳ್ಳಬೇಕು. ಅಂದರೆ ದೂರುದಾರ ಸ್ವತಃ ತನ್ನ ದೂರು, ಹೇಳಿಕೆ, ಪ್ರತಿದೂರುದಾರನ ದೂರು, ಹೇಳಿಕೆಯಂತಹವನ್ನು ತಿಳಿದು ನ್ಯಾಯಾಲಯದ ವ್ಯವಹಾರಗಳಲ್ಲಿ ಭಾಗಿಯಾಗಿ, ವಂಚನೆಗಳಿಗೆ ಒಳಗಾಗದೆ ನ್ಯಾಯ ಪಡೆಯಬೇಕು, ನ್ಯಾಯದ ಜ್ಞಾನ ಪಡೆಯಬೇಕು. ಹೀಗಾಗಿಯೇ ಸ್ಥಳೀಯ ಭಾಷೆಗಳಲ್ಲಿ ಕಾನೂನು, ನ್ಯಾಯಾಲಯದ ವ್ಯವಹಾರಗಳು ನಡೆಯಲು ಅವಕಾಶ ಕಲ್ಪಿಸಲಾಗಿದೆ. ಸುಪ್ರೀಂ ಕೋರ್ಟ್ ಸಹ ಸ್ಥಳೀಯ ಭಾಷೆಗಳಲ್ಲಿ ತೀರ್ಪುಗಳು ದೊರೆಯುವಂತಹ ವ್ಯವಸ್ಥೆಗೆ ಪ್ರೋತ್ಸಾಹ ನೀಡಿ ಕಾರ್ಯೋನ್ಮುಖವಾಗಿದೆ.

ಅನುವಾದ, ಅರ್ಥಜಿಜ್ಞಾಸೆ ನಡೆಸುವ ತಂತ್ರಜ್ಞಾನ ಬೆರಳತುದಿಯಲ್ಲೇ ಇರುವಾಗ ಇದರ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ. ಇನ್ನು ಕಾಗುಣಿತ ಅರಿಯದ ಪದವೀಧರರು ನ್ಯಾಯಾಧೀಶರ ಹುದ್ದೆಯ ಕಠಿಣ ಪರೀಕ್ಷೆಯನ್ನು ಎದುರಿಸಿ ಆ ಹುದ್ದೆಗೆ ಬರಲಾರರು. ನಮ್ಮ ಊರಿನ ಎಲ್ಲಾ ನ್ಯಾಯಾಧೀಶರು ಅತ್ಯಂತ ಸ್ಪಷ್ಟವಾಗಿ ಕನ್ನಡ ಮಾತನಾಡುತ್ತಾರೆ, ಡಿಕ್ಟೇಶನ್ ಕೊಡುತ್ತಾರೆ, ವಾದ ವಿವಾದಗಳನ್ನು ಆಲಿಸುತ್ತಾರೆ, ತೀರ್ಪುಗಳನ್ನೂ ಬರೆಯುತ್ತಿದ್ದಾರೆ. ಸ್ಥಳೀಯ ಭಾಷೆಗಳು ಬರೀ ಭಾವನಾತ್ಮಕವಲ್ಲ. ಬದುಕು, ಬದುಕಿನ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳುವ ಹಕ್ಕು ಎಲ್ಲರಿಗೂ ಇದೆ.

ಸರೋಜ ಎಂ.ಎಸ್., ಸಾಗರ

ವಾಚಕರ ವಾಣಿ

ಬಾಣಂತಿಯರ ಸಾವು: ತಕ್ಕ ಉತ್ತರವಲ್ಲ

ರಾಜ್ಯದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು 'ಔಷಧ ಗುಣಮಟ್ಟ: ಸುಧಾರಣೆಗೆ ಸಕಾಲ' ಎಂಬ ಲೇಖನದ (ಸಂಗತ, ಡಿ. 24) ಮೂಲಕ ಜನರನ್ನು ದಾರಿ ತಪ್ಪಿಸುತ್ತಿರುವುದು ತುಂಬಾ ದುರದೃಷ್ಟಕರ. ಈ ದೇಶದ ಜನರಿಗೆ ಗುಣಮಟ್ಟದ ಔಷಧಗಳು ಲಭ್ಯವಾಗುವಂತೆ ಮಾಡಲು ಕೇಂದ್ರ ಸರ್ಕಾರದ 'ಡ್ರಗ್ಸ್ ಆ್ಯಂಡ್ ಕಾಸ್ಮೆಟಿಕ್ಸ್ ಕಾಯ್ದೆ– 1940'ಕ್ಕೆ ತಿದ್ದುಪಡಿ ತರಬೇಕಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ. ನಿಜ, ಈ ಕಾಯ್ದೆಗೆ ತಿದ್ದುಪಡಿಗಳ ಅಗತ್ಯವಿದೆ. ಆದರೆ ಇದು ಕರ್ನಾಟಕದಲ್ಲಿ ಆದ ಬಾಣಂತಿಯರ ಸಾವುಗಳಿಗೆ ಯಾವುದೇ ರೀತಿಯಲ್ಲಿ ಉತ್ತರವಲ್ಲ.

ಕೊಲೆಗಾರ ಔಷಧಗಳನ್ನು ಪೂರೈಸಿದ ಪಶ್ಚಿಮ ಬಂಗಾಳ ಮೂಲದ ಔಷಧ ಕಂಪನಿ ಈ ಹಿಂದೆ ಹಲವಾರು ಸಂದರ್ಭಗಳಲ್ಲಿ ಗುಣಮಟ್ಟವಿಲ್ಲದ ಔಷಧಗಳನ್ನು ಪೂರೈಸಿದ ದಾಖಲೆ ನಮ್ಮ ಸರ್ಕಾರದ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ (ಕೆಎಸ್‌ಎಂಎಸ್‌ಸಿಎಲ್) ಬಳಿ ಇತ್ತು. ಹಾಗಿದ್ದೂ ಅದರ ವಿರುದ್ಧ ಸರಿಯಾದ ಕ್ರಮ ತೆಗೆದುಕೊಳ್ಳಲಿಲ್ಲ ಏಕೆ? ಆ ಮಾಹಿತಿ ತನ್ನ ಬಳಿ ಇದ್ದಾಗ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕಿತ್ತು. ಇದನ್ನು ಮಾಡುವ ಬದಲಿಗೆ ಆ ಕಂಪನಿಗೆ ನೋಟಿಸ್ ಕೊಡದೆ ನೇರವಾಗಿ ಕಪ್ಪುಪಟ್ಟಿಗೆ ಸೇರಿಸಿ, ಕಂಪನಿ ತಡೆಯಾಜ್ಞೆಯನ್ನು ಪಡೆಯಲು ಅನುಕೂಲ ಮಾಡಲಾಗಿದೆ ಎಂಬುದು ಬಯಲಾದ ಸತ್ಯ. ತಮ್ಮ ತಪ್ಪುಗಳನ್ನು ಬಹಿರಂಗಪಡಿಸುವ ಮತ್ತು ಅವುಗಳನ್ನು ಸರಿಪಡಿಸುವ ಬದಲು ಅವರು ಕೇಂದ್ರ ಕಾಯ್ದೆಯನ್ನು ಬದಲಾಯಿಸಲು ಪ್ರಸ್ತಾಪಿಸುವುದು ಜನರನ್ನು ದಾರಿತಪ್ಪಿಸುವ ಮಾರ್ಗವಲ್ಲದೆ ಇನ್ನೇನು?

ಡಾ. ಗೋಪಾಲ ದಾಬಡೆ, ಧಾರವಾಡ

ವೆಚ್ಚ: ಮರೆಯಬಾರದ 'ಗಾಂಧಿ ಮಾರ್ಗ'

ಬೆಳಗಾವಿಯಲ್ಲಿ 1924ರ ಡಿಸೆಂಬರ್ 26, 27ರಂದು ಜರುಗಿದ ಕಾಂಗ್ರೆಸ್ ಅಧಿವೇಶನಕ್ಕೆ ಗಾಂಧೀಜಿ ಆರು ದಿನ ಮುಂಚಿತವಾಗಿ ಆಗಮಿಸಿದ್ದರು. ಅವರೇ ಅಧಿವೇಶನದ ಅಧ್ಯಕ್ಷತೆ ವಹಿಸಲಿದ್ದರು. ಅವರ ವಾಸ್ತವ್ಯಕ್ಕೆ ಅಧಿವೇಶನ ನಡೆಯುವ ಸ್ಥಳಕ್ಕೆ ಸಮೀಪದಲ್ಲಿ ಭವ್ಯ ಕುಟೀರವೊಂದನ್ನು ನಿರ್ಮಿಸಲಾಗಿತ್ತು. ಅಲ್ಲಿ ಐಷಾರಾಮಿ ವಸ್ತುಗಳನ್ನು ಇಡಲಾಗಿತ್ತು. ಇದನ್ನು ಗಮನಿಸಿದ ಗಾಂಧೀಜಿ ಅಸಮಾಧಾನಗೊಂಡು 'ನನ್ನ ವಾಸ್ತವ್ಯಕ್ಕೆ ಸಣ್ಣ ಖಾದಿ ಕುಟೀರವನ್ನು ಬಯಸಿದ್ದೆ, ಆದರೆ ಖಾದಿ ಅರಮನೆ ನಿರ್ಮಿಸುವ ಮೂಲಕ ನನಗೆ ಅವಮಾನ ಮಾಡಲಾಗಿದೆ. ಬಡ ದುಡಿಮೆಗಾರರನ್ನು ಪ್ರತಿನಿಧಿಸುವ ನಮ್ಮ ಖರ್ಚುವೆಚ್ಚಗಳು ಅವರ ಜೀವನದೊಂದಿಗೆ ಹೊಂದಾಣಿಕೆಯಾಗುವ ರೀತಿಯಲ್ಲಿ ಇರಬೇಕು' ಎಂದು ನೇರವಾಗಿ ಹೇಳಿದ್ದರು. ಅಧಿವೇಶನದ ನಂತರ ಸಂಘಟಕರಿಗೆ ಬರೆದ ಪತ್ರದಲ್ಲಿಯೂ ಅವರು ಈ ಎಚ್ಚರಿಕೆಯ ಮಾತನ್ನು ಉಲ್ಲೇಖಿಸಿದ್ದರು.

ಸಾಹಿತ್ಯ ಸಮ್ಮೇಳನ, ಸಮಾವೇಶ, ಸಮಾರಂಭಗಳಲ್ಲಿ ವಿಪರೀತ ದುಂದುವೆಚ್ಚ ನಡೆಯುತ್ತಿರುವ ಬಗ್ಗೆ ಚರ್ಚೆ ನಡೆಯುತ್ತಿರುವ ಈ ಸಂದರ್ಭದಲ್ಲಿ, ಗಾಂಧೀಜಿ ಅವರ ಈ ಎಚ್ಚರಿಕೆಯ ಮಾತು ಸ್ಮರಣಾರ್ಹ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ಗಂಭೀರ ಅಪರಾಧಗಳ ಬಗ್ಗೆ ಜಾಣಕುರುಡು?!

ಕನ್ನಡ ವಾಹಿನಿಗಳಲ್ಲಿ ಪ್ರಸಾರವಾಗುವ ಕೆಲವು ಧಾರಾವಾಹಿಗಳಲ್ಲಿ ಪಾತ್ರಧಾರಿಗಳು ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಸವಾರಿ ಮಾಡುವ ದೃಶ್ಯ ಅಥವಾ ಸೀಟ್ ಬೆಲ್ಟ್ ಧರಿಸದೆ ಕಾರು ಚಲಾಯಿಸುವ ದೃಶ್ಯಗಳು ಇರುತ್ತವೆ. ಆದರೆ ಅದರ ನಡುವೆಯೇ 'ಶಾಸನ ವಿಧಿಸಿದ ಎಚ್ಚರಿಕೆ: ಹೆಲ್ಮೆಟ್ ಧರಿಸದೆ ವಾಹನ ಸವಾರಿ ಮಾಡುವುದು, ಸೀಟ್ ಬೆಲ್ಟ್ ಧರಿಸದೆ ವಾಹನ ಚಲಾಯಿಸುವುದು ಕಾನೂನು ಪ್ರಕಾರ ಅಪರಾಧ' ಎಂಬ ಬರಹ ತೆರೆಯ ಮೇಲೆ ಮೂಡುತ್ತದೆ. ಮದ್ಯಪಾನ, ಧೂಮಪಾನ ಮಾಡುವ ದೃಶ್ಯ ಪ್ರಸಾರವಾಗುವಾಗ 'ಮದ್ಯಪಾನ, ಧೂಮಪಾನದಿಂದ ಸಾವು ಸಂಭವಿಸಬಹುದು' ಎಂಬ ಬರಹವೂ ತೆರೆಯ ಮೇಲೆ ಮೂಡಿ ವೀಕ್ಷಕರನ್ನು ಎಚ್ಚರಿಸುತ್ತದೆ.

ಸಂತೋಷ! ಇಂತಹ ನಿಯಮಗಳನ್ನು ಉಲ್ಲಂಘಿಸುವುದು ಅಪರಾಧ ಎಂಬ ಅರಿವು ಕಿರುತೆರೆಯ ನಿರ್ದೇಶಕರಿಗೆ ಇದೆ. ವಿಪರ್ಯಾಸವೆಂದರೆ, ಇಂತಹ ಸಾಮಾನ್ಯ ಅಪರಾಧ ಪ್ರಕರಣಗಳ ಬಗ್ಗೆ ಚೆನ್ನಾಗಿ ತಿಳಿದಿರುವ ನಿರ್ದೇಶಕರಿಗೆ ಧಾರಾವಾಹಿಯಲ್ಲಿ ಬರುವ ಕೊಲೆ, ಅಪಹರಣ, ವಂಚನೆಯಂತಹ ಗಂಭೀರ ಅಪರಾಧಗಳ ಬಗ್ಗೆ ಕಾನೂನಿನ ಅರಿವು ಹಾಗೂ ಪ್ರಜ್ಞೆ ಇರುವುದಿಲ್ಲವೇ?

ಇಂತಹ ಧಾರಾವಾಹಿಗಳು ಪ್ರಸಾರವಾಗುವಾಗ ಇನ್ನು ಮುಂದಾದರೂ 'ಈ ಧಾರಾವಾಹಿಯಲ್ಲಿ ಪ್ರಸಾರವಾಗುತ್ತಿರುವ ಈ ದೃಶ್ಯದಲ್ಲಿನ ಕೃತ್ಯವು ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ' ಎಂಬ ಬರಹವು ತೆರೆಯ ಮೇಲೆ ಮೂಡಿಬರಲಿ. ಆಗ ವೀಕ್ಷಕರು ಎಚ್ಚೆತ್ತುಕೊಳ್ಳಬಹುದು!

ಪಿ.ಜೆ.ರಾಘವೇಂದ್ರ, ಮೈಸೂರು

ಪಾಸು- ನಪಾಸಿನ ಗೊಂದಲ ನಿವಾರಣೆಯಾಗಲಿ

ಕೇಂದ್ರ ಸರ್ಕಾರವು ತನ್ನ ಅಧೀನದ ಶಾಲೆಗಳಲ್ಲಿ ಓದುತ್ತಿರುವ 5 ಹಾಗೂ 8ನೇ ತರಗತಿ ಮಕ್ಕಳಿಗೆ ಪ್ರಸ್ತುತ ಇರುವ 'ಎಲ್ಲರನ್ನೂ ಪಾಸ್ ಮಾಡುವ ನೀತಿ'ಯನ್ನು ಕೈ ಬಿಟ್ಟಿದೆ ಎಂದು ವರದಿಯಾಗಿದೆ. ಇದು ಬರೀ 3,000 ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯ ಹಾಗೂ ಸೈನಿಕ ಶಾಲೆಗಳಿಗೆ ಅನ್ವಯವಾಗುವುದಾಗಿಯೂ ತಿಳಿಸಿದೆ. ಈ ರೀತಿ ಶೈಕ್ಷಣಿಕ ವರ್ಷದ ಕೊನೆಯ ಹಂತದಲ್ಲಿ ಇಂತಹ ನೀತಿಯನ್ನು ಏಕಾಏಕಿಯಾಗಿ ಜಾರಿ ಮಾಡುವುದರಿಂದ ಮಕ್ಕಳ ಮೇಲೆ ಒತ್ತಡ ಹೆಚ್ಚಾಗುತ್ತದೆ. ಅಷ್ಟೇ ಅಲ್ಲ ಶಾಲಾ ಆಡಳಿತ ಮಂಡಳಿ ಹಾಗೂ ಪಾಲಕರಲ್ಲೂ ಅನೇಕ ಗೊಂದಲಗಳಿಗೆ ಅವಕಾಶ ಮಾಡಿಕೊಡುತ್ತದೆ. ಈ ನೀತಿ ಎಲ್ಲ ರಾಜ್ಯಗಳಿಗೂ ಒಂದೇ ರೀತಿ ಅನ್ವಯವಾಗದ ಕಾರಣ, ಮಕ್ಕಳ ನಡುವೆ ಭೇದಭಾವ ಮೂಡಿಸಿದಂತೆ ಆಗುತ್ತದೆ.

ನಪಾಸು ನೀತಿ ಒಳ್ಳೆಯದೇ ಆದರೂ ಅದನ್ನು ಅನುಷ್ಠಾನ ಮಾಡುತ್ತಿರುವ ವಿಧಾನ ಸರಿಯಿಲ್ಲ. ಶೈಕ್ಷಣಿಕ ಕ್ಷೇತ್ರದಲ್ಲಿ ದಿಢೀರನೆ ಹೀಗೆ ಪ್ರಯೋಗ ಮಾಡುವುದನ್ನು ನಿಲ್ಲಿಸಬೇಕಿದೆ. ಮಕ್ಕಳೇನೂ ಪ್ರಯೋಗಾಲಯದ ಇಲಿ ಮರಿಗಳಲ್ಲ. ಶಿಕ್ಷಣ ತಜ್ಞರು, ಅಧಿಕಾರಿಗಳು ಹೊಸ ನೀತಿ ಜಾರಿಗೆ ಮುನ್ನ ಏಕೀಕೃತ ವ್ಯವಸ್ಥೆ ಹಾಗೂ ಪೂರಕ ಮಾಹಿತಿಯನ್ನು ನೀಡಿ, ಎಲ್ಲ ರಾಜ್ಯಗಳೊಂದಿಗೆ ಚರ್ಚಿಸಿ ಜಾರಿಗೊಳಿಸುವುದು ಹೆಚ್ಚು ಸೂಕ್ತ.

ಸುರೇಂದ್ರ ಪೈ, ಭಟ್ಕಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

1924ರಲ್ಲಿ ಬೆಳಗಾವಿಯಲ್ಲಿ ನಡೆದಿದ್ದ ಕಾಂಗ್ರೆಸ್ ಅಧಿವೇಶನವು ಚಾರಿತ್ರಿಕ ಮಹತ್ವ ಪಡೆದಿದೆ. ಕಾಂಗ್ರೆಸ್ ಸಂಘಟನೆ ಹಾಗೂ ಸ್ವಾತಂತ್ರ್ಯ ಹೋರಾಟ ಎರಡೂ ಬಿಕ್ಕಟ್ಟು ಎದುರಿಸುತ್ತಿದ್ದ ಸಂದರ್ಭದಲ್ಲಿ ನಡೆದಿದ್ದ ಅಧಿವೇಶನವು, ಸ್ವಾತಂತ್ರ್ಯಹೋರಾಟಕ್ಕೆ ಹೊಸ ಚೈತನ್ಯ ತುಂಬಿತ್ತು. ಅಹಿಂಸೆ ಮತ್ತು ಅಸಹಕಾರ ಮಾರ್ಗದ ಮೂಲಕವೇ ಸ್ವಾತಂತ್ರ್ಯ ಹೋರಾಟ ಸಾಗಬೇಕು ಎನ್ನುವ ನಿಶ್ಚಯದ ಧ್ವನಿ ಅಧಿವೇಶನದಲ್ಲಿ ಮೊಳಗಿತ್ತು; ಹಿಂದೂ-ಮುಸ್ಲಿಂ ಏಕತೆ, ಅಸ್ಪೃಶ್ಯತಾ ನಿವಾರಣೆ, ಖಾದಿ ಗ್ರಾಮೋದ್ಯೋಗದಂಥ ವಿಷಯಗಳ ಬಗ್ಗೆ ಸಂಕಲ್ಪ ತೊಡಲಾಗಿತ್ತು. ಐತಿಹಾಸಿಕ ಮಹತ್ವದ ಅಧಿವೇಶನಕ್ಕೆ ನೂರು ವರ್ಷ ತುಂಬಿದ ಸಂದರ್ಭದಲ್ಲಿ, ಅದರ ಹಲವು ಮಗ್ಗಲುಗಳನ್ನು ಪರಿಚಯಿಸುವ ವಿಶೇಷ ಬರಹಗಳು ಇಲ್ಲಿವೆ

1924ರಲ್ಲಿ ನಡೆದಿದ್ದ ಐತಿಹಾಸಿಕ ಮಹತ್ವದ ಸಮಾವೇಶ; ಮಹಾತ್ಮ ಗಾಂಧಿ ಅಧ್ಯಕ್ಷತೆ ವಹಿಸಿದ್ದ ಏಕೈಕ ಅಧಿವೇಶನ

ಬೆಳಗಾವಿ ಕಾಂಗ್ರೆಸ್ ಅಧಿವೇಶನ ಶತಮಾನ ಸಂಭ್ರಮ

● ಎಚ್.ಕೆ.ಪಾಟೀಲ



'ಇಂಗ್ಲಿಷ್' ಪ್ರಭುತ್ವದೊಡನೆ ಅಹಿಂಸಾತ್ಮಕವಾಗಿ ಯುದ್ಧ ಮಾಡಬಲ್ಲ ಸಾಮರ್ಥ್ಯ ಭಾರತಕ್ಕೆ ಇದೆ ಎಂಬುದು ನನ್ನ ಬಲವಾದ ವಿಶ್ವಾಸ. ಈ ಪ್ರಯೋಗ ವಿಫಲವಾಗಿಲ್ಲ, ಸಫಲವಾಗಿದೆ. ಎಷ್ಟು ಸಫಲವಾಗಬೇಕೆಂದು ನಾವು ಬಯಸಿದ್ದೆವೋ ಅಷ್ಟು ಸಫಲವಾಗಿಲ್ಲ ಅಷ್ಟೇ. ಆದರೆ, ನಮಗೆ ನಿರಾಸೆಯಾಗಿಲ್ಲ; ಇದೇ ಮಾರ್ಗದಲ್ಲಿ ಹೋರಾಟ ಮುಂದುವರಿಸೋಣ' ಹೀಗೆಂದು ಮಹಾತ್ಮ ಗಾಂಧಿ ಅವರು ಗಟ್ಟಿ ದನಿಯಲ್ಲಿ ಹೇಳಿ ಸ್ವಾತಂತ್ರ್ಯ ಹೋರಾಟವನ್ನು ಅಹಿಂಸಾತ್ಮಕವಾಗಿಯೇ ಮುನ್ನಡೆಸುವ ಅಚಲ ನಿರ್ಧಾರವನ್ನು ಪ್ರಕಟಿಸಿದ್ದು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ. ಈ ಅಧಿವೇಶನಕ್ಕೀಗ ಶತಮಾನೋತ್ಸವದ ಸಂಭ್ರಮ.

1924ರ ಡಿಸೆಂಬರ್ 26 ಮತ್ತು 27ರಂದು ನಡೆದ ಈ ಅಧಿವೇಶನ ಸ್ವಾತಂತ್ರ್ಯ ಹೋರಾಟಕ್ಕೆ ಸ್ಪಷ್ಟ ದಿಕ್ಕು, ಕಾಂಗ್ರೆಸ್ ಪಕ್ಷಕ್ಕೆ ಸೈದ್ಧಾಂತಿಕ ಸ್ಪಷ್ಟತೆ ನೀಡಿದ ಮಹತ್ವದ ಸಮಾವೇಶವಾಗಿತ್ತು. ಇದರ ಪ್ರಭಾವ ಮತ್ತು ಪರಿಣಾಮಗಳು ಅತ್ಯಂತ ದೂರಗಾಮಿಯಾಗಿದ್ದವು. ಇದು ಮಹಾತ್ಮ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ನಡೆದ ಏಕೈಕ ಅಧಿವೇಶನ ಕೂಡ ಹೌದು. ಭಿನ್ನಾಭಿಪ್ರಾಯಗಳ ಕಾರಣಕ್ಕೆ ಕಾಂಗ್ರೆಸ್‌ನಲ್ಲಿಯೇ ಸೃಷ್ಟಿಯಾಗಿದ್ದ ಬಣಗಳನ್ನು, ಕಾಂಗ್ರೆಸ್‌ನಿಂದ ದೂರವಾಗುತ್ತಿದ್ದ ಹಿಂದೂ-ಮುಸ್ಲಿಂ ನಾಯಕರನ್ನು ಒಗ್ಗೂಡಿಸಿದ ಬಹಳ ಮುಖ್ಯವಾದ ಅಧಿವೇಶನ ಇದು. ಬ್ರಿಟಿಷರ ವಿರುದ್ಧ ಕಾಂಗ್ರೆಸ್ ಬಳಸಿದ 'ಚರಕಾಸ್ತ್ರ'ಕ್ಕೆ ಶಕ್ತಿ ತುಂಬಿದ್ದು ಕೂಡ ಇದೇ ಅಧಿವೇಶನ. ಸೇವಾದಳದ ಹುಟ್ಟಿಗೆ ಕಾರಣವಾಗಿದ್ದು ಇದೇ ಅಧಿವೇಶನ. ನಾಡಿನ ಏಕೀಕರಣದ ಹೋರಾಟಕ್ಕೆ ಅಧಿಕೃತ ಚಾಲನೆ ನೀಡಿದ್ದು, ಸ್ವಾತಂತ್ರ್ಯ ಹೋರಾಟವನ್ನು ವಿಸ್ತಾರಗೊಳಿಸಿದ್ದು.. ಹೀಗೆ ಹಲವು ಕಾರಣಗಳಿಂದ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಐತಿಹಾಸಿಕ ಮಹತ್ವವಿದೆ.

ಈ ಅಧಿವೇಶನದ ಅಧ್ಯಕ್ಷತೆ ವಹಿಸಿ ಮಾತನಾಡಿದ್ದ ಗಾಂಧೀಜಿಯವರು ಚರಕದ ಮಹತ್ವವನ್ನು ದೇಶಕ್ಕೆ ಅರ್ಥ ಮಾಡಿಸಿದ್ದರು. ನೂಲುವ ಮೂಲಕ ಬ್ರಿಟಿಷ್ ಸಾಮ್ರಾಜ್ಯವನ್ನೇ ಅಲುಗಾಡಿಸಬಹುದೆಂಬ ಸತ್ಯವನ್ನು ಹೋರಾಟಗಾರರಿಗೆ ಮನವರಿಕೆ ಮಾಡಿಕೊಟ್ಟಿದ್ದರು. ಹಿಂದೂ-ಮುಸ್ಲಿಂ ಏಕತೆ ಕೂಡ ಚರಕದಷ್ಟೇ ಮಹತ್ವದ ವಿಷಯ ಎಂದು ಹೇಳಿದ್ದರು. 'ಧರ್ಮವನ್ನು ವಿಕಾರಗೊಳಿಸಿ, ಅಪಹಾಸ್ಯಗೊಳಿಸಲಾಗುತ್ತಿದೆ. ಕ್ಷುಲ್ಲಕ ವಿಷಯಗಳನ್ನು ಧರ್ಮದ ಹೆಸರಿನಲ್ಲಿ ದೊಡ್ಡದು ಮಾಡುತ್ತಿದ್ದಾರೆ. ಏನು ಬೇಕಾದರೂ ಆಗಲಿ, ಅದನ್ನು ನಡೆಸಿಯೇ ತೀರಬೇಕು ಎನ್ನುತ್ತಿದ್ದಾರೆ ಈ ಮತಾಂಧರು. ವಿರಸ ಹುಟ್ಟಿಸಲು ಆರ್ಥಿಕ ರಾಜಕೀಯ ಕಾರಣಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ' ಎಂಬ ಎಚ್ಚರಿಕೆಯನ್ನು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ನೀಡಿದ್ದರು. ಅಂದು ಅವರು ಭಾಷಣದಲ್ಲಿ ಪ್ರಸ್ತಾಪಿಸಿದ ಈ ರೀತಿಯ ಅನೇಕ ವಿಷಯಗಳು ಇಂದಿಗೂ ಬಹಳ ಪ್ರಸ್ತುತ.

'ಅಸ್ಪೃಶ್ಯತೆಯು ಸ್ವರಾಜ್ಯಕ್ಕೆ ಮತ್ತೊಂದು ಆತಂಕವಾಗಿದೆ. ಹಿಂದೂ- ಮುಸ್ಲಿಂ ಏಕತೆಯ ಸಾಧನೆಯಂತೆಯೇ ಅಸ್ಪೃಶ್ಯತೆ ನಿರ್ಮೂಲನೆಯೂ ಸ್ವರಾಜ್ಯಕ್ಕೆ ಅತ್ಯಗತ್ಯವಾಗಿದೆ' ಎಂದು ಭಾಷಣದಲ್ಲಿ ಒತ್ತಿ ಹೇಳಿದ್ದ ಗಾಂಧೀಜಿ, 'ದಮನಕ್ಕೊಳಗಾದ ವರ್ಗಗಳ ಸ್ವಾತಂತ್ರ್ಯವನ್ನು ಮರುಸ್ಥಾಪಿಸುವವರೆಗೆ ಹಿಂದೂಗಳಿಗೆ ಸ್ವರಾಜ್ಯವನ್ನು ಕೇಳುವ ಹಕ್ಕಿಲ್ಲ' ಎಂದು ಸ್ಪಷ್ಟ ಮಾತುಗಳಲ್ಲಿ ಎಚ್ಚರಿಕೆ ನೀಡಿದ್ದರು.

ಗಾಂಧೀಜಿಯವರ ಸೂಚನೆಯಂತೆಯೇ ಈ ಅಧಿವೇಶನದಲ್ಲಿ ಅಸ್ಪೃಶ್ಯತೆ ನಿವಾರಣೆಗೆ ಸಂಬಂಧಿಸಿದ ನಿರ್ಣಯ ಕೂಡ ಅಂಗೀಕರಿಸಲಾಗಿತ್ತು. ಬಹಳ ಮುಖ್ಯವಾಗಿ ಈ ಅಧಿವೇಶನದಲ್ಲಿ ಗಾಂಧೀಜಿ ಅವರು ಮಾಡಿದ ಭಾಷಣ ರಾಷ್ಟ್ರೀಯ ಕಾಂಗ್ರೆಸ್ ಅನ್ನು ಅಖಂಡ ಭಾರತದ ಜನತೆಯನ್ನು ಪ್ರತಿನಿಧಿಸುವ ಏಕೈಕ ಸಂಸ್ಥೆಯನ್ನಾಗಿ ಪರಿವರ್ತಿಸಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದ ಶ್ರೀಮಂತರು, ಮೇಲ್ವರ್ಗದ ಬುದ್ಧಿಜೀವಿಗಳು ಖಾದಿಗೆ ಶರಣಾಗಿ ಸರಳ ಜೀವನದ ಮೊರೆಹೋದರು. ಕಾಂಗ್ರೆಸ್‌ನಿಂದ ದೂರವಾಗಿದ್ದವರು ಮರಳಿ ಪಕ್ಷ ಸೇರಲಾರಂಭಿಸಿದರು. ಹೀಗಾಗಿಯೇ ಬೆಳಗಾವಿ ಅಧಿವೇಶನವನ್ನು ಐಕ್ಯತಾ ಸಮಾವೇಶ ಎಂದೂ ಗುರುತಿಸಲಾಗುತ್ತದೆ.

1924ರವರೆಗೆ ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟಗಾರರ ರಾಜಕೀಯ ಸಂಘಟನೆಯಾಗಿತ್ತು. ಆದರೆ ಈ ಅಧಿವೇಶನದ ನಂತರ ಸಮಾಜ ಸುಧಾರಣೆಯ ಜವಾಬ್ದಾರಿಯನ್ನೂ ಅರಿತು, ಸೈದ್ಧಾಂತಿಕ ಸ್ಪಷ್ಟತೆ ಪಡೆದುಕೊಂಡಿತು. ಅಧ್ಯಕ್ಷೀಯ ಭಾಷಣ ಮಾಡಿದ್ದ ಮಹಾತ್ಮ ಗಾಂಧಿ ಅವರು ದೇಶದ ಸಾಮಾಜಿಕ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಿ, ಸಮಾಜ ಸುಧಾರಣೆಗಾಗಿಯೂ ಕಾಂಗ್ರೆಸ್ ಶ್ರಮಿಸುವ ಅಗತ್ಯವನ್ನು ಒತ್ತಿ ಹೇಳಿದ್ದರು. ಸಾಮಾಜಿಕ ಸಮಸ್ಯೆಗಳ ವಿರುದ್ಧದ ಹೋರಾಟಕ್ಕೂ ಪಕ್ಷವನ್ನು ಅಣಿಗೊಳಿಸಿದ್ದರು. ಹೀಗಾಗಿ ಕಾಂಗ್ರೆಸ್ ಪಕ್ಷಕ್ಕೆ ಕೂಡ ಈ ಅಧಿವೇಶನ ಬಹಳ ಮಹತ್ವದ ಕೊಡುಗೆಯನ್ನು ನೀಡಿದೆ. ಈ ಹಿನ್ನೆಲೆಯಲ್ಲಿಯೇ ಕಾಂಗ್ರೆಸ್ ಪಕ್ಷ ಈ ಅಧಿವೇಶನದ ಶತಮಾನೋತ್ಸವವನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಲು ವರ್ಷವಿಡೀ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ.

ನಮ್ಮ ರಾಜ್ಯದಲ್ಲಿ ನಡೆದ ಏಕೈಕ ಸ್ವಾತಂತ್ರ್ಯಪೂರ್ವ ಕಾಂಗ್ರೆಸ್ ಅಧಿವೇಶನವಾಗಿದ್ದ ಬೆಳಗಾವಿ ಅಧಿವೇಶನವನ್ನು ಆಗಿನ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಆಯೋಜಿಸಿತ್ತು. ಕೆಪಿಸಿಸಿಯ ಅಂದಿನ ಅಧ್ಯಕ್ಷರಾಗಿದ್ದ 'ಕರ್ನಾಟಕ ಕೇಸರಿ' ಖ್ಯಾತಿಯ ಸ್ವಾತಂತ್ರ್ಯ ಹೋರಾಟಗಾರ, ಧೀಮಂತ ನಾಯಕ, ದಿವಂಗತ ಗಂಗಾಧರರಾವ್ ದೇಶಪಾಂಡೆ ಅವರು ಗಾಂಧೀಜಿಯವರ ಮನಸ್ಸು ಗೆಲ್ಲುವಂತೆ ಅಧಿವೇಶನ ಆಯೋಜಿಸಿದ್ದರು. ಅಧಿವೇಶನ ಮುಗಿದ ನಂತರ ಗಾಂಧೀಜಿ 'ಗಂಗಾಧರರಾವ್ ದೇಶಪಾಂಡೆ ಮತ್ತು ಅವರ ಕಾರ್ಯಕರ್ತರ ತಂಡ ಕಾಂಗ್ರೆಸ್ ಅಧಿವೇಶನವನ್ನು ಅತ್ಯುನ್ನತವಾಗಿ ನಡೆಸಿ, ಯಶಸ್ಸಿನ ಶಿಖರವೇರಿದೆ. ಅವರ 'ವಿಜಯನಗರ'ವು ಒಂದು ವಿಜಯವಾಗಿತ್ತು' ಎಂದು ಬರೆದಿದ್ದರು.

ಬೆಳಗಾವಿಯ ಈಗಿನ ಟಿಳಕವಾಡಿಯ ಸುಮಾರು 84 ಎಕರೆ ಜಾಗದಲ್ಲಿ ಈ ಅಧಿವೇಶನ ನಡೆಸಲು ಸಕಲ ಸಿದ್ಧತೆ ನಡೆಸಲಾಗಿತ್ತು. ಅಧಿವೇಶನ ನಡೆಯುವ ಸ್ಥಳಕ್ಕೆ 'ವಿಜಯನಗರ' ಎಂದು ಹೆಸರಿಡಲಾಗಿತ್ತು. ಆಕರ್ಷಕ ಸಭಾ ಮಂಟಪ, ದೇಶ ವಿದೇಶಗಳಿಂದ ಬಂದ ಪ್ರತಿನಿಧಿಗಳಿಗೆ ಉಳಿದುಕೊಳ್ಳಲು ಕುಟೀರಗಳನ್ನು ನಿರ್ಮಿಸಲಾಗಿತ್ತು. ಅಧಿವೇಶನಕ್ಕಿಂತ ಒಂದು ವಾರ ಮೊದಲೇ ಬೆಳಗಾವಿಗೆ ಬಂದಿದ್ದ ಗಾಂಧೀಜಿ, ಅವರಿಗಾಗಿಯೇ ವಿಶೇಷವಾಗಿ ಖಾದಿ ಬಟ್ಟೆಯಿಂದ ನಿರ್ಮಿಸಿದ್ದ 'ಶ್ರೀ ವಿದ್ಯಾರಣ್ಯ ಆಶ್ರಮ' ಎಂಬ ಹೆಸರಿನ ಕುಟೀರದಲ್ಲಿ ಉಳಿದುಕೊಂಡಿದ್ದರು. ನಾಡಿನ ಸಂಸ್ಕೃತಿ, ಭವ್ಯ ಪರಂಪರೆಯನ್ನು ಸಾರುವ ಹೆಸರು, ವಸ್ತುಗಳನ್ನು ಪ್ರದರ್ಶಿಸಲಾಗಿತ್ತು. ಕುಡಿಯುವ ನೀರಿನ ವ್ಯವಸ್ಥೆಗೆಂದೇ ಬಾವಿಯೊಂದನ್ನು ತೋಡಿ, ಅದಕ್ಕೆ 'ಪಂಪಾ ಸರೋವರ' ಎಂದು ಹೆಸರಿಡಲಾಗಿತ್ತು. 'ಕಾಂಗ್ರೆಸ್ ಬಾವಿ' ಎಂದೇ ಪ್ರಸಿದ್ಧವಾಗಿರುವ ಈ ಬಾವಿ ಈಗಲೂ ಇದೆ. ಡಾ.ನಾ.ಸು.ಹರ್ಡೀಕರ್ ನೇತೃತ್ವದ ಸೇವಾದಳವು ಸ್ವಚ್ಛತೆ, ಶಿಸ್ತುಪಾಲನೆ ಹೀಗೆ ಎಲ್ಲ ಕೆಲಸಗಳನ್ನು ಸಮರ್ಪಕವಾಗಿ ಮಾಡಿ, ಮಹಾತ್ಮ ಗಾಂಧಿ ಅವರ ಪ್ರೀತಿ ಮತ್ತು ಗೌರವಕ್ಕೆ ಪಾತ್ರವಾಗಿತ್ತು.

ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಗಂಗಾಧರರಾವ್ ದೇಶಪಾಂಡೆ ಗಾಂಧೀಜಿಯವರ ಆಶಯದಂತೆಯೇ ಊಟತಿಂಡಿಯಿಂದ ಹಿಡಿದು ಎಲ್ಲ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡಿದ್ದರು. 17 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದ ಈ ಅಧಿವೇಶನದಲ್ಲಿ 16 ನಿರ್ಣಯಗಳನ್ನು ತೆಗೆದುಕೊಳ್ಳಲಾಗಿತ್ತು. ಇದೇ ಸಂದರ್ಭದಲ್ಲಿ ಕನ್ನಡದ ಏಕೀಕರಣ ಸಮಾವೇಶ, ಅಸ್ಪೃಶ್ಯತಾ ನಿವಾರಣಾ ಸಮಾವೇಶ, ಹಿಂದೂ ಮಹಾಸಭಾ, ಖಿಲಾಫತ್ ಸಮ್ಮೇಳನ ಸೇರಿದಂತೆ ಹಲವಾರು ಸಮಾವೇಶಗಳು ನಡೆದು, ಮಹತ್ವದ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿತ್ತು. ಮೈಸೂರು ಸಂಸ್ಥಾನದ ಬೆಂಬಲದೊಂದಿಗೆ ವಸ್ತು ಪ್ರದರ್ಶನ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ವೀಣೆ ಶೇಷಣ್ಣನವರು ಗಾಂಧೀಜಿಯವರ ಮನಗೆದ್ದಿದ್ದರು. ಆಗ ಹದಿಮೂರು ವರ್ಷದ ಬಾಲಕಿಯಾಗಿದ್ದ ಖ್ಯಾತ ಗಾಯಕಿ ಗಂಗೂಬಾಯಿ ಹಾನಗಲ್ ಎಲ್ಲರ ಗಮನ ಸೆಳೆದಿದ್ದರು. ಅಧಿವೇಶನದ ಎರಡನೇ ದಿನದ ಆರಂಭದಲ್ಲಿ ಅವರು ಹಾಡಿದ, ಹುಯಿಲಗೋಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಗೀತೆ ಮುಂದೆ ಏಕೀಕರಣದ ಸಂದರ್ಭದಲ್ಲಿ ತಾರಕಮಂತ್ರವಾಗಿತ್ತು. ಒಟ್ಟಾರೆ ಈ ಅಧಿವೇಶನವು ಸಂಘಟನೆ, ಸಮರ್ಥ ಆಯೋಜನೆ, ಶಿಸ್ತುಬದ್ಧ ಕಾರ್ಯಕಲಾಪ, ಪ್ರಜಾತಾಂತ್ರಿಕ ಮೌಲ್ಯಗಳಿಗೆ ಮನ್ನಣೆ ಈ ಎಲ್ಲ ಕಾರಣಗಳಿಂದಾಗಿ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಬಹಳ ಪ್ರಾಮುಖ್ಯ ಪಡೆದುಕೊಂಡಿದೆ.

ಈಗ ಅಧಿವೇಶನದ ಶತಮಾನೋತ್ಸವ ನಮಗೆ ಇತಿಹಾಸ ಮೆಲುಕು ಹಾಕಲು, ತಪ್ಪುಗಳನ್ನು ತಿದ್ದಿಕೊಳ್ಳಲು, ಮಹಾತ್ಮ ಗಾಂಧಿ ಅವರು ತೋರಿದ ಮಾರ್ಗದಲ್ಲಿ ಮುನ್ನಡೆಯಲು ಸುವರ್ಣಾವಕಾಶ ಕಲ್ಪಿಸಿದೆ. ಆದ್ದರಿಂದ ನಮ್ಮ ರಾಜ್ಯ ಸರ್ಕಾರ ಅರ್ಥಪೂರ್ಣವಾಗಿ ಒಂದು ವರ್ಷವಿಡೀ ಶತಮಾನೋತ್ಸವವನ್ನು ಆಚರಿಸಲು ಸಕಲ ಸಿದ್ಧತೆ ಮಾಡಿಕೊಂಡಿದ್ದು, ಈಗಾಗಲೇ 'ಶತಮಾನೋತ್ಸವ ಸಮಿತಿ' ಹೆಸರಿನ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ಹಲವಾರು ಕಾರ್ಯಕ್ರಮಗಳನ್ನು 'ಗಾಂಧಿ ಭಾರತ' ಎಂಬ ಹೆಸರಿನಡಿ ಆರಂಭಿಸಲಾಗಿದೆ. ಮುಂದಿನ ಒಂದು ವರ್ಷದಲ್ಲಿ ಒಟ್ಟು 40 ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಲಾಗಿದೆ.

ಗಾಂಧೀಜಿಯವರ ಆದರ್ಶಗಳು ಮರೆಯಾಗುತ್ತಿರುವ ಈ ಹೊತ್ತಿನಲ್ಲಿ ಅವರು ಇನ್ನಷ್ಟು, ಮತ್ತಷ್ಟು ಪ್ರಸ್ತುತರಾಗುತ್ತಿದ್ದಾರೆ. ಹೀಗಾಗಿ ಅವರನ್ನು ಇಂದಿನ ಪೀಳಿಗೆಗೆ ಪರಿಚಯಿಸಲು, ಅರ್ಥ ಮಾಡಿಸಲು ಇದು ಅತ್ಯುತ್ತಮ ಅವಕಾಶ ಎಂದೇ ನನ್ನ ಭಾವನೆ. ಅವರ ಬಗೆಗಿನ ಅಪಪ್ರಚಾರಗಳಿಗೆ ಅವಕಾಶವೇ ಇಲ್ಲದಂತೆ ಮಹಾತ್ಮರನ್ನು ನಾವೆಲ್ಲರೂ ಅರಿಯಬೇಕಾಗಿದೆ; ಜಾಗೃತರಾಗಬೇಕಾಗಿದೆ.

ಲೇಖಕ: ಸಚಿವ ಮತ್ತು ಬೆಳಗಾವಿ ಅಧಿವೇಶನ ಶತಮಾನೋತ್ಸವ ಸಮಿತಿ ಅಧ್ಯಕ್ಷ

ಚಿತ್ರ ಕೃಪೆ: 'ಮಹಾತ್ಮ: ಲೈಫ್ ಆಫ್ ಮೋಹನದಾಸ್ ಕರಮಚಂದ್ ಗಾಂಧಿ' ಪುಸ್ತಕ

ಕುವೆಂಪು ಕಂಡಂತೆ ಬೆಳಗಾವಿ ಅಧಿವೇಶನ

ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಬೆಳಗಾವಿಗೆ ಬಂದಿದ್ದ ಮಹಾತ್ಮ ಗಾಂಧಿ ಅವರನ್ನು ಕಾಣಲು ಆಗತಾನೆ ಬಿ.ಎ. ಓದುತ್ತಿದ್ದ, ಇಂಗ್ಲಿಷಿನಲ್ಲಿ ಬರವಣಿಗೆ ಪ್ರಾರಂಭಿಸಿದ್ದ 20ರ ತರುಣ ಕುವೆಂಪು (ಆಗಿನ್ನೂ ಕೆ.ವಿ.ಪುಟ್ಟಪ್ಪ) ತಮ್ಮ ಸ್ನೇಹಿತರೊಂದಿಗೆ ಹೋಗಿದ್ದರು. ಅದರ ಬಗ್ಗೆ ಸುಮಾರು 50 ವರ್ಷಗಳ ನಂತರ, ಕೇವಲ ನೆನಪಿನ ಆಧಾರದ ಮೇಲೆ ಕುವೆಂಪು ತಮ್ಮ 'ನೆನಪಿನ ದೋಣಿಯಲ್ಲಿ' ದಾಖಲಿಸಿದ್ದಾರೆ. ಕುವೆಂಪು ನೆನಪು ಇಲ್ಲಿದೆ:

'ಕಾಂಗ್ರೆಸ್ ಅಧಿವೇಶನದ ಸಮಯಕ್ಕೆ ಸರಿಯಾಗಿ ಕ್ರಿಸ್‌ಮಸ್ ರಜವೂ ಪ್ರಾರಂಭವಾಗುತ್ತಿತ್ತಾದ್ದರಿಂದ ನಾವು ಕೆಲವರು ವಿದ್ಯಾರ್ಥಿ ಮಿತ್ರರು ಬೆಳಗಾವಿಗೆ ಹೋಗಲು ನಿಶ್ಚಯಿಸಿದೆವು. ಅಧಿವೇಶನದ ಜಾಗಕ್ಕೆ ಸ್ವಲ್ಪ ದೂರವಾಗಿದ್ದ ಬೆಳಗಾವಿಯ ಊರಿನಲ್ಲಿ ಮಿತ್ರರೊಬ್ಬರ ಬಂಧುಗಳ ಮನೆಯಲ್ಲಿಯೆ ನಾವೆಲ್ಲ ಇಳಿದುಕೊಳ್ಳುವಂತೆ ಏರ್ಪಾಡಾಗಿತ್ತು. ಅಲ್ಲಿ ಸ್ನಾನಗೀನ ಮುಗಿಸುತ್ತಿದ್ದೆವು; ಊಟಗೀಟಕ್ಕೆಲ್ಲ ಅಧಿವೇಶನದ ಮಹಾಬೃಹತ್ ಭೋಜನ ಶಾಲೆಗೆ ಹೋಗುತ್ತಿದ್ದೆವು. ಅಧಿವೇಶನದ ಭಾಷಣದ ವೇದಿಕೆಯ ಸುವಿಸ್ತೃತವಾದ ಪ್ರಧಾನ ಮಂಟಪದಷ್ಟೆ ಭವ್ಯವಾಗಿತ್ತು ಆ ಭೋಜನ ಶಾಲೆ. ನನಗಂತೂ ಈ ಊಟ ತಿಂಡಿಯ ಔತಣವನ್ನು ಕಂಡು ಬೆರಗು ಬಡಿದಿತ್ತು. ಕೇಳಿದಷ್ಟು ಸಿಹಿ, ಕೇಳಿದಷ್ಟು ಹಾಲು, ತುಪ್ಪ, ಚಪಾತಿ, ಶ್ರೀಖಂಡ ಮತ್ತು ಏನೇನೊ ನಾನಾ ಪ್ರಾಂತಗಳ ತರತರದ ಭಕ್ಷ್ಯಭೋಜ್ಯಗಳು: ನನ್ನ ಗ್ರಾಮೀಣತೆ ತತ್ತರಿಸಿತ್ತು!'



'ಆ ಅಧಿವೇಶನದಲ್ಲಿ ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಸುಪ್ರಸಿದ್ಧರಾಗಿದ್ದ ಅನೇಕ ವ್ಯಕ್ತಿಗಳು ನೆರೆದಿದ್ದರು. ಆದರೆ ನಮಗಿದ್ದುದು ಮುಖ್ಯವಾಗಿ ಒಂದೇ ಲಕ್ಷ್ಯ: ಗಾಂಧೀಜಿಯ ದರ್ಶನ! ಅದಕ್ಕಾಗಿ ನಾವು ಅವರು ಅಧಿವೇಶನಕ್ಕೆ ಬರುವ ಹೊತ್ತನ್ನೂ ಅವರು ಪ್ರವೇಶಿಸುವ ಮಹಾದ್ವಾರವನ್ನೂ ಪತ್ತೆಹಚ್ಚಿ ಬಿಸಿಲಿನಲ್ಲಿ ಕಾದೆವು.'

ನೆರೆದ ಜಾತ್ರೆಯ ಜನಜಂಗುಳಿಯ ನಡುವೆ ಆನೆಯೊಂದು ನಡೆದು ಬರುತ್ತಿದ್ದರೆ ಹೇಗೆ ಮೇಲೆದ್ದು ಕಾಣಿಸುವುದೊ ಹಾಗೆ ಜನಸಮುದ್ರದಲ್ಲಿ ತೇಲಿ ಬರುವ ಹಡಗುಗಳಂತೆ ಇಬ್ಬರು ಬೃಹದ್ ವ್ಯಕ್ತಿಗಳು ಬರುತ್ತಿದ್ದುದು ಕಾಣಿಸಿತು. ಗುಸುಗುಸು ಹಬ್ಬಿತು, ಗಾಂಧೀಜಿ ಬರುತ್ತಿದ್ದಾರೆ ಎಂದು. ಕತ್ತು ನಿಕ್ಕುಳಿಸಿ ನೋಡಿದೆ. ಗಾಂಧೀಜಿ ಎಲ್ಲಿ? ಪಕ್ಕದಲ್ಲಿದ್ದವರು ಹೇಳಿದರು: 'ಮೇಲೆದ್ದು ಕಾಣಿಸುತ್ತಾ ಬರುತ್ತಿದ್ದಾರಲ್ಲಾ ಅವರಿಬ್ಬರು ಅಲಿ ಸಹೋದರರು ಕಣ್ರೀ! ಅವರ ಮಧ್ಯೆ ನಡೆದು ಬರುತ್ತಿದ್ದಾರೆ ಗಾಂಧೀಜಿ.'

'ಮಹಾತಾಮಸ ಮತ್ತು ಮಹಾರಾಜಸಗಳ ಮಧ್ಯೆ ನಡೆದುಬರುವ ಮಹಾಸಾತ್ವಿಕದಂತೆ ಕಾಣಿಸಿಕೊಂಡರು ಗಾಂಧೀಜಿ. 'ವಂದೇ ಮಾತರಂ! ಭಾರತ ಮಾತಾಕೀ ಜೈ! ಮಹಾತ್ಮಾ ಗಾಂಧೀ ಕೀ ಜೈ!' ಮೊದಲಾದ ಘೋಷಗಳು ಕಿವಿ ಬಿರಿಯುವಂತೆ ಗಗನದೇಶವನ್ನೆಲ್ಲ ತುಂಬಿದುವು. ಆ ಉತ್ಸಾಹ ಸಾಗರಕ್ಕೆ ನನ್ನ ಕೀಚು ಕೊರಳೂ ತನ್ನ ದನಿಹನಿಯ ನೈವೇದ್ಯವನ್ನು ನೀಡಿ ಧನ್ಯವಾಗಿತ್ತು!'

ತಿದ್ದುಪಡಿ

ಡಿ. 25ರ 'ಆಳ ಅಗಲ'ದಲ್ಲಿ ಪ್ರಕಟವಾಗಿದ್ದ 'ಔಷಧ ಗುಣಮಟ್ಟ ನಿಯಂತ್ರಣ ವ್ಯವಸ್ಥೆಗೆ ಗ್ರಹಣ' ಲೇಖನದಲ್ಲಿ, 'ಬಳ್ಳಾರಿಯ ವಿಮ್ಸ್‌ನಲ್ಲಿ ಬಾಣಂತಿಯರ ಸಾವಿಗೆ ಅವರಿಗೆ ನೀಡಲಾಗಿದ್ದ ರಿಂಗರ್ ಲ್ಯಾಕ್ಟೇಟ್ ಐ.ವಿ.ದ್ರಾವಣದ ಗುಣಮಟ್ಟ ಕಳಪೆಯಾಗಿದ್ದುದೇ ಕಾರಣ ಎಂದು ರಾಜ್ಯ ಸರ್ಕಾರ ನೇಮಿಸಿದ್ದ ತನಿಖಾ ಸಮಿತಿ ವರದಿ ನೀಡಿದೆ' ಎಂದು ಪ್ರಕಟವಾಗಿದೆ. ಆದರೆ, ಐ.ವಿ. ದ್ರಾವಣ ಕಳಪೆ ಎಂದು ವರದಿ ನೀಡಿರುವುದು ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ತಜ್ಞ ವೈದ್ಯರ ತಂಡ.

ಅಧಿವೇಶನದ ಕೆಲವು ವಿಶೇಷಗಳು

- ದೆಹಲಿ ಮತ್ತು ಬಾಂಬೆ ಏಕತಾ ಸಮಾವೇಶಗಳ ನಂತರ ನಡೆದ ಕಾರ್ಯಕ್ರಮ ಇದು. ದೇಶದಲ್ಲಿದ್ದ ಎಲ್ಲ ರಾಜಕೀಯ ಪಕ್ಷಗಳನ್ನೂ ಒಂದೇ ವೇದಿಕೆಯಡಿ ತರುವುದು ಕಾರ್ಯಕ್ರಮದ ಉದ್ದೇಶಗಳಲ್ಲೊಂದಾಗಿತ್ತು. ರಾಷ್ಟ್ರದ ಏಕತೆಗಾಗಿ ಎಲ್ಲರೂ ಬೆಳಗಾವಿಯಲ್ಲಿ ಅಧಿವೇಶನಗಳನ್ನು ನಡೆಸಬೇಕು ಎಂದು ಎಲ್ಲ ಮುಖಂಡರಿಗೂ ಆಹ್ವಾನಗಳನ್ನು ಕಳಿಸಲಾಗಿತ್ತು
- ಅಧಿವೇಶನದ ಸ್ಥಳದಲ್ಲಿ 70 ಅಡಿ ಎತ್ತರ ಗೋಪುರದ ಶೈಲಿಯ ಪ್ರವೇಶ ದ್ವಾರವನ್ನು ನಿರ್ಮಿಸಲಾಗಿತ್ತು. ಅತಿಥಿಗಳಿಗಾಗಿ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸ್ವಾತಂತ್ರ್ಯ ಹೋರಾಟಗಾರರು ಬೃಹತ್ ಶಾಮಿಯಾನ ಹಾಕಿದ್ದರು. ಮದ್ರಾಸ್ ದಕ್ಷಿಣ ರೈಲ್ವೆ ವಿಭಾಗವು ಕಾರ್ಯಕ್ರಮದ ಸ್ಥಳಕ್ಕೆ ಹತ್ತಿರದಲ್ಲಿಯೇ ತಾತ್ಕಾಲಿಕ ರೈಲು ನಿಲ್ದಾಣವನ್ನು ನಿರ್ಮಿಸಿತ್ತು
- ಎರಡು ಸ್ವಾಗತಗೀತೆಗಳೊಂದಿಗೆ ಕಾರ್ಯಕ್ರಮ ಆರಂಭವಾಗಿತ್ತು: 'ವಂದೇ ಮಾತರಂ' ಮತ್ತು 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು'
- ಅಧಿವೇಶನಕ್ಕಾಗಿ ನಾ.ಸು.ಹರ್ಡೀಕರ್ ಮತ್ತು ಅವರ ಸಂಗಡಿಗರು ಮಾಡಿದ್ದ ವ್ಯವಸ್ಥೆಯನ್ನು ಗಾಂಧಿ ಅವರು ಬಹುವಾಗಿ ಮೆಚ್ಚಿಕೊಂಡಿದ್ದರು. ಆದರೆ, ನೈರ್ಮಲ್ಯ ವ್ಯವಸ್ಥೆ ಇನ್ನಷ್ಟು ಉತ್ತಮವಾಗಿರಬಹುದಿತ್ತು ಎಂದಿದ್ದರು. 'ನೈರ್ಮಲ್ಯದ ವ್ಯವಸ್ಥೆ ಚೆನ್ನಾಗಿಯೇ ಇತ್ತಾದರೂ, ಅದನ್ನು ಇನ್ನಷ್ಟು ವೈಜ್ಞಾನಿಕವಾಗಿ ನಿರ್ವಹಿಸಬಹುದಿತ್ತು' ಎಂದಿದ್ದರು
- ಅಧಿವೇಶನದಲ್ಲಿ ಗಾಂಧಿ ಅವರು ಮಾಡಿದ ಭಾಷಣವು ಕಾಂಗ್ರೆಸ್ ಇತಿಹಾಸದಲ್ಲಿಯೇ ಅತ್ಯಂತ ಚುಟುಕು ಭಾಷಣವಾಗಿತ್ತು. ಅದರ ಪೂರ್ಣ ಭಾಷಣದ ಮುದ್ರಿತ ಪ್ರತಿಗಳನ್ನು ಅಧಿವೇಶನದಲ್ಲಿ ಹಂಚಲಾಗಿತ್ತು
- ಅಧಿವೇಶನದ ನಂತರ ಕರ್ನಾಟಕದಲ್ಲಿ ಮತ್ತು ದೇಶದ ಹಲವು ಭಾಗಗಳಲ್ಲಿ ಖಾದಿ ಗ್ರಾಮೋದ್ಯೋಗ ಮತ್ತು ಗುಡಿ ಕೈಗಾರಿಕೆಗಳು ಹೆಚ್ಚಾಗಿದ್ದವು. ಅಧಿವೇಶನವು ರೈತರಲ್ಲಿ ಜಾಗೃತಿ ಮೂಡಿಸುವಲ್ಲಿಯೂ ಕೊಂಚ ಮಟ್ಟಿಗೆ ಯಶಸ್ವಿಯಾಗಿತ್ತು. ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸತೊಡಗಿದ್ದರು

ಗುಂಡಣ್ಣ

ನಿನ್ನೆ ಸತ್ತಿದೆ, ನಾಳೆ ಹುಟ್ಟಿಲ್ಲ; ಮತ್ತೆ ಚಿಂತ್ಯಾಕೆ?

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

96

ಜಪಾನ್ ದೇಶದಲ್ಲಿ ಟೆಕ್ಕೊಗೇನ್ ಅಂತ ಒಬ್ಬ ಗುರು ಇದ್ದ. ಝೆನ್ ಪಂಥದ ಗುರು. ಈ ಪಂಥದಲ್ಲಿ ಒಂದಿಷ್ಟು ಸೂತ್ರಗಳು ಇದಾವೆ. ಆ ಗುರುವಿಗೆ ಈ ಸೂತ್ರಗಳನ್ನು ಪ್ರಿಂಟ್ ಹಾಕಿಸಬೇಕು ಅನ್ನಿಸಿತು. ಅವಾಗ ಈಗಿನ ಹಾಗೆ ಮುದ್ರಣ ಸಾಮಗ್ರಿ, ಕಂಪ್ಯೂಟರ್ ಯಾವುದೂ ಇರಲಿಲ್ಲ. ಆಗ ಮರದ ಕಟ್ಟಿಗೆ ಮ್ಯಾಲೆ ಬರೆದು ಬಣ್ಣ ಹಚ್ಚಿ ಅದನ್ನು ಬಟ್ಟೆ ಮೇಲೆ ಬಿಡಿಸಲಾಗುತ್ತಿತ್ತು. ಈ ರೀತಿ ಸಾವಿರಾರು ಸೂತ್ರಗಳನ್ನು ಬರೆಯಬೇಕಿತ್ತು. ಇದಕ್ಕಾಗಿ ಸಾಕಷ್ಟು ಹಣ ಸಂಗ್ರಹ ಮಾಡಿದ. ಇನ್ನೇನು ಪ್ರಿಂಟ್ ಹಾಕಿಸಬೇಕು ಅಂದಾಗ ಒಂದು ನಗರದಲ್ಲಿ ಪ್ರವಾಹ ಬಂದು ಬಹಳ ಹಾನಿ ಆಯ್ತು. ಜನ ಸಂಕಷ್ಟಕ್ಕೆ ಈಡಾಗಿದ್ದರು. ಮನೆಗಳು ಕೊಚ್ಚಿ ಹೋಗಿದ್ದವು. ಆಗ ಟೆಕ್ಕೊಗೇನ್ ಏನು ಮಾಡಿದ ಅಂದರ, ಸೂತ್ರಗಳ ಪ್ರಿಂಟ್ ಹಾಕಸಾಕೆ ಸಂಗ್ರಹ ಮಾಡಿದ್ದ ಹಣವನ್ನು ಜನರಿಗೆ ದಾನ ಮಾಡಿದ. ಜನರು ಔಷಧ ಕೊಳ್ಳಲು, ಮನೆ ಕಟ್ಟಿಕೊಳ್ಳಲು ಎಲ್ಲವನ್ನೂ ನೀಡಿದ. ಆಗ ಅವನ ಆಸೆ ಈಡೇರಲಿಲ್ಲ. ಮತ್ತೆ 10-15 ವರ್ಷದ ನಂತರ ಸೂತ್ರಗಳನ್ನು ಪ್ರಿಂಟ್ ಹಾಕಲು ಹಣ ಸಂಗ್ರಹ ಮಾಡಿದ. ಕೋಟಿ ಕೋಟಿ ಹಣ ಹರಿದು ಬಂತು. ಆಗಲೂ ಇನ್ನೇನು ಪ್ರಿಂಟ್ ಹಾಕಿಸಬೇಕು ಅನ್ನುವಾಗ ಜಪಾನದಲ್ಲಿ ಹಳದಿ ಜ್ವರ ಜಾಸ್ತಿಯಾಗಿ ಜನರು ತೊಂದರೆಗೆ ಈಡಾದರು. ಆಗಲೂ ಅವನು ಹಣವನ್ನು ಜನರಿಗಾಗಿ ವಿನಿಯೋಗಿಸಿದ.

ಮತ್ತೆ ಕೆಲವು ವರ್ಷಗಳ ನಂತರ ಮೂರನೇ ಬಾರಿಗೆ ಹಣ ಸಂಗ್ರಹ ಮಾಡಿ ಸೂತ್ರಗಳನ್ನು ಪ್ರಿಂಟ್ ಮಾಡಿದ. ಅವುಗಳನ್ನು ಮ್ಯೂಜಿಯಂನಲ್ಲಿ ಇಟ್ಟರು. ಆಗ ಆ ಗುರುವಿನ ಶಿಷ್ಯರು 'ಎರಡು ಸಲ ನಾವು ಫೇಲಾದ್ವಿ. ಮೂರನೇ ಸಲಕ್ಕೆ ಯಶಸ್ವಿಯಾದ್ವಿ' ಅಂತ ಗುರುಗಳಿಗೆ ಹೇಳಿದರು. 'ನಾನು ಝೆನ್ ಸೂತ್ರಗಳನ್ನು ಮೂರು ಬಾರಿ ಬರೆದೆ. ಮೂರನೆ ಬಾರಿಗೆ ಬರೆದಾಗ ಅದು ಹರಿಯುವ ಹಾಳೆಯಲ್ಲಿ ಬರೆದೆ. ಆದರೆ ಈ ಹಿಂದೆ ಎರಡು ಬಾರಿ ಹರಿಯದ ಜನರ ಹೃದಯದಲ್ಲಿ ಬರೆದಿದ್ದೆ' ಎಂದು ಉತ್ತರಿಸಿದನಂತೆ ಗುರು. ಇದು ಯುಕ್ತ ಕರ್ಮ.

ಇನ್ನು ಯುಕ್ತ ನಿದ್ದೆ. ದೇಹ ಮತ್ತು ಮನಸ್ಸಿನ ವಿಶ್ರಾಂತ ಸ್ಥಿತಿಗೆ ನಿದ್ರೆ ಅಂತ ಕರೀತಾರೆ. ಬಸ್ಸುಗಳು ಇದಾವಲ್ಲ ಅವು ಹಗಲೆಲ್ಲಾ ಓಡ್ಯಾಡಿ ರಾತ್ರಿಗೆ ಡಿಪೋಗೆ ಬರ್ತಾವಲ್ಲ ಹಾಗೆ ಈ ದೇಹ ಹಗಲೆಲ್ಲಾ ಕೆಲಸ ಮಾಡಿ ರಾತ್ರಿ ಮಲಗಲಿಕ್ಕೆ ಬರ್ತದಲ್ಲ ಅದು ನಿದ್ರಾವಸ್ಥೆ. ನಿದ್ರೆಯನ್ನು ಸಮಾಧಿ ಸ್ಥಿತಿ ಅಂದ್ರು. ಯಾಕೆ? ಯಾಕೆಂದರೆ, ನಿದ್ರೆಗೆ ಇವ ಬಡವ, ಶ್ರೀಮಂತ ಅಂತಿಲ್ಲ, ಕನಿಷ್ಠ ಶ್ರೇಷ್ಠ ಅಂತಿಲ್ಲ. ಸಮಾನ ಸ್ಥಿತಿ. ಅದಕ್ಕೆ ಅದನ್ನು ಸಮಾಧಿ ಸ್ಥಿತಿ ಅಂದ್ರು. ಕೆಲವರು ನನಗೆ ನಿದ್ದೆನೇ ಬರೋದಿಲ್ಲ ಅಂತಾರ. ಯಾರಿಗೆ ದೇಹ ದಣಿದಿಲ್ಲ, ಅವರಿಗೆ ನಿದ್ದೆ ಬರೋದಿಲ್ಲ. ರೈತರನ್ನು ಕೇಳಿ. ಅವರು ಹೊಲದಲ್ಲೇ ನಿದ್ದೆ ಮಾಡ್ತಾರ. ನಿದ್ದೆ ಬಾರದಿರುವುದಕ್ಕೆ ಇನ್ನೂ ಎರಡು ಕಾರಣಗಳಿದಾವ. ಒಂದು ಹಿಂದೆ ನಡೆದಿದ್ದರ ಬಗ್ಗೆ ಚಿಂತೆ ಮತ್ತೊಂದು ಮುಂದೆ ಆಗುವುದರ ಬಗ್ಗೆ ಚಿಂತೆ. ಇವೆರಡರಿಂದ ನಿದ್ದೆ ದೂರವಾಗುತ್ತದೆ. ಮನಸ್ಸಿಗೆ ತಾಪ ಆದರೆ, ಮುಂದಿನದು ಕಲ್ಪಿಸಿಕೊಂಡು ಭಯ ಪಟ್ಟರೆ ನಿದ್ದೆ ಬರಲ್ಲ. ನಿನ್ನೆ ಸತ್ತಿದೆ, ನಾಳೆ ಹುಟ್ಟಿಲ್ಲ. ಇಂದು ಇರೋದರಲ್ಲಿ ಸಂತೋಷ ಪಡಬೇಕು. ಜೀವನಕ್ಕೆ ಅದೇ ಸೂತ್ರ. ❖

ದಿನ ಭವಿಷ್ಯ

ಗುರುವಾರ ಡಿಸೆಂಬರ್ 26, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಏಕಾದಶಿ ಗಂ. 24-44 ನಕ್ಷತ್ರ: ಸ್ವಾತಿ ಗಂ. 18-10 ಯೋಗ: ಸುಕರ್ಮ ಗಂ. 22-23 ಕರಣ: ಬವ ಗಂ. 11-40, ಧನು ಮಾಸದ 10 ನೇ ದಿನ, ಮಳೆನಕ್ಷತ್ರ: ಮೂಲ 4.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-55 ಸೂರ್ಯಾಸ್ತ : 06-08
ಮುಸ್ಲಿಂ ದಿನಾಂಕ : 23 ಜುಮಾದುಸ್ಸಾನಿ
ದಿನ ವಿಶೇಷ : ಸಫಲ ಏಕಾದಶಿ ಅದೃಷ್ಟ ಸಂಖ್ಯೆ : 3, 9

ಮೇಷ: ಇಂದಿನವರೆಗೂ ಸಹ ಲೌಕಿಕ ಜೀವನವನ್ನು ಯಾವುದೇ ಯೋಚನೆ ಇಲ್ಲದೆ ಮಾಡುತ್ತಿದ್ದ ನಿಮಗೆ ಇಂದಿನಿಂದ ಮುಕ್ತಿ ಹಾಗೂ ಅದಕ್ಕೆ ಸಂಬಂಧಿಸಿದ ವಿಚಾರದಲ್ಲಿ ಆಸಕ್ತಿ ಬರಲಿದೆ. ವಿದ್ಯಾರ್ಥಿಗಳಿಗೆ ಉನ್ನತಿ ದೊರಕುತ್ತದೆ.

ವೃಷಭ: ನಿಮ್ಮ ಕಾರ್ಯಕ್ಷೇತ್ರದಲ್ಲಿನ ಒತ್ತಡಗಳನ್ನು ಅನುಭವಿಸಲು ಕಷ್ಟವಾಗಿ ಹೊರಗೆ ಹೊರಡುವ ಸಕಲ ಪ್ರಯತ್ನಗಳನ್ನು ಶುರುಮಾಡುವಿರಿ. ಪುರಾಣಗಳ ಪ್ರವಚನಗಳನ್ನು ಮಾಡುವವರಿಗೆ ಹೊಸ ಅವಕಾಶಗಳು ದೊರೆಯುವವು.

ಮಿಥುನ: ನಿಮ್ಮ ಮಕ್ಕಳನ್ನು ಕೆಟ್ಟ ಪರಿಸ್ಥಿತಿಗಳಿಂದ ರಕ್ಷಣೆ ಮಾಡಲು ಸರ್ವ ಪ್ರಯತ್ನಗಳನ್ನು ಮಾಡುವಿರಿ. ನಿಮ್ಮ ಸಮಸ್ಯೆಗಳಿಗೆ ಸರಿಯಾದ ಪರಿಹಾರ ಹುಡುಕುವ ಸಲುವಾಗಿ ವಿದ್ವಾಂಸರನ್ನು ಭೇಟಿಯಾಗುವಿರಿ.

ಕರ್ಕಾಟಕ: ಸದ್ಯದ ಕೆಟ್ಟ ಪರಿಸ್ಥಿತಿಯಿಂದ ಹೊರಗೆ ಬರಲು ಕೆಲ ಸಮಯ ಮೌನವಾಗಿ ಸಮಾಧಾನದಿಂದ ಕಾಯಬೇಕು. ಯೋಗವನ್ನು ಕಲಿಸಿಕೊಡುವವರಿಗೆ ಹೊಸ ಶಿಷ್ಯರು ಹಾಗೂ ಕೀರ್ತಿಯು ಸಂಪಾದನೆಯಾಗವುದು.

ಸಿಂಹ: ದಾನ-ಧರ್ಮ ಪ್ರವೃತ್ತಿಯನ್ನು ರೂಢಿಸಿಕೊಳ್ಳುವುದರಿಂದ ಕೆಲವು ಶುಭ ಫಲಗಳು ನಿಮ್ಮ ಅನುಭವಕ್ಕೆ ಬರಲಿವೆ. ಪ್ರಾಮಾಣಿಕ ಅಧಿಕಾರಿಗಳಿಗೆ ಹಿರಿಯ ಅಧಿಕಾರಿಗಳಿಂದ ಕಿರುಕುಳವಿರಲಿದೆ. ದೂರ ಪ್ರಯಾಣದ ಸಾಧ್ಯತೆಗಳು ಹೆಚ್ಚಿವೆ.

ಕನ್ಯಾ: ಕೆಲಸದ ಗುಣಮಟ್ಟ, ಕರ್ತವ್ಯ ನಿಷ್ಠೆಯು ಮೇಲಧಿಕಾರಿಗಳ ಗಮನಕ್ಕೆ ಬಂದು ಬಡ್ತಿಗೆ ಮೂಲ ಕಾರಣವಾಗುತ್ತದೆ. ದೈವಾರಾಧನೆಯಿಂದ ರೈತರಿಗೆ ನೈಸರ್ಗಿಕ ಬಾಧೆ ಕಡಿಮೆಯಾಗುವುದು. ಸಾಹಿತ್ಯದಲ್ಲಿ ಅಭಿರುಚಿ ಹೆಚ್ಚುತ್ತದೆ.

ತುಲಾ: ಏರುಪೇರಾಗಿದ್ದ ನಿಮ್ಮ ವ್ಯಾಪಾರ ವ್ಯವಹಾರಗಳನ್ನು ಉತ್ತಮ ರೀತಿಯಲ್ಲಿ ಸರಿಪಡಿಸಿಕೊಳ್ಳಬಹುದು. ವೈಯಕ್ತಿಕ ಪ್ರಗತಿ, ಅಭಿವೃದ್ಧಿಯಿಂದ ಮನಸ್ಸಿಗೆ ಸಂತೋಷವಿರುವುದು. ಸ್ವಪ್ರಯತ್ನದಿಂದ ಕೆಲಸಗಳನ್ನು ಸಾಧಿಸುವಿರಿ.

ವೃಶ್ಚಿಕ: ಪರಿಸ್ಥಿತಿಗೆ ಹೊಂದಿಕೊಂಡು ಹೋಗುವ ಗುಣದಿಂದ ವಿವಾಹಕ್ಕೆ ಸಂಬಂಧಪಟ್ಟ ಭಿನ್ನಾಭಿಪ್ರಾಯವನ್ನು ದೂರ ಮಾಡಿಕೊಳ್ಳುವಿರಿ. ದ್ವಿಚಕ್ರ ವಾಹನಗಳ ಮಾರಾಟಗಾರರು ಇಂದು ಉತ್ತಮ ವಹಿವಾಟು ನಡೆಸುವರು.

ಧನು: ವಿದೇಶಿ ಸ್ನೇಹಿತರಿಂದ ವ್ಯಾವಹಾರಿಕ ಸಲಹೆ ಪಡೆಯುವಂತಾಗಲಿದೆ. ಕಳೆದು ಹೋದ ಅತೀ ಅಮೂಲ್ಯ ವಸ್ತು ಬಹಳ ದಿನದ ನಂತರ ನಿಮ್ಮ ಕೈ ಸೇರಲಿದೆ. ಸಂಜೆಯ ಸಮಯದಲ್ಲಿ ಪ್ರೀತಿ ಪಾತ್ರರೊಡನೆ ಕಾಲ ಕಳೆಯುವಿರಿ.

ಮಕರ: ಪದೇಪದೇ ಬರುವ ಅಡ್ಡಿ-ಆತಂಕ, ಭೀತಿ ಹಾಗೂ ಮನೋವ್ಯಾಕುಲಗಳಿಗೆ ಹೆದರುವ ಅವಶ್ಯಕತೆ ಇಲ್ಲ. ಯಾಂತ್ರಿಕ ಬದುಕಿನಿಂದ ತುಸು ವಿರಾಮ ಪಡೆಯಲು ಸಾಧ್ಯವಾಗುತ್ತದೆ. ನಿಮ್ಮ ಜೀವನ ಶೈಲಿಯ ವೆಚ್ಚ ಅಧಿಕವಾಗುತ್ತದೆ.

ಕುಂಭ: ದೊಡ್ಡ ಮೊತ್ತದ ಅಥವಾ ಹೆಚ್ಚಿನ ಜವಾಬ್ದಾರಿಯ ಯಾವುದೇ ಕೆಲಸವನ್ನು ಒಪ್ಪಿಕೊಳ್ಳಬಹುದು. ವಾಣಿಜ್ಯ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಲು ಪ್ರಯತ್ನಿಸಬಹುದು. ಆರ್ಥಿಕ ಪರಿಸ್ಥಿತಿ ಅಷ್ಟೇನು ಉತ್ತಮವಾಗಿ ಇರುವುದಿಲ್ಲ.

ಮೀನ: ವಾದ ಮಾಡುವ ಬದಲು ಕುಟುಂಬದ ನೆಮ್ಮದಿಗಾಗಿ ಸೋಲನ್ನು ಒಪ್ಪಿಕೊಳ್ಳುವುದು ಉತ್ತಮ. ಲೇವಾದೇವಿ ವ್ಯವಹಾರಗಳನ್ನು ಆದಷ್ಟು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿ. ಮನೆಯ ವಿಷಯಗಳ ಕಡೆಗೆ ಹೆಚ್ಚು ಗಮನಹರಿಸಿ.

ಪದಬಂಧ 5903

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗಾಯಗಳಿಗೆ ಲೇಪಿಸುವ ಜಿಡ್ಡು ಪದಾರ್ಥ (3)
3.ಹನ್ನೆರಡು ಅಂಗುಲಗಳ ಅಳತೆ (2)
5.ಶಾಶ್ವತವಾದ ನೆಮ್ಮದಿ (4)
6.ಪರಿಷ್ಕೃತವಾಗದಿರುವ ಪ್ರತಿ (3)
7.ಅತಿಥೇಯನಲ್ಲೇ ಯೋಗಿಯನ್ನು ಹುಡುಕಿ! (2)
9.ಉತ್ಕೃಷ್ಟವಾದ ಅಡಿಕೆ (5)
11.ಉಲ್ಟಾ ಪಲ್ಟಾ ಆಗಿರುವ ಶರ (2)
13.ವರ್ತಮಾನ ಹೇಳುವವನ ರೂಢಿಯು ಉಲ್ಟಾ ಆಗಿದೆ (3)
14.ಸಿದ್ಧಯ್ಯ ಪುರಾಣಿಕರ ಕಾವ್ಯನಾಮ (4)
15.ದುಸ್ತರದಲ್ಲಿ ಮಡಿಕೆಯನ್ನು ಹುಡುಕಿ (2)
16.ಕುರು ಎದ್ದಿರುವ ಚಿಹ್ನೆ! (3)

ಮೇಲಿಂದ ಕೆಳಕ್ಕೆ
2.ನಿಗದಿತ ಬೆಲೆಗಿಂತ ಹೆಚ್ಚು ಹಣ ಬಯಸುವವನು (5)
3.ಅತಿಥಿ ಸತ್ಕಾರವನ್ನು ಮಾಡುವವನು (4)
4.ಹೃದಯವಂತಿಕೆಯನ್ನು ಹೀಗೂ ಹೇಳಬಹುದು (5)
5.ಜ್ಞಾನಪೀಠ ಪ್ರಶಸ್ತಿ ಪಡೆದ ಮಾಸ್ತಿಯವರ ಐತಿಹಾಸಿಕ ಕಾದಂಬರಿ (7)
8.ಅರಿವಳಿಕೆ ನೀಡುವಾಗಿನ ಅರಿವು! (5)
10.ಹಾಲಿನ ಸಾರವತ್ತಾದ ಭಾಗದೊಡನಿರುವ ದಧಿ (5)
12.ಒಂದು ಸಂಖ್ಯೆಯನ್ನು ಮತ್ತೊಂದು ಸಂಖ್ಯೆಯಿಂದ ಭಾಗಿಸುವುದು (4)



5902ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಋಜುತೆ 5.ಗಡಿಯಾರ
6.ವಿದೂಷಕ 8.ಕೆಲಸ
11.ಉಬ್ಬರ 13.ಪರಂಧಾಮ
17.ಜಲಪಾತ 18.ಲೆಕ್ಕಣಿ

ಮೇಲಿಂದ ಕೆಳಕ್ಕೆ:
1.ಋತ್ವಿಕ್ಕು 2.ತೆಗಳಿಕೆ
3.ಕುರವಿ 4.ನಿಕಷ
7.ಕರ್ಪೂರ 9.ಸವಾಲು
10.ಸಂತಾಪ 12.ಕಡಿತಲೆ
14.ರಂಜಕ 15.ಮಜಲು
16.ಸಗಣಿ

ಸುಡೊಕು 6288

		1		8			6	7
	7		1		6			3
3		5		2		9		
	8	7					1	
		4	7	6	3	8		
5	9						7	4
		2		7		1		5
1	4		2		5		9	
	5			4		2		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6287 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಮುಂಬೈ ಧಾರಣೆ (ಶೇಂಗಾ)

25-12-2024

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ(ಹೊಸ)	8800-8900
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1475 (1470)
ಒಂದು ವಾರದ ಡೆಲಿವರಿ	1470 (1465)
ಪಾಮ್ ವಾರದ ಡೆಲಿವರಿ	1343 (1338)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹75,700 (75,500)
ಬೆಳ್ಳಿ ಕೆ.ಜಿ ₹87,650 (87,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮಾಸಿಕ ಸರಾಸರಿ ₹38,500 ಕೋಟಿ ಹೂಡಿಕೆ
ಎಫ್‌ಡಿಐ ಒಳಹರಿವು ಏರಿಕೆ

ನವದೆಹಲಿ (ಪಿಟಿಐ): ಜಾಗತಿಕ ವಿಕ್ಷಿಪ್ತ ಹಾಗೂ ಸವಾಲುಗಳ ನಡುವೆಯೂ ಪ್ರಸಕ್ತ ವರ್ಷದ ಜನವರಿಯಿಂದ ಇಲ್ಲಿಯವರೆಗೆ ಭಾರತಕ್ಕೆ ಮಾಸಿಕ ಸರಾಸರಿ ₹38,500 ಕೋಟಿ ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಹರಿದು ಬಂದಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ದೇಶದಲ್ಲಿ ಹೂಡಿಕೆ ಸ್ನೇಹಿ ವಾತಾವರಣ ಕಲ್ಪಿಸುವುದಾಗಿ ಹೇಳಿದೆ. ಹಾಗಾಗಿ, ಮುಂದಿನ ವರ್ಷವೂ ವಿದೇಶಿ ನೇರ ಬಂಡವಾಳದ ಒಳಹರಿವಿನ ಏರಿಕೆಯು ಇದೇ ಸ್ಥಿತಿಯಲ್ಲಿ ಮುಂದುವರಿಯುವ ಸಾಧ್ಯತೆಯಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಸರ್ಕಾರವು ಹೂಡಿಕೆದಾರ ಸ್ನೇಹಿ ನೀತಿ ರೂಪಿಸಿದೆ. ಹೂಡಿಕೆ ಮೇಲಿನ ಗಳಿಕೆಯೂ ಉತ್ತಮವಾಗಿದೆ. ದೇಶವು ಕೌಶಲಭರಿತ ಮಾನವ ಸಂಪನ್ಮೂಲವನ್ನು ಹೊಂದಿದೆ. ಕೈಗಾರಿಕೆಗಳಿಗೆ ಅನುಮತಿ ನೀಡಲು ಏಕಗವಾಕ್ಷಿ ಯೋಜನೆ ರೂಪಿಸಲಾಗಿದೆ. ಉತ್ಪಾದನೆ ಆಧರಿತ ಪ್ರೋತ್ಸಾಹ ನೀಡಲಾಗುತ್ತಿದೆ. ಇದು ವಿದೇಶಿ ಬಂಡವಾಳದ ಒಳಹರಿವು ಹೆಚ್ಚಳಕ್ಕೆ ನೆರವಾಗಿದೆ ಎಂದು ಹೇಳಿದ್ದಾರೆ.

ಜನವರಿಯಿಂದ ಸೆಪ್ಟೆಂಬರ್‌ವರೆಗೆ ₹3.60 ಲಕ್ಷ ಕೋಟಿ ಎಫ್‌ಡಿಐ ಒಳಹರಿವು ಆಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹2.53 ಲಕ್ಷ ಕೋಟಿ ಬಂಡವಾಳ ಹೂಡಿಕೆಯಾಗಿತ್ತು. ಒಟ್ಟಾರೆ ಶೇ 42ರಷ್ಟು ಏರಿಕೆಯಾಗಿದೆ.

ಕಳೆದ ಒಂದು ದಶಕದಲ್ಲಿ ₹84.62 ಲಕ್ಷ ಕೋಟಿ ವಿದೇಶಿ ನೇರ ಬಂಡವಾಳ ಹೂಡಿಕೆಯಾಗಿದೆ.

'ದೇಶದಲ್ಲಿ ಹೂಡಿಕೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರೂಪಿಸಿದ್ದ ಕಠಿಣ ನಿಯಮಗಳನ್ನು ಸರ್ಕಾರವು ತೆಗೆದು ಹಾಕಿದೆ. ಮೂಲ ಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಿದೆ. ವ್ಯವಹಾರ ಸ್ನೇಹಿ ವಾತಾವರಣ ಸೃಷ್ಟಿಸಿದೆ. ದೇಶದ ಆರ್ಥಿಕ ಸ್ಥಿತಿಯು ಜಾಗತಿಕ ಹೂಡಿಕೆದಾರರಿಗೆ ಪೂರಕ ವಾತಾವರಣ ಸೃಷ್ಟಿಸಿದೆ' ಎಂದು ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯ (ಡಿಪಿಐಐಟಿ) ಕಾರ್ಯದರ್ಶಿ ಅಮರ್‌ದೀಪ್ ಸಿಂಗ್ ಭಾಟಿಯಾ ತಿಳಿಸಿದ್ದಾರೆ.

'ವಿತ್ತೀಯ ಕೊರತೆ ಶೇ 4.5ಕ್ಕೆ ತಗ್ಗಿಸಲು ಗುರಿ'

ನವದೆಹಲಿ (ಪಿಟಿಐ): 2025–26ನೇ ಆರ್ಥಿಕ ವರ್ಷದಲ್ಲಿ ಸರ್ಕಾರವು ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯನ್ನು ಶೇ 4.5ಕ್ಕೆ ತಗ್ಗಿಸಲು ನಿರ್ಧರಿಸಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ವರದಿ ತಿಳಿಸಿದೆ.

ಬಂಡವಾಳ ವೆಚ್ಚದ ಹೆಚ್ಚಳಕ್ಕೆ ಒತ್ತು ನೀಡಲಿದೆ. ಬಡತನ ಹಾಗೂ ಸಾಮಾಜಿಕ ಅಸಮಾನತೆ ತಗ್ಗಿಸುವ ನಿಟ್ಟಿನಲ್ಲಿ ಸಾಮಾಜಿಕ ಭದ್ರತೆ ವ್ಯವಸ್ಥೆಯನ್ನು ಮತ್ತಷ್ಟು ಸದೃಢಗೊಳಿಸಲು ಕ್ರಮವಹಿಸಲಿದೆ ಎಂದು ಹೇಳಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು ಸಂಸತ್‌ನಲ್ಲಿ ಬಜೆಟ್ ಮಂಡಿಸಲಿದ್ದಾರೆ.

2021–22ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರವು ವಿತ್ತೀಯ ಬಲವರ್ಧನೆಗೆ ಒತ್ತು ನೀಡುವುದಾಗಿ ಘೋಷಿಸಿತ್ತು. ವಿತ್ತೀಯ ಹೊಣೆಗಾರಿಕೆ ಮತ್ತು ಆಯವ್ಯಯ ನಿರ್ವಹಣಾ ಕಾಯ್ದೆ 2003ರ ಅನ್ವಯ ನಡೆದ ಪರಾಮರ್ಶೆ ಸಭೆಯಲ್ಲಿ 2025–26ನೇ ಸಾಲಿನಲ್ಲಿ ವಿತ್ತೀಯ ಕೊರತೆಯನ್ನು ಶೇ 4.5ಕ್ಕೆ ತಗ್ಗಿಸುವುದಾಗಿ ಭರವಸೆ ನೀಡಿದೆ. ಸಂಸತ್‌ಗೆ ಇದನ್ನು ತಿಳಿಸಿದೆ.

ಬಂಡವಾಳ ವೆಚ್ಚದ ಪ್ರಮಾಣ ಹೆಚ್ಚಿಸುವ ಮೂಲಕ ನಿರುದ್ಯೋಗ ನಿರ್ಮೂಲನೆ, ಹಣದುಬ್ಬರ ಇಳಿಕೆ, ತಯಾರಿಕಾ ಚಟುವಟಿಕೆಗಳಿಗೆ ಉತ್ತೇಜನ ನೀಡಲಿದೆ. ಆ ಮೂಲಕ ಆರ್ಥಿಕತೆಯ ಸ್ಥಿರತೆಗೆ ಒತ್ತು ನೀಡಲಿದೆ ಎಂದು ಹೇಳಿದೆ.

3,200 ಹೊಸ ಮಳಿಗೆ: ಓಲಾ ನಿರ್ಧಾರ

ನವದೆಹಲಿ (ಪಿಟಿಐ): ಇ-ಸ್ಕೂಟರ್ ತಯಾರಿಕಾ ಕಂಪನಿ ಓಲಾ ಎಲೆಕ್ಟ್ರಿಕ್, ದೇಶದಾದ್ಯಂತ ಹೊಸದಾಗಿ 3,200 ಮಾರಾಟ ಮಳಿಗೆಗಳನ್ನು ತೆರೆಯಲು ನಿರ್ಧರಿಸಿದೆ.

ಸದ್ಯ 800 ಮಳಿಗೆಗಳು ಕಾರ್ಯ ನಿರ್ವಹಿಸುತ್ತಿವೆ. ಹೊಸ ಮಳಿಗೆಗಳಲ್ಲಿ ಗ್ರಾಹಕರಿಗೆ ಸರ್ವಿಸ್ ಸ್ಟೇಷನ್ ಸೌಲಭ್ಯ ಕೂಡ ಕಲ್ಪಿಸಲಾಗುವುದು ಎಂದು ಕಂಪನಿ ತಿಳಿಸಿದೆ.

ಮಹಾನಗರಗಳನ್ನು ಹೊರತುಪಡಿಸಿ ಟೈರ್ 1, ಟೈರ್ 2 ನಗರ ಸೇರಿ ಸಣ್ಣ ಪಟ್ಟಣ, ತಾಲ್ಲೂಕು ಕೇಂದ್ರಗಳಲ್ಲಿ ವ್ಯಾಪಾರ ವಿಸ್ತರಿಸುವ ನಿಟ್ಟಿನಲ್ಲಿ ಈ ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದೆ ಎಂದು ತಿಳಿಸಿದೆ.

'ಹೊಸ ಮಳಿಗೆಗಳಲ್ಲಿ ಗ್ರಾಹಕರಿಗೆ ಎಲ್ಲಾ ರೀತಿಯ ಸೇವೆ ದೊರೆಯುವ ವ್ಯವಸ್ಥೆ ಕಲ್ಪಿಸಲಾಗುವುದು' ಎಂದು ಓಲಾ ಎಲೆಕ್ಟ್ರಿಕ್ ಕಂಪನಿ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಭವಿಶ್ ಅಗರ್ವಾಲ್ ತಿಳಿಸಿದ್ದಾರೆ.

'3 ತಿಂಗಳಿನಲ್ಲಿ 10 ಸಾವಿರ ಪ್ಯಾಕ್ಸ್'



ಅಮಿತ್ ಶಾ

ನವದೆಹಲಿ (ಪಿಟಿಐ): 'ದೇಶದಲ್ಲಿ ಕಳೆದ ಮೂರು ತಿಂಗಳಿನಲ್ಲಿ 10 ಸಾವಿರ ವಿವಿಧೋದ್ದೇಶ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು (ಪ್ಯಾಕ್ಸ್) ಸ್ಥಾಪಿಸಲಾಗಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ತಿಳಿಸಿದ್ದಾರೆ.

ಬುಧವಾರ ಈ ಹೊಸ ಸಂಘಗಳಿಗೆ ಅಧಿಕೃತವಾಗಿ ಚಾಲನೆ ನೀಡಿದ ಬಳಿಕ ಮಾತನಾಡಿದ ಅವರು, ಮುಂದಿನ ಐದು ವರ್ಷದೊಳಗೆ 2 ಲಕ್ಷ ಪ್ಯಾಕ್ಸ್ ಸ್ಥಾಪಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಸಹಕಾರ ಸಂಘಗಳ ಸಹಭಾಗಿತ್ವವಿಲ್ಲದೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಮೃದ್ಧಿ ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.

ಎರಡು ಹಂತದಲ್ಲಿ ಸಂಘಗಳನ್ನು ಸ್ಥಾಪಿಸಲಾಗುತ್ತಿದೆ. ಮೊದಲ ಹಂತದಲ್ಲಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ನಬಾರ್ಡ್) ಮೂಲಕ 32,750 ಪ್ಯಾಕ್ಸ್ ಸ್ಥಾಪಿಸಲಾಗುವುದು. ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯಡಿ (ಎನ್‌ಡಿಡಿಬಿ) 56,500 ಹಾಲು ಉತ್ಪಾದಕರ ಸಹಕಾರ ಸಂಘಗಳು ಮತ್ತು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯಡಿ (ಎನ್‌ಎಫ್‌ಡಿಬಿ) 6 ಸಾವಿರ ಮೀನುಗಾರರ ಸಹಕಾರ ಸಂಘ ಸ್ಥಾಪಿಸುವ ಗುರಿ ಹೊಂದಲಾಗಿದೆ ಎಂದು ವಿವರಿಸಿದರು.

ಹಾಲಿ ಇರುವ ಮಾನದಂಡದ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಪ್ಯಾಕ್ಸ್ ನಿಷ್ಕ್ರಿಯಗೊಂಡಿದ್ದರೆ ಮತ್ತೊಂದು ಸಂಘ ಸ್ಥಾಪಿಸಲು ಅವಕಾಶ ಇಲ್ಲ. ಹಾಗಾಗಿ, ಹಣಕಾಸಿನ ಮುಗ್ಗಟ್ಟಿನಿಂದ ನಿಷ್ಕ್ರಿಯಗೊಂಡಿರುವ ಪ್ಯಾಕ್ಸ್‌ಗಳಿಗೆ ಸಂಬಂಧಿಸಿದಂತೆ ಇದೇ ವೇಳೆ ಅವರು, ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು ಬಿಡುಗಡೆಗೊಳಿಸಿದರು. ಇದರಿಂದ 15 ಸಾವಿರ ಹಳ್ಳಿಗಳಲ್ಲಿ ಹೊಸದಾಗಿ ಸಂಘ ರಚಿಸಲು ಸಹಕಾರಿಯಾಗಿದೆ.

ಹಳದಿ ಬಟಾಣಿಗೆ ಸುಂಕ ವಿನಾಯಿತಿ ಮುಂದುವರಿಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಹಳದಿ ಬಟಾಣಿ ಮೇಲಿನ ಆಮದು ಸುಂಕ ಹಾಗೂ ಕನಿಷ್ಠ ರಫ್ತು ದರದ (ಎಂಐಪಿ) ವಿನಾಯಿತಿಯನ್ನು ಮುಂದಿನ ವರ್ಷದ ಫೆಬ್ರುವರಿವರೆಗೆ ವಿಸ್ತರಿಸಿದೆ.

ಆಮದು ಬಗ್ಗೆ ರಫ್ತು ಮೇಲ್ವಿಚಾರಣೆ ವ್ಯವಸ್ಥೆಯಡಿ ಆನ್‌ಲೈನ್ ಮೂಲಕ ನೋಂದಣಿ ಮಾಡಿಕೊಳ್ಳುವ ಸರಕಿಗೆ ಈ ರಿಯಾಯಿತಿ ಸೌಲಭ್ಯ ದೊರೆಯಲಿದೆ. ಬಂದರು ಪ್ರದೇಶದಲ್ಲಿ ಈ ಉತ್ಪನ್ನದ ಆಮದು ಮೇಲೆ ವಿಧಿಸಿದ್ದ ನಿರ್ಬಂಧವನ್ನೂ ಹಿಂಪಡೆಯಲಾಗಿದೆ ಎಂದು ವಿದೇಶಿ ವ್ಯಾಪಾರದ ಮಹಾ ನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)
₹432-588
ದ್ವಿತಳಿ (ಬಿ.ವಿ)
₹335-755

ಎನ್‌ಇಸಿಸಿ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹600

ಮಹರೌಲಿ ಉದ್ಯಾನದಲ್ಲಿರುವ ಕಟ್ಟಡಗಳಿಗೆ ಧಾರ್ಮಿಕ ಮಹತ್ವ: ಎಎಸ್‌ಐ

ನವದೆಹಲಿ (ಪಿಟಿಐ): 'ಮಹರೌಲಿ ಪುರಾತತ್ವ ಉದ್ಯಾನ'ದಲ್ಲಿ ಇರುವ ಎರಡು ಕಟ್ಟಡಗಳು ಧಾರ್ಮಿಕ ಮಹತ್ವವನ್ನು ಹೊಂದಿವೆ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಇಲ್ಲಿ ಇರುವ ಆಶಿಕ್ ಅಲ್ಲಾ ದರ್ಗಾ ಮತ್ತು 13ನೇ ಶತಮಾನದ ಸೂಫಿ ಸಂತ ಬಾಬಾ ಫರೀದ್ ಅವರ ಚಿಲ್ಲಾಗಾಹ್ ಸ್ಥಳಕ್ಕೆ ಮುಸ್ಲಿಮರು ಪ್ರತಿದಿನವೂ ಭೇಟಿ ನೀಡುತ್ತಾರೆ ಎಂದು ಎಎಸ್‌ಐ ಹೇಳಿದೆ.

ಶೇಖ್ ಶಹೀಬುದ್ದೀನ್ (ಆಶಿಕ್ ಅಲ್ಲಾ) ಅವರ ಗೋರಿಯ ಮೇಲೆ ಇರುವ ಬರಹದಲ್ಲಿ, ಇದನ್ನು 1317ರಲ್ಲಿ ನಿರ್ಮಿಸಲಾಯಿತು ಎಂದು ಉಲ್ಲೇಖಿಸಲಾಗಿದೆ ಎಂಬುದನ್ನು ಇಲಾಖೆಯು ಕೋರ್ಟ್‌ಗೆ ಸಲ್ಲಿಸಿರುವ ವರದಿಯಲ್ಲಿ ಹೇಳಿದೆ. 'ಜೀರ್ಣೋದ್ಧಾರ ಹಾಗೂ ಸಂರಕ್ಷಣೆಯ ಉದ್ದೇಶದಿಂದ ಕಟ್ಟಡಕ್ಕೆ ತಂದಿರುವ ಬದಲಾವಣೆಗಳ ಕಾರಣದಿಂದಾಗಿ ಅವುಗಳ ಐತಿಹಾಸಿಕ ಮಹತ್ವದ ಮೇಲೆ ಪರಿಣಾಮ ಉಂಟಾಗಿದೆ' ಎಂದು ವರದಿಯಲ್ಲಿ ಹೇಳಲಾಗಿದೆ.

ಗೋರಿಯು ಪೃಥ್ವಿರಾಜ ಚೌಹಾಣ್ ಅವರ ಕೋಟೆಗೆ ಸನಿಹದಲ್ಲಿ ಇದೆ. 'ಪುರಾತನ ಸ್ಮಾರಕಗಳು ಹಾಗೂ ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಕಾಯ್ದೆ'ಯ ಅನ್ವಯ 200 ಮೀಟರ್‌ಗಳ ನಿಯಂತ್ರಿತ ವಲಯದಲ್ಲಿ ಇದು ಬರುತ್ತದೆ ಎಂದು ಇಲಾಖೆ ಹೇಳಿದೆ.

ಮಹರೌಲಿ ಪುರಾತತ್ವ ಉದ್ಯಾನದಲ್ಲಿ ಇರುವ ಧಾರ್ಮಿಕ ಕಟ್ಟಡಗಳಿಗೆ ರಕ್ಷಣೆ ಕಲ್ಪಿಸಬೇಕು ಎಂದು ಜಮೀರ್ ಅಹ್ಮದ್ ಜುಮ್ಲಾನಾ ಎನ್ನುವವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ. ಅತಿಕ್ರಮಣ ತೆರವು ಮಾಡುವ ಹೆಸರಿನಲ್ಲಿ, ಐತಿಹಾಸಿಕ ಮಹತ್ವವನ್ನು ತಿಳಿದುಕೊಳ್ಳದೆಯೇ ಕಟ್ಟಡಗಳನ್ನು ಧ್ವಂಸಗೊಳಿಸಲು ದೆಹಲಿ ಅಭಿವೃದ್ಧಿ ಪ್ರಾಧಿಕಾರ (ಡಿಡಿಎ) ಯೋಜಿಸಿದೆ ಎಂದು ಅವರು ದೂರಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಕೇಶವ್ ಹೆಚ್.ಕೆ., ಆರ್‌.ಆರ್. ನಗರ, ಬೆಂಗಳೂರು.

● **ಪ್ರಶ್ನೆ: ನಾವು ಇತ್ತೀಚೆಗೆ ಭಾರಿ ಪ್ರಮಾಣದ ರಿಯಾಯಿತಿ ನೀಡುವ ಬ್ರೋಕರೇಜ್ ಕಂಪನಿಗಳ ಬಗ್ಗೆ ಕೇಳುತ್ತಿದ್ದೇವೆ. ಅವರ ಆ್ಯಪ್ ಬಳಸಿ ಷೇರು ಹೂಡಿಕೆ ಮಾಡಲು ಹೇಳುತ್ತಿದ್ದಾರೆ. ಕಳೆದ ಎರಡು ವರ್ಷದಿಂದ ಇತರ ಕಂಪನಿಗಳ ಆ್ಯಪ್ ಬಳಸುತ್ತಿದ್ದೇನೆ. ಆದರೆ, ಇವರ ಬ್ರೋಕರೇಜ್ ಶುಲ್ಕ ಹೆಚ್ಚಿದೆ. ಆದ್ದರಿಂದ ರಿಯಾಯಿತಿ ನೀಡುವ ಬ್ರೋಕರ್ ಕಂಪನಿಯನ್ನು ಆಯ್ಕೆ ಮಾಡಲು ಯೋಚಿಸುತ್ತಿದ್ದೇನೆ. ನನ್ನ ಆದಾಯಕ್ಕೆ ಸಂಬಂಧಿಸಿದಂತೆ ಅಧಿಕವಾದ ಮೊತ್ತವನ್ನು ಷೇರುಗಳಲ್ಲಿ ತೊಡಗಿಸುತ್ತಾ ಬಂದಿದ್ದೇನೆ. ನನ್ನ ಪ್ರಶ್ನೆ ಏನೆಂದರೆ ಒಂದು ವೇಳೆ ಈ ರಿಯಾಯಿತಿ ನೀಡುವ ಬ್ರೋಕರೇಜ್ ಕಂಪನಿ ಮುಚ್ಚಿ ಹೋದರೆ ನಾವು ಖರೀದಿಸಿರುವ ಷೇರುಗಳು ಏನಾಗುತ್ತವೆ? ನಾನು ನಷ್ಟ ಅನುಭವಿಸಬೇಕಾಗುತ್ತದೆಯೇ?**

ಉತ್ತರ: ಇಂದಿನ ದಿನಗಳಲ್ಲಿ ರಿಯಾಯಿತಿ ನೀಡುವ ಬ್ರೋಕರೇಜ್ ಕಂಪನಿಗಳ ಸಂಖ್ಯೆ ಹೆಚ್ಚಿದೆ. ಇದು ಒಂದು ರೀತಿಯಲ್ಲಿ ಗ್ರಾಹಕರನ್ನು ಸೆಳೆಯುವ ತಂತ್ರವಾಗಿದೆ. ಮತ್ತೊಂದೆಡೆ ಇತರ ದೊಡ್ಡ ಕಂಪನಿಗಳಿಗೆ ವ್ಯವಹಾರದಲ್ಲಿ ಭಾರಿ ಪೈಪೋಟಿ ನೀಡುವ ಉದ್ದೇಶವೂ ಇದರ ಹಿಂದಿದೆ. [illegible]

ದೇಶದಲ್ಲಿರುವ ಯಾವುದೇ ಬ್ರೋಕರೇಜ್ ಕಂಪನಿಗಳು ಷೇರುಪೇಟೆಯಲ್ಲಿ ತಮ್ಮ ಗ್ರಾಹಕರ ಷೇರುಗಳನ್ನು [illegible] ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ ಅಥವಾ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ ಎಂಬ ಡಿಪಾಸಿಟರಿಗಳಲ್ಲಿ ತಮ್ಮ ದಾಖಲಾತಿ ಹೊಂದಿರಬೇಕಾಗುತ್ತದೆ. ಇವು ಹೂಡಿಕೆದಾರರ [illegible] ಸಂಸ್ಥೆಗಳಾಗಿವೆ.

ಷೇರುಪೇಟೆಯ ಎಲ್ಲಾ ವ್ಯವಹಾರವು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ನಿಯಮಾವಳಿಗಳ ಅನ್ವಯವೇ ನಡೆಯಬೇಕಿದೆ. ಎಲ್ಲಾ ಬ್ರೋಕರೇಜ್ ಕಂಪನಿಗಳು ಪ್ರತಿದಿನದ ವಹಿವಾಟು ಮುಗಿಯುತ್ತಿದ್ದಂತೆ ಹೂಡಿಕೆದಾರರ ಷೇರುಗಳ ವರ್ಗಾವಣೆ ವ್ಯವಹಾರವನ್ನು ತಾಳೆ ಮಾಡಿ ಡಿಪಾಸಿಟರಿಗಳಿಗೆ ಮಾಹಿತಿ ನೀಡಬೇಕು. ಇಲ್ಲಿ ಬ್ರೋಕರೇಜ್ ಕಂಪನಿಗಳು ಕೇವಲ ಮಧ್ಯವರ್ತಿಯ ಪಾತ್ರವಹಿಸುತ್ತವೆ. ನಿಜ ಅರ್ಥದಲ್ಲಿ ನೀವು ಖರೀದಿಸುವ ಷೇರುಗಳು ಎಲೆಕ್ಟ್ರಾನಿಕ್ ರೂಪದಲ್ಲಿ ಡಿಪಾಸಿಟರಿಗಳ ಅಧೀನದಲ್ಲಿ ಇರುತ್ತವೆಯೇ ಹೊರತು ಬ್ರೋಕರೇಜ್ ಕಂಪನಿಗಳ ನಿಯಂತ್ರಣದಲ್ಲಿ ಇರುವುದಿಲ್ಲ.

ಬ್ರೋಕರೇಜ್ ಕಂಪನಿಗಳು ಡಿಪಾಸಿಟರಿಯ ಏಜೆಂಟ್ ಆಗಿ ಕೆಲಸ ನಿರ್ವಹಿಸುವ ಸಂಸ್ಥೆಗಳಷ್ಟೇ. ಇವು ಹೂಡಿಕೆದಾರರ ಹಾಗೂ ಡಿಪಾಸಿಟರಿಯ ನಡುವೆ ಸಂವಹನ ಕಲ್ಪಿಸುವ ದಲ್ಲಾಳಿ ಕೆಲಸವನ್ನಷ್ಟೇ ಮಾಡುತ್ತವೆ. ನೀವು ಯಾವುದೇ ಕಂಪನಿಯ ಷೇರುಗಳಲ್ಲಿ ಹೂಡಿಕೆ ಮಾಡಿದಾಗ ಲಾಭಾಂಶದ ಮಾಲೀಕರಾಗುತ್ತೀರಿ. ಡಿಪಾಸಿಟರಿಯು ಇದನ್ನು ನಿರ್ವಹಿಸುತ್ತದೆ. ನೀವು ಡಿಮ್ಯಾಟ್ ಖಾತೆ ಹೊಂದಿರುವುದು ಡಿಪಾಸಿಟರಿಗಳಲ್ಲೇ ಹೊರತು ಬ್ರೋಕರೇಜ್ ಕಂಪನಿಗಳಲ್ಲಿ ಅಲ್ಲ. ನಿಮ್ಮ ಪ್ರಶ್ನೆಯಂತೆ ಬ್ರೋಕರೇಜ್ ಸಂಸ್ಥೆಯು ದಿವಾಳಿಯಾದರೆ ಹೂಡಿಕೆದಾರರ ಖಾತೆಯ ಷೇರುಗಳನ್ನು ಅವರ ಆಯ್ಕೆಯಂತೆ ಇತರ ಯಾವುದೇ ಬ್ರೋಕರೇಜ್ ಸಂಸ್ಥೆಗಳಿಗೆ ವರ್ಗಾಯಿಸಲಾಗುತ್ತದೆ. ನೀವು ಹೊಂದಿದ ಷೇರುಗಳು ಯಾವುದೇ ರೀತಿ ನಷ್ಟವಾಗುತ್ತವೆ ಎಂಬ ಆತಂಕ ಬೇಡ.

ನಿಮ್ಮದೇ ಈ ಸಮಸ್ಯೆಯನ್ನು ಇನ್ನೂ ಒಂದು ಆಯಾಮದಿಂದ ಯೋಚಿಸೋಣ. ನಿಮ್ಮ ಷೇರು ವ್ಯವಹಾರ ಖಾತೆಯಲ್ಲಿರುವ ಹಣವನ್ನು ಬ್ರೋಕರೇಜ್ ಸಂಸ್ಥೆಯು ಅನಧಿಕೃತವಾಗಿ ಉಪಯೋಗಿಸಿದರೆ ಏನಾಗುತ್ತದೆ ಎಂಬುದು ಒಂದು ಗಂಭೀರ ಸವಾಲು. ಇಂತಹ ಸಂದರ್ಭದಲ್ಲಿ ಸೆಬಿ ತನ್ನ ಗ್ರಾಹಕ/ ಹೂಡಿಕೆದಾರರ ಹಿತ ಕಾಪಾಡಲು ಪ್ರತ್ಯೇಕವಾದ 'ಸ್ಕೋರ್' ಎಂಬ ಆ್ಯಪ್ ರೂಪಿಸಿದೆ. ಇದರ ಮೂಲಕ ಹೂಡಿಕೆದಾರರು ಸೆಬಿಯ ಅವಗಾಹನೆಗೆ ಯಾವುದೇ ವಿಚಾರಗಳನ್ನು ತರಬಹುದಾಗಿದೆ.

ಹೆಸರು, ಊರು ಬೇಡ

● **ಪ್ರಶ್ನೆ: ನಾನು ಕಳೆದ ಕೆಲವು ವರ್ಷಗಳಿಂದ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುತ್ತಿದ್ದೇನೆ. ಆದರೆ, ಕಾರಣಾಂತರದಿಂದ ಈ ಬಾರಿ ರಿಟರ್ನ್ಸ್ ಸಲ್ಲಿಸಿಲ್ಲ. ನನ್ನ ವಾರ್ಷಿಕ ಆದಾಯ ಸುಮಾರು ₹10 ಲಕ್ಷ ಇದೆ. ಇದರಲ್ಲಿ ವೇತನ ಆದಾಯವು ಒಟ್ಟಾರೆ ₹7 ಲಕ್ಷ ಇದೆ. ಅಲ್ಲದೆ, ನನ್ನ ಸ್ವಂತ ಹೆಸರಿನಲ್ಲಿ ಮನೆಯೂ ಇದ್ದು ಅಂಗಡಿಯೊಂದನ್ನು ಈ ವರ್ಷದಿಂದ ನಡೆಸುತ್ತಿದ್ದೇನೆ. ಇದರಿಂದ ವರ್ಷಕ್ಕೆ ಬರುವ ಲಾಭ ಸುಮಾರು ₹3 ಲಕ್ಷ ಆಗಿದೆ.**

ಬಹುತೇಕ ಜನರು ಫೋನ್ ಪೇ, ಗೂಗಲ್ ಪೇ ಹಾಗೂ ಭೀಮ್ ಅಪ್ಲಿಕೇಶನ್ ಮೂಲಕ ಪಾವತಿ ಮಾಡುತ್ತಾರೆ. ಅಲ್ಲದೆ ನಗದು ವ್ಯವಹಾರವೂ ಇದೆ. ನಾನು ಸಾಮಗ್ರಿಗಳ ಖರೀದಿಗೂ ಬ್ಯಾಂಕ್ ಹಾಗೂ ನಗದು ಮೂಲಕ ಪಾವತಿಸುತ್ತೇನೆ.

ನನ್ನ ಪ್ರಶ್ನೆ ಏನೆಂದರೆ ನಾನು ರಿಟರ್ನ್ಸ್ ಸಲ್ಲಿಸಲು ಡಿಸೆಂಬರ್ 31ರೊಳಗೆ ಸಾಧ್ಯವಾಗದಿದ್ದರೆ ಆಗಬಹುದಾದ ಪರಿಣಾಮ ಏನೇನು? ನನ್ನ ವ್ಯವಹಾರಕ್ಕೆ ಸಂಬಂಧಿಸಿ ಅನೇಕ ಮಾಹಿತಿ ಸಂಗ್ರಹಿಸಲು ಇನ್ನೊಂದು ತಡವಾಯಿತು. ಈ ಬಗ್ಗೆ ಸೂಕ್ತ ಮಾಹಿತಿ ನೀಡಿ.

ಉತ್ತರ: ಡಿಸೆಂಬರ್ 31 ತಡವಾಗಿ ರಿಟರ್ನ್ಸ್ ಸಲ್ಲಿಸಲು ಇರುವ ಕಾಲ ಮಿತಿಯಾಗಿದೆ. ಬಾಕಿ ತೆರಿಗೆ ಅಲ್ಲದೆ ಹೆಚ್ಚುವರಿ ಶುಲ್ಕ ₹5 ಸಾವಿರ ಪಾವತಿಸಿ ತಡವಾಗಿಯಾದರೂ ರಿಟರ್ನ್ಸ್ ಸಲ್ಲಿಸಲು ಇನ್ನೂ ಅವಕಾಶವಿದೆ. ನಿಮಗೆ ಸೆಕ್ಷನ್ 234ಎ, ಬಿ, ಸಿ ಅಡಿ ತಡವಾದ ರಿಟರ್ನ್ ಸಲ್ಲಿಕೆಗೆ ಹಾಗೂ ಯಾವುದೇ ಮುಂಗಡ ತೆರಿಗೆ ಪಾವತಿ ಬಾಕಿ ಇದ್ದರೆ ಅದಕ್ಕೂ ಬಡ್ಡಿ ತೆರಬೇಕಾಗುತ್ತದೆ. ಅಲ್ಲದೆ, ಸಾಮಾನ್ಯ ನಿಯಮದ ಪ್ರಕಾರ ಸೆಕ್ಷನ್ 44ಎಡಿ ಅಡಿ ನಿಮ್ಮ ವಹಿವಾಟಿನ ಶೇ 8 ಅಥವಾ 6ರ ದರದಲ್ಲಿ ಲಾಭ ನಿರ್ಧರಿಸಿ ತೆರಿಗೆ ನಿರ್ಣಯಿಸುವ ಅವಕಾಶ ಇದೆ.

ಆದರೆ, ನಿಗದಿತ ಗಡುವಿನ ನಂತರ (ಜುಲೈ 31) ಸಲ್ಲಿಸುವ ರಿಟರ್ನ್ಸ್‌ಗಳನ್ನು ಈ ಅವಕಾಶದಿಂದ ಹೊರಗಿಡಲಾಗಿದೆ. ನಿಮ್ಮ ವೇತನ ಆದಾಯದೊಡನೆ ವ್ಯಾಪಾರದ ಬಗೆಗಿನ ಮಾಹಿತಿಯುಳ್ಳ ರಿಟರ್ನ್ಸ್ ಸಲ್ಲಿಸಲು ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಆಕಾಶವಾಣಿ, ದೂರದರ್ಶನದಲ್ಲಿ 29,000ಕ್ಕೂ ಹೆಚ್ಚು ಹುದ್ದೆಗಳು ಖಾಲಿ

ಪ್ರತಿಭೆ ಕೊರತೆಯೇ ಭರ್ತಿಗೆ ಅಡ್ಡಿ

ವಾರ್ತಾ ಮತ್ತು ಪ್ರಸಾರ ಸಚಿವಾಲಯ ಸಬೂಬು

● ಶೆಮಿನ್ ಜಾಯ್

ನವದೆಹಲಿ: ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ವರ್ಷದಿಂದ ವರ್ಷಕ್ಕೆ ಉದ್ಯೋಗಿಗಳು ಕಡಿಮೆಯಾಗುತ್ತಲೇ ಬರುತ್ತಿದ್ದಾರೆ. ಖಾಲಿ ಹುದ್ದೆಗಳ ಭರ್ತಿ ಪ್ರಕ್ರಿಯೆಯೂ ನಡೆಯುತ್ತಿಲ್ಲ. 'ಭಾರತದ ಯುವಕರಲ್ಲಿ ಪ್ರತಿಭೆಯ ಕೊರತೆ ಇದೆ. ಆದ್ದರಿಂದ ಹುದ್ದೆಗಳು ಭರ್ತಿಯಾಗುತ್ತಿಲ್ಲ' ಎಂದು ವಾರ್ತಾ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ.

ಸಂವಹನ, ವಾರ್ತಾ ಮತ್ತು ತಂತ್ರಜ್ಞಾನ ಕುರಿತ ಸಂಸದೀಯ ಸಮಿತಿಯು ಕೇಂದ್ರ ಸರ್ಕಾರಕ್ಕೆ ಡಿಸೆಂಬರ್ 18ರಂದು ವರದಿ ಸಲ್ಲಿಸಿದ್ದು, ಕಳೆದ ಒಂದು ವರ್ಷದಲ್ಲಿಯೇ ಆಕಾಶವಾಣಿ ಹಾಗೂ ದೂರದರ್ಶನ ಸೇರಿ ಒಟ್ಟು 3,186 ಹುದ್ದೆಗಳು ಖಾಲಿಯಾಗಿವೆ ಎಂದು ಹೇಳಿದೆ. ಈ ಸಮಿತಿಗೆ ಬಿಜೆಪಿ ಸಂಸದ ನಿಶಿಕಾಂತ್ ದೂಬೆ ಅವರು ಅಧ್ಯಕ್ಷರಾಗಿದ್ದಾರೆ.

ಖಾಲಿ ಹುದ್ದೆಗಳೇ ಅಧಿಕ



ಒಟ್ಟು ಹುದ್ದೆಗಳ ವಿವರ



● 2020ರಲ್ಲಿ ಮಾನವ ಸಂಪನ್ಮೂಲದ ಆಡಿಟ್ ನಡೆದಿತ್ತು. ಕೋವಿಡ್ ಕಾರಣ ಈ ಕುರಿತು ಮುಂದೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಲಿಲ್ಲ. 2023ರಿಂದ ಈ ಬಗ್ಗೆ ಮಾರ್ಗಸೂಚಿಯೊಂದನ್ನು ರೂಪಿಸಲಾಗುತ್ತಿದೆ

● ನಿರ್ದಿಷ್ಟ ಕಾರ್ಯಕ್ರಮಗಳಿಗೆ ಹೊರಗುತ್ತಿಗೆ ನೀಡುತ್ತಿದ್ದೇವೆ. ಅಲ್ಪಾವಧಿ ಒಪ್ಪಂದದಲ್ಲಿಯೂ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ

1997ರಲ್ಲಿ ಪ್ರಸಾರ ಭಾರತಿ ಸ್ಥಾಪನೆಗೊಂಡಿದೆ. ಅಲ್ಲಿಂದ ಇಲ್ಲಿಯವರೆಗೂ ಸಿಬ್ಬಂದಿ ಕೊರತೆ ಸಮಸ್ಯೆ ಮುಂದುವರಿಯುತ್ತಲೇ ಇದೆ. ಸುಮಾರು 46 ಸಾವಿರ ಹುದ್ದೆಗಳ ಪೈಕಿ ಮೂರನೇ ಎರಡರಷ್ಟು ಹುದ್ದೆಗಳು ಆಗಿನಿಂದಲೂ ಖಾಲಿ ಉಳಿದಿವೆ. ನಿವೃತ್ತಿ ಪ್ರಮಾಣ ಹೆಚ್ಚಾಗುತ್ತಿರುವುದರಿಂದ ಖಾಲಿ ಹುದ್ದೆಗಳ ಸಂಖ್ಯೆ ಏರುತ್ತಲೇ ಇದೆ
ಗೌರವ್ ದ್ವಿವೇದಿ, ಸಿಇಒ, ಪ್ರಸಾರ ಭಾರತಿ

ನಡ್ಡಾ ನಿವಾಸದಲ್ಲಿ ಎನ್‌ಡಿಎ ನಾಯಕರ ಸಭೆ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮಶತಮಾನೋತ್ಸವ ದಿನವಾದ ಬುಧವಾರ (ಡಿ. 25), ಎನ್‌ಡಿಎ ಮೈತ್ರಿಕೂಟದ ನಾಯಕರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ನಿವಾಸದಲ್ಲಿ ಸಭೆ ನಡೆಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ, ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಜೆಡಿಯು ನಾಯಕ ರಾಜೀವ್ ರಂಜನ್ ಸಿಂಗ್, ಅಪ್ನಾ ದಳ (ಎಸ್) ಅಧ್ಯಕ್ಷೆ ಅನುಪ್ರಿಯಾ ಪಟೇಲ್, ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಮತ್ತಿತರರು ಸಭೆಯಲ್ಲಿ ಇದ್ದರು.

ಸಭೆಯಲ್ಲಿ ಯಾವ ವಿಷಯದ ಬಗ್ಗೆ ಚರ್ಚೆ ನಡೆಯಿತು ಎನ್ನುವ ಕುರಿತು ಅಧಿಕೃತ ಹೇಳಿಕೆ ಬಂದಿಲ್ಲ. ಆದರೆ ಉತ್ತಮ ಆಡಳಿತದ ಬಗ್ಗೆ ಮತ್ತು ರಾಜಕೀಯ ವಿಷಯಗಳ ಕುರಿತು ಚರ್ಚಿಸಲಾಯಿತು ಎಂದು ಮೂಲಗಳು ಹೇಳಿವೆ.

ಉತ್ತರಪ್ರದೇಶದ ನಿಷಾದ್ ಪಕ್ಷದ ಮುಖ್ಯಸ್ಥ ಸಂಜಯ್ ನಿಷಾದ್ ಅವರು, 'ಇದೊಂದು ಅನೌಪಚಾರಿಕ ಸಭೆಯಾಗಿತ್ತು' ಎಂದು ಹೇಳಿದ್ದಾರೆ. ಮೀನುಗಾರ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವ ಬಗ್ಗೆ ಚರ್ಚೆ ನಡೆಯಿತು ಎಂದು ಅವರು ತಿಳಿಸಿದ್ದಾರೆ.

ರಶ್ದಿ ಅವರ 'ಸಟಾನಿಕ್ ವರ್ಸಸ್' ಪುಸ್ತಕ ದೆಹಲಿಯಲ್ಲಿ ಮಾರಾಟ

ನವದೆಹಲಿ (ಪಿಟಿಐ): ಲೇಖಕ ಸಲ್ಮಾನ್ ರಶ್ದಿ ಅವರ 'ಸಟಾನಿಕ್ ವರ್ಸಸ್' ಪುಸ್ತಕವು 36 ವರ್ಷಗಳ ಬಳಿಕ ಮತ್ತೊಮ್ಮೆ ಭಾರತದ ಪುಸ್ತಕ ಜಗತ್ತನ್ನು ಹೊಕ್ಕಿದೆ. ರಾಜೀವ್ ಗಾಂಧಿ ಅವರ ಸರ್ಕಾರವಿದ್ದ ಅವಧಿಯಲ್ಲಿ ಈ ಪುಸ್ತಕಕ್ಕೆ ನಿಷೇಧ ಹೇರಲಾಗಿತ್ತು.

'ರಶ್ದಿ ಅವರು ಇಸ್ಲಾಂ ಅನ್ನು ಅವಹೇಳನ ಮಾಡಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿ ಜಗತ್ತಿನೆಲ್ಲೆಡೆ ಮುಸ್ಲಿಂ ಸಂಘಟನೆಗಳು ಈ ಪುಸ್ತಕ ಕುರಿತು ಭಾರಿ ವಿರೋಧ ಮಾಡಿದ್ದರು. ಈಗ ಕೆಲವು ದಿನಗಳಿಂದ ಈ ಪುಸ್ತಕವು ದೆಹಲಿ ಬಾರಿಸನ್ಸ್ ಪುಸ್ತಕ ಮಳಿಗೆಯಲ್ಲಿ ಮಾರಾಟವಾಗುತ್ತಿದೆ.

'ಕೆಲವು ದಿನಗಳಿಂದ ನಾವು ಈ ಪುಸ್ತಕವನ್ನು ಮಾರಾಟ ಮಾಡುತ್ತಿದ್ದೇವೆ. ಜನರಿಂದ ಉತ್ತಮ ಪ್ರತಿಕ್ರಿಯೆ ಲಭ್ಯವಾಗಿದೆ' ಎಂದು ಬಾರಿಸನ್ಸ್ ಪುಸ್ತಕ ಮಳಿಗೆ ಹೇಳಿದೆ. ₹1,999ಕ್ಕೆ ಪುಸ್ತಕವು ಮಾರಾಟವಾಗುತ್ತಿದೆ. ಇಷ್ಟೊಂದು ದೊಡ್ಡ ಮೊತ್ತದ ಕುರಿತು ಕೆಲ ಪುಸ್ತಕ ಪ್ರೇಮಿಗಳು ಬೇಸರ ವ್ಯಕ್ತಪಡಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ



ಎಮ್. ನಾಗಪ್ಪ
ಕ್ಲಾಸ್1, ಪಿ.ಡಬ್ಲ್ಯು.ಡಿ. ಕಂಟ್ರಾಕ್ಟರ್
337, ಸದಾಶಿವನಗರ,
ಮರಣ: 26-12-1991
ಗೌರವಾದಾರಗಳೊಂದಿಗೆ ಸ್ಮರಿಸುವ
ಕುಟುಂಬ ವರ್ಗದವರು.

mathru deva bhava
7ನೇ ವರ್ಷದ ಪುಣ್ಯಸ್ಮರಣೆ

ಪೂಜ್ಯ ಮಾತೃಶ್ರೀ ಆರ್.ಕೆ. ಕೃಷ್ಣಮ್ಮ ನವರು
(ದಿ|| ಎಸ್.ಎ. ಲಕ್ಷ್ಮಣ್ ರವರ ಧರ್ಮಪತ್ನಿ)
ದಿನಾಂಕ: 26-12-2017
ನಿಮ್ಮ ನೆನಪಲಿ ದಿನವ ಕಳೆಯುತಾ
ನಿಮ್ಮ ಆದರ್ಶಗಳನ್ನು ಸ್ಮರಿಸುತಾ
ನಿಮ್ಮ ಶ್ರೀರಕ್ಷೆಯ ಬಲದಿಂದ
ಬೆಳೆಯುತಿಹೆವು ನಾವು
ನಿಮ್ಮ ನಾಮ ಸ್ಮರಣೆಯಿಂದ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರ ಪರವಾಗಿ ನಾವು, ಕೆಳಕಂಡ ಷೆಡ್ಯೂಲ್‌ನಲ್ಲಿ ಸ್ಪಷ್ಟವಾಗಿ ವಿವರಿಸಲಾಗಿರುವ (ಷೆಡ್ಯೂಲ್ ಪ್ರಾಪರ್ಟಿ) ಕಾಡುಬೀಸನಹಳ್ಳಿ ಗ್ರಾಮ, ವರ್ತೂರ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು ವಿಳಾಸದಲ್ಲಿರುವ, ಬಿಬಿಎಂಪಿ ಖಾತಾ ನಂ. 313/19/5,19/3 ಹೊಂದಿರುವ ಸ್ಥಿರಾಸ್ತಿ ಜಮೀನು ಮತ್ತು ಸರ್ವೀಸ್ ಅಪಾರ್ಟ್‌ಮೆಂಟ್‌ಗೆ ಸಂಬಂಧಿಸಿದಂತೆ, ಕಂಪನಿಗಳ ಕಾಯ್ದೆ, 1956ರ ಅಡಿಯಲ್ಲಿ ಸ್ಥಾಪನೆಗೊಂಡಿರುವ, ಸಿಐಎನ್ L72200TG1990PLC011146 ಹೊಂದಿರುವ, ನಾಗಾರ್ಜುನ ಹಿಲ್ಸ್, ಪಂಜಗುಟ್ಟ, ಹೈದರಾಬಾದ್ ವಿಳಾಸದಲ್ಲಿ ತನ್ನ ನೋಂದಾಯಿತ ಕಚೇರಿಯುಳ್ಳ ಮತ್ತು # 301, ಬಟಾವಿಯಾ ಚೇಂಬರ್ಸ್, 8 ಕುಮಾರ ಕೃಪಾ ರಸ್ತೆ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-560001 ಶಾಖಾ ಕಚೇರಿ ಹೊಂದಿರುವ, ಎನ್‌ಸಿಸಿ ಲಿಮಿಟೆಡ್ (ಹಿಂದಿನ ನಾಗಾರ್ಜುನ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿನ) [ಕಂಪನಿ] ಎಂಬ ಸಂಸ್ಥೆಯ ಮಾಲೀಕತ್ವ, ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿಗಳನ್ನು ಪರಿಶೋಧನೆ ಮಾಡುತ್ತಿದ್ದೇವೆ.
ಮೇಲ್ಕಂಡ ಷೆಡ್ಯೂಲ್ ಪ್ರಾಪರ್ಟಿಯ ಮೇಲೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗದ ಮೇಲಾಗಲಿ ಅಥವಾ ಕಂಪನಿಯ ವಿರುದ್ಧ ಯಾವುದೇ ಸ್ವರೂಪದಲ್ಲಿ, ಯಾವುದೇ ವ್ಯಕ್ತಿ, ಸಂಘ, ಸಂಸ್ಥೆಗಳು (ಕಾರ್ಪೊರೇಟ್ ಅಥವಾ ಇನ್ನಿತರೆ) ಯಾವುದೇ ರೀತಿಯ ಕ್ಲೇಮ್, ಹಕ್ಕು, ಅಧಿಕಾರ, ಹಿತಾಸಕ್ತಿ, ಪಾಲು, ಪ್ರಯೋಜನ, ಬಾಕಿ ವ್ಯಾಜ್ಯ, ಆಕ್ಷೇಪಣೆ ಅಥವಾ ಯಾವುದೇ ಸ್ವರೂಪದ (ಕ್ಲೇಮ್ಸ್) ಡಿಮಾಂಡ್ ಹೊಂದಿದ್ದರೆ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ 14 (ಹದಿನಾಲ್ಕು) ದಿನಗಳೊಳಗೆ ತಮ್ಮ ಆಕ್ಷೇಪಣೆಗಳನ್ನು ಕೆಳಕಂಡ ಸಹಿದಾರರಿಗೆ ಲಿಖಿತ ರೂಪದಲ್ಲಿ ಪೂರಕ ದಾಖಲಾತಿಗಳ ಸಮೇತ ಮಾಹಿತಿ ನೀಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಮೇಲ್ಕಂಡ ಕಂಪನಿಯ ಮಾಲೀಕತ್ವ ಮತ್ತು ಅಧಿಕಾರ ಸ್ಪಷ್ಟವಾಗಿದೆ, ವ್ಯಾಪಾರಕ್ಕೆ ಯೋಗ್ಯವಾಗಿದೆ ಹಾಗೂ ಯಾವುದೇ ರೀತಿಯ ಋಣಭಾರಗಳಿಂದ ಮುಕ್ತವಾಗಿದೆ, ಜಮೀನಿನ ಮೇಲೆ ಅಥವಾ ಜಮೀನಿನ ಯಾವುದೇ ಭಾಗದಲ್ಲಿ ಇನ್ನಿತರ ಯಾವುದೇ ಅನ್ಯ ವ್ಯಕ್ತಿಯ ಹಕ್ಕು, ಅಧಿಕಾರ ಅಥವಾ ಹಿತಾಸಕ್ತಿಗಳು ಇರುವುದಿಲ್ಲವೆಂದು ಪರಿಗಣಿಸಲಾಗುತ್ತದೆ ಮತ್ತು ನಮ್ಮ ಕಕ್ಷಿದಾರರು ಸದರಿ ಕಂಪನಿಯಿಂದ ಷೆಡ್ಯೂಲ್ ಪ್ರಾಪರ್ಟಿ ಖರೀದಿಸಲು ಮುಂದಾಗುತ್ತಾರೆ. ಒಂದು ವೇಳೆ, ಈ ಪ್ರಕಟಣೆಯ ದಿನಾಂಕದಿಂದ 14 (ಹದಿನಾಲ್ಕು) ದಿನಗಳ ಅವಧಿಯ ನಂತರದಲ್ಲಿ ಯಾವುದೇ ಕ್ಲೇಮ್‌ಗಳು ಅಥವಾ ಆರೋಪಿತ ಹಿತಾಸಕ್ತಿಗಳು ಏನಾದರು ಎದುರಾದರೆ, ಅವುಗಳನ್ನು ವಿವೇಚನಾಪೂರ್ವಕವಾಗಿಯೇ ಕೈಬಿಡಲಾಗುತ್ತದೆ ಮತ್ತು ಎಲ್ಲಾ ಉದ್ದೇಶಗಳಿಂದ ಅವನ್ನು ನಿರ್ಲಕ್ಷಿಸಲಾಗುತ್ತದೆ ಹಾಗೂ ಅವುಗಳು ನಮ್ಮ ಕಕ್ಷಿದಾರರ ಮೇಲೆ ಯಾವುದೇ ನಿರ್ಬಂಧಗಳನ್ನು ರೂಪಿಸಲಾಗುವುದಿಲ್ಲ.

ಷೆಡ್ಯೂಲ್

ಕಾಡುಬೀಸನಹಳ್ಳಿ ಗ್ರಾಮ, ವರ್ತೂರ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು ವಿಳಾಸದ ಸರ್ವೆ ನಂ. 19/5ರ (ಹಳೆಯ ಸರ್ವೆ ನಂ. 19/3ರ ಭಾಗವಾಗಿರುವ) ಭಾಗವಾಗಿರುವ, ಬಿಬಿಎಂಪಿ ಖಾತಾ ನಂ. 313/19/5,19/3 ಹೊಂದಿರುವ (ಹಿಂದೆ ಗ್ರಾಮ ಪಂಚಾಯಿತಿ ಖಾತಾ ನಂ. 155 ಹೊಂದಿದ್ದ), 32 ಗುಂಟಾ ವಿಸ್ತೀರ್ಣದಲ್ಲಿ ಸ್ಥಿತಗೊಂಡಿರುವ, ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆಗೊಂಡಿರುವ ಜಮೀನು ಮತ್ತು ಅದರಲ್ಲಿರುವ ಬೇಸ್‌ಮೆಂಟ್, ನೆಲಮಹಡಿ ಮತ್ತು 3 (ಮೂರು) ಮೇಲ್ಮಹಡಿಗಳ ಸಮೇತ ಒಟ್ಟು 68 (ಅರವತ್ತೆಂಟು) ಯೂನಿಟ್‌ಗಳನ್ನು ಹೊಂದಿರುವ ಸರ್ವೀಸ್ ಅಪಾರ್ಟ್‌ಮೆಂಟ್ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:– ಪೂರ್ವಕ್ಕೆ: ಖಾಸಗಿ ಸ್ವತ್ತು; ಪಶ್ಚಿಮಕ್ಕೆ: ಸರ್ವೆ ನಂ. 19/3 ರಲ್ಲಿರುವ ಜಮೀನು; ಉತ್ತರಕ್ಕೆ: ಬಿಡಿಎ ರಸ್ತೆ; ಮತ್ತು ದಕ್ಷಿಣಕ್ಕೆ: ಖಾಸಗಿ ಸ್ವತ್ತು.

ಮೃದುಲ್ ಕುಂಬಲತ್, ಪಾಲುದಾರರು ಟ್ರೈಲೀಗಲ್
ವಕೀಲರು ಮತ್ತು ಸಾಲಿಸಿಟರ್
ಟ್ರೈಲೀಗಲ್, 7ನೇ ಮಹಡಿ, ಮಾರ್ಕ್‌ಸ್ಕ್ವೇರ್, ನಂ. 61, ಸೈಂಟ್ ಮಾರ್ಕ್ಸ್ ರಸ್ತೆ, ಬೆಂಗಳೂರು-560001, ಕರ್ನಾಟಕ. ಫೋನ್: 080-43434646
ಇಮೇಲ್: mridul.kumbalath@trilegal.com
ಸ್ಥಳ: ಬೆಂಗಳೂರು ದಿನಾಂಕ: 26-12-2024
ROUNAQH

ಕರ್ನಾಟಕ ಪೋಸ್ಟಲ್ ಅಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್.,
ನಂ.7, ಸಂದೇಶ್ ಭವನ್, 3ನೇ ಮುಖ್ಯ ರಸ್ತೆ, 1ನೇ ಹಂತ, ಪೋಸ್ಟಲ್ ಕಾಲೋನಿ, ಸಂಜಯನಗರ, ಬೆಂಗಳೂರು- 94
ಈ ಸಂಘದ 5 ವರ್ಷಗಳ ಅವಧಿಯ ಆಡಳಿತ ಮಂಡಳಿ ಚುನಾವಣಾ ಪ್ರಕಟಣೆ.
ಅ) ಚುನಾವಣೆಯಲ್ಲಿ ಸ್ಪರ್ಧಿಸುವ ಸದಸ್ಯರುಗಳು ನಾಮಪತ್ರಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ: 28-12-2024 ಮತ್ತು ಕಡೆಯ ದಿನಾಂಕ: 03-01-2025 (ಶುಕ್ರವಾರ) ಮಧ್ಯಾಹ್ನ 3-00 ಗಂಟೆಯವರೆಗೆ.
ಆ) ನಾಮಪತ್ರಗಳನ್ನು ವಾಪಸ್ ಪಡೆಯಲು ಕೊನೆಯ ದಿನಾಂಕ: 05-01-2025 [illegible] ಗಂಟೆಯವರೆಗೆ.
[illegible] ಅಧಿಕಾರಿಯವರು ಅನುಮೋದಿಸಿರುವ ಅರ್ಹತಾ [illegible] ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಲು ಹಾಗೂ ಮತ [illegible]
[illegible] ನಡೆಸುವ ದಿನಾಂಕ: 11-01-2025 (ಶನಿವಾರ) [illegible] 4-00 ಗಂಟೆಯವರೆಗೆ, ಸ್ಥಳ: ರಮಣ ಮಹರ್ಷಿ [illegible], ಪೋಸ್ಟ್ ಆಫೀಸ್ ರಸ್ತೆ, ಸಂಜಯನಗರ, [illegible] ನಡೆಯಲಿದೆ.
[illegible] ಇದ್ದ ಸದಸ್ಯರು ಇದೇ ಆಹ್ವಾನ ಪತ್ರಿಕೆಯೆಂದು [illegible] ಭಾಗವಹಿಸಿ ಯಶಸ್ವಿಯಾಗಿ ನಡೆಸಿಕೊಡಲು [illegible]
ಸಹಿ/- (ಹಮೀದುಲ್ಲಾ ಖಾನ್)
ಚುನಾವಣಾ ಅಧಿಕಾರಿ

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ
Astrology
★||ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್||★ ಕೇರಳ_ಅಘೋರಿ_ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ_ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು`ನಿಜ_ನಂಬಿ`ಕರೆಮಾಡಿ. ಪಂಡಿತ್. ಅಮರ್‌ನಾಥ್‌ಭಟ್. 9972407122

ಭಾರತದ ಪ್ರಖ್ಯಾತ ಬುಡಬುಡಿಕೆ ಜನಾಂಗದ ಲಕ್ಷಾಂತರ ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಬಾಬಾ.ಶ್ರೀ.ದೇವಾನಂದನರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ ಪರಿಹಾರ. ಮಹಮ್ಮಾಯಿ, ಮನ್ಮೋಹಿನಿಮೋಡಿ ವಶೀಕರಣಗಳಿಗೆ #100,ರಾಹೇಜಪಾರ್ಕ್ ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

ಪ್ರವಾಸ
Travel Agencies
ನೇಪಾಳ ಪ್ರವಾಸ ಮುಕ್ತಿನಾಥ ಪಶುಪತಿನಾಥ ಪೋಕ್ರ ಕಟ್ಮಂಡು ಅಯೋಧ್ಯ 9 ದಿನಗಳು 18/01/25 ಶ್ರೀಲಂಕಾ ಪ್ರವಾಸ ರಾಮಾಯಣ ಸ್ಥಳಗಳು ಸೇರಿ 8 ದಿನಗಳು 18/01/25 ಸುವರ್ಣಯಾತ್ರ 6360146483/ 9019462508

Travel
17.02.2025ರಿಂದ 17 ದಿನಗಳ ಭುವನೇಶ್ವರ್,ಕೋನಾರ್ಕ್, ಪೂರಿಜಗನ್ನಾಥ್,ಗಯಾ, ನೇಪಾಳ,ಕಾಶಿ, ಅಲಹಾಬಾದ್, ಅಯೋಧ್ಯೆ. ಮಹಾಶಿವರಾತ್ರಿಯೆಂದು ನೇಪಾಳ ಪಶುಪತಿನಾಥ್ ದರ್ಶನ, ಪೋಖ್ರಾ, ಮುಕ್ತಿನಾಥ್. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು-70. 9342287551, 8050629305

ಉದ್ಯೋಗಾವಕಾಶ
General
WANTED TELECALLER and therapist for professional spa in Hubli Contact 9353991762

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿಇದೆ13,000-17,000, 8951315839, 9141634619

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಓದುಗರ ಗಮನಕ್ಕೆ
[illegible]

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
www.dhclassifieds.com
BOOK NOW
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331
9901641752

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಬಾಕ್ಸಿಂಗ್ ಡೇ ಟೆಸ್ಟ್ ಇಂದಿನಿಂದ: ಹೆಡ್ ಮೇಲೆ ಕಣ್ಣು • ಬೂಮ್ರಾ, ರಾಹುಲ್ ಮೇಲೆ ಭರವಸೆ

ಜಯದ ಲಯಕ್ಕೆ ಮರಳುವ ಛಲ

• ಮಧು ಜವಳಿ

ಮೆಲ್ಬರ್ನ್: ಬಾರ್ಡರ್–ಗಾವಸ್ಕರ್ ಟ್ರೋಫಿಯ ಮೊದಲೆರಡು ಪಂದ್ಯಗಳಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳು ತಲಾ ಒಂದೊಂದು ಜಯವನ್ನು ಸಾಧಿಸಿವೆ. ಮಳೆಯ ಅಡೆತಡೆಯ ನಡುವೆ ನಡೆದ ಮೂರನೇ ಪಂದ್ಯದ ಬಹುತೇಕ ಅವಧಿಯಲ್ಲಿ ಆತಿಥೇಯ ತಂಡವು ಹಿಡಿತ ಸಾಧಿಸಿತ್ತು. ಆದರೂ ಫಾಲೋ ಆನ್ ತಪ್ಪಿಸಿಕೊಂಡ ಭಾರತ, ಎರಡನೇ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾದ ಆರು ವಿಕೆಟ್‌ಗಳನ್ನು ಬೇಗನೆ ಉರುಳಿಸಿ ಒತ್ತಡ ಹಾಕಿತ್ತು.

ಇದುವರೆಗೆ ನಡೆದ ಸರಣಿಯಲ್ಲಿ ಜಿದ್ದಾಜಿದ್ದಿನ ಹೋರಾಟ ಎರಡೂ ಕಡೆಯಿಂದ ಕಂಡುಬಂದಿದೆ. ಮೂರು ಪಂದ್ಯಗಳ ನಂತರ 1–1ರ ಸಮಬಲದಲ್ಲಿದೆ. ಕೆಲವು ಆಟಗಾರರ ವೈಯಕ್ತಿಕ ಸಾಮರ್ಥ್ಯ, ತಂಡದ ಹೋರಾಟ ಮತ್ತು ಮನೋಬಲದ ಪ್ರಭಾವಗಳು ಎದ್ದು ಕಂಡಿವೆ.

ಮೆಲ್ಬರ್ನ್ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾಗಲಿರುವ ನಾಲ್ಕನೇ ಪಂದ್ಯದಲ್ಲಿ 90 ಸಾವಿರ ಪ್ರೇಕ್ಷಕರ ಮುಂದೆ ಹಣಾಹಣಿ ನಡೆಸಲು ಉಭಯ ತಂಡಗಳು ಸಿದ್ಧವಾಗಿವೆ. ಬಾಕ್ಸಿಂಗ್ ಡೇ ಟೆಸ್ಟ್ ಪಂದ್ಯದಲ್ಲಿ ಜಯಿಸುವ ಮೂಲಕ ಸರಣಿ ಗೆಲುವಿನ ಅವಕಾಶವನ್ನು ಗಟ್ಟಿಗೊಳಿಸುವತ್ತ ಎರಡೂ ತಂಡಗಳು ಚಿತ್ತ ನೆಟ್ಟಿವೆ.

ಬ್ರಿಸ್ಬೇನ್‌ನಲ್ಲಿ ಫಾಲೋಆನ್ ತಪ್ಪಿಸಿಕೊಂಡ ಸಂದರ್ಭದಲ್ಲಿ ಭಾರತದ ಆಟಗಾರರು ಡ್ರೆಸಿಂಗ್ ರೂಮ್‌ನಲ್ಲಿ ಸಂಭ್ರಮಿಸಿದ ದೃಶ್ಯ ಚರ್ಚೆಗೆ ಗ್ರಾಸವಾಯಿತು. ಆದರೆ ಇದನ್ನು ಭಾರತದ ದುರ್ಬಲ ಮನೋಭಾವದ ಸಂಕೇತ ಎಂದು ಆಸ್ಟ್ರೇಲಿಯಾ ಭಾವಿಸುವ ಸಾಧ್ಯತೆಯೂ ಇದೆ. ಏಕೆಂದರೆ ರೋಹಿತ್ ಬಳಗದ ಅಗ್ರಶ್ರೇಯಾಂಕದ ಬ್ಯಾಟರ್‌ಗಳು ಪಂದ್ಯದ ನಾಲ್ಕನೇ ದಿನ ಬ್ಯಾಟಿಂಗ್ ಮಾಡಲು ಹಿಂದೇಟು ಹಾಕುವ ಮನಸ್ಥಿತಿಯನ್ನು ಆ ಸಂಭ್ರಮಾಚರಣೆ ಬಿಂಬಿಸಿತ್ತು.

ಇದೆಲ್ಲದರ ಹೊರತಾಗಿಯೂ ಎಲ್ಲರಿಗಿಂತ ವಿಭಿನ್ನವಾಗಿ ತಮ್ಮ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಪಣಕ್ಕೊಡುವವರಿಂದಾಗಿ ತಂಡವು ಉತ್ತಮ ಫಲಿತಾಂಶ ಪಡೆಯಲು ಸಾಧ್ಯ ಎಂಬುದಕ್ಕೆ ಈ ಸರಣಿಯಲ್ಲಿ ಕೆಲವು ನಿದರ್ಶನಗಳಿವೆ. ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಈ ಮಾತಿಗೆ ಪ್ರಮುಖ ಉದಾಹರಣೆಯಾಗುತ್ತಾರೆ. ಅವರು ಒಟ್ಟು 409 ರನ್‌ಗಳನ್ನು ಕಲೆಹಾಕಿದ್ದಾರೆ. 81.80ರ ಸರಾಸರಿ ಮತ್ತು 94.23 ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದಾರೆ. ಇದರಿಂದಾಗಿ ಆಸ್ಟ್ರೇಲಿಯಾದ ಮಧ್ಯಮ ಕ್ರಮಾಂಕದ ಮೇಲಿನ ಒತ್ತಡವನ್ನು ಅವರು ಶಮನಗೊಳಿಸಿದ್ದಾರೆ. ಇದರಿಂದ ಆಸ್ಟ್ರೇಲಿಯಾದ ಬೌಲಿಂಗ್ ಪಡೆಗೆ ಭಾರತದ ಬ್ಯಾಟರ್‌ಗಳನ್ನು ಕಟ್ಟಿಹಾಕಲು ಬಹಳಷ್ಟು ಸಮಯ ಸಿಗುತ್ತಿದೆ. ಆತಿಥೇಯ ಬೌಲರ್‌ಗಳಲ್ಲಿ ಮಿಚೆಲ್ ಸ್ಟಾರ್ಕ್ ಅಮೋಘ ಲಯದಲ್ಲಿದ್ದಾರೆ.

ಅಲೆಕ್ಸ್ ಕ್ಯಾರಿ (162 ರನ್) ಆಸ್ಟ್ರೇಲಿಯಾದ ಪರ ಹೆಚ್ಚು ರನ್ ಕಲೆಹಾಕಿರುವ ಬ್ಯಾಟರ್‌ಗಳಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಬ್ರಿಸ್ಬೇನ್ ಪಂದ್ಯದ ನಂತರ ಗಾಯಗೊಂಡಿದ್ದ ಹೆಡ್ ಚೇತರಿಸಿಕೊಂಡಿದ್ದಾರೆ. ಅವರು ಈ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದಾರೆ. ತಮ್ಮ ಪದಾರ್ಪಣೆ ಸರಣಿಯಲ್ಲಿ ಸಿಕ್ಕ ಅವಕಾಶಗಳನ್ನು ಬಳಸಿಕೊಳ್ಳದ ನೇಥನ್ ಮೆಕ್ ಸ್ವೀನಿ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಅವರ ಬದಲಿಗೆ 19 ವರ್ಷ ವಯಸ್ಸಿನ ಸ್ಯಾಮ್ ಕೊನಾಸ್ಟಸ್ ಇನಿಂಗ್ಸ್ ಆರಂಭಿಸಲಿದ್ದಾರೆ. ಉಸ್ಮಾನ್ ಖ್ವಾಜಾ ಲಯದಲ್ಲಿ ಇಲ್ಲ. ಇದುವರೆಗೆ ಕೇವಲ 63 ರನ್ ಸೇರಿಸಿದ್ದಾರೆ. ಸ್ಟೀವ್ ಸ್ಮಿತ್ ಮತ್ತು ಮಾರ್ನಸ್ ಲಾಬುಷೇನ್ ಲಯದಲ್ಲಿ ಏರಿಳಿತಗಳು ಇವೆ.

ಬೌಲಿಂಗ್ ವಿಭಾಗದಲ್ಲಿ ಜೋಷ್ ಹ್ಯಾಜಲ್‌ವುಡ್ ಗಾಯಗೊಂಡು ಹೊರಬಿದ್ದಿದ್ದಾರೆ. ಅವರ ಜಾಗದಲ್ಲಿ ಸ್ಕಾಟ್ ಬೊಲ್ಯಾಂಡ್ ಆಡಲಿದ್ದಾರೆ. ಇನ್ನೊಂದೆಡೆ ಭಾರತ ತಂಡದ ಬೌಲಿಂಗ್ ಜಸ್‌ಪ್ರೀತ್ ಬೂಮ್ರಾ ಅವರ ಮೇಲೆ ಅವಲಂಬಿತವಾಗಿದೆ. ಅವರು ಈ ಸರಣಿಯಲ್ಲಿ ಅತಿ ಹೆಚ್ಚು ವಿಕೆಟ್ (21) ಗಳಿಸಿರುವ ಬೌಲರ್ ಆಗಿದ್ದಾರೆ. ಅವರ ಸ್ಪೆಲ್‌ಗಳು ಎದುರಾಳಿಗೆ ಕಬ್ಬಿಣದ ಕಡಲೆಗಳಾಗಿವೆ.

ಕೆ.ಎಲ್. ರಾಹುಲ್ (283) ಭಾರತದ ಪರ ಹೆಚ್ಚು ರನ್ ಗಳಿಸಿರುವ ಬ್ಯಾಟರ್. ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್ ಮತ್ತು ರಿಷಭ್ ಪಂತ್ ಅವರು ಸ್ಥಿರವಾದ ಲಯ ಕಂಡುಕೊಳ್ಳಲು ಪರದಾಡುತ್ತಿದ್ದಾರೆ. ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ವೈಫಲ್ಯವು ತಂಡವನ್ನು ಕಾಡುತ್ತಿರುವುದು ಸುಳ್ಳಲ್ಲ. ಒಂದೊಮ್ಮೆ ರೋಹಿತ್ ಇನಿಂಗ್ಸ್ ಆರಂಭಿಸಿದರೆ, ರಾಹುಲ್ ಅವರನ್ನು 3ನೇ ಕ್ರಮಾಂಕದಲ್ಲಿ ಬ್ಯಾಟ್ ಮಾಡಬೇಕಾಗಬಹುದು. ಆದರೆ ಈ ನಡೆಯು ತಂಡಕ್ಕೆ ಆತಂಕಕಾರಿಯಾಗಬಹುದು.

ಬೌಲಿಂಗ್‌ನಲ್ಲಿ ಬದಲಾವಣೆಯ ಮಾತುಗಳೂ ಕೇಳಿಬರುತ್ತಿವೆ. ನಿತೀಶ್ ಕುಮಾರ್ ರೆಡ್ಡಿ ಬದಲಿಗೆ ಪ್ರಸಿದ್ಧಕೃಷ್ಣಗೆ ಅವಕಾಶ ಕೊಡಬಹುದು. ಆದರೆ ನಿತೀಶ್ ಅವರು ಬ್ಯಾಟಿಂಗ್ ಮೂಲಕವೂ ಕಾಣಿಕೆ ಕೊಟ್ಟಿದ್ದಾರೆ. ಆ ಅಂಶವನ್ನೂ ಆಯ್ಕೆಗಾರರು ಪರಿಗಣಿಸಬಹುದು. ಅದರಿಂದಾಗಿ ನಿತೀಶ್ ಬದಲಿಗೆ ಸ್ಪಿನ್–ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರಿಗೆ ಸ್ಥಾನ ಸಿಗಬಹುದು. ಇಲ್ಲಿ ಒಣಹವೆ ಹೆಚ್ಚು ಇರುವುದರಿಂದ ಪಿಚ್ ಬೇಗನೆ ಶುಷ್ಕವಾಗಬಹುದು. ಆದ್ದರಿಂದ ಸ್ಪಿನ್ನರ್‌ಗಳಿಗೆ ಅನುಕೂಲವಾಗಬಹುದು ಎನ್ನಲಾಗಿದೆ. ಇದರಿಂದಾಗಿ ರವೀಂದ್ರ ಜಡೇಜ ಮತ್ತು ವಾಷಿಂಗ್ಟನ್ ಜೊತೆಯಾಗಿ ಕಣಕ್ಕಿಳಿಯಬಹುದು. ಇಲ್ಲಿ ಕಳೆದ ಎರಡು ಸಲ ಭಾರತ ಗೆದ್ದಾಗ ಜಡೇಜ ಮತ್ತು ರವಿಚಂದ್ರನ್ ಅಶ್ವಿನ್ (2018, 2020) ಆಡಿದ್ದರು.

ಪಂದ್ಯ ಆರಂಭ: ಬೆಳಿಗ್ಗೆ 5

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್



ಪ್ಯಾಟ್ ಕಮಿನ್ಸ್

ದಾಖಲೆಯತ್ತ ರಾಹುಲ್, ರಿಷಭ್

14

ಕೆ.ಎಲ್. ರಾಹುಲ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ಆರಂಭಿಕ ಬ್ಯಾಟರ್ ಆಗಿ ಗಳಿಸಿರುವ ಅರ್ಧಶತಕಗಳು. ಇನ್ನೊಂದು ಇನಿಂಗ್ಸ್‌ನಲ್ಲಿ 50 ರನ್ ಗಳಿಸಿದರೆ ಅವರು ಆಸ್ಟ್ರೇಲಿಯಾ ಎದುರು 15ಕ್ಕಿಂತ ಹೆಚ್ಚು ಅರ್ಧಶತಕ ಗಳಿಸಿದವರ ಸಾಲಿಗೆ ಸೇರುವರು. ಸಚಿನ್ ತೆಂಡೂಲ್ಕರ್ (42), ವೀರೇಂದ್ರ ಸೆಹ್ವಾಗ್ (29), ಗೌತಮ್ ಗಂಭೀರ್ (22), ಚೇತನ್ ಚೌಹಾಣ್ (16), ನವಜ್ಯೋತ್ ಸಿಂಗ್ ಸಿಧು (15) ಮತ್ತು ಮುರಳಿ ವಿಜಯ್ (15) ಅವರಿದ್ದಾರೆ.

849

ಕೆ.ಎಲ್. ರಾಹುಲ್ ಅವರು ಆಸ್ಟ್ರೇಲಿಯಾ ಎದುರು ಆರಂಭಿಕ ಬ್ಯಾಟರ್ ಆಗಿ ಟೆಸ್ಟ್ ಕ್ರಿಕೆಟ್‌ನಲ್ಲಿ ಗಳಿಸಿರುವ ರನ್‌ಗಳು. ಇನ್ನು 51 ರನ್ ಸೇರಿಸಿದರೆ 900ರ ಮೊತ್ತ ತಲುಪುವರು. ಈ ಸಾಧನೆ ಮಾಡಿದ ಭಾರತದ ನಾಲ್ಕನೇ ಬ್ಯಾಟರ್ ಎನಿಸುವರು. ವೀರೇಂದ್ರ ಸೆಹ್ವಾಗ್ (1738), ಸುನಿಲ್ ಗಾವಸ್ಕರ್ (1550), ಮುರಳಿ ವಿಜಯ್ (1324) ಅವರು ಈ ಪಟ್ಟಿಯಲ್ಲಿದ್ದಾರೆ.



47

ವಿಕೆಟ್‌ಕೀಪರ್ ರಿಷಭ್ ಪಂತ್ ಅವರು ಆಸ್ಟ್ರೇಲಿಯಾ ಎದುರು ಇಲ್ಲಿಯವರೆಗೆ ಒಟ್ಟು 47 ಬಲಿ ಪಡೆದಿದ್ದಾರೆ. ಇನ್ನು 3 ವಿಕೆಟ್ ಗಳಿಸಿದರೆ ಅವರು 'ಅರ್ಧಶತಕ' ಸಾಧಿಸಿದ ಭಾರತದ ಎರಡನೇ ವಿಕೆಟ್‌ಕೀಪರ್ ಆಗಲಿದ್ದಾರೆ. ಮಹೇಂದ್ರಸಿಂಗ್ ಧೋನಿ (71) ಮೊದಲ ಸ್ಥಾನದಲ್ಲಿದ್ದಾರೆ.

ಮಾಹಿತಿ: ಎಚ್.ಆರ್. ಗೋಪಾಲಕೃಷ್ಣ

ಭಾರತ ತಂಡದ ಆಟಗಾರ ಕೆ.ಎಲ್. ರಾಹುಲ್ —ಎಎಫ್‌ಪಿ ಚಿತ್ರ

ಕುಟುಂಬ ಸಮ್ಮಿಲನ

ಮೆಲ್ಬರ್ನ್ (ಪಿಟಿಐ): ಬಾಕ್ಸಿಂಗ್ ಡೇ ಟೆಸ್ಟ್ ಆರಂಭವಾಗುವ 24 ಗಂಟೆಗಳ ಮುನ್ನ ಮೆಲ್ಬರ್ನ್ ಕ್ರಿಕೆಟ್ ಮೈದಾನ (ಎಂಸಿಜಿ)ದಲ್ಲಿ ಮಕ್ಕಳ ಕಲರವ ತುಂಬಿತ್ತು. ಹಬ್ಬದ ಸಡಗರ ಎಲ್ಲೆಡೆಯೂ ರಂಗೇರಿತ್ತು. ಹೌದು; ಬುಧವಾರ ಇಲ್ಲಿ ಆಸ್ಟ್ರೇಲಿಯಾ ತಂಡದ ಕುಟುಂಬದ ಸದಸ್ಯರ ಸಮ್ಮಿಲನ ನಡೆಯಿತು. ಪ್ರತಿವರ್ಷ ಕ್ರಿಸ್‌ಮಸ್ ದಿನ ವಾರ್ಷಿಕ ಕಾರ್ಯಕ್ರಮವಾಗಿ ತಂಡದ ಆಟಗಾರರ ಕುಟುಂಬಗಳು ಸೇರಿ ನಲಿಯುವ ಸಂಪ್ರದಾಯವಿದೆ. ನಾಯಕ ಪ್ಯಾಟ್ ಕಮಿನ್ಸ್ ಅವರ ಮಡದಿ ಬೆಕಿ ಮತ್ತು ಮಿಚೆಲ್ ಮಾರ್ಷ್ ಅವರ ಅರ್ಧಾಂಗಿ ಗ್ರೇಟಾ ಅವರು ತಮ್ಮ ಮಕ್ಕಳೊಂದಿಗೆ ನಲಿಯುತ್ತಿದ್ದ ದೃಶ್ಯಗಳು ಗಮನ ಸೆಳೆದವು. ಬ್ಯಾಟರ್ ಸ್ಟೀವ್ ಸ್ಮಿತ್ ತಮ್ಮ ತಂದೆಯೊಂದಿಗೆ ಬಂದಿದ್ದರು. ಆ್ಯಂಡ್ರ್ಯೂ ಮೆಕ್‌ಡೊನಾಲ್ಡ್ ಅವರ ಹದಿಹರೆಯದ ಮಗ ಒಲೀ ನೆಟ್ಸ್‌ನಲ್ಲಿ ಥ್ರೋಡೌನ್ ಪರಿಣತರಿಂದ ಎಸೆತಗಳನ್ನು ಎದುರಿಸುತ್ತಿದ್ದರು.

ರ‍್ಯಾಂಕಿಂಗ್: ಅಶ್ವಿನ್ ದಾಖಲೆ ಸರಿಗಟ್ಟಿದ ಜಸ್‌ಪ್ರೀತ್ ಬೂಮ್ರಾ

ದುಬೈ(ಪಿಟಿಐ): ಭಾರತದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅಂತರ ರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಬಿಡುಗಡೆ ಮಾಡಿರುವ ಟೆಸ್ಟ್ ರ‍್ಯಾಂಕಿಂಗ್ ಬೌಲರ್‌ಗಳ ವಿಭಾಗದಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ಜತೆಗೆ ಐಸಿಸಿ ರ‍್ಯಾಂಕಿಂಗ್‌ನಲ್ಲಿ 904 ಪಾಯಿಂಟ್ಸ್ ಗಳಿಸಿದ ಸಾಧನೆ ಮಾಡಿದ್ದು ಭಾರತೀಯ ಬೌಲರ್‌ಗಳ ಪೈಕಿ ಮಾಜಿ ಸ್ಪಿನ್ನರ್ ಆರ್. ಅಶ್ವಿನ್ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ.

ಬ್ರಿಸ್ಬೇನ್‌ನಲ್ಲಿ ಇತ್ತೀಚೆಗೆ ನಡೆದ ಮೂರನೇ ಟೆಸ್ಟ್ ಪಂದ್ಯದಲ್ಲಿ ಬೂಮ್ರಾ 9 ವಿಕೆಟ್ ಪಡೆದು 14 ರೇಟಿಂಗ್ ಅಂಕ ಪಡೆದರು.

ಬೂಮ್ರಾ

ಅಂತರ ರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಘೋಷಿಸಿದ ಆಫ್ ಸ್ಪಿನ್ನರ್ ಆರ್. ಅಶ್ವಿನ್ 2016ರ ಡಿಸೆಂಬರ್‌ನಲ್ಲಿ ಇದೇ ಸಾಧನೆ ಮಾಡಿದ್ದರು. ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ (856 ಪಾಯಿಂಟ್ಸ್) ಎರಡನೇ ಸ್ಥಾನದಲ್ಲಿದ್ದಾರೆ. ಇವರಿಗಿಂತ ಬೂಮ್ರಾ ತಮ್ಮ ಸ್ಥಾನವನ್ನು ಉತ್ತಮಪಡಿಸಿಕೊಂಡಿದ್ದಾರೆ.

ಬ್ಯಾಟರ್‌ಗಳ ವಿಭಾಗದಲ್ಲಿ ಟೆಸ್ಟ್ ಸರಣಿಯಲ್ಲಿ ಭಾರತ ವಿರುದ್ಧ ಶತಕ ಬಾರಿಸಿದ ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಒಂದು ಸ್ಥಾನ ಬಡ್ತಿ ಪಡೆದು ನಾಲ್ಕನೇ ಸ್ಥಾನಕ್ಕೆ ತಲುಪಿದ್ದಾರೆ. ಸ್ಟೀವ್ ಸ್ಮಿತ್ ಕೂಡ ಅಗ್ರ 10ರ ಪಟ್ಟಿಗೆ ಮರಳಿದ್ದಾರೆ.

ಭಾರತದ ಯಶಸ್ವಿ ಜೈಸ್ವಾಲ್ (805 ಪಾಯಿಂಟ್ಸ್) ಒಂದು ಸ್ಥಾನಕ್ಕೆ ಇಳಿಕೆ ಕಂಡು ಐದನೇ ಸ್ಥಾನದಲ್ಲಿದ್ದಾರೆ. ಇಂಗ್ಲೆಂಡ್ ತಂಡದ ಜೋ ರೂಟ್ (825) ಮೊದಲ ಸ್ಥಾನದಲ್ಲಿದ್ದಾರೆ. ಹ್ಯಾರಿ ಬ್ರೂಕ್ (876) ಮತ್ತು ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನದಲ್ಲಿದ್ದಾರೆ.

ಆಲ್‌ರೌಂಡರ್ ವಿಭಾಗದಲ್ಲಿ ಭಾರತದ ರವೀಂದ್ರ ಜಡೇಜ 424 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಅಗ್ರಸ್ಥಾನಕ್ಕೆ ಅಗರವಾಲ್ ಪಡೆ ಕಣ್ಣು

ವಿಜಯ್ ಹಜಾರೆ ಟ್ರೋಫಿ: ಪಂಜಾಬ್ ಎದುರಾಳಿ ಇಂದು

ಅಹಮದಾಬಾದ್: ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲೆರಡು ಪಂದ್ಯಗಳಲ್ಲಿ ಜಯಭೇರಿ ಬಾರಿಸಿರುವ ಕರ್ನಾಟಕ ತಂಡವು ಆತ್ಮವಿಶ್ವಾಸದ ಉತ್ತುಂಗದಲ್ಲಿದೆ.

ಸಿ ಗುಂಪಿನ ಮೊದಲ ಪಂದ್ಯದಲ್ಲಿ ಮುಂಬೈ ಸವಾಲು ಮೀರಿ ನಿಂತಿದ್ದ ಮಯಂಕ್ ಅಗರವಾಲ್ ಬಳಗವು, ಎರಡನೇಯದ್ದರಲ್ಲಿ ಪುದುಚೇರಿ ಎದುರು ಗೆದ್ದಿತ್ತು. ಮುಂಬೈ ಎದುರು ಕೆ.ಎಲ್. ಶ್ರೀಜಿತ್ ಮತ್ತು ಪುದುಚೇರಿ ವಿರುದ್ಧ ಆರ್. ಸ್ಮರಣ ಶತಕ ಗಳಿಸಿದ್ದರು.

ಈಗ ಅದೇ ಹುಮ್ಮಸ್ಸಿನಲ್ಲಿ ಕರ್ನಾಟಕ ತಂಡವು ಗುರುವಾರ ಪಂಜಾಬ್ ತಂಡದ ಕಠಿಣ ಸವಾಲು ಎದುರಿಸಲಿದೆ. ಉಭಯ ತಂಡಗಳೂ ತಲಾ 8 ಅಂಕ ಗಳಿಸಿವೆ. ಆದರೆ ಪಂಜಾಬ್ ತಂಡವು ಉತ್ತಮ ರನ್‌ರೇಟ್ ಹೊಂದಿರುವುದರಿಂದ ಮೊದಲ ಸ್ಥಾನದಲ್ಲಿದೆ. ಈ ಪಂದ್ಯದಲ್ಲಿ ಕರ್ನಾಟಕವು ಜಯಿಸಿದರೆ ಅಗ್ರಸ್ಥಾನಕ್ಕೇರುವುದು ಖಚಿತ.

ಆದರೆ ಪಂಜಾಬ್ ತಂಡವು ಕಳೆದೆರಡು ಪಂದ್ಯಗಳಲ್ಲಿ ಅಷ್ಟೇನೂ ಬಲಿಷ್ಠವಲ್ಲದ ಅರುಣಾಚಲ ಪ್ರದೇಶ ಮತ್ತು ನಾಗಾಲ್ಯಾಂಡ್ ವಿರುದ್ಧ ಜಯಿಸಿತ್ತು. ಅಭಿಷೇಕ್ ವರ್ಮಾ ನಾಯಕತ್ವದ ಪಂಜಾಬ್‌ಗೆ ಈಗ ನಿಜವಾಗಿ ಕಠಿಣ ಸವಾಲು ಎದುರಾಗಿದೆ. ಅಭಿಷೇಕ್, ಪ್ರಭಸಿಮ್ರನ್ ಸಿಂಗ್, ಅನ್ಮೋಲ್‌ಪ್ರೀತ್ ಸಿಂಗ್, ನಿಹಾಲ್ ವದೇರಾ ಹಾಗೂ ರಮಣದೀಪ್ ಸಿಂಗ್ ಅವರಿರುವ ಬ್ಯಾಟಿಂಗ್ ವಿಭಾಗ ಉತ್ತಮವಾಗಿದೆ. ಎಡಗೈ ವೇಗಿ ಅರ್ಷದೀಪ್ ಸಿಂಗ್ ಹಾಗೂ ಬಲ್ತೇಜ್ ಸಿಂಗ್ ಪ್ರಮುಖ ಬೌಲರ್‌ಗಳಾಗಿದ್ದಾರೆ. ಕರ್ನಾಟಕ ತಂಡದ ಬೌಲರ್‌ಗಳು ಎರಡೂ ಪಂದ್ಯಗಳಲ್ಲಿ ಆರಂಭಿಕ ಹಂತದಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿದ್ದರು. ಆದರೆ ಕಡಿಮೆ ಮೊತ್ತಕ್ಕೆ ಎದುರಾಳಿ ತಂಡವನ್ನು ಆಲೌಟ್ ಮಾಡುವ ಅವಕಾಶ ಕೈತಪ್ಪಿಸಿಕೊಂಡಿದ್ದರು. ಮುಂಬೈ ಎದುರು 382 ರನ್‌ಗಳ ಗುರಿ ಮುಟ್ಟುವಲ್ಲಿ ಶ್ರೀಜಿತ್ ಶತಕ, ಅನೀಶ್ ಕೆ.ವಿ. ಹಾಗೂ ಪ್ರವೀಣ ದುಬೆ ಅವರ ಅರ್ಧಶತಕಗಳು ನೆರವಾದವು. ಪುದುಚೇರಿ ಎದುರು ಪಂದ್ಯದಲ್ಲಿ ವಿದ್ಯಾಧರ್ ಪಾಟೀಲ (27ಕ್ಕೆ4) ಉತ್ತಮ ಬೌಲಿಂಗ್ ಮಾಡಿದ್ದರು. ಆ ತಂಡವು 31 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು. ಆದರೆ ಕೆಳಕ್ರಮಾಂಕದ ಬ್ಯಾಟರ್‌ಗಳನ್ನು ಕಟ್ಟಿಹಾಕುವ ಅವಕಾಶವನ್ನು ಬೌಲರ್‌ಗಳು ಬಳಸಿಕೊಳ್ಳಲಿಲ್ಲ.

ಮಯಂಕ್ ಅಗರವಾಲ್

ಅದರಿಂದಾಗಿ 211 ರನ್‌ಗಳ ಗುರಿಯನ್ನು ಕರ್ನಾಟಕ ಬೆನ್ನತ್ತಬೇಕಾಯಿತು. ಸ್ಮರಣ್ ಮತ್ತು ಶ್ರೇಯಸ್ ಗೋಪಾಲ್ (40 ರನ್) ಅವರು ತಂಡವನ್ನು ಗೆಲುವಿನ ದಡ ಸೇರಿಸಲು ನೆರವಾದರು. ಆದರೆ ಎರಡೂ ಪಂದ್ಯಗಳಲ್ಲಿ ಅಗ್ರಕ್ರಮಾಂಕದ ನಿಕಿನ್ ಜೋಸ್, ಮಯಂಕ್, ಮಧ್ಯಮ ಕ್ರಮಾಂಕದಲ್ಲಿ ಅಭಿನವ್ ಮನೋಹರ್ ಅವರು ಲಯಕ್ಕೆ ಮರಳಬೇಕಿದೆ. ಅನುಭವಿ ಬೌಲರ್ ವೈಶಾಖ ವಿಜಯಕುಮಾರ್ ತಮ್ಮ ನೈಜ ಸಾಮರ್ಥ್ಯ ಪ್ರದರ್ಶಿಸಿದರೆ ಪಂಜಾಬ್ ತಂಡಕ್ಕೆ ಒತ್ತಡ ಹೆಚ್ಚುವುದು ಖಚಿತ.

ಪಂದ್ಯ ಆರಂಭ: ಬೆಳಿಗ್ಗೆ 9

(ಮಾಹಿತಿ: ಬಿಸಿಸಿಐ.ಟಿವಿ)

ಡಬ್ಲ್ಯುಟಿಸಿ ಫೈನಲ್‌ನತ್ತ ದಕ್ಷಿಣ ಆಫ್ರಿಕಾ ತಂಡ ಚಿತ್ತ

ಸೆಂಚುರಿಯನ್, ದಕ್ಷಿಣ ಆಫ್ರಿಕಾ (ಎಪಿ): ಆತಿಥೇಯ ದಕ್ಷಿಣ ಆಫ್ರಿಕಾ ಮತ್ತು ಪಾಕಿಸ್ತಾನ ತಂಡಗಳು ಗುರುವಾರ ಆರಂಭವಾಗಲಿರುವ ಎರಡು ಟೆಸ್ಟ್ ಪಂದ್ಯಗಳ ಸರಣಿಯಲ್ಲಿ ಮುಖಾಮುಖಿಯಾಗಲಿವೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ (ಡಬ್ಲ್ಯುಟಿಸಿ) ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿರುವ ದಕ್ಷಿಣ ಆಫ್ರಿಕಾ ತಂಡವು ಸರಣಿಯಲ್ಲಿ ಕನಿಷ್ಠ ಒಂದನ್ನು ಗೆದ್ದು, ಮುಂದಿನ ವರ್ಷ ಲಾರ್ಡ್ಸ್‌ನಲ್ಲಿ ನಡೆಯುವ ಫೈನಲ್‌ಗೆ ನೇರ ಪ್ರವೇಶವನ್ನು ಎದುರು ನೋಡುತ್ತಿದೆ.

ಆಡಿರುವ 10 ಪಂದ್ಯಗಳ ಪೈಕಿ ಆರರಲ್ಲಿ ಗೆದ್ದು, 63.33 ಗೆಲುವಿನ ಸರಾಸರಿಯನ್ನು ಹೊಂದಿರುವ ದಕ್ಷಿಣ ಆಫ್ರಿಕಾ ಇನ್ನು ಪಾಕ್ ವಿರುದ್ಧದ ಎರಡು ಪಂದ್ಯಗಳು ಮಾತ್ರ ಬಾಕಿ ಉಳಿದಿವೆ. ಅದರಲ್ಲಿ ಒಂದು ಗೆದ್ದರೂ ಫೈನಲ್‌ಗೆ ಟಿಕೆಟ್ ದೊರೆಯುವುದು ಖಚಿತವಾಗಿದೆ. ಪಾಯಿಂಟ್ ಪಟ್ಟಿಯಲ್ಲಿ ಆಸ್ಟ್ರೇಲಿಯಾ (58.89) ಮತ್ತು ಭಾರತ (55.89) ಕ್ರಮವಾಗಿ ನಂತರದ ಸ್ಥಾನದಲ್ಲಿವೆ.

ಟೆಸ್ಟ್ ಸರಣಿಗೆ ಮುನ್ನ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿಪಾಕಿಸ್ತಾನವು 3–0ಯಿಂದ ದಕ್ಷಿಣ ಆಫ್ರಿಕಾವನ್ನು ಹಣಿದಿತ್ತು. ಆ ಸೋಲಿನ ಹೊರತಾಗಿಯೂ ತೆಂಬಾ ಬವುಮಾ ನೇತೃತ್ವದ ದಕ್ಷಿಣ ಆಫ್ರಿಕಾ ತಂಡ ಟೆಸ್ಟ್ ಸರಣಿಯಲ್ಲಿ ಉತ್ತಮ ಪ್ರದರ್ಶನ ತೋರುವ ವಿಶ್ವಾಸದಲ್ಲಿದೆ.

ವೇಟ್‌ಲಿಫ್ಟಿಂಗ್: ಮಾರ್ಟಿನಾ ದೇವಿಗೆ ಬೆಳ್ಳಿ ಪದಕ

ದೋಹಾ (ಪಿಟಿಐ): ಭಾರತದ ವೇಟ್ ಲಿಫ್ಟರ್ ಮಾರ್ಟಿನಾ ದೇವಿ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 87 ಕೆಜಿ ವಿಭಾಗದಲ್ಲಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದ್ದಾರೆ.

ಮಣಿಪುರದ 18 ವರ್ಷ ವಯಸ್ಸಿನ ಮಾರ್ಟಿನಾ ಅವರು ಬುಧವಾರ ನಡೆದ ಸ್ಪರ್ಧೆಯಲ್ಲಿ ಒಟ್ಟು 225 ಕೆಜಿ (96 + 129 ಕೆಜಿ) ಭಾರ ಎತ್ತಿದರು. ಕ್ಲೀನ್ ಮತ್ತು ಜರ್ಕ್ ಪ್ರಯತ್ನಕ್ಕಾಗಿ ಬೆಳ್ಳಿ ಗೆದ್ದ ಅವರು ಸ್ನ್ಯಾಚ್‌ನಲ್ಲಿ ಕಂಚು ಜಯಿಸಿದರು.

ರಾಜ್ಯ ಮಟ್ಟದ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ರಾಮಯ್ಯ ಕಾಲೇಜು ತಂಡಗಳಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಎಸ್. ರಾಮಯ್ಯ ತಾಂತ್ರಿಕ ಕಾಲೇಜು ತಂಡವು ಸಿಎಂಆರ್‌ಐಟಿ ಕಪ್‌ಗಾಗಿ ನಡೆದ ರಾಜ್ಯ ಮಟ್ಟದ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಪುರುಷರ ಮತ್ತು ಮಹಿಳೆಯರ ವಿಭಾಗಗಳ ಪ್ರಶಸ್ತಿ ಗೆದ್ದುಕೊಂಡಿತು.

ಬೆಂಗಳೂರಿನ ಸಿಎಂಆರ್‌ಐಟಿ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಈಚೆಗೆ ನಡೆದ ಪುರುಷರ ಫೈನಲ್‌ನಲ್ಲಿ ರಾಮಯ್ಯ ಕಾಲೇಜು ತಂಡವು 85–54ರಿಂದ ಕ್ರೈಸ್ಟ್ ಕಾಲೇಜು ತಂಡವನ್ನು ಮಣಿಸಿತು.

ರಾಮಯ್ಯ ತಂಡದ ಪರ ಜೋಶುವಾ 22, ಆದರ್ಶ್ 20 ಪಾಯಿಂಟ್ಸ್ ಗಳಿಸಿದರು. ಕ್ರೈಸ್ಟ್ ಪರ ಶಾನ್ ಹೂಡಾ (24) ಏಕಾಂಗಿ ಹೋರಾಟ ನಡೆಸಿದರು.

ರಾಜ್ಯ ಮಟ್ಟದ ಅಂತರ ಕಾಲೇಜು ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಎಂ.ಎಸ್. ರಾಮಯ್ಯ ತಾಂತ್ರಿಕ ಕಾಲೇಜಿನ ಮಹಿಳೆಯರ ತಂಡ

ಮಹಿಳೆಯರ ವಿಭಾಗದಲ್ಲಿ ರಾಮಯ್ಯ ಕಾಲೇಜು ತಂಡವು 32–22ರಿಂದ ಆತಿಥೇಯ ಸಿಎಂಆರ್‌ಐಟಿ ತಂಡವನ್ನು ಮಣಿಸಿತು. ಆದ್ಯ ಐತಾಳ್ ಮತ್ತು ಸಾತ್ವಿತಾ ಅವರು ರಾಮಯ್ಯ ಪರ ತಲಾ ಎಂಟು ಅಂಕ ಗಳಿಸಿದರು. ಸಿಎಂಆರ್‌ಐಟಿ ಪರ ಸುಕ್ಷಿ 12 ಪಾಯಿಂಟ್ಸ್ ತಂದಿತ್ತರು.

ರಾಮಯ್ಯ ತಂಡದ ಶ್ರೀನಿವಾಸ್ ಪಾರ್ಥಿವ್ ಮತ್ತು ಆಧ್ಯಾ ಐತಾಳ್ ಅವರು ಟೂರ್ನಿಯ ಮೌಲ್ಯಯುತ ಆಟಗಾರರಾಗಿ ಹೊರಹೊಮ್ಮಿದರು.

'ದ್ವೇಷಕ್ಕಾಗಿ ನ್ಯಾಯಾಂಗದ ದುರ್ಬಳಕೆ'

ವಾಷಿಂಗ್ಟನ್ (ಪಿಟಿಐ): 'ಬಾಂಗ್ಲಾದಲ್ಲಿನ ಅವಾಮಿ ಲೀಗ್ ನಾಯಕತ್ವದ ವಿರುದ್ಧ ರಾಜಕೀಯ ದ್ವೇಷ ಸಾಧನೆಗಾಗಿ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಅವರು ನ್ಯಾಯಾಂಗವನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿದ್ದಾರೆ' ಎಂದು ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಪುತ್ರ, ಸಂಜೀಬ್ ವಾಜೇದ್ ಆರೋಪಿಸಿದ್ದಾರೆ.

'ಎಕ್ಸ್' ಮೂಲಕ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿರುವ ಅವರು, 'ನೇರವಾಗಿ ಚುನಾಯಿತಗೊಳ್ಳದ ಸರ್ಕಾರ ನೇಮಿಸಿರುವ ನ್ಯಾಯಾಧೀಶರು, ಅಧಿಕಾರಿಗಳಿಂದ ವಿಚಾರಣೆ ನಡೆಸುತ್ತಿರುವುದು ರಾಜಕೀಯ ದ್ವೇಷವಲ್ಲದೆ ಮತ್ತೇನೂ ಅಲ್ಲ' ಎಂದು ಆರೋಪಿಸಿದ್ದಾರೆ.

ಶೇಖ್ ಹಸೀನಾ ಮತ್ತು ಅವರ ಸಂಪುಟದಲ್ಲಿ ಸಚಿವರಾಗಿದ್ದವರ ವಿರುದ್ಧ ಬಾಂಗ್ಲಾದೇಶದ ಅಂತರ ರಾಷ್ಟ್ರೀಯ ನ್ಯಾಯಮಂಡಳಿ (ಐಸಿಟಿ) ಇತ್ತೀಚೆಗೆ ಬಂಧನ ವಾರಂಟ್ ಜಾರಿ ಮಾಡಿದೆ. ಇವರ ವಿರುದ್ಧ ಅಪರಾಧ, ನರಮೇಧದ ಆರೋಪ ಹೊರಿಸಲಾಗಿದೆ.

ಪ್ರಧಾನಿ ಸ್ಥಾನದಿಂದ ಪದಚ್ಯುತಗೊಂಡ ಬಳಿಕ ಶೇಖ್ ಹಸೀನಾ ಅವರು, ಈ ವರ್ಷದ ಆಗಸ್ಟ್ 5ರಿಂದಲೂ ಭಾರತದ ಆಶ್ರಯ ಪಡೆದಿದ್ದಾರೆ.

ಶೇಖ್ ಹಸೀನಾ ಅವರ ಪುತ್ರ ವಾಜೇದ್ ಅವರು ಐ.ಟಿ ಉದ್ಯಮಿ ಆಗಿದ್ದು, ಅಮೆರಿಕದಲ್ಲಿ ನೆಲಸಿದ್ದಾರೆ. ಹಸೀನಾ ಸರ್ಕಾರಕ್ಕೆ ಅವರು ಐಸಿಟಿ ಸಲಹೆಗಾರರಾಗಿ ಕಾರ್ಯನಿರ್ವಹಿಸಿದ್ದರು.

ಈ ಮಧ್ಯೆ, ವಿಚಾರಣೆ ನಡೆಸುವ ಉದ್ದೇಶದಿಂದ ಶೇಕ್ ಹಸೀನಾ ಅವರನ್ನು ಬಾಂಗ್ಲಾದೇಶಕ್ಕೆ ಒಪ್ಪಿಸಬೇಕು ಎಂದು ಮಧ್ಯಂತರ ಸರ್ಕಾರದಲ್ಲಿ ವಿದೇಶಾಂಗ ಸಚಿವರಾಗಿರುವ ತೌಹಿದ್ ಹುಸೇನ್ ಅವರು ಪುನರುಚ್ಚರಿಸಿದ್ದಾರೆ.

ಪಾಕ್ ವಾಯುದಾಳಿ: 46 ಸಾವು

ಪೆಶಾವರ (ಎ.ಪಿ): ಪೂರ್ವ ಅಫ್ಗಾನಿಸ್ತಾನದ ಪಕ್ತಿಕಾ ಪ್ರಾಂತ್ಯದಲ್ಲಿ ಪಾಕಿಸ್ತಾನ ಸೇನೆ ನಡೆಸಿದ ವಾಯುದಾಳಿಯಿಂದಾಗಿ ಮಹಿಳೆಯರು, ಮಕ್ಕಳು ಸೇರಿ 46 ಮಂದಿ ಸತ್ತಿದ್ದಾರೆ.

ಅಫ್ಗನ್ ಸರ್ಕಾರದ ಉಪ ವಕ್ತಾರ ಹಮ್ದುಲ್ಲಾ ಫಿತ್ರತ್ ಅವರು, ಕ್ಷಿಪಣಿ ದಾಳಿಯಲ್ಲಿ ಕನಿಷ್ಠ ಆರು ಮಂದಿ ಗಾಯಗೊಂಡಿದ್ದಾರೆ ಎಂದು ತಿಳಿಸಿದರು.

ಗಡಿಯಲ್ಲಿನ ತರಬೇತಿ ಸೌಲಭ್ಯವನ್ನು ನಾಶಪಡಿಸಲು ಹಾಗೂ ಒಳನುಸುಳುವಿಕೆ ತಡೆಯಲು ದಾಳಿ ನಡೆಸಲಾಗಿತ್ತು ಎಂದು ಪಾಕ್‌ನ ಅಧಿಕಾರಿಯೊಬ್ಬರು ಮಂಗಳವಾರ ಹೇಳಿದ್ದರು.

ಈ ಮಧ್ಯೆ, ಪಾಕಿಸ್ತಾನಿ ತಾಲಿಬಾನ್ ಅಥವಾ ತೆಹ್ರೀಕ್–ಎ–ತಾಲಿಬಾನ್ (ಟಿಟಿಪಿ) ವಕ್ತಾರರಾದ ಮೊಹಮ್ಮದ್ ಖುರಸನಿ ಅವರು ಹೇಳಿಕೆ ನೀಡಿದ್ದು, ದಾಳಿಯಲ್ಲಿ 27 ಮಂದಿ ಮಹಿಳೆಯರು ಮತ್ತು ಮಕ್ಕಳು ಒಳಗೊಂಡಂತೆ 50 ಜನರು ಸತ್ತಿದ್ದಾರೆ ಎಂದು ತಿಳಿಸಿದರು.

'ಸ್ಥಳದಲ್ಲಿಯೇ ಕನಿಷ್ಠ 13 ಮಂದಿ ಸತ್ತಿದ್ದು, ಹಲವರು ಗಾಯಗೊಂಡರು. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಹಲವರ ಸ್ಥಿತಿ ಗಂಭೀರವಾಗಿದೆ. ಮೃತರ ಸಂಖ್ಯೆ ಮತ್ತಷ್ಟು ಏರಿಕೆ ಆಗಬಹುದು' ಎಂದು, ದಾಳಿ ನಡೆದ ಪ್ರದೇಶದ ನಿವಾಸಿಗಳು ಹೇಳಿದ್ದಾರೆ.

ಪಾಕಿಸ್ತಾನವು ಕ್ಷಿಪಣಿ ದಾಳಿ ಕುರಿತು ಅಧಿಕೃತ ಹೇಳಿಕೆ ನೀಡಿಲ್ಲ. ಆದರೆ, ಪಾಕಿಸ್ತಾನ ಸೇನೆಯು 'ಖಚಿತ ಮಾಹಿತಿ ಆಧರಿಸಿ ದಕ್ಷಿಣ ವಜೀರಿಸ್ತಾನ್‌ನಲ್ಲಿ ಕಾರ್ಯಾಚರಣೆ ನಡೆಸಿದ್ದು, 13 ಮಂದಿ ಒಳನುಸುಳುಕೋರರನ್ನು ಹತ್ಯೆ ಮಾಡಲಾಗಿದೆ' ಎಂದು ಬುಧವಾರ ತಿಳಿಸಿದೆ.

ಗಡಿಯಲ್ಲಿ ಸಕ್ರಿಯವಾಗಿರುವ ಟಿಟಿಪಿ ಪ್ರತ್ಯೇಕ ಸಂಘಟನೆಯು ಅಫ್ಗನ್ ತಾಲಿಬಾನ್ ಜೊತೆ ನಿಕಟ ಸಂಪರ್ಕದಲ್ಲಿದೆ. ಆಗಸ್ಟ್ 2021ರಲ್ಲಿ ಅಫ್ಗನ್‌ನಲ್ಲಿ ಅಧಿಕಾರ ಕೈವಶ ಮಾಡಿಕೊಂಡಿತ್ತು.

ಕಜಕಸ್ತಾನದಲ್ಲಿ ಪತನಗೊಂಡ ಅಜರ್‌ಬೈಜಾನ್ ಏರ್‌ಲೈನ್ಸ್ ವಿಮಾನ

ವಿಮಾನ ಅಪಘಾತ: 38 ಮಂದಿ ಸಾವು

ಮಾಸ್ಕೊ (ಎಪಿ): ಅಜರ್‌ಬೈಜಾನ್ ಏರ್‌ಲೈನ್ಸ್ ವಿಮಾನಯಾನ ಕಂಪನಿಗೆ ಸೇರಿದ ವಿಮಾನವು ಕಜಕಸ್ತಾನದ ಅಕ್ತೌ ನಗರದಲ್ಲಿ ಬುಧವಾರ ಅಪಘಾತಕ್ಕೀಡಾಗಿದೆ. ವಿಮಾನದಲ್ಲಿ ಇದ್ದ 67 ಜನರ ಪೈಕಿ 38 ಮಂದಿ ಸಾವಿಗೀಡಾಗಿದ್ದಾರೆ. 29 ಮಂದಿಯನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಜಕಸ್ತಾನದ ಅಧಿಕಾರಿಗಳು ನೀಡಿದ ಮಾಹಿತಿ ಉಲ್ಲೇಖಿಸಿ, ಉಪಪ್ರಧಾನಿ ಕನತ್ ಬೊರ್‍ಯುಂಜೀವ್ ಅವರು, 38 ಮಂದಿ ಮೃತಪಟ್ಟಿದ್ದಾರೆಂದು ರಷ್ಯಾದ ಸುದ್ದಿಸಂಸ್ಥೆಯೊಂದಕ್ಕೆ ತಿಳಿಸಿದ್ದಾರೆ. ವಿಮಾನದಲ್ಲಿ ಇದ್ದ 67 ಮಂದಿಯಲ್ಲಿ ಐವರು ಸಿಬ್ಬಂದಿಯೂ ಸೇರಿದ್ದಾರೆ.

'ವಿಮಾನದ ಇಬ್ಬರೂ ಪೈಲಟ್‌ಗಳು ಮೃತಪಟ್ಟಿರುವ ಸಾಧ್ಯತೆ ಇದೆ' ಎಂದು 'ವೈದ್ಯಕೀಯ ನೆರವು ಸಿಬ್ಬಂದಿ'ಯನ್ನು ಉಲ್ಲೇಖಿಸಿ ರಷ್ಯಾದ ಇನ್ನೊಂದು ಸುದ್ದಿಸಂಸ್ಥೆ ವರದಿ ಮಾಡಿದೆ.

ಈ ವಿಮಾನವು ಅಜರ್‌ಬೈಜಾನ್ ರಾಜಧಾನಿ ಬಾಕುವಿನಿಂದ ರಷ್ಯಾದ ಗ್ರೋಜ್ನಿ ನಗರಕ್ಕೆ ತೆರಳುತ್ತಿತ್ತು. ಆದರೆ ವಿಮಾನಕ್ಕೆ ಹಕ್ಕಿಯೊಂದು ಡಿಕ್ಕಿ ಹೊಡೆದ ಕಾರಣಕ್ಕೆ ತುರ್ತು ಸನ್ನಿವೇಶ ಎದುರಾಯಿತು. ಹೀಗಾಗಿ ವಿಮಾನದ ಪೈಲಟ್ ಅಕ್ತೌ ನಗರದ ಕಡೆ ವಿಮಾನ ತಿರುಗಿಸಿದರು ಎನ್ನಲಾಗಿದೆ. ವಿಮಾನವು ಆಗಸದಿಂದ ನೆಲಕ್ಕೆ ಅಪ್ಪಳಿಸುವ ದೃಶ್ಯ ಸಾಮಾಜಿಕಮಾಧ್ಯಮದಲ್ಲಿಹರಿದಾಡಿವೆ.

ಅಜರ್‌ಬೈಜಾನ್ ಏರ್‌ಲೈನ್ಸ್ ಕಂಪನಿಗೆ ಸೇರಿದ ವಿಮಾನ ಅಪಘಾತಕ್ಕೆ ಈಡಾದ ನಂತರ ತುಂಡಾಗಿ ಬಿದ್ದಿತ್ತು ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- 67 ಪ್ರಯಾಣಿಕರು ಇದ್ದ ವಿಮಾನ
- 29 ಮಂದಿ ಆಸ್ಪತ್ರೆಗೆ ದಾಖಲು
- ಹಕ್ಕಿ ಡಿಕ್ಕಿಯಿಂದ ಅಪಘಾತ ಆಗಿರುವ ಸಾಧ್ಯತೆ

ಕ್ರಿಸ್‌ಮಸ್ ದಿನವೂ ಉಕ್ರೇನ್ ಮೇಲೆ ರಷ್ಯಾ ದಾಳಿ

ಕೀವ್ (ಎಪಿ): ಉಕ್ರೇನ್‌ನ ಇಂಧನ ಮೂಲಗಳನ್ನು ಗುರಿಯಾಗಿಸಿಕೊಂಡು ರಷ್ಯಾ ಬುಧವಾರ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿದೆ.

ತೀವ್ರ ದಾಳಿಯ ಪರಿಣಾಮ ಕ್ರಿಸ್‌ಮಸ್ ದಿನವೇ ಉಕ್ರೇನ್ ಜನರು ಮೆಟ್ರೊ ನಿಲ್ದಾಣಗಳಲ್ಲಿ ಆಶ್ರಯ ಪಡೆಯುವಂತಾಗಿದೆ.

'ಉಷ್ಣ ವಿದ್ಯುತ್ ಸ್ಥಾವರವೊಂದನ್ನು ಹೊಡೆದುರುಳಿಸಲಾಗಿದೆ' ಎಂದು ಉಕ್ರೇನ್‌ನ ಅತಿದೊಡ್ಡ ಖಾಸಗಿ ಇಂಧನ ಕಂಪನಿ ಡಿಟಿಇಕೆ ತಿಳಿಸಿದೆ.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು, 'ಖಂಡಾಂತರ ಕ್ಷಿಪಣಿ ಸೇರಿದಂತೆ 70 ಕ್ಷಿಪಣಿಗಳಿಂದ ಮತ್ತು 100 ಡ್ರೋನ್‌ಗಳಿಂದ ದಾಳಿ ನಡೆಸಲಾಗಿದೆ' ಎಂದು ತಿಳಿಸಿದ್ದಾರೆ.

'ಪುಟಿನ್ ಅವರು ಉದ್ದೇಶಪೂರ್ವಕವಾಗಿಯೇ ಕ್ರಿಸ್‌ಮಸ್ ದಿನ ದಾಳಿ ನಡೆಸಿದ್ದಾರೆ. ಇದಕ್ಕಿಂತ ಅಮಾನವೀಯ ಏನಿದೆ?' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಕನಿಷ್ಠ 50 ಕ್ಷಿಪಣಿಗಳು ಮತ್ತು ಹಲವು ಡ್ರೋನ್‌ಗಳನ್ನು ಉಕ್ರೇನ್ ಹೊಡೆದುರುಳಿಸಿದೆ. ನಮ್ಮ ಹೋರಾಟ ಮುಂದುವರಿಯಲಿದೆ' ಎಂದು ಹೇಳಿದ್ದಾರೆ.

ಪ್ರೊ ಕಬಡ್ಡಿ ಲೀಗ್: ಎಲಿಮಿನೇಟರ್ ಪಂದ್ಯಗಳು ಇಂದು

ಯೋಧಾಸ್‌ಗೆ ಜೈಪುರ ಸವಾಲು

ಪುಣೆ (ಪಿಟಿಐ): ಪ್ರೊ ಕಬಡ್ಡಿ ಲೀಗ್‌ನ 11ನೇ ಆವೃತ್ತಿಯ ಎಲಿಮಿನೇಟರ್ ಪಂದ್ಯಗಳಿಗೆ ಇಲ್ಲಿನ ಬಾಲೆವಾಡಿ ಒಳಾಂಗಣ ಕ್ರೀಡಾಂಗಣ ಸಜ್ಜಾಗಿದೆ. ಗುರುವಾರ ನಡೆಯುವ ಮೊದಲ ಪಂದ್ಯದಲ್ಲಿ ಯು.ಪಿ ಯೋಧಾಸ್ ತಂಡವು ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು; ಎರಡನೇ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ತಂಡವು ಯು ಮುಂಬಾ ತಂಡವನ್ನು ಎದುರಿಸಲಿವೆ.

ಗುಂಪು ಹಂತದ ಲೀಗ್ ಪಂದ್ಯಗಳು ಮಂಗಳವಾರ ಮುಕ್ತಾಯವಾಗಿದ್ದು, ಪಾಯಿಂಟ್ ಪಟ್ಟಿಯಲ್ಲಿ ಕ್ರಮವಾಗಿ ಮೊದಲೆರಡು ಸ್ಥಾನ ಪಡೆದ ಹರಿಯಾಣ ಸ್ಟೀಲರ್ಸ್ ಮತ್ತು ಡೆಲ್ಲಿ ದಬಾಂಗ್ ತಂಡಗಳು ನೇರವಾಗಿ ಸೆಮಿಫೈನಲ್ ಪ್ರವೇಶ ಮಾಡಿವೆ.

ಅಂಕಪಟ್ಟಿಯಲ್ಲಿ ಮೂರರಿಂದ ಆರನೇ ಸ್ಥಾನ ಪಡೆದ ನಾಲ್ಕು ತಂಡಗಳು ಸೆಮಿಫೈನಲ್ ಟಿಕೆಟ್‌ಗಾಗಿ ಎಲಿಮೀನೇಟರ್ ಪಂದ್ಯಗಳಲ್ಲಿ ಸೆಣಸಲಿವೆ. ಇಲ್ಲಿ ಗೆದ್ದ ಎರಡು ತಂಡಗಳು ನಾಲ್ಕರ ಘಟ್ಟಕ್ಕೆ ಮುನ್ನಡೆಯಲಿವೆ. ಇದೇ 27ರಂದು ಸೆಮಿಫೈನಲ್ ಮತ್ತು 29ರಂದು ಫೈನಲ್ ಪಂದ್ಯಗಳು ನಿಗದಿಯಾಗಿವೆ.

ಪ್ಲೇ ಆಫ್ ಪ್ರವೇಶಿಸಿರುವ ಆರು ತಂಡಗಳ ಪೈಕಿ ಹರಿಯಾಣ ಮತ್ತು ಯೋಧಾಸ್ ತಂಡಗಳು ಚೊಚ್ಚಲ ಪ್ರಶಸ್ತಿಯನ್ನು ಎದುರು ನೋಡುತ್ತಿವೆ. ಪಟ್ನಾ ತಂಡವು ಮೂರು ಬಾರಿ ಚಾಂಪಿಯನ್ ಆಗಿದ್ದರೆ, ಜೈಪುರ ತಂಡ ಎರಡು ಬಾರಿ ಕಿರೀಟ ಮುಡಿಗೇರಿಸಿಕೊಂಡಿದೆ. ಡೆಲ್ಲಿ ಮತ್ತು ಮುಂಬಾ ತಲಾ ಒಂದು ಬಾರಿ ಪ್ರಶಸ್ತಿ ಗೆದ್ದಿವೆ.

ಬುಲ್ಸ್‌ಗೆ ಕೊನೆಯ ಸ್ಥಾನ: 2018ರ ಚಾಂಪಿಯನ್ ಬೆಂಗಳೂರು ಬುಲ್ಸ್ ತಂಡವು ಈ ಆವೃತ್ತಿಯಲ್ಲಿ ಕೊನೆಯ ಮತ್ತು 12ನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿದೆ.

ಪ್ರದೀಪ್ ನರ್ವಾಲ್ ಸಾರಥ್ಯದ ಬುಲ್ಸ್ ತಂಡವು ಆಡಿರುವ 22 ಪಂದ್ಯಗಳ ಪೈಕಿ ಎರಡು ಮಾತ್ರ ಗೆದ್ದಿದೆ. ಒಂದರಲ್ಲಿ ಟೈ ಮಾಡಿಕೊಂಡಿದ್ದರೆ, ಉಳಿದ 19ರಲ್ಲಿ ಪರಾಭವಗೊಂಡು ಕೇವಲ 19 ಅಂಕ ಗಳಿಸಿದೆ.

ಪ್ರೊ ಕಬಡ್ಡಿ ಲೀಗ್‌ನ ಟ್ರೋಫಿಯೊಂದಿಗೆ ಪ್ಲೇ ಆಫ್ ಪ್ರವೇಶಿಸಿದ ತಂಡಗಳ ನಾಯಕರು

ಪ್ರೊ ಕಬಡ್ಡಿ: ಪಾಯಿಂಟ್ ಪಟ್ಟಿ (ಪ್ಲೇ ಆಫ್ ಪ್ರವೇಶಿಸಿದ ತಂಡಗಳು)

ತಂಡಗಳು	ಪಂದ್ಯ	ಗೆಲುವು	ಸೋಲು	ಟೈ	ಅಂಕ
ಹರಿಯಾಣ ಸ್ಟೀಲರ್ಸ್	22	16	6	0	84
ದಬಾಂಗ್ ಡೆಲ್ಲಿ	22	13	5	4	81
ಯು.ಪಿ. ಯೋಧಾಸ್	22	13	6	3	79
ಪಟ್ನಾ ಪೈರೇಟ್ಸ್	22	13	7	2	77
ಯು ಮುಂಬಾ	22	12	8	2	71
ಜೈಪುರ ಪಿಂಕ್ ಪ್ಯಾಂಥರ್ಸ್	22	12	8	2	70

ಎಲಿಮಿನೇಟರ್ ಪಂದ್ಯ

- Vs ಯು.ಪಿ ಯೋಧಾಸ್–ಜೈಪುರ ಪಿಂಕ್ ಪ್ಯಾಂಥರ್ಸ್ (ರಾತ್ರಿ 8)
- Vs ಪಟ್ನಾ ಪೈರೇಟ್ಸ್–ಯು ಮುಂಬಾ (ರಾತ್ರಿ 9)
- ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಹಾಟ್‌ಸ್ಟಾರ್

ಎಫ್‌ಸಿ ಬೆಂಗಳೂರು ಯುನೈಟೆಡ್‌ಗೆ ಭರ್ಜರಿ ಜಯ

ಬೆಂಗಳೂರು: ಎಸ್. ಜಾನಿ ಕೊಮ್ ಮತ್ತು ಎನ್‌ಗೈರಾಂಗ್ಬಾಮ್ ರಾಕೇಶ್ ಸಿಂಗ್ ಅವರ ತಲಾ ಎರಡು ಗೋಲುಗಳ ನೆರವಿನಿಂದ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡ ಬುಧವಾರ ನಡೆದ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ ಜಯಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಯುನೈಟೆಡ್ 5–0 ಗೋಲುಗಳಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡವನ್ನು ಸೋಲಿಸಿತು.

ಇನ್ನೊಂದು ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡ 4–0 ಗೋಲುಗಳಿಂದ ಬಿಎಫ್‌ಸಿ ವಿರುದ್ಧ ಜಯಿಸಿತು.

ಮೂರನೇ ಪಂದ್ಯದಲ್ಲಿ ಎಂಇಜಿ ಅಂಡ್ ಸೆಂಟರ್ ಎಫ್‌ಸಿ 2–0ರಿಂದ ರಿಯಲ್ ಚಿಕ್ಕಮಗಳೂರು ತಂಡವನ್ನು ಸೋಲಿಸಿತು.

ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡ ಮತ್ತು ಇಂಡಿಪೆಂಡೆಂಟ್ಸ್ ತಂಡಗಳ ಆಟಗಾರರ ಪೈಪೋಟಿ

ಮಹಿಳಾ ಕ್ರಿಕೆಟ್: ಕರ್ನಾಟಕದ ನಿಕಿ ಪ್ರಸಾದ್ ನಾಯಕಿ

ನವದೆಹಲಿ (ಪಿಟಿಐ): ಬೆಂಗಳೂರಿನ ನಿಕಿ ಪ್ರಸಾದ್ ಅವರು ಕ್ವಾಲಾಲಂಪುರದಲ್ಲಿ ನಡೆಯಲಿರುವ ಐಸಿಸಿ 19 ವರ್ಷದೊಳಗಿನ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವನ್ನು ಮುನ್ನಡೆಸುವರು.

ಜನವರಿ 18 ರಿಂದ ಫೆಬ್ರುವರಿ 2ರವರೆಗೆ ಟೂರ್ನಿ ನಡೆಯಲಿದೆ. 15 ಆಟಗಾರ್ತಿಯರ ತಂಡವನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಪ್ರಕಟಿಸಿದೆ. ಸಾನಿಕಾ ಚಳ್ಕೆ ಅವರನ್ನು ಉಪನಾಯಕಿಯನ್ನಾಗಿ ನೇಮಕ ಮಾಡಲಾಗಿದೆ. ಈ ಟೂರ್ನಿಯಲ್ಲಿ 16 ತಂಡಗಳು ಸ್ಪರ್ಧಿಸಲಿವೆ. ಹಾಲಿ ಚಾಂಪಿಯನ್ ಭಾರತ ತಂಡವು ಎ ಗುಂಪಿನಲ್ಲಿದೆ.

‘ಬಿಸಿಸಿಐ ನನ್ನ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಆಭಾರಿಯಾಗಿರುವೆ. ನಾಯಕತ್ವದ ಹೊಣೆ ನಿಭಾಯಿಸಲು ಖುಷಿಯಾಗುತ್ತಿದೆ.

ತಂಡವನ್ನು ಉತ್ತಮ ರೀತಿಯಲ್ಲಿ ಮುನ್ನಡೆಸುವ ಭರವಸೆ ಇದೆ’ ಎಂದು ನಿಕಿ ‘ಪ್ರಜಾವಾಣಿ’ಗೆ ತಿಳಿಸಿದರು.

ತಂಡ: ನಿಕಿ ಪ್ರಸಾದ್ (ನಾಯಕಿ), ಸನಿಕಾ ಚಳ್ಕೆ (ಉಪನಾಯಕಿ), ಜಿ. ತ್ರಿಷಾ, ಜಿ. ಕಮಲಿನಿ (ವಿಕೆಟ್‌ಕೀಪರ್), ಭಾವಿಕಾ ಅಹಿರೆ (ವಿಕೆಟ್‌ಕೀಪರ್), ಈಶ್ವರಿ ಅವಸಾರೆ, ಮಿಥಿಲಾ ವಿನೋದ್, ವಿ.ಜೆ. ಜೋಶಿತಾ, ಸೋನಮ್ ಯಾದವ್, ಪರುಣಿಕಾ ಸಿಸೊಡಿಯಾ, ಕೆಸರಿ ಧ್ರುತಿ, ಆಯುಷಿ ಶುಕ್ಲಾ, ಆನಂದಿತಾ ಕಿಶರ್, ಎಂ.ಡಿ ಶಬ್ನಮ್, ಎಸ್. ವೈಷ್ಣವಿ.

ಕ್ರಿಕೆಟ್: ಕರ್ನಾಟಕಕ್ಕೆ ಮಣಿದ ಅರುಣಾಚಲ ಪ್ರದೇಶ

ಪ್ರಖರ್ ಆಟಕ್ಕೆ ಒಲಿದ ಜಯ

ಬೆಂಗಳೂರು: ಪ್ರಖರ್ ಚತುರ್ವೇದಿ (97;52ಎ) ಅವರ ಬ್ಯಾಟಿಂಗ್ ಹಾಗೂ ನಾಯಕ ಅನೀಶ್ವರ್ ಗೌತಮ್ (32ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಬಿಸಿಸಿಐ ಪುರುಷರ 23 ವರ್ಷದೊಳಗಿನವರ ರಾಜ್ಯ ‘ಎ’ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 9 ವಿಕೆಟ್‌ಗಳಿಂದ ಅರುಣಾಚಲ ಪ್ರದೇಶ ತಂಡವನ್ನು ಮಣಿಸಿತು.

ರಾಯಪುರದ ಆರ್‌ಡಿಸಿಎ ಕ್ರೀಡಾಂಗಣದಲ್ಲಿ ಬುಧವಾರ ನಡೆದ ‘ಡಿ’ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟಿಂಗ್ ಮಾಡಿದ ಅರುಣಾಚಲ ಪ್ರದೇಶ 50 ಓವರ್‌ಗಳಲ್ಲಿ 9 ವಿಕೆಟ್‌ಗೆ 158 ರನ್ ಗಳಿಸಿತು. ವಿ.ರಾಜ್ (44;48ಎ) ಮತ್ತು ನಾಯಕ ಮಗುಂಗ್ (40;101ಎ) ಹೊರತುಪಡಿಸಿ ಉಳಿದವರು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಅನೀಶ್ವರ್ ನಾಲ್ಕು ವಿಕೆಟ್ ಪಡೆದರೆ, ಯಶೋವರ್ಧನ್ ಪರಂತಾಪ್ ಮತ್ತು ಮೊಹಿಸಿನ್ ಖಾನ್ ತಲಾ ಎರಡು ವಿಕೆಟ್ ಗಳಿಸಿದರು.

ಗುರಿ ಬೆನ್ನಟ್ಟಿದ ಕರ್ನಾಟಕ ತಂಡವು ಕೇವಲ 16.4 ಓವರ್‌ಗಳಲ್ಲಿ 1 ವಿಕೆಟ್‌ಗೆ 159 ರನ್ ಗಳಿಸಿ ಜಯ ಸಾಧಿಸಿತು. ಜಸ್ಪರ್ ಇ.ಜೆ (ಔಟಾಗದೇ 52; 47ಎ) ಮತ್ತು ಪ್ರಖರ್ ಮೊದಲ ವಿಕೆಟ್‌ಗೆ 157 ರನ್ ಸೇರಿಸಿದರು. ಶತಕದ ಅಂಚಿನಲ್ಲಿ ಎಡವಿದ ಪ್ರಖರ್ ಇನಿಂಗ್ಸ್‌ನಲ್ಲಿ ನಾಲ್ಕು ಬೌಂಡರಿ ಮತ್ತು 11 ಭರ್ಜರಿ ಸಿಕ್ಸರ್ ಒಳಗೊಂಡಿತ್ತು.



ಪ್ರಖರ್ ಚತುರ್ವೇದಿ

ಐದು ಪಂದ್ಯಗಳಲ್ಲಿ ಮೂರರಲ್ಲಿ ಗೆದ್ದ ಕರ್ನಾಟಕ ತಂಡವು 12 ಅಂಕಗಳೊಂದಿಗೆ ‘ಡಿ’ ಗುಂಪಿನಲ್ಲಿ ಮೂರನೇ ಸ್ಥಾನದಲ್ಲಿದೆ. ಮಧ್ಯಪ್ರದೇಶ (20) ಮತ್ತು ಜಾರ್ಖಂಡ್ (16) ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ. ಶುಕ್ರವಾರ ಕರ್ನಾಟಕ ತಂಡವು ಒಡಿಶಾ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ಅರುಣಾಚಲ ಪ್ರದೇಶ: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 158 (ವಿ.ರಾಜ್ 44, ಮಗುಂಗ್ 40, ಯಶೋವರ್ಧನ್ ಪರಂತಾಪ್ 23ಕ್ಕೆ 2, ಮೊಹಸಿನ್ ಖಾನ್ 24ಕ್ಕೆ 2, ಅನೀಶ್ವರ್ ಗೌತಮ್ 32ಕ್ಕೆ 4). ಕರ್ನಾಟಕ: 16.4 ಓವರ್‌ಗಳಲ್ಲಿ 1 ವಿಕೆಟ್‌ಗೆ 159 (ಜಸ್ಪರ್ ಇ.ಜೆ. ಔಟಾಗದೇ 52, ಪ್ರಖರ್ ಚತುರ್ವೇದಿ 97). ಕರ್ನಾಟಕಕ್ಕೆ 9 ವಿಕೆಟ್ ಜಯ, 4 ಅಂಕ. (ಮಾಹಿತಿ: ಬಿಸಿಸಿಐ.ಟಿವಿ)

ಹಿಮಾ ದಾಸ್ ಅಮಾನತು: ಗೊಂದಲ

ನವದೆಹಲಿ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತ ಓಟಗಾರ್ತಿ ಹಿಮಾ ದಾಸ್ ಅವರಿಗೆ ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಘಟಕವು (ನಾಡಾ) ವಿಧಿಸಿದ್ದ ತಾತ್ಕಾಲಿಕ ಅಮಾನತು ಕುರಿತು ಗೊಂದಲ ಮುಂದುವರಿದಿದೆ.

24 ವರ್ಷದ ಓಟಗಾರ್ತಿಯ ಮೇಲೆ ನಾಡಾ 16 ತಿಂಗಳು ನಿಷೇಧ ಹೇರಿತ್ತು. 2023 ಜುಲೈ 22ರಿಂದ 2024ರ ನವೆಂಬರ್ 21ರವರೆಗೆ ಅಮಾನತು ಚಾಲ್ತಿಯಲ್ಲಿತ್ತು. ಆದರೆ, ಏಪ್ರಿಲ್‌ನಲ್ಲಿ ಮತ್ತು ಜೂನ್‌ನಲ್ಲಿ ನಡೆದ ಕ್ರೀಡಾಕೂಟದಲ್ಲಿ ಅವರು ಸ್ಪರ್ಧಿಸಿರುವುದು ಗೊಂದಲಕ್ಕೆ ಕಾರಣವಾಗಿದೆ.

12 ತಿಂಗಳ ಅವಧಿಯಲ್ಲಿ ತಮ್ಮ ಚಲನವಲನದ ಮಾಹಿತಿ ಒದಗಿಸಲು ವಿಫಲವಾದ ಕಾರಣ ಡೋಪಿಂಗ್ ನಿಗ್ರಹ ನಿಯಮದಂತೆ ಹಿಮಾ ದಾಸ್ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ನಾಡಾ ಇತ್ತೀಚೆಗೆ ಘೋಷಿಸಿದೆ.

ಧಿಂಗ್ ಎಕ್ಸ್‌ಪ್ರೆಸ್ ಖ್ಯಾತಿಯ ಹಿಮಾ ದಾಸ್ ಅವರನ್ನು ನಿಯಮಾವಳಿಯ ಪ್ರಕಾರ ಅಮಾನತುಗೊಳಿಸಲಾಗಿದೆ ಹಿಮಾ ದಾಸ್ ಎಂದು ನಾಡಾ ವೆಬ್‌ಸೈಟ್‌ನಲ್ಲಿ ಉಲ್ಲೇಖಿಸಲಾಗಿದೆ. ಪ್ರಸ್ತುತ ಹಿಮಾ ಅವರು ತಿರುವನಂತಪುರದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಹಿಮಾ ದಾಸ್

ಅಮಾನತು ಅವಧಿ ನವೆಂಬರ್ ತನಕ ಇದ್ದರೂ ಏಪ್ರಿಲ್‌ನಲ್ಲಿ ಬೆಂಗಳೂರಿನಲ್ಲಿ ನಡೆದ ಇಂಡಿಯನ್ ಗ್ರ್ಯಾನ್‌ಪ್ರೀ ಕ್ರೀಡಾಕೂಟದಲ್ಲಿ ಮತ್ತು ಜೂನ್‌ನಲ್ಲಿ ಪಂಚಕುಲದಲ್ಲಿ ನಡೆದಿದ್ದ ರಾಷ್ಟ್ರೀಯ ಅಂತರ ರಾಜ್ಯ ಕೂಟದಲ್ಲಿ ಅವರು ಸ್ಪರ್ಧಿಸಿದ್ದರಿಂದ ಗೊಂದಲ ಮೂಡಿದೆ.